ಮಂಗಳೂರು
ಭಾನುವಾರ, 5 ಏಪ್ರಿಲ್ 2026
ಸಂಪುಟ 48, ಸಂಚಿಕೆ 17 ಪುಟಗಳು 12+6
ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಾಬ್ ಜಲಸಂಧಿ ಬಂದ್?
• ಪುಟ ೨



ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಭಾನುವಾರ, 5 ಏಪ್ರಿಲ್ 2026
ಸಂಪುಟ 48, ಸಂಚಿಕೆ 17, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital



ಲಡಾಖ್: ಗಗನಯಾತ್ರಿಗಳ ಮಾನಸಿಕ, ದೈಹಿಕ ಪರೀಕ್ಷೆ

ಸಂಕಷ್ಟ ನಡುವೆಯೂ ಭಾರತ ದೃಢ: ಜೈಶಂಕರ್

೦೭ | ೦೭



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ವಿಶಾಖೆ

ದಿನದ ಮಾತು

ಶ್ರದ್ಧೆ ಮತ್ತು ಭಕ್ತಿಯಿಲ್ಲದ ಕೆಲಸವು ಸುವಾಸನೆಯಿಲ್ಲದ ಕೃತಕ ಹೂವಿನಂತೆ.
▲ಸ್ವಾಮಿ ಚಿನ್ಮಯಾನಂದ

ಪರಿಚಯದ ಪರಿಪರಿಯ ಕಿರಿಕಿರಿಗಳು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

10 ಕೋಟಿ ಮನೆ ತಲುಪಿದ ಆರೆಸ್ಸೆಸ್

• **ಹೊಸದಿಲ್ಲಿ:** ಸಮಾಜದಲ್ಲಿ ಗುರುತು ಆಧಾರಿತ ಭೇದಗಳನ್ನು ಉಂಟುಮಾಡುವ ಯತ್ನಗಳ ನಡುವೆಯೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದೇಶದಲ್ಲಿ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಮಹತ್ತರ ಸಾಧನೆ ಮಾಡಿದೆ ಎಂದು ಸಂಘದೊಂದಿಗೆ ಸಂಬಂಧಿತ ವಾರಪತ್ರಿಕೆ ಆರ್ಗನೈಸರ್ ತನ್ನ ಸಂಪಾದಕೀಯದಲ್ಲಿ ಪ್ರಶಂಸಿಸಿದೆ.

• ಪುಟ ೦೭

ಜಾಗತಿಕ ಯುದ್ಧ ಮಧ್ಯೆ ಭಾರತದ ಸುಗಮ ಹಾದಿ

• ಪುಟ ೦೭

ರಕ್ಷಣಾ ರಫ್ತು ದಾಖಲೆ ಮಟ್ಟದ ಏರಿಕೆ

• ಪುಟ ೦೭

ಇರಾನ್‌ನೊಂದಿಗೆ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

• ಪುಟ ೦೭

ಎಟಿಎಸ್‌ನಿಂದ ನಾಲ್ವರು ಉಗ್ರರ ಸೆರೆ

• ಪುಟ ೦೭

ಅಫ್ಘಾನಿಸ್ತಾನದಲ್ಲಿ 5.8 ತೀವ್ರತೆ ಭೂಕಂಪ: 8 ಸಾವು

• ಪುಟ ೦೭

ಸಾವಿರ ಕೆಜಿ ತೂಕದ ದೇಸಿ ವೈಮಾನಿಕ ಬಾಂಬ್ ಅಭಿವೃದ್ಧಿ

• ಪುಟ ೦೭

ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ: ಸುನೀಲ್‌ಕುಮಾರ್

• ಪುಟ ೫

ಕಾಂಗ್ರೆಸ್‌ಗೆ ದೊಡ್ಡ ಅಂತರದ ಗೆಲುವು: ಡಿಕೆಶಿ

• ಪುಟ ೫

ಗ್ಯಾಸ್ಟಿಕ್ ನಿರ್ಲಕ್ಷ್ಯವೇ ಕ್ಯಾನ್ಸರ್ ಕಾಯಿಲೆಗೆ ಮುನ್ನುಡಿ

• ಪುಟ ೫

ಬಾಬ್ ಎಲ್-ಮಂಡೆಬ್ ಮುಚ್ಚುವುದಾಗಿ ಇರಾನ್ ಸ್ಪೀಕರ್ ಬೆದರಿಕೆ

ಜಾಗತಿಕ ತೈಲ ಪೂರೈಕೆ, ವ್ಯಾಪಾರಕ್ಕೆ ಹೊಡೆತ ನೀಡಲು ಇರಾನ್ ಸಿದ್ಧತೆ

ಬಾಬ್ ಜಲಸಂಧಿ ಬಂದ್?

• **ಟೆಹ್ರಾನ್:** ಇತರ ರಾಷ್ಟ್ರಗಳು ಯುದ್ಧ ನಿಲ್ಲಿಸಲು ಅಮೆರಿಕ ಮತ್ತು ಇಸ್ರೇಲ್ ಮೇಲೆ ಒತ್ತಡ ಹಾಕಬೇಕೆಂಬ ಉದ್ದೇಶದಿಂದ ಹಾರ್ಮುಜ್ ಜಲಸಂಧಿ ಮುಚ್ಚಿ ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿರುವ ಇರಾನ್ ಇನ್ನೊಂದು ಹೊಡೆತ ನೀಡಲು ಸಿದ್ಧವಾಗುತ್ತಿದೆ. ಜಾಗತಿಕ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುವ ಬಾಬ್ ಎಲ್-ಮಂಡೆಬ್ ಜಲಸಂಧಿಯನ್ನು ಮುಚ್ಚುವ ಕುರಿತು ಇರಾನ್ ಸಂಸತ್ತಿನ ಸ್ಪೀಕರ್ ಸುಳಿವು ನೀಡಿದ್ದಾರೆ.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗೇರ್ ಗಾಲಿಬಫ್, ಇನ್ನೊಂದು ಜಲಸಂಧಿಯನ್ನು ಮುಚ್ಚಲು ಇರಾನ್ ಸಂಸತ್ತು ಕಾರ್ಯತಂತ್ರ ರೂಪಿಸಿದ ಸುಳಿವನ್ನು ನೀಡಿ ಪರೋಕ್ಷ ಬೆದರಿಕೆ ಹಾಕಿದ್ದಾರೆ.



ಬಾಬ್ ಎಲ್-ಮಂಡೆಬ್ ಜಲಸಂಧಿಯನ್ನು ಯಾವೆಲ್ಲಾ ರಾಷ್ಟ್ರಗಳು ಅವಲಂಬಿಸಿವೆ? ಜಾಗತಿಕ ತೈಲ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ), ಗೋಧಿ, ಅಕ್ಕಿ ಮತ್ತು ರಸಗೊಬ್ಬರದ ಎಷ್ಟು ಭಾಗ ಈ ಜಲಸಂಧಿಯ ಮೂಲಕ ದಾಟಿ ಹೋಗುತ್ತವೆ? ಯಾವ ರಾಷ್ಟ್ರಗಳೆಲ್ಲಾ ಈ ಜಲಸಂಧಿ ಮೂಲಕ ಅತ್ಯಧಿಕ ಸರಕು ಸಾಗಿಸುತ್ತವೆ? ಇವೇ ಮೊದಲಾದ ಪ್ರಶ್ನೆಗಳನ್ನು ಎಕ್ಸ್ ಪೋಸ್ಟ್‌ನಲ್ಲಿ ಬರೆದಿರುವ ಇರಾನ್ ಸ್ಪೀಕರ್ ಗಾಲಿಬಫ್, ಇರಾನ್ ಕಾರ್ಯತಂತ್ರ ಹೆಣೆದಿರುವ ಕುರಿತು ಸುಳಿವು ನೀಡಿ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಅಣಕಿಸಿದ್ದಾರೆ.

ಪೂರೈಕೆ ವ್ಯತ್ಯಯ ಸೃಷ್ಟಿಸಿದೆ ಇರಾನ್: ಹಾರ್ಮುಜ್ ಜಲಸಂಧಿ ಸಂಪೂರ್ಣ ತೆರೆಯದೆ ಇರಾನ್ ಜಾಗತಿಕ ತೈಲ ಪೂರೈಕೆಯಲ್ಲಿ ಕೃತಕ ವ್ಯತ್ಯಯ ಸೃಷ್ಟಿಸಿದೆ. ಸದ್ಯ ಜಾಗತಿಕ ವ್ಯಾಪಾರದಲ್ಲಿ ವ್ಯತ್ಯಯ ಸೃಷ್ಟಿಸಿದ ಇರಾನ್, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕ್ಯಾರೇ ಎನ್ನದೆ ಯುದ್ಧ ನಡೆಸುತ್ತಿದೆ. ಫೆ.28ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ಆರಂಭಿಸಿದಲ್ಲಿಂದ ಹಾರ್ಮುಜ್ ಮುಚ್ಚುವವರೆಗೆ ಯುದ್ಧದ ಮೇಲೆ ಅಮೆರಿಕ ಅಧ್ಯಕ್ಷರ ನಿಯಂತ್ರಣವಿತ್ತು. ಹಾರ್ಮುಜ್ ಮುಚ್ಚಿದ ನಂತರ ಇರಾನ್ ಪ್ರಾಬಲ್ಯ ಮೆರೆದಿದ್ದು, ಮಾನಸಿಕ ಸ್ಥೈರ್ಯ ಹೆಚ್ಚಿಸಿಕೊಂಡಿದೆ. ಇದರಿಂದ ಅಮೆರಿಕ ಬೆದರಿಕೆಗಳಿಗೆ ಇರಾನ್ ಪ್ರತ್ಯುತ್ತರ ನೀಡುತ್ತಿದೆ. ಇದೀಗ ಇನ್ನೊಂದು ಜಲಸಂಧಿಯನ್ನು ಮುಚ್ಚಿದರೆ ಹಲವು ಆರ್ಥಿಕ ಸಮಸ್ಯೆಗಳನ್ನು ಜಗತ್ತು ಎದುರಿಸಬೇಕಾಗುವ ಸಾಧ್ಯತೆಯಿದೆ.



ಹಾರ್ಮುಜ್-ಬಾಬ್ ನಡುವಿನ ಸಂಪರ್ಕ

ಹಾರ್ಮುಜ್ ಮತ್ತು ಬಾಬ್ ಎರಡೂ ಜಲಸಂಧಿಗಳು ಪರಸ್ಪರ ಸಂಪರ್ಕ ಹೊಂದಿವೆ. ➡ಪುಟ ೪

ಭಾರತದ ಮೇಲೆ ನೇರ ಪರಿಣಾಮ?

ಬಾಬ್ ಎಲ್-ಮಂಡೆಬ್ ಜಲಸಂಧಿಯ ಮೂಲಕ ಯುರೋಪ್ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳೊಂದಿಗೆ ಭಾರತ ತನ್ನ ವ್ಯಾಪಾರ ಮತ್ತು ಇಂಧನ ವಹಿವಾಟುಗಳನ್ನು ನಡೆಸುತ್ತದೆ. ಇದರಿಂದ ಇರಾನ್ ಬಾಬ್ ಜಲಸಂಧಿಯನ್ನು ಮುಚ್ಚಿದರೆ ಭಾರತದ ಮೇಲೆ ನೇರ ಪರಿಣಾಮ ಬೀರಲಿದೆ. ಆದರೆ ಹಾರ್ಮುಜ್‌ನಲ್ಲಿ ಭಾರತೀಯ ತೈಲ ಹಡಗುಗಳಿಗೆ ಇರಾನ್ ಅವಕಾಶ ನೀಡಿದ್ದು, ಭಾರತವನ್ನು ಆಪ್ತ ಸ್ನೇಹಿತ ರಾಷ್ಟ್ರವೆಂದು ಇರಾನ್ ಹೇಳಿಕೊಂಡಿದೆ.

ಬಾಬ್ ಜಲಸಂಧಿ ಎಲ್ಲಿದೆ? ಮಹತ್ವ?

50 ಕಿ.ಮೀ. (31 ಮೈಲಿ) ಉದ್ದ ಮತ್ತು 32 ಕಿ.ಮೀ. (20 ಮೈಲಿ) ಅಗಲದ ಈ ಜಲಸಂಧಿ ಕೆಂಪು ಸಮುದ್ರ ಮತ್ತು ಹಿಂದು ಮಹಾಸಾಗರವನ್ನು ಒಂದುಗೂಡಿಸುತ್ತದೆ. ಜಾಗತಿಕ ತೈಲ ಸಾಗಣೆಯ 10ನೇ ಒಂದು ಭಾಗ ಮತ್ತು ಕಾಲು ಭಾಗದ ಕಂಟೇನರ್ ಹಡಗುಗಳು ಇದರ ಮೂಲಕ ಸಾಗುತ್ತವೆ. ಸುಯೆಜ್ ಕಾಲುವೆ ಮೂಲಕ ಯುರೋಪ್-ಏಷ್ಯಾ ರಾಷ್ಟ್ರಗಳು ನಡೆಸುವ ವ್ಯಾಪಾರದಲ್ಲಿ ಬಾಬ್ ಎಲ್-ಮಂಡೆಬ್ ಜಲಸಂಧಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಒಟ್ಟು ಜಾಗತಿಕ ಸಾಗರೋತ್ತರ ವ್ಯಾಪಾರದ ಶೇ.10ರಿಂದ 12ರಷ್ಟು ಭಾಗ ಮಂಡೆಬ್ ಮೂಲಕ ದಾಟುತ್ತದೆ. ಸರಾಸರಿ ದಿನವೊಂದರಲ್ಲಿ 6 ದಶಲಕ್ಷ ಬ್ಯಾರೆಲ್ ತೈಲವನ್ನು ಈ ಜಲಸಂಧಿ ಮೂಲಕ ಸಾಗಿಸಲಾಗುತ್ತದೆ.

ನಾಳೆ ಟ್ರಂಪ್ ಗಡುವು



ಮತ್ತೊಮ್ಮೆ ಅಮೆರಿಕ ಅಧ್ಯಕ್ಷರು ವ್ಯಾಪಾರ ಒಪ್ಪಂದ ಬಲೆ ಬೀಸಿದ್ದಾರೆ. ಹಲವು ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಗಡುವು ನೀಡಿ ಯಶಸ್ವಿಯಾದ ಟ್ರಂಪ್ ಇದೀಗ ಅದೇ ತಂತ್ರವನ್ನು ಇರಾನ್ ಮೇಲೆ ಪ್ರಯೋಗಿಸಿದ್ದಾರೆ. ➡ಪುಟ ೪

ಹಿಂದೂ ಧರ್ಮ ಆಚಾರ್ಯ ಸಭಾ ಸಭೆ

28 ರಾಜ್ಯಗಳ ನೂರಾರು ಶ್ರೀಗಳು ಭಾಗಿ

ಸಾಧು ಸಂತರ ಜತೆ ಭಾಗ್ವತ್,ಶಾ ಚರ್ಚೆ



• **ನೆಲಮಂಗಲ (ಬೆಂಗಳೂರು ಗ್ರಾಮಾಂತರ):** ನಗರೂರಿನ ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಪಿಯು ಕಾಲೇಜು ಆವರಣದಲ್ಲಿ ಹಿಂದೂ ಧರ್ಮ ಆಚಾರ್ಯ ಸಭಾದಿಂದ ನಡೆದ ಎರಡು ದಿನಗಳ ಸಭೆಯಲ್ಲಿ ದೇಶದ ನೂರಾರು ಸ್ವಾಮೀಜಿಗಳು, ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್, ಕೇಂದ್ರ ಗೃಹ ಸಚಿವ ಅಮಿತ್‌ಶಾ ಶನಿವಾರ ಭೇಟಿ ನೀಡಿ ಚರ್ಚೆ ನಡೆಸಿದರು.



28 ರಾಜ್ಯದಿಂದ ಭಾಗಿ: ಎರಡು ದಿನದ ಸಭೆಗೆ ಕರ್ನಾಟಕ, ಗುಜರಾತ್, ತಮಿಳುನಾಡು, ಅಸ್ಸಾಂ, ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ,ಕೇರಳ, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ 28 ರಾಜ್ಯದ ಪ್ರಮುಖ ನೂರಾರು ಸ್ವಾಮೀಜಿಗಳು ಭಾಗವಹಿಸಿದ್ದಾರೆ. ಕರ್ನಾಟಕದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಪೇಜಾವರ ಶ್ರೀ ಸೇರಿದಂತೆ ವಿವಿಧ ಮಠಗಳ ಸ್ವಾಮೀಜಿಗಳು ಭಾಗವಹಿಸಿದ್ದರು.

ಅಮಿತ್ ಶಾ ಭೇಟಿ, ಚರ್ಚೆ: ಶುಕ್ರವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದ ಕೇಂದ್ರ ಗೃಹ ಹಾಗೂ ಸಹಕಾರಿ ಸಚಿವ ಅಮಿತ್ ಶಾ, ಶನಿವಾರ ಬೆಳಗ್ಗೆ ಸಮಾರಂಭಕ್ಕೆ ಆಗಮಿಸಿದರು. ಮಧ್ಯಾಹ್ನ 2ಗಂಟೆಯವರೆಗೂ ಹಿಂದೂಧರ್ಮ ಆಚಾರ್ಯ ಸಭಾದ ಸಭೆಯಲ್ಲಿ ಭಾಗವಹಿಸಿ ಸ್ವಾಮೀಜಿಗಳ ಸಲಹೆ ಹಾಗೂ ಸೂಚನೆಗಳನ್ನು ಪಡೆಯುವ ಜತೆ ವಿವಿಧ ವಿಚಾರಗಳ ಬಗ್ಗೆ ಚರ್ಚೆ ಮಾಡಿದರು.

ರಾಜ್ಯದಲ್ಲಿ ಇದೇ ಮೊದಲು

ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಕಾಲೇಜು ಆವರಣದಲ್ಲಿ ಹಿಂದೂಧರ್ಮ ಆಚಾರ್ಯ ಸಭಾದಿಂದ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿತ್ತು. ವೃತ್ತಾಕಾರದಲ್ಲಿ ಸ್ವಾಮೀಜಿಗಳು ಕುಳಿತು ಮಾತನಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯದಲ್ಲಿ ಇದೇ ಮೊದಲ ಬಾರಿ ಇಂತಹ ಸಭೆ ನಡೆದಿದ್ದು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳ ಸಹಕಾರದೊಂದಿಗೆ ಅದ್ದೂರಿಯಾಗಿ ನಡೆದಿದೆ.

ಎಲ್‌ಡಿಎಫ್, ಯುಡಿಎಫ್‌ನಿಂದ ಒಳಿತಾಗದು ಎಂದ ಪ್ರಧಾನಿ

ಕೇರಳದಲ್ಲಿ ಎನ್‌ಡಿಎ ಪರ ಅಲೆ

• **ಪಟ್ಟನಂತಿಟ್ಟ:** ಕೇರಳದಲ್ಲಿ ಆಳುವ ಎಲ್‌ಡಿಎಫ್ ನಿರ್ಗಮನದ ಹಾದಿಯಲ್ಲಿದೆ. ಯುಡಿಎಫ್‌ನಿಂದ ಕೇರಳಕ್ಕೆ ಒಳಿತಾಗಲು ಸಾಧ್ಯವಿಲ್ಲ. ಕೇರಳದಲ್ಲೀಗ ಬಿಜೆಪಿ ನೇತೃತ್ವದ ಎನ್‌ಡಿಎ ಅಲೆ ನಿರ್ಮಾಣವಾಗುತ್ತಿದೆ. ಈ ಬಾರಿಯ ಚುನಾವಣೆ ಕೇರಳಕ್ಕೆ ಅತ್ಯಂತ ಪ್ರಯೋಜನಕಾರಿಯಾಗಲಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಕೇರಳದ ಜನತೆಗೆ 'ನಮಸ್ಕಾರ' ಎಂದು ಕೈಮುಗಿದ ಮೋದಿಯವರು, 'ತಿರುವಲ್ಲಯುಡೆ ಜನಂಗಳುಡೆ ವಿಶ್ವಾಸಮಾನುಂಜನಂಗಳುಡೆ ಎಟ್ಟವುಮ್‌ವಲಿಯ ಶಕ್ತಿ' (ತಿರುವಲ್ಲದ ಜನತೆಯ ವಿಶ್ವಾಸ ನಮ್ಮ ಅತ್ಯಂತ ದೊಡ್ಡ ಶಕ್ತಿ)ಮಲಯಾಳಂನಲ್ಲಿ ಮಾತು ಆರಂಭಿಸಿದರು. ಅವರು ಇಲ್ಲಿ ಬಿಜೆಪಿಯ ಬೃಹತ್ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದರು. ಕೆಲವು ದಿನಗಳ ಹಿಂದೆ 'ಮೇರಾ ಬೂತ್ ಸಬ್ಸೇ ಮಜಬೂತ್ ಕ್ಯಾಂಪೇನ್'ನ ಭಾಗವಾಗಿ ಬಿಜೆಪಿ ಕಾರ್ಯಕರ್ತರ ಜತೆ ನಡೆಸಿದ ಸಂವಾದ ಉಲ್ಲೇಖಿಸಿದ ಪ್ರಧಾನಿ, ಕೇರಳದಂತಹ ಸಣ್ಣ ರಾಜ್ಯದಲ್ಲೂ 5000 ಶಕ್ತಿ ಕೇಂದ್ರಗಳಿಂದ 1.25 ಲಕ್ಷ ಕಾರ್ಯಕರ್ತರು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆಂಬ ಅಂಶವನ್ನು ಅಭಿಮಾನದಿಂದ ಹೇಳಿದರು. ➡ಪುಟ ೪



ತಿರುವನಂತಪುರಂನಲ್ಲಿ ನಮೋ ರೋಡ್‌ಶೋ

ತಿರುವಲ್ಲಾದ ರ್‍ಯಾಲಿಯ ಬಳಿಕ ಪ್ರಧಾನಿ ಮೋದಿಯವರು ತಿರುವನಂತಪುರಂಗೆ ಆಗಮಿಸಿ ಸಂಜೆ ಬೃಹತ್ ರೋಡ್‌ಶೋದಲ್ಲಿ ಪಾಲ್ಗೊಂಡರು. ➡ಪುಟ ೪

ಕಾಂಗ್ರೆಸ್‌ಗೆ ಎರಡೂ ಕಡೆ ವಿಜಯ: ಸಿಎಂ



ದುರ್ಗಾದೇವಿ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ.

• **ಬಾಗಲಕೋಟೆ:** ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಸೋಲಿನ ಭಯ ಕಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಬಾಗಲಕೋಟೆಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಉಪಚುನಾವಣಾ ಪ್ರಚಾರ ಕಾರ್ಯ ಉತ್ತಮವಾಗಿ ನಡೆಯುತ್ತಿದ್ದು, ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆತಿದೆ. ➡ಪುಟ ೪



ಅಭಿವೃದ್ಧಿ ಶೂನ್ಯ ರಾಜ್ಯ ಸರ್ಕಾರ: ಆರ್.ಅಶೋಕ



• **ಬಾಗಲಕೋಟೆ:** ರಾಜ್ಯದ ತೆರಿಗೆದಾರರ ಹಣವನ್ನು ಕಾಂಗ್ರೆಸ್‌ನವರು ವಯನಾಡಿಗೆ ಕೊಡುತ್ತಾರೆ. ಗ್ಯಾರಂಟಿಯಿಂದ ರೈತರು ಉದ್ಧಾರ ಆಗಿದ್ದರೆ ಅವರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು? ಇದೊಂದು ದರೋಡೆ, ರೈತರ ವಿರೋಧಿ ಸರ್ಕಾರವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಲಿತರ 53 ಸಾವಿರ ಕೋಟಿ ಹಣ ಲೂಟಿ ಮಾಡಿದ ಸರ್ಕಾರವಾಗಿದೆ. ➡ಪುಟ ೪

ಪಾಕ್‌ನಿಂದ ಯುಎಇ ದೊಡ್ಡ ಸಾಲ ವಸೂಲಿ!



• **ಹೊಸದಿಲ್ಲಿ:** ಪಾಕಿಸ್ತಾನಕ್ಕೆ ನೀಡಿದ್ದ 3.5 ಶತಕೋಟಿ ಡಾಲರ್ ಸಾಲವನ್ನು ತಕ್ಷಣ, ಅಂದರೆ ಏಪ್ರಿಲ್‌ನೊಳಗೆ ಮರುಪಾವತಿ ಮಾಡಬೇಕೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಗಡುವು ನೀಡಿದೆ. ಸಾಲದ ಹೊರೆಯಲ್ಲಿರುವ ಪಾಕಿಸ್ತಾನಕ್ಕೆ ಇದೀಗ ಮತ್ತೊಂದು ಹೊರೆ ಎದುರಾದಂತಿದೆ. ಮಧ್ಯಪ್ರಾಚ್ಯ ಯುದ್ಧ ವಿಚಾರದಲ್ಲಿ ಪಾಕ್ ಮತ್ತು ಯುಎಇ ಸ್ನೇಹದಲ್ಲಿ ಬಿರುಕು ಮೂಡಿದೆ ಎನ್ನಲಾಗುತ್ತಿದೆ. ಇದೇವೇಳೆ ಇರಾನ್ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳಿಂದ ತನ್ನ ಹಲವು ಅತ್ಯಾಧುನಿಕ ಮೂಲ ಸೌಕರ್ಯಗಳು ಹಾನಿ ಆಗಿರುವುದರಿಂದ ಯುಎಇ ನಷ್ಟ ಅನುಭವಿಸುತ್ತಿದೆ. ➡ಪುಟ ೪

3.5 ಶತಕೋಟಿ ಡಾಲರ್ ಸಾಲ, ಏಪ್ರಿಲ್‌ನೊಳಗೆ ಮರುಪಾವತಿ

ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಟಿಇಟಿ ಬರೆಯಲು ಒತ್ತಾಯ

ಕನ್ನಡ ಭಾಷಿಕ ಶಿಕ್ಷಕರಿಗೆ ಮಹಾ ಅನ್ಯಾಯ

▸ ನಂದಿನಿ ಎನ್.

• **ಬೆಂಗಳೂರು:** ಸುಪ್ರೀಂ ಕೋರ್ಟ್‌ನ ಆದೇಶದಂತೆ ಮಹಾರಾಷ್ಟ್ರದಲ್ಲಿ 2027ರ ಒಳಗೆ ಎಲ್ಲಾ ಶಿಕ್ಷಕರು ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಪಾಸಾಗುವುದು ಕಡ್ಡಾಯವಾಗಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ಒಂದು ಕಡೆ ಪರೀಕ್ಷೆ ಕಡ್ಡಾಯಗೊಳಿಸುತ್ತಿದ್ದರೆ, ಇನ್ನೊಂದೆಡೆ ಅಲ್ಪಸಂಖ್ಯಾತ ಕನ್ನಡ ಭಾಷಿಕ ಶಿಕ್ಷಕರ ಮೇಲೆ ಭಾಷಾ ಅನ್ಯಾಯ ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ದಿಗಂತ ವಿಶೇಷ

ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಮರಾಠಿ ಭಾಷೆಯಲ್ಲೇ ಪ್ರಶ್ನೆಪತ್ರಿಕೆ ನೀಡಲಾಗುತ್ತದೆ. ಆದರೆ, ಮಹಾರಾಷ್ಟ್ರದಲ್ಲಿ ಕನ್ನಡ ಭಾಷಿಕರಿಗೆ ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆಯುವಂತೆ ಒತ್ತಾಯಿಸುತ್ತಿದೆ ಎಂದು ಆದರ್ಶ ಕನ್ನಡ ಬಳಗ ಆಕ್ರೋಶ ವ್ಯಕ್ತಪಡಿಸಿದೆ.

ಪರೀಕ್ಷಾ ಪರಿಷತ್ತು ಅರ್ಜಿ ಸಲ್ಲಿಸುವಾಗ ಕನ್ನಡ ಮಾಧ್ಯಮದ ಆಯ್ಕೆಯನ್ನು ನೀಡುತ್ತದೆ. ಪ್ರತ್ಯಕ್ಷ ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಯು ಕೇವಲ ಮರಾಠಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಇರುತ್ತದೆ. ಇದರಿಂದ ಕನ್ನಡ ಮಾಧ್ಯಮದಲ್ಲಿ ಡಿ.ಇಡಿ/ಬಿ.ಇಡಿ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದೆ. ➡ಪುಟ ೪



ಕನ್ನಡ ಶಾಲೆ ಅಸ್ತಿತ್ವಕ್ಕೆ ಧಕ್ಕೆ

ಮಹಾರಾಷ್ಟ್ರ ಸರ್ಕಾರದ ಈ ಭಾಷಾ ನೀತಿಯಿಂದಾಗಿ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಸಾವಿರಾರು ಯುವಕರ ಭವಿಷ್ಯ ಕತ್ತಲಲ್ಲಿದೆ. ಪದವಿ ಇದ್ದರೂ ಕೇವಲ ಭಾಷೆಯ ತಾಂತ್ರಿಕ ಕಾರಣದಿಂದ ಅವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಈ ತಾಂತ್ರಿಕ ಸಮಸ್ಯೆಯಿಂದಾಗಿ ಸಾವಿರಾರು ಶಿಕ್ಷಕರ ವೃತ್ತಿಜೀವನಕ್ಕೆ ಸಂಚಕಾರ ಬಂದಿದ್ದು, ರಾಜ್ಯ ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶಿಸಿ ಪರಿಹಾರ ನೀಡಬೇಕೆಂದು ಶಿಕ್ಷಕರಿಂದ ಒತ್ತಾಯ ಕೇಳಿಬರುತ್ತಿದೆ.

ಅರ್ಹ ಶಿಕ್ಷಕರು ಲಭ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳು ಮುಚ್ಚುವ ಭೀತಿ ಇದೆ. ಇದು ಗಡಿ ಭಾಗದ ಕನ್ನಡ ಸಂಸ್ಕೃತಿ ಮತ್ತು ಶಿಕ್ಷಣದ ಮೇಲೆ ದೊಡ್ಡ ಹೊಡೆತ ನೀಡಲಿದೆ. ಸರ್ಕಾರ ಕೂಡಲೇ ನಿರ್ಧಾರ ಕೈಗೊಳ್ಳದಿದ್ದರೆ, ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು.

■ ಸೋಮಶೇಖರ್ ಜಮಶೆಟ್ಟಿ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು (ಮಹಾರಾಷ್ಟ್ರ ಘಟಕ)





ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,38,500(2,36,500) ಅಪರಂಜಿ ಚಿನ್ನ: 14,950(14,950) ಆಭರಣ ಚಿನ್ನ: 13,835(13,835) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.84

ಕಿರುಸುದ್ದಿ

ಡಾ.ಎಂ. ಮೋಹನ ಆಳ್ವರಿಗೆ ಗೌರವ ಡಾಕ್ಟರೇಟ್ ಪ್ರದಾನ



ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವರಿಗೆ ಬೆಂಗಳೂರಿನ ಡಾ. ಮನಮೋಹನ್‌ಸಿಂಗ್ ನಗರ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ 5ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಈ ಗೌರವ ಪ್ರದಾನ ನೇರವೇರಿಸಿದರು.

ಮಾಲಿನಿ ಅಂಚನ್‌ಗೆ ಪಿಎಚ್‌ಡಿ ಪದವಿ



ಬೆಳ್ತಂಗಡಿ: ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜಿನ ವಾಣಿಜ್ಯ ವಿಭಾಗದ ಸಹಪ್ರಾಧ್ಯಾಪಕಿ ಮಾಲಿನಿ ಅಂಚನ್ ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯವು ವಾಣಿಜ್ಯ ಶಾಸ್ತ್ರದಲ್ಲಿ ಪಿ.ಎಚ್.ಡಿ ಪದವಿ ನೀಡಿ ಗೌರವಿಸಿದೆ. ಅವರು ಮಂಗಳೂರು ವಿಶ್ವವಿದ್ಯಾನಿಲಯದ ವಾಣಿಜ್ಯ ವಿಭಾಗದಪ್ರೊಫೆಸರ್ ಡಾ. ಪ್ರೀತಿ ಕೀರ್ತಿ ಡಿಸೋಜ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಮಂಡಿಸಿದ 'ವಿಮೆನ್ ಇನ್ ಎಗ್ರಿಬಿಸಿನೆಸ್: ಎ ಲೈವ್ ಲೀ ಹುಡ್ ಪ್ಯಾಟರ್ನ್ ಅನಾಲಿಸಿಸ್ ವಿದ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಅಂಡ್ ಉಡುಪಿ ಡಿಸ್ಟ್ರಿಕ್ಟ್' ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ಲಭಿಸಿದೆ. ಮಂಗಳೂರಿನ ಉರ್ವಸ್ಟೋರ್ ಸುಂಕದಕಟ್ಟೆಯ ನಿವಾಸಿ , ಮಾಲಿನಿ ಅಂಚನ್, ಎಂ. ಶಿವಪ್ಪ ಕೋಟ್ಯಾನ್ ಮತ್ತು ಸರಸ್ವತಿ ದಂಪತಿಯ ಪುತ್ರಿ. ಪ್ರಸ್ತುತ ಅವರು ಎಸ್‌ಡಿಎಂ ಕಾಲೇಜಿನ ಎನ್‌ಎಸ್‌ಎಸ್ ಯೋಜನಾ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಹೋದ್ಯೋಗಿಗಳು ಅಭಿನಂದಿಸಿದ್ದಾರೆ.

ಏ.7–8ರಂದು ಕೂಡ್ಲುವಿನಲ್ಲಿ ಡಾ.ಶೇಣಿ ಜಯಂತ್ಯುತ್ಸವ

ಹರಿಕಥಾ ರಂಗದಲ್ಲೊಂದು ವಿಶಿಷ್ಟ ಪ್ರಯೋಗ

ಮಂಗಳೂರು: ಹರಿಕಥಾ ಕಲೆಯ ಅಗ್ರಮಾನ್ಯ ಪ್ರವರ್ತಕ ದಿ.ಡಾ. ಶೇಣಿ ಗೋಪಾಲಕೃಷ್ಣ ಭಟ್ಟರ ಜಯಂತಿ ಆಚರಣೆಯ ಅಂಗವಾಗಿ ಹರಿಕಥಾ ರಂಗದಲ್ಲೊಂದು ವಿಶಿಷ್ಟ ಪ್ರಯೋಗ ನಡೆಸಲು ನಿರ್ಧರಿಸಲಾಗಿದೆ. ಇದೇ ಮೊದಲ ಬಾರಿಗೆ 12 ಮಂದಿ ಹರಿದಾಸರಿಂದ ಒಂದೇ ಕಥಾ ಭಾಗದ ಹರಿಕಥಾ ಪ್ರಸ್ತುತಿಯ ವಿಶಿಷ್ಟ ಪ್ರಯೋಗ ನಡೆಯಲಿದೆ ಎಂದು ಶೇಣಿ ಅವರ ಶಿಷ್ಯ, ಕಾರ್ಯಕ್ರಮ ಸಂಚಾಲಕ ಕೆ. ಮಹಾಬಲ ಶೆಟ್ಟಿ ತಿಳಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ಡಾ. ಶೇಣಿ ಜಯಂತ್ಯುತ್ಸವ' ಕಾರ್ಯಕ್ರಮ ಕಾಸರಗೋಡಿನ ಗುಡ್ಡೆ ಶ್ರೀಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಏ.7 ಮತ್ತು 8ರಂದು ನಡೆಯಲಿದೆ. ಈ ಸಂದರ್ಭ ಈ ವಿಶಿಷ್ಟ ಪ್ರಯೋಗದ ಪ್ರಸ್ತುತಿಯಾಗಲಿದೆ. ಮಂಗಳೂರು ಹರಿಕಥಾ ಪರಿಷತ್, ಶೇಣಿ ಚಾರಿಟೆಬಲ್ ಟ್ರಸ್ಟ್, ಕೂಡ್ಲು ಗುಡ್ಡೆ ದೇವಸ್ಥಾನದ ಮಹಿಳಾ ಮಂಡಳಿ ಸಹಭಾಗಿತ್ವದಲ್ಲಿ, ಎಸ್.ಎಲ್ ಶೇಟ್ ಡೈಮಂಡ್ ಹೌಸ್ ಪ್ರಾಯೋಜಕತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಹರಿಕಥೆ ರಂಗದಲ್ಲಿ ಇದುವರೆಗೆ ಒಂದೇ ಕಥಾ ಭಾಗವನ್ನು 12 ಮಂದಿ ಹರಿದಾಸರು ಪ್ರಸ್ತುತಪಡಿಸಿದ ಇತಿಹಾಸ ಇಲ್ಲ. ಈ ವಿಶಿಷ್ಟ ಪ್ರಯೋಗವನ್ನು ಶೇಣಿ ಸಂಸ್ಮರಣೆಯ ಅಂಗವಾಗಿ ಆಯೋಜಿಸುತ್ತಿದ್ದೇವೆ ಎಂದು ಅವರು ಹೇಳಿದರು.

'ಸುಗ್ರೀವ ಸಖ್ಯ– ವಾಲಿ ಮೋಕ್ಷ' ಕಥಾ ಭಾಗವನ್ನು ಪ್ರತಿ ಹರಿದಾಸರು ಒಂದೂವರೆ ಗಂಟೆ ಅವಧಿಯಲ್ಲಿ ಪ್ರಸ್ತುತಪಡಿಸಲಿದ್ದಾರೆ. ಏ.7ರಂದು ಬೆಳಗ್ಗೆ 9ರಿಂದ ಸುಧಾಕರ ಕೋಟಿ ಕುಂಜತ್ತಾಯರು, 10:30ರಿಂದ ಶೇಣಿ ಮುರಳಿ ಮಂಗಳೂರು, 12ರಿಂದ ಶಂನಾಡಿಗ ಕುಂಬಳೆ, ಅಪರಾಹ್ನ 2ರಿಂದ ಚಂದ್ರಕಾಂತ್ ಭಟ್, 3:30ರಿಂದ ಜಯಾನಂದ ಕುಮಾರ್, 5ರಿಂದ 6.30ವರೆಗೆ ಡಾ.ಎಸ್.ಪಿ. ಗುರುದಾಸ್ ಹರಿಕತೆ ನಡೆಸಿಕೊಡಲಿದ್ದಾರೆ.

ಏ.8ರಂದು ಬೆಳಗ್ಗೆ 9ರಿಂದ 10:30ರವರೆಗೆ ಶ್ರದ್ಧಾ ನಾರ್ಯಾಪಳ್ಳ, 10.30ರಿಂದ 12ರವರೆಗೆ ತೋನ್ಸೆ ಪುಷ್ಕಳ್ ಕುಮಾರ್, 12ರಿಂದ 1.30ರವರೆಗೆ ಶ್ರೀಧರದಾಸ್ ಕುಂಭಾಶಿ, ಮಧ್ಯಾಹ್ನ 2ರಿಂದ 3.30ರವರೆಗೆ ರಾಮಚಂದ್ರ ಮಣಿಯಾಣಿ, 3:30ರಿಂದ 5 ಗಂಟೆಯವರೆಗೆ ಮಂಜುಳಾ ಜಿ. ರಾವ್ 5ರಿಂದ 6.30ವರೆಗೆ ದೇವಕಿತನಯ ಕೂಡ್ಲು ಅವರು ಇದೇ ಕಥಾ ಭಾಗವನ್ನು ಪ್ರಸ್ತುತಪಡಿಸುತ್ತಾರೆ ಎಂದರು.

ಏ. 8ರಂದು ಸಂಜೆ 6.40ಕ್ಕೆ ಧಾರ್ಮಿಕ ಸಭೆ ನಡೆಯಲಿದ್ದು, ಎಸ್.ಎಲ್. ಶೇಟ್ ಡೈಮಂಡ್ ಹೌಸ್ ಮಾಲೀಕ ಎಂ. ರವೀಂದ್ರ ಶೇಟ್ ವಹಿಸಲಿದ್ದಾರೆ. ಮಧುಸೂಧನ ಆಯರ್, ಶೇಣಿ ವೇಣುಗೋಪಾಲ ಭಟ್, ರಾಮಚಂದ್ರ ಭಟ್ ಮಾಣಿಪಾಡಿ, ಶುಭೋದಯ ಕೂಡ್ಲು ಭಾಗವಹಿಸುತ್ತಾರೆ ಎಂದು ಮಹಾಬಲ ಶೆಟ್ಟಿ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಪ್ರಾಯೋಜಕ ಎಂ.ರವೀಂದ್ರ ಶೇಟ್, ಕಾರ್ಯಕ್ರಮ ಸಂಚಾಲಕ ಸುಧಾಕರ ರಾವ್ ಪೇಜಾವರ, ನಾರಾಯಣ ರಾವ್, ಶೇಣಿ ಮುರಳಿ ಉಪಸ್ಥಿತರಿದ್ದರು.


ಕರ್ನಾಟಕದ ಸಾಂಪ್ರದಾಯಿಕ ಸಂಸ್ಕೃತಿ, ದೈವಾರಾಧನೆಯಲ್ಲಿ ಯುವ ಪೀಳಿಗೆಯ ಆಸಕ್ತಿ

'ತನ್ನಿಮಾನಿಗ ದೈವ'ವಾದ 12ರ ಬಾಲಕ

ಗಣೇಶ್ ನಾಯಕ್, ಸಾಣೂರು







ಕಾರ್ಕಳ: 12 ವರ್ಷದ ಬಾಲಕನೊಬ್ಬ ದೈವಜ್ಞನಾಗಿ ಕೋಲ ಕಟ್ಟಿದ ಅಪರೂಪದ ಘಟನೆಯು ಕರಾವಳಿ ಕರ್ನಾಟಕದ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ದೈವಾರಾಧನೆಯಲ್ಲಿ ಯುವ ಪೀಳಿಗೆಯ ಆಸಕ್ತಿಯನ್ನು ತೋರಿಸುತ್ತದೆ.

ಹೌದು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಸೂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿಯ 12ವರ್ಷದ ಬಾಲಕ ಸಮರ್ಥ್, ತನ್ನಿಮಾನಿಗ ದೈವದ ಪಾತ್ರ ನಿರ್ವಹಿಸಿ ಭೂತ ಕೋಲ ಕಟ್ಟುವ ಮೂಲಕ ಗಮನ ಸೆಳೆದಿದ್ದಾನೆ. ಈ ಅಪರೂಪದ ವಿದ್ಯಮಾನವು ದೈವದ ಕೋಲಕ್ಕೆ ಬಣ್ಣ ಹಚ್ಚಿ, ಯಶಸ್ವಿಯಾಗಿ ಪಾತ್ರ ನಿರ್ವಹಿಸಿದ ಬಾಲಕನ ಭಕ್ತಿ ಮತ್ತು ಕಲೆಯನ್ನು ಅನಾವರಣಗೊಳಿಸಿದೆ.

ಹೆಸರಾಂತ ದೈವ ಕಲಾವಿದ ದಿ. ಮೋನು ಪಾಣಾರ ಶಿರ್ಲಾಲು ಅವರ ಮೊಮ್ಮಗನಾಗಿರುವ ಸಮರ್ಥ್, ಅಜ್ಜ ಕಟ್ಟುತ್ತಿದ್ದ ಕೋಲವನ್ನು ನೋಡುತ್ತಾ ಬೆಳೆದಿದ್ದ.

ತಂದೆ ಹರೀಶ ಅವರ ಮಾರ್ಗದರ್ಶನದಲ್ಲಿ ಸಣ್ಣ ವಯಸ್ಸಿನಲ್ಲೇ ಕೋಲ ಕಟ್ಟಿರುವುದು ಸ್ಥಳೀಯವಾಗಿ ಪ್ರಶಂಸೆಗೆ ಪಾತ್ರವಾಗಿದೆ. ಸಮರ್ಥ್ ಅವರ ಚಿಕ್ಕಪ್ಪ ರಮೇಶ್ ಶಿರ್ಲಾಲು ಅವರು ಸರಕಾರಿ ಶಾಲೆಯ ಶಿಕ್ಷಕರಾಗಿದ್ದು, ಅವರೂ ಪ್ರೋತ್ಸಾಹ ನೀಡಿದ್ದಾರೆ.

ಸದ್ಯ ಈ ಬಾಲಕನ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಶಿರ್ಲಾಲು ಸೂಡಿ ಪಂಗ್ಲಬೆಟ್ಟು, ಮುಂಡ್ಲಿ ಮುಗೇರಕಲ ದೈವಗಳ ಪ್ರತಿಷ್ಠಾ ವರ್ಧಂತ್ಯುತ್ಸವ ಶನಿವಾರ (ಏ.4) ಬೆಳಗ್ಗಿನ ಜಾವ ನಡೆದಿದ್ದು, ಈ ಸಂದರ್ಭದಲ್ಲಿ ತನ್ನಿಮಾನಿಗ ಹೆಣ್ಣು ದೈವದ ಪಾತ್ರಿಯಾಗಿ ಸಮರ್ಥ್ ಗಗ್ಗರ ಕಟ್ಟಿದ್ದಾನೆ.

ಹಿರಿಯರಿಂದ ಬಳುವಳಿ

ಮೊಗೇರ ಸಮುದಾಯಕ್ಕೆ ಸೇರಿದ ಈ ದೈವಸ್ಥಾನದಲ್ಲಿ ವಾರ್ಷಿಕ ನೇಮ ನಡೆಯುತ್ತದೆ. ಮೋನು ಪಾಣರರ ವ್ಯಾಪ್ತಿಗೆ (ಅಜಲ್‌ಗೆ) ಈ ದೈವಸ್ಥಾನ ಬರುತ್ತದೆ. ಹಿಂದೆ ಅಜ್ಜ ಮೋನು ಪಾಣರ ಕೋಲ ಕಟ್ಟುತ್ತಿದ್ದರು. ಅವರ ಮಗ ಹರೀಶ ಧರ್ಮರಸು ದೈವ ಕೋಲ ಕಟ್ಟುತ್ತಿದ್ದಾರೆ.

ಹರೀಶ ಅವರ ಮಗ ಸಮರ್ಥ್ ಈಗ ಬಣ್ಣ ತುಂಬುತ್ತಿದ್ದು ಈ ಮೂಲಕ ಮೂರನೇ ತಲೆಮಾರಿನ ಬಾಲಕನೂ ಧಾರ್ಮಿಕ ಪರಂಪರೆಯನ್ನು ಮುಂದುವರಿಸಿರುವುದೇ ಅಲ್ಲದೆ ಎಳೆಯ ವಯಸ್ಸಿನಲ್ಲೇ ಅಜ್ಜ, ತಂದೆಯವರ ಹಾದಿಯನ್ನು ಪ್ರಕಾಶಮಾನಗೊಳಿಸುತ್ತಿದ್ದಾನೆ.

ವಿಶಿಷ್ಟ ಆಚರಣೆ

ಸ್ಥಳೀಯರ ಮಾಹಿತಿ ಪ್ರಕಾರ ತನ್ನಿಮಾನಿಗ ದೈವದ ಕೋಲ ಕಟ್ಟುವವರು ಅವಿವಾಹಿತರಾಗಿರಬೇಕು. ಇದು ಬೆಳಗ್ಗಿನ ಜಾವ 3 ಗಂಟೆ ವೇಳೆಗೆ ನಡೆಯುವ ಕೋಲ. ಈ ಕೋಲದಲ್ಲಿ ಕರಿಮಣಿ ಕಟ್ಟುವ ವಿಶೇಷ ಪದ್ಧತಿ ಇದೆ. ಎಡ್ಕೂರ ಮಾಯಗಾರ ತನ್ನಿಮಾನಿಗ ಸೇರಿದಂತೆ ಒಟ್ಟು ನಾಲ್ಕು ದೈವಗಳಿದ್ದು ನೇಮದ ಸಮಯದಲ್ಲಿ ತನ್ನಿಮಾನಿಗ ಹೆಣ್ಣು ದೈವಕ್ಕೆ ಮದುವೆ ಮಾಡಿಸುವ ರಿವಾಜು ಇದೆ. ತುಳುನಾಡಿನ 66 ಕೋಟಿ–ಚೆನ್ನಯ್ಯರ ಗರಡಿ, 33 ಮೊಗೆರಕಳ (ಕಲ್ಲಕಳ) ಗಳಲ್ಲಿ ಶಿರ್ಲಾಲು ಸೂಡಿ ಪಂಗ್ಲಬೆಟ್ಟು, ಮುಂಡ್ಲಿ ಮುಗೇರಕಲವೂ ಒಂದು. ಇದೀಗ ಬಾಲಕನೊಬ್ಬ ಯಶಸ್ವಿಯಾಗಿ ಈ ಕಟ್ಟುಪಾಡುಗಳನ್ವಯ ಭೂತಪಾತ್ರಿಯಾಗಿ ನಿರ್ವಹಣೆ ಮಾಡಿರುವುದು ಜನ ಮನ ಸೆಳೆದಿದೆ...

ಸಾಹಸ ಮೆಚ್ಚುವಂತದ್ದು

ಪ್ರಾಚೀನ ಪರಂಪರೆ ಆಚಾರ ವಿಚಾರಗಳು ವಿಭಿನ್ನ ಸಂಪ್ರದಾಯಗಳು ಉಳಿಸಬೇಕಾದರೆ ಮಕ್ಕಳಲ್ಲಿ ಕಲೆ ಆಸಕ್ತಿ ಬೆಳೆಸುವುದು ಮುಖ್ಯ. ಈ ಹುಡುಗನ ಸಾಹಸ ಮೆಚ್ಚುವಂತದ್ದು.

■ ನಿತ್ಯಾನಂದ ಪೂಜಾರಿ, ಮುಂಡ್ಲಿ.ಪ್ರತ್ಯಕ್ಷದರ್ಶಿ.

ಸಂಸ್ಕೃತಿ ಉಳಿಸೋಣ

ಅಜ್ಜ ಹೇಳಿಕೊಟ್ಟ ಕೋಲ ಸಂಸ್ಕೃತಿಯ ವಿದ್ಯೆ, ನಾವೆಲ್ಲರೂ ಪಾಲಿಸಿಕೊಂಡು ಬರುತಿದ್ದೇವೆ. ನಮ್ಮ ನಾಡಿನ ಸಂಸ್ಕೃತಿ ಉಳಿಸಲು ನಮ್ಮೆಲ್ಲರ ಪ್ರಯತ್ನ ಅಗತ್ಯವಾಗಿದೆ.

■ ಸಮರ್ಥ್, ಬಾಲಕ.

ಪತ್ನಿಯ ಇರಿದು ಕೊಲೆ ಯತ್ನ: ಪುತ್ರಿಗೂ ಗಾಯ

ಕಾಸರಗೋಡು: ಗೃಹಿಣಿಯನ್ನು ಇರಿದು ಕೊಲೆಗೈಯ್ಯಲೆತ್ನಿಸಿದ್ದು, ಈ ವೇಳೆ ಪುತ್ರಿಯೂ ಇರಿತದಿಂದ ಗಾಯಗೊಂಡಿದ್ದಾಳೆ. ಪಳ್ಳಿಕೆರೆ ಪಾಕ್ಕಂ ಚೇರ್ಕಪ್ಪಾರ ಎಂಬಲ್ಲಿ ಶುಕ್ರವಾರ ಘಟನೆ ನಡೆದಿದೆ. ಚೇರ್ಕಪ್ಪಾರ ಮಾಂಗಾಡ್ ಅರ್ಚನ ನಿವಾಸ್‌ನ ಕೆ.ಎ.ಯಶೋಧಾ (67), ಪುತ್ರಿ ಶೈಜಿ ಮೋಳ್ (30) ಎಂಬವರು ಇರಿತದಿಂದ ಗಾಯಗೊಂಡವರು. ಅವರನ್ನು ಪರಿಯಾರಂ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಆಸ್ಪತ್ರೆಯಲ್ಲಿ ದಾಖಲಿಸಿದ ಘಟನೆಯ ಬಳಿಕ ಯಶೋಧಾರ ಪತಿ ಪಳ್ಳಿಕೆರೆಯಲ್ಲಿ ಆಟೋಚಾಲಕನಾಗಿರುವ ಮಾಂಗಾಡ್‌ನ ಟಿ.ಪಿ.ನಾಗರಾಜನ್ (73) ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದಾನೆ. ಪೊಲೀಸರು ಹೇಳಿಕೆ ದಾಖಲಿಸಿಕೊಳ್ಳುತ್ತಿದ್ದ ವೇಳೆ ನಾಗರಾಜನ್‌ಗೆ ಎದೆನೋವು ಕಾಣಿಸಿಕೊಂಡಿದ್ದು ಇದರಿಂದ ಜಿಲ್ಲಾಸ್ಪತ್ರೆಗೆ ತಲುಪಿಸಿ ಚಿಕಿತ್ಸೆ ನೀಡಲಾಯಿತು. ಆರೋಗ್ಯ ಸ್ಥಿತಿ ಉತ್ತಮವಾಗಿದೆ ಎಂದು ತಿಳಿಸಿದುದರಿಂದ ಆರೋಪಿಯನ್ನು ಬಂಧಿಸಲಾಯಿತು. ಬಳಿಕ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗೆ ಎರಡು ವಾರಗಳ ನ್ಯಾಯಾಂಗ ಬಂಧನ ವಿಧಿಸಿದೆ. ನಾಗರಾಜನ್ ಕೌಟುಂಬಿಕ ಸಮಸ್ಯೆಯ ಹಿನ್ನೆಲೆಯಲ್ಲಿ ಏಕಾಂಗಿಯಾಗಿಯೂ, ಪತ್ನಿ ಯಶೋಧಾ ಹೆಣ್ಮಕ್ಕಳೊಂದಿಗೆ ವಾಸಿಸುತ್ತಿದ್ದಾರೆ. ಈ ಹಿಂದೆಯೂ ಯಶೋಧಾರ ಮೇಲೆ ನಾಗರಾಜನ್ ಹಲ್ಲೆ ನಡೆಸಿದ್ದನೆನ್ನಲಾಗಿದೆ. ಆ ಬಗ್ಗೆ ಪೊಲೀಸರಿಗೆ ದೂರು ನೀಡಿದ ದ್ವೇಷದಿಂದ ಶುಕ್ರವಾರ ನಾಗರಾಜನ್ ಯಶೋಧಾರಿಗೆ ಇರಿದಿದ್ದು, ತಡೆಯಲೆತ್ನಿಸಿದಾಗ ಪುತ್ರಿಗೂ ಇರಿದು ಗಾಯಗೊಳಿಸಿರುವುದಾಗಿ ದೂರಲಾಗಿದೆ.

ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜೊತೆ ಕುಪ್ಮಾ ಸಭೆ

ಕೋಚಿಂಗ್ ಸೇರ್ಪಡೆ ಓಕೆ



ಮಂಗಳೂರು : ಪದವಿ ಪೂರ್ವ ಶಿಕ್ಷಣದಲ್ಲಿ ಇನ್ನು ಮುಂದೆ ಕೋಚಿಂಗ್ ಮತ್ತು ಬೋರ್ಡ್ ಸಂಯೋಜಿತ ಪಠ್ಯಚಟುವಟಿಕೆಯನ್ನು ಅಳವಡಿಸುವ ಭರವಸೆಯನ್ನು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ನೀಡಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ರಶ್ಮಿ ಮಹೇಶ್ ಅವರ ಕಚೇರಿಯಲ್ಲಿ ನಡೆದ ಕುಪ್ಮ ಸಮಿತಿಯ ಪದಾಧಿಕಾರಿಗಳ ಸಭೆಯಲ್ಲಿ ಅವರು ಈ ಭರವಸೆ ನೀಡಿದ್ದಾರೆ.

ಈ ಬಗ್ಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಮಾರ್ಗ ಸೂಚಿಯಲ್ಲಿ ಪ್ರಕಟಿಸಲಾಗುವುದು ಎಂದು ತಿಳಿಸಿದ ಅವರು, ಇದಲ್ಲದೆ ವರ್ಗಾವಣೆ ಪತ್ರವನ್ನು ಡಿಜಿಲಾಕರ್‌ನಲ್ಲಿ ಅಳವಡಿಸುವ ಬಗ್ಗೆ ವಿಸ್ತೃತವಾದ ಚರ್ಚೆಯ ನಂತರ ಸಾಧಕ ಬಾಧಕಗಳ ಕುರಿತಂತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯು ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕುಪ್ಮ ಸಮಿತಿಯ ಸಭೆಯನ್ನು 3 ತಿಂಗಳಿಗೊಮ್ಮೆ ನಡೆಸಲು ತೀರ್ಮಾನಿಸಲಾಯಿತು. ಈ ಸಭೆಯಲ್ಲಿ ಶೈಕ್ಷಣಿಕ ಹಾಗೂ ಇತರೆ ಸಮಸ್ಯೆಗಳ ಕುರಿತಂತೆ ಚರ್ಚೆಯನ್ನು ನಡೆಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಬಹುದೆಂದು ಅಭಿಪ್ರಾಯ ಪಡಲಾಯಿತು. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇನ್ನು ಮುಂದೆ ಕುಪ್ಮದ ಸಹಯೋಗದೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೊಡುವ ಬಗ್ಗೆಯೂ ಚರ್ಚಿಸಲಾಯಿತು. ಈ ಸಂದರ್ಭ ನಕಲಿ ಕಾಲೇಜುಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಕುಪ್ಮ ಸರ್ಕಾರಕ್ಕೆ ಮನವಿ ಮಾಡಿತು.

ಬೋಧನ ಶುಲ್ಕಕ್ಕೆ ಸಂಬಂಧಪಟ್ಟ ಹಾಗೆ ಶಿಕ್ಷಣ ಕಾಯ್ದೆಯ ನಿಯಮಾವಳಿ ಪ್ರಕಾರ ಸೂತ್ರವನ್ನು ಅಳವಡಿಸಿ ಬೋಧನಾ ಶುಲ್ಕವನ್ನು ಮಾರ್ಗಸೂಚಿಯಲ್ಲಿ ನಮೂದಿಸುವಂತೆ ಚರ್ಚಿಸಲಾಯಿತು. ಸುಮಾರು 2 ಗಂಟೆಗೂ ಹೆಚ್ಚಿನ ಸಮಯದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರುವ ವಿಷಯಗಳ ಕುರಿತಂತೆ ಸುದೀರ್ಘವಾಗಿರುವಂತಹ ಚರ್ಚೆಯನ್ನು ನಡೆಸಲಾಯಿತು.

ಈ ಚರ್ಚೆಯಲ್ಲಿ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ನಿರ್ದೇಶಕ ಭರತ್, ಕುಪ್ಮ ರಾಜ್ಯಾಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ರಾಜ್ಯ ಕಾರ್ಯದರ್ಶಿ ಪ್ರೊ. ನರೇಂದ್ರ ಎಲ್. ನಾಯಕ್, ರಾಜ್ಯಉಪಾಧ್ಯಕ್ಷ ಸುಧಾಕರ್ ಶೆಟ್ಟಿ, ಯುವರಾಜ್ ಜೈನ್, ಜಯರಾಮ್ ಶೆಟ್ಟಿ, ರಾಜ್ಯ ಸಹಕಾರ್ಯದರ್ಶಿ ವಿಶ್ವನಾಥ್ ಶೇಷಾಚಲ, ಬೆಂಗಳೂರು ಉತ್ತರವಲಯ ಅಧ್ಯಕ್ಷ ಕೀರ್ತನ್‌ಕುಮಾರ್, ಕಾರ್ಯದರ್ಶಿ ಡಾ. ದೇವರಾಜ್, ಬೆಂಗಳೂರು ದಕ್ಷಿಣ ವಲಯ ಕಾರ್ಯದರ್ಶಿ ಡಾ. ಕುಮಾರ್ ಹೆಚ್, ದಾವಣಗೆರೆ ಜಿಲ್ಲಾಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ವಿನಯ್, ಧಾರವಾಡ ಜಿಲ್ಲಾಧ್ಯಕ್ಷ ವಿಶ್ವನಾಥ್ ಕೊರ್ರಿ, ಕಾರ್ಯದರ್ಶಿ ವೈ. ಬಿ. ಅಣ್ಣಿಗೇರಿ, ಮೈಸೂರು ಜಿಲ್ಲಾಧ್ಯಕ್ಷ ಮಂಜುನಾಥ್, ಉಡುಪಿ ಜಿಲ್ಲಾಧ್ಯಕ್ಷ ಸಿ. ಎ. ಗೋಪಾಲಕೃಷ್ಣ ಭಟ್, ಹಾವೇರಿ ಜಿಲ್ಲಾಧ್ಯಕ್ಷ ಪ್ರಕಾಶ್ ನಾಯಕ್, ಕಾರ್ಯದರ್ಶಿ ನಯನ ಮಾಧವ್ ನಾಯಕ್, ಸತೀಶ್ ಎಂ.ಬಿ, ರಾಜ್ಯ ಕೋಶಾಧಿಕಾರಿ ರಮೇಶ್ ಕೆ. ಉಪಸ್ಥಿತರಿದ್ದರು.

ಮಳೆಗಾಲದಲ್ಲಿ ಮನೆಯೊಳಗೆ ಗಲೀಜು ನೀರು | ಅಸಮರ್ಪಕ ಡ್ರೈನೇಜ್ ವ್ಯವಸ್ಥೆ

ಕೊಡಿಯಾಲ್‌ಬೈಲ್‌ನಲ್ಲಿ ಕೃತಕ ನೆರೆಗೆ ಜನರು ಹೈರಾಣು

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಮಳೆಗಾಲ ಬಂತೆಂದರೆ ನಮ್ಮ ಪ್ರದೇಶದಲ್ಲಿ ಎಲ್ಲಿ ಕೃತಕ ನೆರೆ ನೀರು ಮನೆಗೆ ನುಗ್ಗಿ ಬಿಡುತ್ತದೆಯೋ ಎಂದು ಭಯ, ಆತಂಕ ಶುರುವಾಗುತ್ತದೆ. ಮಳೆ ನೀರು ಹರಿದು ಹೋಗಲು ಸಮರ್ಪಕ ವ್ಯವಸ್ಥೆ ಇಲ್ಲದ ಕಾರಣ ಕೃತಕ ನೆರೆ ಸೃಷ್ಟಿಯಾಗಿ ಮಣ್ಣು, ಡ್ರೈನೇಜ್ ನೀರು ಮನೆಯೊಳಗೆ ನುಗ್ಗುತ್ತದೆ. ಒಮ್ಮೆ ಗಲೀಜು ನೀರು ಮನೆಯೊಳಗೆ ಬಂದರೆ ಶುಚಿಗೊಳಿಸುವಷ್ಟರಲ್ಲಿ ಸಾಕು ಸಾಕಾಗುತ್ತದೆ...

ಹೀಗೆಂದು ನೋವು ತೋಡಿಕೊಂಡರು ಮನಪಾ ಕೊಡಿಯಾಲ್‌ಬೈಲ್ ವಾರ್ಡ್‌ನ ಕೊಡಿಯಾಲ್‌ಗುತ್ತು ನಿವಾಸಿಗಳು.

ನಗರದ ಮಧ್ಯಭಾಗದಲ್ಲಿ ಶಾಲಾ ಕಾಲೇಜುಗಳು, ಕಾರಾಗೃಹ, ಅತಿಹೆಚ್ಚು ಜನವಸತಿ ಹೊಂದಿರುವ ಕೊಡಿಯಾಲ್‌ಬೈಲ್ ವಾರ್ಡ್‌ನಲ್ಲಿ ಒಂದೆರಡು ಕಡೆ ನೀರಿನ ಕೊರತೆ ಜತೆಗೆ ಡ್ರೈನೇಜ್ ಸಮಸ್ಯೆ ಹಾಗೂ ಕೃತಕ ನೆರೆ ಹಾವಳಿಯಿಂದ ನಾಗರಿಕರು ದೊಡ್ಡ ಪ್ರಮಾಣದಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ.

ಲಾಲ್‌ಬಾಗ್ ಸಾಯಿಬಿನ್ ಕಾಂಪ್ಲೆಕ್ಸ್‌ನಿಂದ ಕೆನರಾ ಕಾಲೇಜು, ಜೈಲುರೋಡ್, ಪಿಂಟೋಸ್ ಲೇನ್, ಕದ್ರಿಗುಡ್ಡ, ಬಿಜೈ ಚರ್ಚ್‌ನಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಪ್ರದೇಶದವರೆಗೆ ವ್ಯಾಪಿಸಿಕೊಂಡಿರುವ ಕೊಡಿಯಾಲ್‌ಬೈಲ್ ವಾರ್ಡ್‌ನ ಒಂದೆರಡು ಕಡೆ ಜನತೆ ನೀರಿನ ಸಮಸ್ಯೆ ಅನುಭವಿಸುತ್ತಿದ್ದಾರೆ.

ಈ ವಾರ್ಡ್‌ನ ಕಾಪಿಕಾಡ್ ಪ್ರದೇಶಕ್ಕೆ ಎರಡು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದೆ. ಚಿಲಿಂಬಿ ಟ್ಯಾಂಕ್‌ನಿಂದ ಈ ವಾರ್ಡ್‌ನ ಕಾಪಿಕಾಡ್ ಎರಡನೇ ಕ್ರಾಸ್ ಪರಿಸರಕ್ಕೆ ನೀರು ಬರುತ್ತಿದೆ. ಚಿಲಿಂಬಿ ಟ್ಯಾಂಕ್‌ನಿಂದ ಮೂರ್‍ನಾಲ್ಕು ವಾರ್ಡ್‌ಗಳಿಗೆ ನೀರು ಸರಬರಾಜು ಆಗುತ್ತಿದ್ದು, ಪೈಪ್‌ಲೈನ್‌ನ ಕೊನೆಯ ಸ್ಥಳವಾದ ಕಾಪಿಕಾಡ್‌ಗೆ ಕಡಿಮೆ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿದೆ. ಪ್ರೆಶರ್ ಇಲ್ಲದೆ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ಇಲ್ಲಿಗೆ ನೀರು ಸರಬರಾಜು ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅವಶ್ಯಕತೆ ಇರುವ ಜನರಿಗೆ ಇಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ.

ಕದ್ರಿಗುಡ್ಡ ಪ್ರದೇಶಕ್ಕೆ ಸರ್ಕಿಟ್‌ಹೌಸ್ ಟ್ಯಾಂಕ್‌ನಿಂದ ನೀರು ಬರುತ್ತಿದೆ. ಇಲ್ಲಿ 110 ಮನೆಗಳಿವೆ. ಕದ್ರಿಗುಡ್ಡ ಎತ್ತರದ ಪ್ರದೇಶವಾಗಿರುವ ಕಾರಣ ಇಲ್ಲಿ ಪ್ರೆಶರ್ ಸಮಸ್ಯೆಯಿಂದ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ. ನೀರಿನ ಸಮಸ್ಯೆ ಉಂಟಾದ ಸಂದರ್ಭದಲ್ಲಿ ಮನಪಾ ವತಿಯಿಂದ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಲ್‌ಬಾಗ್



ಬಿಜೈ ಭಾರತಿನಗರ ಬಳಿ ರಾಜಕಾಲುವೆಯಲ್ಲಿ ಒಳಚರಂಡಿ ನೀರು ಹರಿಯುತ್ತಿದ್ದು, ರಾಜಕಾಲುವೆ ಹೂಳೆತ್ತದೆ ಪೊದೆಗಳಿಂದ ತುಂಬಿಕೊಂಡಿದೆ.

ಅಸಮರ್ಪಕ ಡ್ರೈನೇಜ್ ವ್ಯವಸ್ಥೆ

ಕೊಡಿಯಾಲ್‌ಬೈಲ್ ಪ್ರದೇಶದಲ್ಲಿ ಅಸಮರ್ಪಕ ಡ್ರೈನೇಜ್ ವ್ಯವಸ್ಥೆಯಿಂದ ಜನರು ಸಮಸ್ಯೆ ಎದುರಿಸುತ್ತಿದ್ದಾರೆ. ಇಲ್ಲಿನ ಬಿಜೈ ಹಾಗೂ ಕದ್ರಿ ಪ್ರದೇಶದಿಂದ ಬರುವ ರಾಜಕಾಲುವೆಯಲ್ಲಿ ಒಳಚರಂಡಿ ನೀರು ಹರಿಯುತ್ತಿದೆ. ಇದರಿಂದಾಗಿ ಸುತ್ತಲಿನ ಪ್ರದೇಶದ ಜನರು ಪ್ರತಿದಿನ ಚರಂಡಿ ವಾಸನೆಯೊಂದಿಗೆ ಜೀವಿಸಬೇಕಿದೆ. ಜತೆಗೆ ಸೊಳ್ಳೆಗಳ ಕಾಟ. ಕೊಡಿಯಾಲ್ ಗುತ್ತು, ಚಂದ್ರಿಕಾ ಬಡಾವಣೆ, ಭಾರತೀನಗರದಲ್ಲಿ ಡ್ರೈನೇಜ್ ಸಮಸ್ಯೆಯಿಂದ ಜನತೆ ಹೈರಾಣಾಗಿದ್ದಾರೆ.

ಮನೆಯೊಳಗೆ ನೆರೆ ನೀರು



ಕೊಡಿಯಾಲ್‌ಬೈಲ್ ವಾರ್ಡ್‌ನ ಹಲವು ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಕಟ್ಟಿಟ್ಟ ಬುತ್ತಿ. ನಿರಂತರ ಒಂದು ಗಂಟೆಗಳ ಕಾಲ ಭಾರಿ ಮಳೆ ಬಂತೆಂದರೆ ಇಲ್ಲಿನ ರಾಜಕಾಲುವೆಗಳು ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ರಾಜಕಾಲುವೆಗಳು ಪೊದೆ, ಕಸಗಳಿಂದ ತುಂಬಿರುತ್ತವೆ.

ರಾಜಕಾಲುವೆಗಳಿಂದ ಹೂಳು ತೆಗೆಯುವುದಿಲ್ಲ. ತೆಗೆದರೂ ಅರೆಬರೆ ಕಾಮಗಾರಿ ನಡೆಸಲಾಗಿರುತ್ತದೆ. ಇದರಿಂದಾಗಿ ರಾಜಕಾಲುವೆಯಿಂದ ನೀರು ಉಕ್ಕುತ್ತದೆ. ಇನ್ನೊಂದೆಡೆ ಮಳೆ ನೀರು ಹರಿಯಲು ಸಮರ್ಪಕ ವ್ಯವಸ್ಥೆ ಇಲ್ಲದ ಕಾರಣ ಜನವಸತಿ ಪ್ರದೇಶದಲ್ಲಿ ಕೃತಕ ನೆರೆ ಕಾಣಿಸಿಕೊಳ್ಳುತ್ತದೆ. ಡ್ರೈನೇಜ್ ನೀರು ಮನೆಯೊಳಗೆ ನುಗ್ಗುತ್ತದೆ. ಕೊಡಿಯಾಲಗುತ್ತು, ಭಾರತಿನಗರ, ಚಂದ್ರಿಕಾ ಬಡಾವಣೆಯಲ್ಲಿ ಕೃತಕ ನೆರೆ ಮಳೆಗಾಲದಲ್ಲಿ ಮಾಮೂಲಿ ಎಂಬಂತಾಗಿದೆ.



ಕೊಡಿಯಾಲ್‌ಬೈಲ್ ವಾರ್ಡ್‌ನ ಒಂದೆರಡು ಕಡೆ ನೀರಿನ ಸಮಸ್ಯೆಯಿದೆ. ಜಲಸಿರಿ ಯೋಜನೆಯಡಿ ಹ್ಯಾಟ್‌ಹಿಲ್ ಬಳಿ 12 ಲಕ್ಷ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ ನಿರ್ಮಾಣವಾಗಿದ್ದು, ಜಲಸಿರಿ ಕಾಮಗಾರಿ ಪೂರ್ಣಗೊಂಡ ಬಳಿಕ ಕಾಪಿಕಾಡ್ ಪ್ರದೇಶದ ನೀರಿನ ಸಮಸ್ಯೆ ಬಗೆಹರಿಯಲಿದೆ. ವಾರ್ಡ್‌ನಲ್ಲಿ ಡ್ರೈನೇಜ್ ಸಮಸ್ಯೆ ಬಗೆಹರಿಸಲು ನಾನು ಮೇಯರ್ ಆಗಿದ್ದ ವೇಳೆ 14 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಲಾಗಿದ್ದು, ಅನುಷ್ಠಾನ ಗೊಳ್ಳಬೇಕಿದೆ. ಕೃತಕ ನೆರೆ ಸಮಸ್ಯೆ ಬಗೆಹರಿಸಲು ಬಲ್ಲಾಲ್‌ಬಾಗ್ ಬಳಿ ಹೊಸ ಸೇತುವೆ ಮಂಜೂರುಗೊಂಡಿದ್ದು, ಕಾಮಗಾರಿ ಇನ್ನಷ್ಟೇ ಆಗಬೇಕಿದೆ.

■ ಸುಧೀರ್ ಶೆಟ್ಟಿ ಕಣ್ಣೂರು, ಕೊಡಿಯಾಲ್‌ಬೈಲ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್



ಕೊಡಿಯಾಲ್‌ಗುತ್ತು ಪ್ರದೇಶದಲ್ಲಿ ಮಳೆಗಾಲದಲ್ಲಿ ಕೃತಕ ನೆರೆಯಿಂದ ಇಲ್ಲಿನ ನಿವಾಸಿಗಳು ಭಾರಿ ಕಿರಿಕಿರಿ ಅನುಭವಿಸುತ್ತಿದ್ದೇವೆ. ಒಂದೆರಡು ಗಂಟೆಗಳ ಕಾಲ ನಿರಂತರ ಮಳೆ ಬಂದರೆ ತಗ್ಗು ಪ್ರದೇಶವಾದ ಇಲ್ಲಿನ ಮನೆಗಳಿಗೆ ಮಳೆ ನೀರು ನುಗ್ಗುತ್ತದೆ. ಚರಂಡಿ ನೀರು ಮಿಶ್ರಿತ ಮಳೆನೀರಿನಿಂದ ಮನೆ ಶುಚಿಗೊಳಿಸುವುದೇ ತ್ರಾಸದ ಕೆಲಸವಾಗಿದೆ. ಮಳೆ ನೀರು ಹರಿಯಲು ಸಮರ್ಪಕ ವ್ಯವಸ್ಥೆ ಕಲ್ಪಿಸುವ ಮೂಲಕ ಕೃತಕ ನೆರೆ ಸಮಸ್ಯೆಯನ್ನು ಮನಪಾ ಅಧಿಕಾರಿಗಳು ಬಗೆಹರಿಸಬೇಕು.

■ ಅವಿನ್ ಕಿರಿಭಾಗ, ಕೊಡಿಯಾಲ್ ಗುತ್ತು ನಾಲ್ಕನೇ ಕ್ರಾಸ್ ನಿವಾಸಿ

ಮುಂದಿನ ವಾರ್ಡ್ -31
ಬಿಜೈ ಪರಿಸರದ ಸ್ಥಿತಿಗತಿ

ಬಿಜೆಪಿ ವೈಯಕ್ತಿಕ ಟೀಕೆ: ಲಾಡ್

ದಾವಣಗೆರೆ: ಸಿಎಂ ಸಿದ್ದರಾಮಯ್ಯಅವರನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಿ ಮಾತನಾಡುವುದನ್ನು ಬಿಟ್ಟರೆ ಬಿಜೆಪಿಯವರಿಗೆ ಯಾವುದೇ ಗಂಭೀರವಾದ ವಿಷಯಗಳಿಲ್ಲ ಎಂದು ಸಚಿವ ಸಂತೋಷ್ ಲಾಡ್ ಕಿಡಿಕಾರಿದರು.




ನಗರದಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಟೀಕಿಸುವ ಬಿಜೆಪಿಯವರು ಸ್ವಲ್ಪ ಯೋಚನೆ ಮಾಡಬೇಕು. 17 ಬಾರಿ ಬಜೆಟ್ ಮಂಡಿಸಿರುವ ಇಂತಹ ಅನುಭವವಿರುವ ನಾಯಕರು ದೇಶದಲ್ಲೇ ಬೇರೆ ಯಾರೂ ಇಲ್ಲ. ನಾವು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎಂದೂ ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ. ಅಂಕಿ-ಅಂಶಗಳನ್ನು ಇಟ್ಟುಕೊಂಡು ಮೋದಿಯವರ ಸಾಧನೆ, ಕಾರ್ಯಕ್ಷಮತೆಯ ಬಗ್ಗೆ ಮಾತನಾಡುತ್ತೇವೆ. ಆದರೆ ಬಿಜೆಪಿಯವರು ಕೇವಲ ಪ್ರಚಾರಕ್ಕಾಗಿ ಸಿದ್ದರಾಮಯ್ಯ ವಿರುದ್ಧ ಮಾತನಾಡುತ್ತಿದ್ದಾರೆ ಎಂದರು.

ನನ್ನ ಕಚೇರಿಯಲ್ಲಿ ಒಂದು ಗಂಟೆ ಇರಲಿ: ಸೋಮಣ್ಣ

ದಾವಣಗೆರೆ: ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ತಾಂತ್ರಿಕ ವ್ಯವಸ್ಥೆಯ ಬಗ್ಗೆ ಅರಿವಿಲ್ಲ. ಇನ್ನೂ ಹಳೆಯ ಕಾಲದಲ್ಲೇ ಉಳಿದುಬಿಟ್ಟಿದ್ದಾರೆ. ಯಾರಿಗೆ ಕೆಲಸವಿದೆ, ಯಾರಿಗೆ ಕೆಲಸವಿಲ್ಲ ಎಂಬುದರ ಬಗ್ಗೆ ಚರ್ಚಿಸಲು ನಾನು ಸಿದ್ಧನಿದ್ದೇನೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಮುಗಿದ ಮೇಲೆ ಸಿದ್ದರಾಮಯ್ಯ ನನ್ನ ಕಚೇರಿಯಲ್ಲಿ ಒಂದು ಗಂಟೆ ಇರಲಿ. ನಾನು ಅವರ ಕಚೇರಿಯಲ್ಲಿ ಒಂದು ತಿಂಗಳು ಇರುತ್ತೇನೆ. ಆಗ ಯಾರು ಬುದ್ಧಿವಂತರು ಎಂಬುದನ್ನು ಜನರೇ ತೀರ್ಮಾನಿಸಲಿ ಎಂದು ಅವರು ಇದೇ ವೇಳೆ ಸವಾಲು ಹಾಕಿದರು.

ರಾಮ ಬಾಣ



ಅಭಿವೃದ್ಧಿ ಶೂನ್ಯ ಸರ್ಕಾರ: ಅಶೋಕ

ಪುಟ ೨➡ ಹೈಕಮಾಂಡ್‌ಗೆ ನಿಯತ್ತಾಗಿರಲು ಪ್ರತಿ ತಿಂಗಳು ಹಣ ಕಳುಹಿಸಿ ರಾಜ್ಯದ ಸಾಲದ ಹೊರೆ ಏರಿಸಿದ್ದಾರೆ. ರಾಜ್ಯವನ್ನು ಅಧೋಗತಿಗೆ ತಳ್ಳಿದ್ದಾರೆ ಎಂದರು. ಸಿದ್ದರಾಮಯ್ಯ ಅವರ ನಿಜ ಬಣ್ಣ ಮೈಸೂರಿನಲ್ಲಿ ಗೊತ್ತಾಗಿ ಅಲ್ಲಿನ ಮತದಾರರು ಸೋಲಿಸಿದರು. ಆಗ ಬಾದಾಮಿಗೆ ಓಡಿ ಬಂದರು. ಬಾದಾಮಿ ಕೈಹಿಡಿಯಿತು. ಆದರೆ, ಇಲ್ಲಿಗೂ ಕೈಕೊಟ್ಟು ಓಡಿಹೋದರು. ಈಗ ಮತ್ತೆ ಬಾಗಲಕೋಟೆಗೆ ಬಂದಿದ್ದಾರೆ. ಇಲ್ಲಿಗೂ ಕೈ ಕೊಡುತ್ತಾರೆ ಎಂದು ವ್ಯಂಗ್ಯವಾಡಿದರು.



ಸಿದ್ದರಾಮಯ್ಯ ಆಗ ಚುನಾವಣೆಗೆ ಬಾದಾಮಿಗೆ ಬಂದಿದ್ದರು. ಈಗ ಮತ್ತೆ ಬಂದಿದ್ದಾರೆ. ಬಾದಾಮಿ ಹಾಲು ಕುಡಿದು, ಬಿರಿಯಾನಿ ತಿಂದು ಟಾಟಾ ಬಾಯ್ ಬಾಯ್ ಹೇಳಿದರು. ಇನ್ನು ಎರಡು ವರ್ಷದಲ್ಲಿ ಅಭಿವೃದ್ಧಿಯ ಮಳೆ ಸುರಿಸುತ್ತೇನೆ ಎಂದು ಅವರು ಹೇಳುತ್ತಾರೆ. ಮೂರು ವರ್ಷ ನಿಮ್ಮ ಪಕ್ಷದ ಶಾಸಕರಿದ್ದರೂ ಬಾಗಲಕೋಟೆ ಅಭಿವೃದ್ಧಿ ಏಕೆ ಆಗಲಿಲ್ಲ. ನಿಮ್ಮ ಶಿಷ್ಯ ಏನು ಅಭಿವೃದ್ಧಿ ಮಾಡಿದ್ದಾರೆ ಎಂದರು. ಕ್ಷೇತ್ರದಲ್ಲಿ ಈ ಹಿಂದೆ ಚರಂತಿಮಠ ಅವರ ಅಭಿವೃದ್ಧಿ ಕಾರ್ಯ ಜನರ ಮನಸ್ಸಿನಲ್ಲಿ ಉಳಿದಿದೆ. ಆದ್ದರಿಂದ ಈ ಬಾರಿ ಜನರು ಅವರನ್ನು ಗೆಲ್ಲಿಸಲಿದ್ದಾರೆ ಎಂದರು.

ಅಧಿಕಾರಕ್ಕೆ ಬಂದಾಗಿನಿಂದ ಸಿಎಂ ಪಟ್ಟಕ್ಕಾಗಿ ಗುದ್ದಾಟ ನಡೆದಿದೆ. ಮೂರು ವರ್ಷದಲ್ಲಿ 30 ಹಗರಣಗಳನ್ನು ಮಾಡಿದರು. ವಾಲ್ಮೀಕಿ ಹಗರಣದಿಂದ ಹಿಡಿದು ಗುತ್ತಿಗೆದಾರರ ಶೇ.60ರಷ್ಟು ಕಮಿಷನ್ ಹಗರಣ ನಡೆದಿದೆ. ಲಿಕ್ಕರ್ ಲಾಬಿ ಮಾಡಿ ಸಚಿವರೊಬ್ಬರು ಕೋಟಿ ಕೋಟಿ ಹಣ ಹೊಡೆದು ದೆಹಲಿಗೆ ಕಳಿಸಿದರು. ಮೂರು ವರ್ಷದಲ್ಲಿ ಯಾವುದೇ ಸಾಧನೆ ಮಾಡಲಿಲ್ಲ. ನೀರಾವರಿಗೆ ಹಣ ಇಡಲಿಲ್ಲ. ಆದರೆ, ಕಾಂಗ್ರೆಸ್‌ನವರು ಮಾತ್ರ ಹಣ ಮಾಡಿಕೊಳ್ಳುತ್ತಿದ್ದಾರೆ. ಒಂದು ಡ್ಯಾಮ್ ಕಟ್ಟಲಿಲ್ಲ. ಮೆಡಿಕಲ್ ಕಾಲೇಜು ತರಲಿಲ್ಲ ಎಂದರು. ಕಾಂಗ್ರೆಸ್ ಬಂದ ಮೇಲೆ ಒಂದೇ ಒಂದು ಪಿಎಚ್‌ಸಿಗಳಲ್ಲಿ ವೈದ್ಯರಿಲ್ಲ. ಔಷಧ ಖರೀದಿಗೆ ಹಣವಿಲ್ಲ. ಹಣವಿಲ್ಲದೆ ಮೂರು ವರ್ಷದಲ್ಲಿ ಟೆಂಡರ್ ಕರೆದಿಲ್ಲ. ಅಭಿವೃದ್ಧಿಗೆ ಮಾಡಿದ ಸಾಲವೇ ಜಾಸ್ತಿ. ಸಣ್ಣ ಸಣ್ಣ ಸಮುದಾಯಗಳ ಬಳಿ ಹೋಗಿ ಈಗ ಮತ ಕೇಳುತ್ತಿದ್ದಾರೆ. 20ನೇ ತಾರೀಕಿನ ನಂತರ ಇವರ ಕಥೆ ಏನು ಆಗುತ್ತದೋ ಗೊತ್ತಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಸಿಎಂ ಸ್ಥಾನವನ್ನು ಕಿತ್ತುಕೊಳ್ಳುತ್ತಾರೆ ಎಂದು ವಿವರಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕಾಂಗ್ರೆಸ್ಸನ್ನು ನಿರ್ನಾಮ ಮಾಡಲು ಯಾರಿಂದಲೂ ಸಾಧ್ಯವಿಲ್ಲ
– ಮಲ್ಲಿಕಾರ್ಜುನ ಖರ್ಗೆ
– ಸಾಧ್ಯವಿದೆ ಸಾಧ್ಯವಿದೆ, ಮತದಾರರಿಂದ ಮಾತ್ರ ಸಾಧ್ಯವಿದೆ!

ದಿನ ಭವಿಷ್ಯ

ಮೇಷ
ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಸಂಭವ. ಆದರಿಂದ ಹಿತವೇ ಆಗಲಿದೆ. ಅನ್ಯರ ಜತೆಗಿನ ವೈರವನ್ನು ದೀರ್ಘ ಎಳೆಯಬೇಡಿ.

ವೃಷಭ
ಆದಾಯ ಗಳಿಕೆಯ ಹೊಸ ದಾರಿ ತೋರಲಿದೆ. ನಿಮ್ಮ ವ್ಯಕ್ತಿತ್ವ ಇತರರ ಮೆಚ್ಚುಗೆ ಗಳಿಸುವುದು. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ.

ಮಿಥುನ
ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಬೀಳಲಿದೆ. ಮಾನಸಿಕ ಒತ್ತಡದಿಂದ ನೆಮ್ಮದಿ ಹಾಳು. ಪ್ರೀತಿಯ ಬಿಕ್ಕಟ್ಟು ಶಮನವಾಗದೆ ಅಸಹನೆ. ಧನವ್ಯಯ.

ಕಟಕ
ವೃತ್ತಿ ಕ್ಷೇತ್ರದಲ್ಲಿ ನಯವಂಚಕರ ಬಗ್ಗೆ ಎಚ್ಚರವಿರಲಿ. ಕುಟುಂಬದಲ್ಲಿ ಸಮಸ್ಯೆ ಉಂಟಾದೀತು. ಪ್ರೀತಿಯ ವ್ಯವಹಾರದಲ್ಲಿ ಬಿಕ್ಕಟ್ಟು.

ಸಿಂಹ
ಭಾವುಕತೆ ನಿಮ್ಮ ವಿವೇಕ ಮರೆಸಬಹುದು. ಸಹೋದರರಿಂದ ಸಮಸ್ಯೆ ಸೃಷ್ಟಿ. ಆಪ್ತ ಸಂಬಂಧ ಕೆಡಲಿದೆ. ನೆರೆಕರೆ ಜತೆ ವೈಷಮ್ಯ ಸಂಭವ.

ಕನ್ಯಾ
ಒತ್ತಡದ ಬದುಕಿಂದ ವಿರಾಮ ಪಡೆಯಿರಿ. ಆ ಮೂಲಕ ಮಾನಸಿಕ ನೆಮ್ಮದಿ ಪಡಕೊಳ್ಳಿ. ಯುವಕರು ಪ್ರೇಮದ ತುಡಿತಕ್ಕೆ ಒಳಗಾಗುವಿರಿ.

ತುಲಾ
ನಿಮ್ಮ ಗುಣಾತ್ಮಕ ನಡವಳಿಕೆಯಿಂದ ಯಶ. ಜತೆಗೇ ವೇದಾಂತದ ಭಾವ ಆವರಿಸಬಹುದು. ಎಲ್ಲದರಿಂದ ದೂರವಾಗಿ ಬದುಕುವ ತುಡಿತ.

ವೃಶ್ಚಿಕ
ಕುಟುಂಬದ ಹಿತಕ್ಕೆ ಹೆಚ್ಚು ಕಾಳಜಿ ವಹಿಸುವಿರಿ. ಉದ್ಯಮಿಗಳು ಇಂದು ಒಂದು ಹೆಜ್ಜೆ ಹಿಂದಿಡಿ. ದಿನದಂತ್ಯಕ್ಕೆ ವೈರಾಗ್ಯ ಭಾವ ಉಂಟಾದೀತು.

ಧನು
ವ್ಯಕ್ತಿಯೊಬ್ಬರ ಜತೆ ವಿಶ್ವಾಸಭರಿತ ಬಾಂಧವ್ಯ ಬೆಳೆಯಬಹುದು. ಆದಾಯದಲ್ಲಿ ಹೆಚ್ಚಳ. ಮನೆಯ ಸಮಸ್ಯೆ ಪರಿಹಾರ, ನೆಮ್ಮದಿ.

ಮಕರ
ಎಲ್ಲರ ಜತೆ ಮುಕ್ತವಾಗಿ ಬೆರೆಯಿರಿ. ಎಲ್ಲರನ್ನು ಸಂಶಯದಿಂದ ನೋಡಬೇಡಿ. ವಿಶ್ವಾಸ ಮುಖ್ಯ. ಆತ್ಮೀಯರ ಮನ ನೋಯಿಸಬೇಡಿ.

ಕುಂಭ
ನಿಮ್ಮ ಶ್ರಮದಿಂದ ಉದ್ಯೋಗದಲ್ಲಿ ಯಶ. ಆರ್ಥಿಕ ಉನ್ನತಿ. ಪ್ರೀತಿಯ ವಿಷಯದಲ್ಲಿ ಎಚ್ಚರದ ಹೆಜ್ಜೆ ಇಡಿ. ಅಪಸ್ವರ ಏಳದಂತೆ ನೋಡಿಕೊಳ್ಳಿ.

ಮೀನ
ವೃತ್ತಿ ಒತ್ತಡದಿಂದ ಇಂದು ಮುಕ್ತಿ. ಆಪ್ತರ ಜತೆ ಬೆರೆಯುವ ಅವಕಾಶ. ಶ್ಲಾಘನೀಯ ನಿರ್ವಹಣೆ ತೋರುವಿರಿ. ಖಾಸಗಿ ಚಿಂತೆ ಪರಿಹಾರ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 0,5,7,1

ಡಿಆರ್‌ಡಿಒ ಮಹಾನಿರ್ದೇಶಕ ಡಾ. ಬಿನಯ್‌ಕುಮಾರ್ ದಾಸ್ ಇಂಗಿತ

ದೊಡ್ಡ ಆರ್ಥಿಕ ಶಕ್ತಿ ಭಾರತ

ಬೆಂಗಳೂರು: ಕಳೆದ 50 ವರ್ಷಗಳ ಹಿಂದೆ ರಕ್ಷಣಾ ಕ್ಷೇತ್ರದಲ್ಲಿ ಆಮದು ನಿರಾಕರಣೆಯ ಮೂಲಕ ಸ್ವಾವಲಂಬನೆ ಸಾಧಿಸುವತ್ತ ಮುನ್ನುಗ್ಗುತ್ತಿರುವ ಭಾರತ, ಇದೀಗ ಜಗತ್ತಿನ ಮೂರನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದೇವೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮಹಾನಿರ್ದೇಶಕ ಡಾ. ಬಿನಯ್ ಕುಮಾರ್ ದಾಸ್ ತಿಳಿಸಿದರು.



ಶನಿವಾರ ಸೆಂಟ್ರಲ್ ಕಾಲೇಜು ಆವರಣದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನಾನು ಸಣ್ಣ ಊರಿನಿಂದ ಬಂದವನು. ಚಿನ್ನದ ಪದಕದೊಂದಿಗೆ ಐಐಟಿ ಶಿಕ್ಷಣ ಪೂರ್ಣಗೊಳಿಸಿದ್ದೆ. ನನ್ನನ್ನು ಕೊಂಡುಕೊಳ್ಳಲು ಹಲವು ಸಂಸ್ಥೆಗಳು ಮುಂದೆ ಬಂದಿದ್ದವು. ನಾನು ಎಲ್ಲವನ್ನೂ ತಿರಸ್ಕರಿಸಿದೆ ಎಂದರು.

ತಂತ್ರಜ್ಞಾನ ಶ್ರೀಮಂತ ಭಾರತ ನಿರ್ಮಿಸುವುದಕ್ಕಾಗಿ ಸಂಕಲ್ಪ ಮಾಡಿದ್ದೆ, ಇಂದು ನನ್ನೊಂದಿಗೆ ಓದಿದವರ ಬಳಿ ಸಾಕಷ್ಟು ಸಂಪತ್ತಿದೆ. ಆದರೆ ನಾನು ಈ ಭಾರತದ ಸ್ವಾಯತ್ತತೆಯನ್ನು ಕಾಪಾಡಲು ಸಹಾಯ ಮಾಡುತ್ತಿದ್ದೇನೆ ಎಂಬುದರಲ್ಲಿ ಅತ್ಯಂತ ಶ್ರೀಮಂತನಾಗಿದ್ದೇನೆ ಎಂದು ತಿಳಿಸಿದರು.

ದೇಶದ ಅಭಿವೃದ್ಧಿಗೆ ಅರ್ಪಿಸುವುದೇ ಶಿಕ್ಷಣದ ಮೌಲ್ಯ: ವಿದೇಶಕ್ಕೆ ತೆರಳಿ ಹುದ್ದೆ ಪಡೆದು, ಹಣ ಗಳಿಸುವುದು ಶಿಕ್ಷಣದ ಮೌಲ್ಯವಲ್ಲ. ನಿಮ್ಮ ಜ್ಞಾನ, ಬುದ್ಧಿ, ನಿಷ್ಠೆಯನ್ನು ನಿಮ್ಮ ದೇಶದ ಅಭಿವೃದ್ಧಿಗೆ ಅರ್ಪಿಸುವುದೇ ಶಿಕ್ಷಣದ ನಿಜವಾದ ಮೌಲ್ಯ. ವಿದ್ಯಾರ್ಥಿಗಳು ನಿಮ್ಮ ಬುದ್ಧಿಯನ್ನು ಬಳಸಿ, ಸವಾಲುಗಳನ್ನು ಸುಂದರ ಅವಕಾಶಗಳಾಗಿ ಪರಿವರ್ತಿಸಬೇಕು. ಅದೇ ಶಿಕ್ಷಣದ ಮೌಲ್ಯ ಹಾಗೂ ಜೀವನದ ಶಕ್ತಿ ಎಂದು ತಿಳಿಸಿದರು.

ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಮಾತನಾಡಿ, ತ್ವರಿತ ಬದಲಾವಣೆಯ ಈ ಕಾಲಘಟ್ಟವು ತಂತ್ರಜ್ಞಾನ, ನಾವಿನ್ಯತೆ ಮತ್ತು ಜಾಗತಿಕ ಸ್ಪರ್ಧೆಯ ಯುಗವಾಗಿದೆ. ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಸೇರಿದಂತೆ ಹೊಸ ಅವಕಾಶಗಳು ನಿರಂತರವಾಗಿ ಹೊರಹೊಮ್ಮುತ್ತಿವೆ. ನಿಮ್ಮ ಜ್ಞಾನ ಮತ್ತು ಕೌಶಲಗಳನ್ನು ನವೀಕರಿಸಿಕೊಂಡು, ಕಾಲದ ಅಗತ್ಯಗಳಿಗೆ ಅನುಗುಣವಾಗಿ ನಿಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಅತ್ಯವಶ್ಯಕ ಎಂದು ತಿಳಿಸಿದರು. ಕುಲಪತಿ ಪ್ರೊ. ರಮೇಶ್ ಬಿ. ಮಾತನಾಡಿ, ಅವಕಾಶಗಳಿಗಾಗಿ ಕಾಯದೆ, ಸ್ವಯಂ ಪರಿಶ್ರ,ದ ಮೂಲಕ ಭವಿಷ್ಯವನ್ನು ರೂಪಿಸಿಕೊಳ್ಳಲು ಮುಂದಾಗುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಸುಧಾರಿತ ತಂತ್ರಜ್ಞಾನಗಳು ನಮ್ಮ ರಫ್ತನ್ನು ಹೆಚ್ಚಿಸುತ್ತದೆ

ಭಾರತೀಯ ಧರ್ಮಗ್ರಂಥಗಳಲ್ಲಿ ಪುಷ್ಪಕ ವಿಮಾನವಿದ್ದರೆ ಇಂದು ನಮ್ಮದೇ ಆದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲ ತೇಜಸ್ ಅನ್ನು ನಾವು ಹೊಂದಿದ್ದೇವೆ. ಅದು ಒಂದು ದಿನ ಯುದ್ಧಮಟ್ಟದಲ್ಲಿ ಬಳಸಲ್ಪಡುವುದೆಂದು ನಾನು ಊಹಿಸಿರಲಿಲ್ಲ. ಇದು ಈ ದೇಶದ ಶಕ್ತಿ. ಬುಲೆಟ್ ಪ್ರೂಫ್ ಜಾಕೆಟ್‌ನಿಂದ ಕ್ಷಿಪಣಿಗಳವರೆಗೆ, ಧನುಷ್‌ನಿಂದ ಪ್ರಚಂಡ್‌ವರೆಗೆ, ಇಂದು ಇಡೀ ಜಗತ್ತಿಗೆ ಸವಾಲು ಹಾಕಿದೆ. ಸುಧಾರಿತ ತಂತ್ರಜ್ಞಾನಗಳು ನಮ್ಮ ರಫ್ತನ್ನು ಹೆಚ್ಚಿಸುತ್ತದೆ ಎಂದು ಡಾ. ಬಿನಯ್ ಕುಮಾರ್ ದಾಸ್ ತಿಳಿಸಿದರು.

37,393 ಜನರಿಗೆ ಪದವಿ

64 ಚಿನ್ನದ ಪದಕ ಒಳಗೊಂಡಂತೆ 71 ವಿದ್ಯಾರ್ಥಿಗಳು ರ್‍ಯಾಂಕ್, 23 ಪಿಎಚ್.ಡಿ ವಿದ್ಯಾರ್ಥಿಗಳು, 7,484 ಸ್ನಾತಕೋತ್ತರ ಪದವಿ, 29,880 ಪದವಿ ವಿದ್ಯಾರ್ಥಿಗಳು ಸೇರಿ 37,393 ಜನರಿಗೆ ಪದವಿ ಪ್ರದಾನ ಮಾಡಲಾಯಿತು.

6 ಜನರಿಗೆ ಗೌರವ ಡಾಕ್ಟರೇಟ್

ಕ್ರೀಡಾಪಟು ಬಿ.ಕೆ. ವೆಂಕಟೇಶ್ ಪ್ರಸಾದ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಶಿಕ್ಷಣ ತಜ್ಞ ಟಿ.ಕೆ. ನಾರಾಯಣಪ್ಪ, ಕ್ರೀಡಾ ಆಡಳಿತಗಾರ ಡಾ. ಕೆ. ಗೋವಿಂದರಾಜ್, ಶಿಕ್ಷಣ ತಜ್ಞ ಡಾ. ಮೋಹನ್ ಆಳ್ವಾ ಮತ್ತು ಉದ್ಯಮಿ ಬಿ.ಎಂ. ಫಾರೂಕ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು.

ಶ್ರೀನಿವಾಸ ದಾಸಕರಿಯಪ್ಪ ಪರ ಎಚ್ಡಿಕೆ ಮತಯಾಚನೆ

ದಾವಣಗೆರೆ: ಭ್ರಷ್ಟಾಚಾರದ ಕುರಿತು ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷ ಮತ್ತು ಮುಖ್ಯಮಂತ್ರಿಗಳಿಗೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಎನ್.ಡಿ.ಎ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಪರವಾಗಿ ಶನಿವಾರ ಮತಯಾಚನೆ ವೇಳೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಕಾಂಗ್ರೆಸ್ಸಿಗರು ಲೂಟಿ ಮಾಡಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮತದಾರರಿಗೆ ದುಡ್ಡು ಹಂಚುತ್ತಿದ್ದಾರೆ.

ಶಾಮನೂರು ನೋಟು, ಬಿಜೆಪಿಗೆ ಓಟು ಅಂತಾ ನಮ್ಮ ಕಾರ್ಯಕರ್ತರು ಹೇಳುತ್ತಿದ್ದಾರೆ. ಜನರು ಎರಡೂ ಕ್ಷೇತ್ರಗಳಲ್ಲಿ ಕಮಲದ ಹೂವನ್ನು ಅರಳಿಸಬೇಕೆಂಬ ಸಂಕಲ್ಪ ಮಾಡಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಭ್ರಷ್ಟಾಚಾರದ ಹಣದಿಂದ ಈ ಕ್ಷೇತ್ರದ ಜನರ ಮತವನ್ನು ಗೆಲ್ಲಲು ಸಾಧ್ಯವಿಲ್ಲ. ಹಿಂದುಳಿದ ವರ್ಗಗಳನ್ನು ಮತ ಬ್ಯಾಂಕಾಗಿ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಎಂದರು.

ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ: ಸಚಿವ

ದಾವಣಗೆರೆ: ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ನುಡಿದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಅಭಿವೃದ್ಧಿ ಕಾರ್ಯಗಳಿಗೂ ಹಣ ನೀಡುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆಂದೂ ಕಾಣದ ರೀತಿಯಲ್ಲಿ ಪ್ರತಿ ಕ್ಷೇತ್ರದ ಅಭಿವೃದ್ಧಿಗೆ ಶಾಸಕರ ವಿವೇಚನೆಯಡಿ 80 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ವಿಪಕ್ಷ, ಆಡಳಿತದ ಶಾಸಕರಿಗೂ ಅನುದಾನ ಹಂಚಿಕೆ ಮಾಡಲಾಗಿದೆ. ಈ ವರ್ಷ ಪ್ರತಿ ಶಾಸಕರಿಗೂ 25 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ ಎಂದು ಅವರು ಸಮರ್ಥಿಸಿಕೊಂಡರು.



ರಾಜ್ಯದಿಂದ 4.50 ಲಕ್ಷ ಕೋಟಿ ರೂ. ತೆರಿಗೆ ಹಣ ಪಡೆಯುತ್ತಿರುವ ಕೇಂದ್ರ ಸರ್ಕಾರ ರಾಜ್ಯಕ್ಕೆ ಹಂಚಿಕೆ ಮಾಡುತ್ತಿರುವುದು ಕೇವಲ 50 ಸಾವಿರ ಕೋಟಿ. ರಾಜ್ಯದಿಂದ ಐವರು ಕೇಂದ್ರ ಸಚಿವರಿದ್ದರೂ ಕರ್ನಾಟಕದ ಹಿತಾಸಕ್ತಿ ಬಗ್ಗೆ ಬಾಯಿಬಿಡುತ್ತಿಲ್ಲ. ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದ್ದರೂ, ಕೇಂದ್ರ ಸರ್ಕಾರ ಒಪ್ಪಿಗೆ ಕೊಡುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್‌ಗೆ ಎರಡೂ ಕಡೆ ವಿಜಯ: ಸಿಎಂ

ಪುಟ ೨➡ ಎಲ್ಲೆಡೆ ಅಭೂತಪೂರ್ವ ಸ್ಪಂದನೆ ಸಿಗುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳು ಬಡವರಿಗಾಗಿ ರೂಪಿಸಲ್ಪಟ್ಟಿವೆ. ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದು, ಗ್ಯಾರಂಟಿ ಯೋಜನೆಗಳು ಸಾಮಾಜಿಕ ಬದ್ಧತೆಯನ್ನು ಒದಗಿಸುವ ಹೂಡಿಕೆಯಾಗಿದೆ. ಇದೂ ಕೂಡ ಅಭಿವೃದ್ಧಿಯೇ ಎಂದರು.

ಅಭಿವೃದ್ಧಿ ಕುಂಠಿತವಾಗಿಲ್ಲ: ಸಾಮಾಜಿಕ ಯೋಜನೆಗಳನ್ನು ಘೋಷಿಸಿದ ಮೇಲೆ ಬಿಜೆಪಿ ಅಂದಿನಿಂದ ಇಂದಿನವರೆಗೆ ವಿರೋಧಿಸುತ್ತಲೇ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೇರಿದಂತೆ ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಹೇಳಿಕೊಂಡು ಬಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು 24/3/2026 ವರೆಗೆ 1.31 ಲಕ್ಷ ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೇವೆ. ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಪೊಲೀಸ್ ವ್ಯವಸ್ಥೆಗೆ ವೆಚ್ಚ, ಎಸ್‌ಸಿ ಎಸ್‌ಪಿ/ಟಿಎಸ್‌ಪಿ ಯೋಜನೆಗಳಿಗೆ ವೆಚ್ಚ ಮಾಡುವುದನ್ನು ಕಡಿಮೆ ಮಾಡಿಲ್ಲ. ಕಳೆದ ವರ್ಷದಲ್ಲಿ 42,000 ಕೋಟಿ ರೂ. ವೆಚ್ಚ ಮಾಡಿದ್ದರೆ, ಈ ವರ್ಷ 44,000 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. ಅಭಿವೃದ್ಧಿ ಕೆಲಸಗಳ್ಯಾವುವೂ ಕುಂಠಿತವಾಗಿಲ್ಲ ಎಂದರು. ಸಾಲ ಮಾಡಿದ್ದೇನೆ ಎನ್ನುವುದು ಹಸಿ ಸುಳ್ಳು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡಗಳನ್ನು ಮೀರಿಲ್ಲ. ಆರ್ಥಿಕ ಶಿಸ್ತು ಕಾಪಾಡಿಕೊಂಡಿದ್ದೇವೆ ಎಂದರು.

ನಾವು ಕೇಂದ್ರ ಸರ್ಕಾರಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದೇವೆ. ಕೇಂದ್ರ ಸರ್ಕಾರದ ಜಿಡಿಪಿ 7.14% ಬೆಳವಣಿಗೆ ಇದೆ. ಕರ್ನಾಟದ ಜಿಡಿಪಿ 8.1% ಇದೆ. ಇವೆರಡರಲ್ಲಿ ಯಾವುದು ಹೆಚ್ಚು ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಕೇಂದ್ರಕ್ಕಿಂತ ಉತ್ತಮ: ಕರ್ನಾಟಕದ ಜಿಡಿಪಿ ಬೆಳವಣಿಗೆ ಕೇಂದ್ರ ಸರ್ಕಾರಕ್ಕಿಂತ ಉತ್ತಮವಾಗಿದೆ. ಮನಮೋಹನ್ ಸಿಂಗ್ ಪ್ರಧಾನಿಗಳಾಗಿದ್ದಾಗ ಹಾಗೂ ಸ್ವಾತಂತ್ರ್ಯ ಬಂದಾಗಿನಿಂದ ಸೇರಿಸಲ್ಪಟ್ಟ ಒಟ್ಟು ಸಾಲ 53 ಲಕ್ಷದ 11000 ಕೋಟಿ ಸಾಲ ಇತ್ತು. 2026 ಮಾರ್ಚ್ ವರೆಗೆ 218 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು 12 ವರ್ಷಗಳಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ ಎಂದರು.

ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಯತ್ನಾಳ್ ಅವರನ್ನು ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವ ಬಿಜೆಪಿ ಹೀನಾಯ ಸ್ಥಿತಿಗೆ ತಲುಪಿದೆ. ಬಿಜೆಪಿಯವರು ಸೋಲಿನ ಭಯದಿಂದ ಇಂತಹ ಕೃತ್ಯಕ್ಕೆ ಕೈಹಾಕಿದ್ದಾರೆ. ಪ್ರತಿಪಕ್ಷಗಳ ಹೇಳಿಕೆಗಳಿಗೆ ನಾವು ಪ್ರತಿಕ್ರಿಯಿಸುವುದಿಲ್ಲ. ಸರ್ಕಾರದ ಕೆಲಸವನ್ನು ಜನರ ಮುಂದಿಡುತ್ತೇವೆ ಎಂದರು.

ಪಾಕ್‌ನಿಂದ ಯುಎಇ ದೊಡ್ಡ ಸಾಲ ವಸೂಲಿ!

ಪುಟ ೨➡ ಇದರಿಂದ ಪಾಕ್‌ಗೆ ನೀಡಿದ ದೊಡ್ಡ ಸಾಲವನ್ನು ತಕ್ಷಣ ಮರುಪಾವತಿ ಮಾಡುವಂತೆ ಒತ್ತಡ ಹೇರಿದ್ದು, ಪಾಕ್‌ಗೆ ಸಂಕಷ್ಟ ಎದುರಾಗಿದೆ. ಸಾಲದ ಮೊತ್ತವನ್ನು ತಕ್ಷಣ ಮರುಪಾವತಿಸಲು ಯುಎಇ ಒತ್ತಡ ಹಾಕಿರುವ ವರದಿಯನ್ನು ಪಾಕ್ ಸಂಪುಟದ ಹಿರಿಯ ಸಚಿವರೊಬ್ಬರು ದೃಢೀಕರಿಸಿದ್ದಾರೆ.

ಆಯ್ದ ಪತ್ರಕರ್ತರ ಗುಂಪನ್ನು ಕರೆದು ಪತ್ರಿಕಾಗೋಷ್ಠಿ ನಡೆಸಿದ ಪಾಕಿಸ್ತಾನ ಸರ್ಕಾರ, ಸಾಲದ ಮೊತ್ತವನ್ನು ಸಂಪೂರ್ಣ ಮರುಪಾವತಿ ಮಾಡುವುದಾಗಿ ಹೇಳಿಕೆ ನೀಡಿದೆ. ಸಾಲದ ಒಂದು ದೊಡ್ಡ ಭಾಗವನ್ನು ಹೂಡಿಕೆಯಾಗಿ ಪರಿವರ್ತಿಸಲು ಯುಎಇ ಜತೆ ತೆರೆಮರೆಯಲ್ಲಿ ಪಾಕ್ ಮಾತುಕತೆ ನಡೆಸುತ್ತಿದೆ ಎಂಬ ಮಾಹಿತಿಯನ್ನು ಮೂಲಗಳು ನೀಡಿವೆ.

ಐಎಂಎಫ್ ಯೋಜನೆ ಅನ್ವಯ ನೀಡಿದ್ದ ಸಾಲ: ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಯೋಜನೆಯ ಅನ್ವಯ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ್ (ಎಸ್‌ಬಿಪಿ)ನಲ್ಲಿ ಒಟ್ಟು 12.5 ಶತಕೋಟಿ ಡಾಲರ್ ಹಣ ಠೇವಣಿ ಮಾಡಲು ಯುಎಇ, ಸೌದಿ ಅರೇಬಿಯಾ ಮತ್ತು ಚೀನಾ ಒಪ್ಪಿಕೊಂಡಿದ್ದವು. ಈ ಯೋಜನೆ 2027ರ ಸೆಪ್ಟೆಂಬರ್‌ನಲ್ಲಿ ಮುಕ್ತಾಯ ಆಗುವುದಿದೆ. ಪಾಕಿಸ್ತಾನ ಇನ್ನೆರಡು ವರ್ಷ ಗಡುವು ವಿಸ್ತರಣೆಗೆ ಮನವಿ ಮಾಡಿದ್ದರೂ ಯುಎಇ ಒಪ್ಪಿರಲಿಲ್ಲ.

ಮೂರು ಕಂತುಗಳಲ್ಲಿ ಸಾಲ ಮರುಪಾವತಿ? ಮೂರು ಕಂತುಗಳಲ್ಲಿ ಅಂದರೆ, ಏ.11, ಏ.17 ಹಾಗೂ ಏ.23ರಂದು ಸಾಲ ಮರುಪಾವತಿಸಲು ದಿನ ನಿಗದಿಪಡಿಸಲಾಗಿದೆ. ಅಮೆರಿಕದ ಸೆಂಟ್ರಲ್ ಬ್ಯಾಂಕ್ ಖಾತೆಯಲ್ಲಿರುವ 16.4 ಶತಕೋಟಿ ಡಾಲರ್ ವಿದೇಶಿ ವಿನಿಮಯ ಮೀಸಲು ಹಣವನ್ನು ಹಿಂಪಡೆದು, ಸಾಲ ವಾಪಸಾತಿ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಹಳೆಯ ಸಾಲ ವಾಪಸಾತಿಗೆ ಸಕಾಲ: ಒಟ್ಟು 3.5 ಶತಕೋಟಿ ಡಾಲರ್ ಸಾಲದ ಮೊತ್ತದಲ್ಲಿ 450 ದಶಲಕ್ಷ ಡಾಲರ್‌ನ್ನು ಪಾಕಿಸ್ತಾನ 1996-97ರಲ್ಲೇ ಯುಎಇಯಿಂದ 1 ವರ್ಷದ ಸಾಲವಾಗಿ ಪಡೆದಿತ್ತು. ಆದರೆ ಕಳೆದ ಮೂರು ದಶಕಗಳಿಂದ ಮರುಪಾವತಿ ಮಾಡಿರಲಿಲ್ಲ.

ಮಾದಕವಸ್ತು ಸೇವನೆ: 17 ಜನ ಬಂಧನ

ಕೊಳ್ಳೇಗಾಲ: ತಾಲೂಕಿನ ಮಧುವನಹಳ್ಳಿ ಹೊರವಲಯದ ರೆಸಾರ್ಟ್‌ನಲ್ಲಿ ಮಾದಕವಸ್ತುಗಳ ಪಾರ್ಟಿ ನಡೆದಿದ್ದು, ರೌಡಿಶೀಟರ್ ಸೇರಿದಂತೆ 17 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಜರುಗಿದೆ. ಮಧುವನಹಳ್ಳಿ ಹೊರವಲಯದ ಹಾರವನಪುರ (ಲಕ್ಷ್ಮೀಪುರ) ವ್ಯಾಪ್ತಿಯಲ್ಲಿ ಗುತ್ತಿಗೆದಾರ ಫಯಾಜ್ ಖಾನ್ ಎಂಬುವರಿಗೆ ಸೇರಿದ ಫ್ಲೋರ ಫಾರ್ಮ್ ಹೌಸ್‌ನಲ್ಲಿ ರೌಡಿ ಶೀಟರ್ ಜಹೀರ್ ಖಾಲು ಎನ್ನುವರ ಹುಟ್ಟುಹಬ್ಬದ ಹಿನ್ನೆಲೆ ಡ್ರಗ್ಸ್ ಸೇವನೆ ಮಾಡಿದ್ದ ಜಹೀರ್ ಸೇರಿದಂತೆ 17 ಮಂದಿಯನ್ನು ವಶಕ್ಕೆ ಪಡೆದರು. ಇವರಿಂದ 17 ಚರಸ್ ಉಂಡೆಗಳು, 43.24 ಗ್ರಾಂ.ನಷ್ಟು ಬ್ರೌನ್ ಕಲರ್ ಪೌಡರ್, 1.40 ಗ್ರಾಮ್ ಸಣ್ಣ ಸಣ್ಣ ಬೇರುಗಳು, 6.26 ವೈಟ್ ಪೌಡರ್, 22.54 ಗ್ರಾಮ್ ನಷ್ಟು ಲೈಟ್ ಬ್ರೌನ್ ಕಲರ್ ಕ್ರಿಸ್ಟಲ್ ಪೌಡರ್‌ನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಗಳಾದ ಜಹೀರ್ ಖಾಲು, ಉಮೇರ್ ಖಾನ್, ಶೇಖ್ ಮೆಹಬೂಬ್, ನಿಶಾರ್ ಖಾನ್ ಎಂಬುರನ್ನು ಬಂಧಿಸಿದ್ದಾರೆ.

ಹಾರ್ಮುಜ್-ಬಾಬ್ ನಡುವಿನ ಸಂಪರ್ಕ

ಪುಟ ೨➡ ಎರಡೂ ಜಲಸಂಧಿಗಳು ಪರಸ್ಪರ ಸಂಪರ್ಕ ಹೊಂದಿವೆ ಎಂಬುದು ಪ್ರಮುಖವಾದ ಅಂಶವಾಗಿದೆ. ಏಕೆಂದರೆ ಹಾರ್ಮುಜ್ ದಾಟಿಹೋಗುವ ಹೆಚ್ಚಿನ ಸರಕು ಹಡಗುಗಳು ಬಾಬ್ ಮೂಲಕವೂ ಹಾದುಹೋಗುತ್ತವೆ.



ಇದರಿಂದ ಈಗಾಗಲೇ ಹಾರ್ಮುಜ್ ಮುಚ್ಚಲಾಗಿದ್ದು, ಬಾಬ್ ಜಲಸಂಧಿ ಮುಚ್ಚುವುದರಿಂದ ಇರಾನ್ ರಾಜತಾಂತ್ರಿಕ ಹಿಡಿತವನ್ನು ಸಾಧಿಸಲಿದೆ.

ನಾಳೆ ಟ್ರಂಪ್ ಗಡುವು

ಪುಟ ೨➡ ಏ.6ರೊಳಗೆ ನಮ್ಮೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಿ ಅಥವಾ ಹಾರ್ಮುಜ್ ತೆರೆಯಿರಿ. ಇಲ್ಲದಿದ್ದರೆ ನೇರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಹೊಸ ಗಡುವಿನೊಂದಿಗೆ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಸಮಯ ಮೀರಿ ಹೋಗುತ್ತಿದೆ, ಇರಾನ್ ಬಳಿ ಕೇವಲ 48 ಗಂಟೆ ಉಳಿದಿದೆ. 48 ಗಂಟೆಗಳೊಳಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿ ಅಥವಾ ಹಾರ್ಮುಜ್ ತೆರೆಯಲಿ. ದೇವರಿಗೆ ಜಯವಾಗಲಿ ಎಂದು ಟ್ರಂಪ್ ಟ್ರುಥ್ ಸೋಷಿಯಲ್ಸ್‌ನಲ್ಲಿ ಬರೆದಿದ್ದಾರೆ.



ಕೇರಳದಲ್ಲಿ ಎನ್‌ಡಿಎ ಪರ ಅಲೆ

ಪುಟ ೨➡ ಈ ಸಂವಾದದ ವೇಳೆ ಕೇರಳದ ಮತದಾರರು ಈ ಬಾರಿ ಆಳುವ ಎಡರಂಗವನ್ನು ಅಧಿಕಾರದಿಂದ ಇಳಿಸಲು ನಿರ್ಧರಿಸಿರುವುದು ಮತ್ತು ಬದಲಾವಣೆಯೊಂದರ ಪರವಾಗಿರುವುದು ಸ್ಪಷ್ಟಗೊಂಡಿತು. ವಿರೋಧಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ರಾಜ್ಯಕ್ಕೆ ಒಳಿತುಂಟುಮಾಡಲು ಸಾಧ್ಯವಿಲ್ಲ. ಯಾಕೆಂದರೆ ಎಡರಂಗ ಮತ್ತು ಯುಡಿಎಫ್‌ಗಳು ಅದಲುಬದಲಾಗಿ ದಶಕಗಳ ಕಾಲ ರಾಜ್ಯವನ್ನು ಆಳಿದರೂ ಕೇರಳಕ್ಕೆ ನ್ಯಾಯ ನೀಡಲು ವಿಫಲವಾಗಿವೆ. ತಮ್ಮ ಅಡ್ಜಸ್ಟ್‌ಮೆಂಟ್ ರಾಜಕೀಯದಿಂದ ಕೇರಳದ ಅಭಿವೃದ್ಧಿಗೆ ವಂಚನೆ ಎಸಗಿದ್ದು ಸ್ಪಷ್ಟವಾಗಿದೆ ಎಂದರು.

ಕೇಂದ್ರದಿಂದ ಕೇರಳಕ್ಕೆ ನೆರವು: ಕೇರಳದಲ್ಲಿ ಬಿಜೆಪಿ ಸರಕಾರ ಇಲ್ಲದೆ ಇದ್ದರೂ ಕೇಂದ್ರ ಸರಕಾರವು ಕೇರಳಕ್ಕೆ ತುಂಬು ನೆರವು ನೀಡಿದ್ದು, ಹಿಂದೆಂದೂ ಕಾಣದ ರೀತಿಯಲ್ಲಿ ರಸ್ತೆ, ರೈಲ್ವೆಯಂತಹ ಅನೇಕ ಮೂಲಸೌಕರ್ಯಗಳನ್ನು ಒದಗಿಸಿದೆ. ಕೇಂದ್ರದ ಬೆಂಬಲದಿಂದ ರಾಜ್ಯವು ಅನೇಕ ಲಾಭಗಳನ್ನು ಗಳಿಸಿದೆ. ಕೇರಳದಲ್ಲಿ ಹಿಂದೆಯೂ ಬಿಜೆಪಿ ಸರಕಾರ ಇರಲಿಲ್ಲ. ಆದರೆ ಬಿಜೆಪಿ ಮಾತ್ರ ಕೇರಳದ ಅಭಿವೃದ್ಧಿಗೆ ನಿರಂತರ ನೆಲೆಯಲ್ಲಿ ಬೆಂಬಲವಿತ್ತಿದೆ. ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಿನ ಅನುದಾನಗಳನ್ನು ತಮ್ಮ ಸರಕಾರ ಕೇರಳಕ್ಕೆ ನೀಡಿದೆ ಎಂದು ಬೊಟ್ಟು ಮಾಡಿದರು.

ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಕ್ರೈಸ್ತ ಜನಸಂಖ್ಯೆ ಇದ್ದು, ಅವರೆಲ್ಲರೂ ಅಭಿವೃದ್ಧಿಯ ಲಾಭ ಪಡೆದಿದ್ದಾರೆ. ಇದಕ್ಕೆ ಗೋವಾ ರಾಜ್ಯವೇ ಉದಾಹರಣೆ ಎಂದು ಮೋದಿಯವರು ಎತ್ತಿತೋರಿದರು. ಈ ಮೂಲಕ ಅವರು ಬಿಜೆಪಿ ಕ್ರೈಸ್ತ ವಿರೋಧಿ ಎಂದು ಬಿಂಬಿಸಲು ಯುಡಿಎಫ್ ನಡೆಸುತ್ತಿರುವ ಯತ್ನಕ್ಕೆ ತಿರುಗೇಟು ನೀಡಿದರು. ಕೇರಳದಲ್ಲಿ ಕ್ರೈಸ್ತರು ದೊಡ್ಡ ಪ್ರಮಾಣದಲ್ಲಿ ಬಿಜೆಪಿಯನ್ನು ಬೆಂಬಲಿಸಲು ಮುಂದಾಗಿರುವುದರಿಂದ ಆತಂಕಿತ ಕಾಂಗ್ರೆಸ್ ಬಿಜೆಪಿ ಕ್ರೈಸ್ತ ವಿರೋಧಿ ಎಂದು ಪ್ರಚಾರ ನಡೆಸುತ್ತಿರುವುದಿಲ್ಲಿ ಉಲ್ಲೇಖನೀಯ.

ಕೇರಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ಆದರೆ ಮೀನುಗಾರರ ಸಮಸ್ಯೆ ಸೇರಿದಂತೆ ಜನರ ಅನೇಕ ಸಮಸ್ಯೆಗಳಿಗೆ ಪರಿಹಾರ ಲಭಿಸಲಿದೆ. ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ಅಭಿವೃದ್ಧಿ ಮತ್ತು ಕೊಟ್ಟಾಯಂಗೆ ವಂದೇ ಭಾರತ್ ಸೇವೆಗಳನ್ನು ಒದಗಿಸಿರುವುದು ಸೇರಿದಂತೆ ಅನೇಕ ಮಹತ್ವದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಒದಗಿಸಿರುವುದನ್ನು ಅವರು ಪ್ರಸ್ತಾಪಿಸಿದರು.

ಶಬರಿಮಲೆಗೆ ಪ್ರಸ್ತಾಪಿಸಲಾಗಿರುವ ಶಬರಿ ರೈಲ್ವೆ ಯೋಜನೆಯಿಂದ ಶಬರಿಮಲೆಗೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಇಲ್ಲಿನ ಆರ್ಥಿಕ ಅಭಿವೃದ್ಧಿಗೂ ನೆರವಾಗಲಿದೆ. ಈ ಯೋಜನೆಯಿಂದ ಪ್ರಯಾಣಿಕರ ಸಂಚಾರ, ಮಾರುಕಟ್ಟೆ ಒದಗಿಸುವಿಕೆ, ಯುವಜನರಿಗೆ ಉದ್ಯೋಗಗಳನ್ನು ಸೃಷ್ಟಿಸಲು ನೆರವಾಗಲಿದೆ. ಆದರೆ ಪ್ರಸಕ್ತ ರಾಜ್ಯ ಸರಕಾರ ಇಂತಹ ಯೋಜನೆಗಳ ಜಾರಿಗೆ ಸೂಕ್ತ ಸಹಕಾರ ನೀಡದಿರುವುದು ವಿಷಾದನೀಯ. ಕೇರಳದಲ್ಲಿ ಬಿಜೆಪಿ ಸರಕಾರ ಬಂದಾಗ ಮಾತ್ರ ಅಭಿವೃದ್ಧಿ ಯೋಜನೆಗಳಿಗೆ ಬಲ ಬರುವುದು ಎಂದರು.

ಶಬರಿಮಲೆ ಚಿನ್ನ ಲೂಟಿ: ಶಬರಿಮಲೆ ದೇವಳದಲ್ಲಿ ನಡೆದ ಚಿನ್ನಲೂಟಿ ಹಗರಣವು ಆಘಾತಕಾರಿಯಾಗಿದ್ದು, ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಈ ಹಿಂದೆ ಶಬರಿಮಲೆ ಯಾತ್ರೆಗೆ ಕಳಂಕ ತರಲು ಮುಂದಾಗಿದ್ದರೆ, ಈಗ ನೇರ ದೇವಾಲಯವನ್ನೇ ಗುರಿಯಾಗಿರಿಸಿವೆ. ಎನ್‌ಡಿಎ ಅಧಿಕಾರಕ್ಕೆ ಬಂದದ್ದೇ ಆದರೆ ಇದಕ್ಕೆ ಹೊಣೆಗಾರರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಭರವಸೆಯಿತ್ತರು. ಈ ಬಾರಿಯ ಚುನಾವಣೆ ಪ್ರಚಾರದಲ್ಲಿ ಮೋದಿಯವರ 2ನೇ ರಾಜ್ಯ ಭೇಟಿ ಇದಾಗಿದ್ದು, ಈ ಹಿಂದೆ ಮಾ.29ರಂದು ಪಾಲಕ್ಕಾಡಿನಲ್ಲಿ ಸಾರ್ವಜನಿಕ ರ್‍ಯಾಲಿ, ತ್ರಿಶೂರ್‌ನಲ್ಲಿ ರೋಡ್‌ಶೋ ನಡೆಸಿದಾಗ ಸಾವಿರಾರು ಜನರು ಪಾಲ್ಗೊಂಡು ಮೋದಿಯವರಿಗೆ ಬೆಂಬಲ ಘೋಷಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ತಿರುವನಂತಪುರಂನಲ್ಲಿ ನಮೋ ರೋಡ್‌ಶೋ

ಪುಟ ೨➡ 1.5 ಕಿ.ಮೀ. ಉದ್ದಕ್ಕೂ ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜನಸಾಗರದತ್ತ ಪ್ರಧಾನಿಯವರು ಕೈಬೀಸಿ , ಕೈಮುಗಿದು ಕೃತಜ್ಞತೆ ಸಲ್ಲಿಸಿದರು.

ಕನ್ನಡ ಭಾಷಿಕ ಶಿಕ್ಷಕರಿಗೆ ಮಹಾ ಅನ್ಯಾಯ

ಪುಟ ೨➡ ಭಾಷೆಯ ಈ ತಾಂತ್ರಿಕ ಅಡಚಣೆಯಿಂದಾಗಿ ಅರ್ಹ ಅಭ್ಯರ್ಥಿಗಳು ಅನುತ್ತೀರ್ಣರಾಗುತ್ತಿದ್ದು, ರಾಜ್ಯದಲ್ಲಿ ಕನ್ನಡ ಶಿಕ್ಷಕರ ಕೊರತೆ ಉಂಟಾಗುತ್ತಿದೆ.

ಭರವಸೆಗಳ ಉಲ್ಲಂಘನೆ: 2023ರಲ್ಲಿ ಜತ್ ತಾಲೂಕಿನ ಅಂದಿನ ಶಾಸಕ ವಿಕ್ರಮಸಿಂಹ ಸಾವಂತ್ ಅವರ ನೇತೃತ್ವದಲ್ಲಿ ಶಿಕ್ಷಣ ಕಾರ್ಯದರ್ಶಿಗಳು ಕನ್ನಡದಲ್ಲಿ ಪ್ರಶ್ನೆಪತ್ರಿಕೆ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, 2026ರ ಪರೀಕ್ಷಾ ವೇಳಾಪಟ್ಟಿಯಲ್ಲಿ ಮತ್ತೆ ಮರಾಠಿ ಮಾಧ್ಯಮವನ್ನೇ ಕಡ್ಡಾಯಗೊಳಿಸಲಾಗಿದೆ. ಈ ಕುರಿತು ರಾಜ್ಯ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೂಡ ಮಹಾರಾಷ್ಟ್ರದ ಶಿಕ್ಷಣ ಸಚಿವರು ಮತ್ತು ಕಾರ್ಯದರ್ಶಿಗಳಿಗೆ ಪತ್ರ ಬರೆದು ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವಂತೆ ವಿನಂತಿಸಿದೆ. ಆದರ್ಶ ಕನ್ನಡ ಬಳಗವು ಕಳೆದ ಎರಡು ತಿಂಗಳ ಹಿಂದೆ ನೀಡಿದ ಪತ್ರಕ್ಕೂ ಈವರೆಗೆ ಯಾವುದೇ ಸ್ಪಂದನೆ ಸಿಕ್ಕಿಲ್ಲ.

ಅಲ್ಪಸಂಖ್ಯಾತರ ಭಾಷಾ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಸಂವಿಧಾನಿಕ ಕರ್ತವ್ಯವಾಗಿದೆ. ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಸಿಗುವ ಸೌಲಭ್ಯ ಮಹಾರಾಷ್ಟ್ರದ ಕನ್ನಡಿಗರಿಗೆ ಏಕೆ ಸಿಗುತ್ತಿಲ್ಲ? ಪರೀಕ್ಷಾ ಪರಿಷತ್ತು 2026ರ ಪರೀಕ್ಷೆಯಲ್ಲಿ ತಕ್ಷಣ ಸುಧಾರಣೆ ತರಬೇಕು. ಇಲ್ಲದಿದ್ದರೆ, ಈ ಅನ್ಯಾಯ ಸಹಿಸುವುದಿಲ್ಲ ಎಂದು ಆದರ್ಶ ಕನ್ನಡ ಬಳಗದ ಅಧ್ಯಕ್ಷ ಮಲಿಕಜಾನ್ ಶೇಖ್ ತಿಳಿಸಿದ್ದಾರೆ.

ಬಿಜೆಪಿ ಗೆಲುವು ಶತಸ್ಸಿದ್ಧ: ಎಚ್‌ಡಿಕೆ



ಸಿಂಧನೂರು: ರಾಜ್ಯದಲ್ಲಿ ಎರಡೂವರೆ ಮೂರು ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಜನರ ವಿಶ್ವಾಸ, ನಂಬಿಕೆ ಕಳೆದುಕೊಂಡಿದ್ದು, ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಗೆಲುವು ಸಿಗಲಿದೆ ಎಂದು ಕೇಂದ್ರ ಸರ್ಕಾರದ ಸಚಿವ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ನಡೆದ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆ ಎರಡು ಪಕ್ಷಗಳು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮೈತ್ರಿಯೊಂದಿಗೆ ಚುನಾವಣೆಯ ಅಖಾಡದಲ್ಲಿರುವ ಎರಡು ಕ್ಷೇತ್ರಗಳಲ್ಲೂ ಇಬ್ಬರು ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ದುರಾಡಳಿತಕ್ಕೆ ಜನತೆ ಬೇಸತ್ತು ಹೋಗಿದ್ದು, ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ತೆಗೆದು ಹಾಕಬೇಕು ಎನ್ನುವ ಭಾವನೆ ಜನರಲ್ಲಿ ಬಂದಿದೆ. ಈ ನಿಟ್ಟಿನಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದು ಹೇಳಿದರು. ನಾನು ಈಗ ಉಪಚುನಾವಣೆ ಹಿನ್ನೆಲೆಯಲ್ಲಿ ಇಂದು ಪ್ರಚಾರಕ್ಕೆ ತೆರಳುತ್ತಿದ್ದೇನೆ. ದಾವಣಗೆರೆ ಕ್ಷೇತ್ರದಲ್ಲಿ ಎರಡು ಕಡೆ ಸಭೆಗಳಲ್ಲಿ ಭಾಗವಹಿಸುತ್ತೇನೆ. ತದನಂತರ ಭಾನುವಾರ ಬಾಗಲಕೋಟ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತೇನೆ. ಪ್ರತಿಷ್ಠಿತ ಎರಡೂ ಪಕ್ಷಗಳು ಗೆಲುವು ಸಾಧಿಸಲು ಹೋರಾಟ ಮಾಡುತ್ತಿದ್ದು, ಬಿಜೆಪಿ ಅಭ್ಯರ್ಥಿಗಳು ಎರಡೂ ಕಡೆ ಜಯ ಸಾಧಿಸುವ ವಿಶ್ವಾಸವಿದೆ ಎಂದು ಹೇಳಿದರು.

ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ

ಬೆಂಗಳೂರು: ರಾಜ್ಯದಲ್ಲಿರುವ ಹಳೆಯ ವಾಹನಗಳಿಗೂ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ ಆದೇಶ ರಾಜ್ಯ ಸರ್ಕಾರ ಹಿಂಪಡೆದಿದೆ ಎನ್ನುವ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಈ ಹಿನ್ನಲೆಯಲ್ಲಿ ರಾಜ್ಯದಲ್ಲಿರುವ 2019ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ ಎಂದು ಸಾರಿಗೆ ಇಲಾಖೆ ಸ್ಪಷ್ಟಪಡಿಸಿದೆ.

ಇತ್ತೀಚೆಗೆ ಕೆಲವು ಟಿವಿ ಮತ್ತು ಇತರೆ ಮಾಧ್ಯಮಗಳಲ್ಲಿ ಹಳೆಯ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯವಲ್ಲ ಎಂಬ ಸುದ್ದಿಯನ್ನು ಪ್ರಸಾರ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 50ರಡಿ ಕೇಂದ್ರ ಸರ್ಕಾರವು 2018 ಡಿಸೆಂಬರ್ 4 ರಂದು ಅಧಿಸೂಚನೆ ಹೊರಡಿಸಿದ್ದಾರೆ. 2019ರ ಏಪ್ರಿಲ್ 1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನುಅಳವಡಿಸಲು ಕಡ್ಡಾಯಗೊಳಿಸಿ ಆದೇಶಿಸಿದೆ. ಅದರಂತೆ, ರಾಜ್ಯ ಸರ್ಕಾರವು 2023ರ ಆ.17 ರಂದು ಅಧಿಸೂಚನೆ ಹೊರಡಿಸಿ, 2019 ಏ.1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ಎಲ್ಲಾ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಅಳವಡಿಕೆಯನ್ನು ಕಡ್ಡಾಯಗೊಳಿಸಿರುತ್ತದೆ.

ಸದ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶದಿಂದಾಗಿ, ವಾಹನಗಳಿಗೆ ಎಚ್‌ಎಸ್ ಆರ್‌ಪಿ ಅಳವಡಿಕೆಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದೆ.

324 ಗ್ರಾಮಗಳಲ್ಲಿ ಕುಡಿವ ನೀರಿನ ಸಮಸ್ಯೆ

ಬೆಂಗಳೂರು: ರಾಜ್ಯದ 20 ಜಿಲ್ಲೆಗಳ 60 ತಾಲ್ಲೂಕುಗಳಲ್ಲಿನ 324 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಇವುಗಳ ಪೈಕಿ 76 ಗ್ರಾಮಗಳಿಗೆ 76 ಟ್ಯಾಂಕರ್‌ಗಳ ಮುಖಾಂತರ ಹಾಗೂ 248 ಗ್ರಾಮಗಳಿಗೆ 280 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.



ರಾಜ್ಯದ 31 ಜಿಲ್ಲೆಗಳಲ್ಲಿ 26,676 ಗ್ರಾಮಗಳಿದ್ದು, 57,883 ಜನವಸತಿ ಪ್ರದೇಶಗಳಲ್ಲಿ 1,01,30,798 ಮನೆಗಳು ಇರುತ್ತವೆ, ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಹಲವು ಜಲಮೂಲಗಳು ಬತ್ತಿಹೋಗುವುದರಿಂದ ಕೆಲ ವೊಂದು ಜನವಸತಿ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುತ್ತದೆ.

ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ಈಗಾಗಲೇ 60 ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿಯನ್ನು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ನೀಡಿದ್ದು, ಟಾಸ್ಕ್‌ಫೋರ್ಸ್‌ಅಡಿ ಮುಂದುವರೆದ ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ಹೆಚ್ಚುವರಿಯಾಗಿ 48 ಕೋಟಿ ರೂ. ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗಾಗಿ 14.50 ಕೋಟಿ ರೂ. ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಮುಂದಿನ ಪ್ರತಿ 2ನೇ ಹಾಗೂ 4ನೇ ಸೋಮವಾರ ದಂದು ಪಿಡಿಒಗಳ ಜೊತೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಒಗಳು ಸಭೆ ನಡೆಸಲಿದ್ದಾರೆ. ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಎಲ್ಲಾ ಜಿಲ್ಲಾ ಪಂಚಾಯಿತಿಗಳಲ್ಲಿ 24/7 ಕಂಟ್ರೋಲ್ ರೂಮ್ ತೆರೆಯಲಾಗಿದೆ.

ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಕ್ಷಿಪ್ರ ಕಾರ್ಯಪಡೆ ರಚಿಸಿ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ

ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಮುಖಾಂತರ ಪಡೆಯಲಾಗುವುದು, ಅಗತ್ಯವಿದ್ದಲ್ಲಿ, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುವುದು, ಕೊಳವೆ ಬಾವಿಗಳನ್ನು ಫ್ಲಶಿಂಗ್ ಮತ್ತು ಆಳಗೊಳಿಸುವುದರೊಂದಿಗೆ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು, ಅನಿವಾರ್ಯ ಸಂದರ್ಭಗಳಲ್ಲಿ ಕೊಳವೆಬಾವಿಗಳನ್ನು ಕೊರೆಯುವುದು ಅತ್ಯಗತ್ಯವೆಂದು ಕಂಡು ಬಂದಲ್ಲಿ ಮಾತ್ರ ಸಂಬಂಧಪಟ್ಟ ಜಿಯಾಲಜಿಸ್ಟ್ ವರದಿಯನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಕಿರುಸುದ್ದಿ

ಸಿಂಹ ಹೇಳಿಕೆಗೆ ಸುರ್ಜೇವಾಲ ಕಿಡಿ

ಬೆಂಗಳೂರು: ಬಾಗಲಕೋಟೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಮಾಜಿ ಸಂಸದ ಪ್ರತಾಪ್ ಸಿಂಹ ನೀಡಿರುವ ಹೀನಾಯ ಕಟ್ ಹೇಳಿಕೆ ಬಿಜೆಪಿಯ ನೀಚ ರಾಜಕಾರಣವನ್ನು ಮತ್ತೊಮ್ಮೆ ಬಟ್ಟಬಯಲು ಮಾಡಿದೆ. ಪ್ರತಾಪ್ ಸಿಂಹರ ಈ ಆಕ್ರೋಶ ಹತಾಶೆಯಿಂದ ಹುಟ್ಟಿದ್ದು ಎನ್ನುವುದು ಈಗ ಸ್ಪಷ್ಟ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಹೇಳಿದ್ದಾರೆ. ಎಕ್ಸ್‌ನಲ್ಲಿ ಬಿಜೆಪಿ ವಿರುದ್ಧ ಕಿಡಿಕಾರಿರುವ ಅವರು, ಹಿಂದುಳಿದ ಸಮುದಾಯದ ಅತ್ಯಂತ ಹಿರಿಯ ನಾಯಕ ಸಿದ್ದರಾಮಯ್ಯ ಅವರನ್ನು ಅವಮಾನಿಸಲು ಬಿಜೆಪಿ ಉದ್ದೇಶಪೂರ್ವಕವಾಗಿ ಪ್ರತಾಪ್ ಸಿಂಹರನ್ನು ಬಳಸಿಕೊಳ್ಳುತ್ತಿದೆ ಎಂದು ದೂರಿದ್ದಾರೆ. ಸಿದ್ದರಾಮಯ್ಯನವರ ವಿರುದ್ಧ ಬಿಜೆಪಿ ನಾಯಕ ಪ್ರತಾಪ್ ಸಿಂಹ ನೀಡಿರುವ ಅವಹೇಳನಕಾರಿ ಮತ್ತು ಅಸಹನೀಯ ಹೇಳಿಕೆಗಳಿಗಾಗಿ 6.5 ಕೋಟಿ ಕನ್ನಡಿಗರಿಗೆ, ವಿಶೇಷವಾಗಿ ಒಬಿಸಿ, ಎಸ್ಸಿ ಮತ್ತು ಅಲ್ಪಸಂಖ್ಯಾತರಿಗೆ ಸಾರ್ವಜನಿಕ ಕ್ಷಮಾಪಣೆ ಕೋರಬೇಕು ಆಗ್ರಹಿಸಿದ್ದಾರೆ.

ಕೋತಿಗಳ ದಾಳಿಗೆ 15 ಮಂದಿ ಗಾಯ

ಕೋಲಾರ: ಹೊರವಲಯದಲ್ಲಿರುವ ದಕ್ಷಿಣ ಕಾಶಿ ಅಂತರಗಂಗೆ ಕ್ಷೇತ್ರದಲ್ಲಿ ಬಿರು ಬೇಸಿಗೆ ಆರಂಭವಾಗುತ್ತಿದ್ದಂತೆ ಅನ್ನ ನೀರು ಸಿಗದ ಹಿನ್ನೆಲೆ, ಕೋತಿಗಳ ದಾಳಿಯಿಂದ ಗಾಯಗೊಂಡು 15ಕ್ಕೂ ಹೆಚ್ಚು ಜನರು ಆಸ್ಪತ್ರೆ ಪಾಲಾಗಿದ್ದಾರೆ. ಹಲವರನ್ನು ತೀವ್ರವಾಗಿ ಕಚ್ಚಿ ಗಾಯಗೊಳಿಸಿರುವ ಮಂಗಗಳು ತಮ್ಮ ಹಸಿವಿನ ದಾಳಿ ಮುಂದುವರಿಸಿವೆ. ಅಂತರಗಂಗೆ ತಪ್ಪಲಿನಲ್ಲಿರುವ ಸಾವಿರಾರು ಕೋತಿಗಳು ಇಲ್ಲಿಗೆ ಬರುವ ಪ್ರವಾಸಿಗರ ಮೇಲೆ ಎರಗಲಾರಂಭಿಸಿವೆ ಎಂದು ಮೂಲಗಳು ತಿಳಿಸಿವೆ.



ನಾಪತ್ತೆಯಾಗಿದ್ದ ಮಹಿಳಾ ಪಿಎಸ್‌ಐ ಪತ್ತೆ!

ತುಮಕೂರು: ತೀವ್ರ ಆತಂಕ ಮತ್ತು ಕುತೂಹಲಕ್ಕೆ ಕಾರಣವಾಗಿದ್ದ ಮಹಿಳಾ ಪೊಲೀಸ್ ಸಬ್ ಇನ್ಸ್ಪೆಕ್ಟರ್ ನಾಪತ್ತೆ ಪ್ರಕರಣ ಸುಖಾಂತ್ಯ ಕಂಡಿದೆ. ತುಮಕೂರಿನ ಹೊಸ ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ–2 ಆಗಿ ಕಾರ್ಯನಿರ್ವಹಿಸುತ್ತಿದ್ದ ಮಂಗಳಮ್ಮ ಅವರು ಕೊನೆಗೂ ಪತ್ತೆಯಾಗಿದ್ದಾರೆ. ನಿನ್ನೆ ಬೆಳಗ್ಗೆ ಡಿವೈಎಸ್‌ಪಿ ಕಚೇರಿಯಲ್ಲಿ ಮೀಟಿಂಗ್ ನಲ್ಲಿ ಭಾಗಿಯಾಗಿದ್ದ ಮಂಗಳಮ್ಮ ಅವರು, ಸಭೆಯ ಮಧ್ಯೆಯೇ ಇಂಪಾರ್ಟೆಂಟ್ ಫೋನ್ ಬಂದಿದೆ ಎಂದು ಮೀಟಿಂಗ್‌ನಿಂದ ಹೊರಬಂದಿದ್ದರು. ಸಮವಸ್ತ್ರದಲ್ಲೇ ಹೊರಬಂದಿದ್ದ ಮಂಗಳಮ್ಮ ಆ ಬಳಿಕ ಎಲ್ಲಿ ಹೋದರೆಂಬ ಸುಳಿವು ಸಿಕ್ಕಿರಲಿಲ್ಲ. ಇಡೀ ದಿನ ಹುಡುಕಿದ್ರೂ ನಿನ್ನೆ ಇಡೀ ದಿನ ಯಾರ ಸಂಪರ್ಕಕ್ಕೆ ಸಿಗದ ಹಿನ್ನೆಲೆ. ಆತಂಕಗೊಂಡು ಪಿಎಸ್ ಐ ಮಂಗಲಮ್ಮ ಪುತ್ರಿಯಿಂದ ದೂರು ನೀಡಿದ್ದರು.

ಕೌಟುಂಬಿಕ ಕಲಹವೇ ಕಾರಣ? ಪ್ರಾಥಮಿಕ ಮಾಹಿತಿ ಪ್ರಕಾರ, ಮನೆಯಲ್ಲಿ ನಡೆದಿದ್ದ ಕೌಟುಂಬಿಕ ಕಲಹದಿಂದ ಮಂಗಳಮ್ಮ ಅವರು ತೀವ್ರ ಮನನೊಂದಿದ್ದರು ಎನ್ನಲಾಗಿದೆ. ಇದೇ ಕಾರಣಕ್ಕೆ ಅವರು ಯಾರಿಗೂ ತಿಳಿಸದೆ ಮನೆ ಬಿಟ್ಟು ಹೋಗಿರಬಹುದು ಎಂಬ ಶಂಕೆ ವ್ಯಕ್ತವಾಗಿತ್ತು. ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ ಹುಡುಕಾಟ ಆರಂಭಿಸಿದ್ದರು.

ಚಿಕ್ಕಮಗಳೂರಿನಲ್ಲಿ ಪತ್ತೆಯಾದ ಮಂಗಳಮ್ಮ: ತೀವ್ರ ಹುಡುಕಾಟದ ನಂತರ, ನಾಪತ್ತೆಯಾಗಿದ್ದ ಪಿಎಸ್‌ಐ ಮಂಗಳಮ್ಮ ಅವರು ಚಿಕ್ಕಮಗಳೂರಿನಲ್ಲಿರುವ ತಮ್ಮ ಸಂಬಂಧಿಕರ ಮನೆಯಲ್ಲಿರುವುದು ಪತ್ತೆಯಾಗಿದೆ. ಮನಸ್ತಾಪದಿಂದ ಬೇಸತ್ತು ಅವರು ಅಲ್ಲಿಗೆ ತೆರಳಿದ್ದರು ಎಂದು ತಿಳಿದುಬಂದಿದೆ.

ವಿದ್ಯಾಗಿರಿಯಲ್ಲಿ ಸುನೀಲ್‌ಕುಮಾರ ಭರ್ಜರಿ ಮತಯಾಚನೆ

ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ

ಬಾಗಲಕೋಟೆ: ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವುದರ ಮೂಲಕ ಮುಂದಿನ ಸಾರ್ವತ್ರಿಕ ಚುನಾವಣೆಗೆ ಮುನ್ನುಡಿ ಬರೆಯಲಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಪರವಾದ ಒಳ್ಳೆಯ ವಾತಾವರಣವಿದ್ದು, ಉಪಚುನಾವಣೆ ಮೂಲಕ ರಾಜ್ಯಕ್ಕೆ ಹೊಸ ದಿಕ್ಸೂಚಿ ಸಿಗಲಿದೆ ಎಂದು ಕಾರ್ಕಳ ಶಾಸಕ ವಿ.ಸುನೀಲ್‌ಕುಮಾರ ಹೇಳಿದರು.



ಉಪಚುನಾವಣೆ ನಿಮಿತ್ತ ನವನಗರದದ ವಾರ್ಡ್ ನಂ.33ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರ ಮತಯಾಚನೆ ಮಾಡಿ ಮಾತನಾಡಿದ ಅವರು, ಬಿಜೆಪಿ ಅಭಿವೃದ್ಧಿ ಕಾರ್ಯಗಳ ಅರಿವು ಈ ಕ್ಷೇತ್ರದ ಜನರಿಗೆ ಇದೆ. ಮೂರು ವರ್ಷಗಳ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆರೋಪ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಮುಸ್ಲಿಂ ಅತಿಯಾದ ಒಲೈಕೆಯಿಂದ ಅಶಾಂತಿ ಸೃಷ್ಟಿ, ಶಿವಾಜಿ ಮೆರವಣಿಗೆ, ಗಣೇಶ ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ಕಾಂಗ್ರೆಸ್ ನೀತಿಗೆ ಕಾರಣವಾಗಿವೆ.

ಹೆಸರಿಗಷ್ಟೆ ಜೋಡೆತ್ತು ಎಂದುಕೊಂಡಿರುವ ಸಿದ್ದರಾಮಯ್ಯ ಮತ್ತು ಡಿಕೆಶಿ ಬೇರೆ ಬೇರೆ ದಿಕ್ಕಿನಲ್ಲಿ ಓಡುತ್ತಿದ್ದಾರೆ. ಸರ್ಕಾರದಲ್ಲಿ ಅಭಿವೃದ್ಧಿ ಅನ್ನುವುದು ಕನಸು ಮಾತ್ರ. ಈ ಬಾರಿಯ ಬಜೆಟ್‌ನಲ್ಲಿ 1 ಲಕ್ಷ 32 ಸಾವಿರ ಕೋಟಿ ರೂ. ಸಾಲ ಮಾಡಿ ರಾಜ್ಯವನ್ನು ಸಾಲದ ಶೂಲಕ್ಕೆ ಏರಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಸರ್ಕಾರಿ ನೌಕರರಿಗೆ ಸಂಬಳ ಕೊಡಲೂ ಆಗದ ಆರ್ಥಿಕ ಸಂದಿಗ್ಧ ಪರಿಸ್ಥಿತಿ ರಾಜ್ಯಕ್ಕೆ ತಂದಿದ್ದಾರೆ. ಬಾಗಲಕೋಟೆಯಲ್ಲಿ ಮುಖ್ಯಮಂತ್ರಿಗಳು ಐದು ದಿನ ಬೀಡು ಬಿಟ್ಟಿದ್ದು ಕಾಳಜಿಗಾಗಿ ಅಲ್ಲ ಸೋಲಿನ ಭಯಕ್ಕಾಗಿ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಭ್ರಷ್ಟ ಆಡಳಿತ ಇಷ್ಟವಿಲ್ಲ ಎಂಬ ಸಂದೇಶವನ್ನು ಸರ್ಕಾರಕ್ಕೆ ಕೊಡಲು ಜನರು ಮುಂದಾಗಿದ್ದಾರೆ. ಗ್ಯಾರಂಟಿಗಳು ಎಸ್.ಸಿಪಿ, ಟಿಎಸ್.ಪಿ ಅನುದಾನಗಳಲ್ಲಿಯೇ ಬಳಕೆಯಾಗಬೇಕಿತ್ತಾ? ಎಂದು ಸರ್ಕಾರದ ವಿರುದ್ಧ ಪ್ರಶ್ನೆಗಳ ಸುರಿಮಳೆಗೈದರು.

> ದಲಿತರ ಮೇಲೆ ಕಾಳಜಿ ಇದ್ದಿದ್ದರೆ ಅವರ ಹಣವನ್ನು ಗ್ಯಾರಂಟಿಗೆ ಬಳಕೆ ಮಾಡಿದ್ದು ಏಕೆ, ಅಲ್ಪಸಂಖ್ಯಾತರ ಹಣವನ್ನು ಏಕೆ ಬಳಕೆ ಮಾಡಿಕೊಳ್ಳಲಿಲ್ಲ. ಅಲ್ಪಸಂಖ್ಯಾತರಿಗೆ ಹತ್ತು ಸಾವಿರ ಕೋಟಿ ಕೊಟ್ಟ ಸಿದ್ದರಾಮಯ್ಯ ಹಿಂದುಗಳ ಕಲ್ಯಾಣಕ್ಕೆ ಎಷ್ಟು ಕೋಟಿ ಕೊಟ್ಟಿದ್ದಾರೆ?
> ■ ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಕಳ್ಳೆತ್ತು ವಾಲ್ಮೀಕಿ ನಿಗಮ, ಬೋವಿ ನಿಗಮದ ಹಣ ನುಂಗಿ ಅಭಿವೃದ್ಧಿ ಕೆಲಸ ಒಂದೂ ಮಾಡದೇ ಸುಳ್ಳು ಹೇಳಿ ಕಾಲಹರಣ ಮಾಡಿತು. ಇದರ ಮೇಲೆಯೇ ದುಡಿಯೋ ಎತ್ತು ಯಾವುದು ಕಳ್ಳೆತ್ತು ಯಾವುದು ಎಂದು ಜನಕ್ಕೆ ಗೊತ್ತಾಗುತ್ತದೆ. ಕೇಂದ್ರ ಸರ್ಕಾರ ಅಕ್ಕಿಯನ್ನು ಕೊಡದಿದ್ದರೆ ಇವರ ಹಣೆಬರಹ ಗೊತ್ತಾಗುತ್ತಿತ್ತು. ಮೋದಿ ಅವರು ಕೊಟ್ಟಿರುವುದನ್ನು ಕೇವಲ ಮುಟ್ಟಿ ಕೊಟ್ಟು ತಾವು ಕೊಟ್ಟಿದ್ದೇವೆ ಎಂದು ಬೀಗುತ್ತಾರೆ ಇದು ಯಾವ ಸೀಮೆಯ ನ್ಯಾಯ?

ಸಿದ್ದರಾಮಯ್ಯ ಸಾಲ ಮಾಡಿದ್ದು ಸುಳ್ಳಾ? ಸ್ವತಃ ಸಿಎಂ 5 ಲಕ್ಷ ಕೋಟಿಗೂ ಹೆಚ್ಚು ಸಾಲ ಮಾಡಿದ್ದಾರೆ. ಗ್ಯಾರಂಟಿ ನಾನು ಕೊಟ್ಟಿದ್ದು ಎಂದು ಹೇಳಿದ ಹಾಗೆ ಸಾಲ ನಾನೇ ಮಾಡಿದ್ದು ಎಂದು ಹೇಳಲಿ. ಬೆಲೆಗಳ ಹೆಚ್ಚಳದಿಂದ ಇಪ್ಪತ್ತು ರೂ. ಬಾಂಡ್ ಪೇಪರ್ ಕೂಡ ಮಾಯ ಮಾಡಿದ್ದಾರೆ. ಜನ ವತ್ತೆ ಇಟ್ಟ ತಮ್ಮ ಚಿನ್ನಕ್ಕೆ ಹಣ ಕಟ್ಟುವ ಸ್ಥಿತಿಗೆ ತಂದು ಇಟ್ಟಿದ್ದಾರೆ. ಬಾಗಲಕೋಟೆ ಹಿಂದುತ್ವ ಕೋಟೆ ಇಲ್ಲಿ ಬಿಜೆಪಿ ಗೆಲ್ಲಬೇಕು ಎಂದರು.

ವೀರಣ್ಣ ಚರಂತಿಮಠ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ,ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿದಂತೆ ಸಾವಿರಾರು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ

ಕೈಗೆ ದೊಡ್ಡ ಗೆಲುವು

ಬೆಂಗಳೂರು: ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಸದಾಶಿವನಗರ ನಿವಾಸದಲ್ಲಿ ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಕೂಡ ಈ ಬಾರಿ ಕಾಂಗ್ರೆಸ್‌ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆಯಾಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ. ಇವುಗಳನ್ನು ಉಳಿಸಿಕೊಳ್ಳಲು ಜನ ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ ಇರಲಿ ಮುಂಜಾಗ್ರತೆ: ಅನಿಲ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಈ ವಿಚಾರದಲ್ಲಿ ವಿಫಲವಾಗಿದೆ. ಈ ವಿಚಾರವಾಗಿ ಬಿಜೆಪಿಯವರು ಈವರೆಗೂ ಯಾಕೆ ಮಾತನಾಡುತ್ತಿಲ್ಲ. ನಮ್ಮಿಂದ ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದರು.

ರಾಜ್ಯದಲ್ಲಿ ಗ್ಯಾಸ್ ಅಭಾವದದಿಂದ ಆಟೋ ಚಾಲಕರಿಗೆ ಬಹಳ ತೊಂದರೆ ಯಾಗುತ್ತಿದೆ. ಇದರಿಂದ ಸಂಚಾರ ವ್ಯವಸ್ಥೆಗೆ ಪರಿಣಾಮ ಬೀರುತ್ತಿದೆ. ಜತೆಗೆ ಹೊಟೇಲ್ ಕ್ಷೇತ್ರವು ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ನ್ಯಾಯದ ಪರ ಕಾಂಗ್ರೆಸ್: ಪರಂ

ಬಾಗಲಕೋಟೆ: ಸಾಮಾಜಿಕ ನ್ಯಾಯದ ಪರ ಹಾಗೂ ಎಲ್ಲ ಸಮುದಾಯಕ್ಕೆ ಅನುಕೂಲಕರ ವಾತಾವರಣ ಕಲ್ಪಿಸುವ ಬದ್ಧತೆ ಹಾಗೂ ಸಂವಿಧಾನದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷದ ಸರ್ಕಾರ ಕೆಲಸ ಮಾಡಲಿದೆ. ಬಿಜೆಪಿ ಕೋಮುವಾದದ ಬದ್ಧತೆಯನ್ನು ತೋರಿಸುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಿಸಲು ಕಾಂಗ್ರೆಸ್ ಪಕ್ಷ ಕೆಲಸ ಮಾಡುತ್ತದೆ. ನಮ್ಮ ಸಾಮಾಜಿಕ ಬದ್ಧತೆ ವಿರುದ್ಧ ಬಿಜೆಪಿ ಕೆಲಸ ಮಾಡುತ್ತದೆ ಎಂದು ದೂರಿದರು. ರಾಜ್ಯಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಅವರನ್ನು ಆರ್ಥಿಕವಾಗಿ ಮೇಲಕ್ಕೆತ್ತಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಉತ್ತಮ ಆಡಳಿತವನ್ನು ನೀಡುತ್ತಿದೆ. ಕಾನೂನು ಸುವ್ಯವಸ್ಥೆ ಕಾಪಾಡಲಾಗುತ್ತಿದೆ. ಕೊಲೆ ಪ್ರಕರಣಗಳು ಕಡಿಮೆಯಾಗಿವೆ. ಡ್ರಗ್ಸ್ ದಂದೆಯಲ್ಲಿ ಭಾಗಿಯಾದವರ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರು.

ಟಿಕೆಟ್‌ಗಾಗಿ ಸಾಲಲ್ಲಿ ಶಾಸಕರ ಪಿಎ | ಆಟೋ ಚಾಲಕರ ಗೋಳಾಟ

ವಿಧಾನಸೌಧಕ್ಕೂ ಅಂಟಿದ ಐಪಿಎಲ್ ಜ್ವರ

ಬೆಂಗಳೂರು: ಒಂದು ಕಡೆ ರಾಜ್ಯದಲ್ಲಿ ಆಟೋಗಳಿಗೆ ಗ್ಯಾಸ್ ಸಿಗುತ್ತಿಲ್ಲ ಅಂತ ಆಟೋ ಚಾಲಕರು ಗೋಳಾಡುತ್ತಾ ಗ್ಯಾಸ್‌ಗಾಗಿ ರಾತ್ರಿಯಿಡೀ ಕ್ಯೂ ನಿಲ್ಲುತ್ತಿದ್ದಾರೆ. ಮತ್ತೊಂದೆಡೆ ನಮ್ಮ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್ ಪಡೆಯೋಕೆ ತಮ್ಮ ಪಿಎಗಳನ್ನೇ ಕ್ಯೂ ನಿಲ್ಲಿಸಿದ್ದಾರೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರ ಮನವಿಗೆ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸೂಚನೆಯನ್ವಯ ಪ್ರತಿ ಐಪಿಎಲ್ ಪಂದ್ಯಕ್ಕೆ ಶಾಸಕರಿಗೆ ಉಚಿತವಾಗಿ 3 ಟಿಕೆಟ್ ಕೊಡಲು ಕೆಎಸ್‌ಸಿಎ ನಿರ್ಧರಿಸಿತ್ತು. ಈ ನಡುವೆ ಭಾನುವಾರ(ಏ.5) ಬೆಂಗಳೂರು ಮತ್ತು ಚೆನ್ನೈ ನಡುವೆ ಪಂದ್ಯವಿರುವ ಹಿನ್ನೆಲೆಯಲ್ಲಿ ಟಿಕೆಟ್‌ಗಾಗಿ ಶಾಸಕರ ಆಪ್ತ ಸಹಾಯಕರು ಸ್ಪೀಕರ್ ಕಚೇರಿ ಮುಂದೆ ಕ್ಯೂ ನಿಂತು ಟಿಕೆಟ್ ಪಡೆದಿದ್ದಾರೆ. ಜನರ ಸಮಸ್ಯೆ ಕೇಳದ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್‌ಗಾಗಿ ಹೀಗೆ ವರ್ತನೆ ತೋರಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕೆಲ ದಿನಗಳ ಹಿಂದೆ ಸದನದಲ್ಲಿ ಶಾಸಕರು ಬಹಿರಂಗವಾಗಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದರು. ವಿಐಪಿ ಟಿಕೆಟ್‌ಗಳೇ ಬೇಕು ಅಂತಾ ಒತ್ತಾಯಿಸಿದ್ದರು. ಶಾಸಕರ ಈ ಬೇಡಿಕೆಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದರು. ಜನರ ಸಮಸ್ಯೆ ಆಲಿಸುವುದಕ್ಕಿಂತ ಇವರಿಗೆ ಟಿಕೆಟ್‌ನದ್ದೆ ಚಿಂತೆ ಎಂದು ಕಿಡಿಕಾರಿದ್ದರು.

ನಮ್ಮ ಸಮಸ್ಯೆ ಕೇಳೋರಿಲ್ಲ: ಆಟೋ ಗ್ಯಾಸ್ ಇಲ್ಲದೇ ಆಟೋ ಚಾಲಕರು ಅತಂತ್ರರಾಗಿದ್ದಾರೆ. ಈ ಸಮಸ್ಯೆಗಳ ನಡುವೆ, ಜನಪ್ರತಿನಿಧಿಗಳು ಮಾತ್ರ ಕ್ರಿಕೆಟ್ ಮ್ಯಾಚ್ ನೋಡಲು ಮುಗಿಬಿದ್ದಿರುವುದನ್ನು ನೋಡಿ ಆಟೋ ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಮ್ಮ ಸಮಸ್ಯೆಗಳು ಯಾರಿಗೂ ಬೇಕಿಲ್ಲ, ಐಪಿಎಲ್ ಟಿಕೆಟ್ ಇದ್ದರೆ ಸಾಕು ಅವರಿಗೆ, ನಾವು ಗ್ಯಾಸ್ ಸಿಗದೆ ಸಾಯುತ್ತಿದ್ದೇವೆ, ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲುತ್ತಿದ್ದೇವೆ. ದುಡಿಮೆ ಇಲ್ಲ ಎಂದು ಆಕ್ರೋಶ ಹೊರಹಾಕಿದರು.

ಟಿಕೆಟ್‌ಗಾಗಿ ಶಾಸಕರಿಗೆ ಕರೆ

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏ.5ರಂದು ಆರ್‌ಸಿಬಿ ಮತ್ತು ಸಿಎಸ್‌ಕೆ ಮಧ್ಯೆ ಹೈವೋಲ್ಟೇಜ್ ಪಂದ್ಯ ನಡೆಯಲಿದೆ ಇತ್ತ ಶಾಸಕರಿಗೆ ತಲಾ ಮೂರು ಐಪಿಎಲ್ ಟಿಕೆಟ್ ವಿತರಣೆ ಮಾಡಲಾಗಿದೆ. ಹೀಗಾಗಿ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಸಂಬಂಧಿ ಎಂದು ಹೇಳಿಕೊಂಡು ರಾಜಾಜಿನಗರ ಶಾಸಕ ಸುರೇಶ್ ಕುಮಾರ್‌ಗೆ ದೂರವಾಣಿ ಕರೆ ಮಾಡಿರುವ ಘಟನೆ ನಡೆದಿದೆ. ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಸಂಬಂಧಿ ಎಂದು ಹೇಳಿರುವ ಸಂದೀಪ್ ಎನ್ನುವವವರು , ತೆಲಂಗಾಣ ಸಿಎಂ ಕಚೇರಿಯಿಂದ ನಿಮ್ಮ ದೂರವಾಣಿ ಸಂಖ್ಯೆ ಪಡೆದಿದ್ದೇನೆ. ಐಪಿಎಲ್ ಟಿಕೆಟ್ ಪಡೆಯಲು ಸಹಾಯ ಮಾಡಿ ಎಂದಿದ್ದಾರೆ.



ಲವ್ ಜಿಹಾದ್ ಆರೋಪ | ನಾಲ್ಕು ಪ್ರಕರಣ ದಾಖಲು

ಆರೋಪಿ ಸಮೀರ್ ಮುಲ್ಲಾ ಬಂಧನ

ಹುಬ್ಬಳ್ಳಿ: ಲವ್ ಜಿಹಾದ್ ಆರೋಪಕ್ಕೆ ಸಂಬಂಧಿಸಿದಂತೆ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಸೇರಿದಂತೆ ನಾಲ್ಕು ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ಶನಿವಾರ ತನಿಖೆ ಚುರುಕುಗೊಳಿಸಿದ್ದಾರೆ. ಮೊಬೈಲ್ ಹಾಗೂ ಹಲವು ಸಾಕ್ಷ್ಯಗಳ ಸಂಗ್ರಹಿಸಿದ್ದಾರೆ. ಯುವತಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಮ್ ತರಬೇತುದಾರ ಸಮೀರ್ ಮುಲ್ಲಾನನ್ನು ವಿದ್ಯಾನಗರ ಪೊಲೀಸರು ಬಂಧಿಸಿದ್ದಾರೆ.

ಈಗಾಗಲೇ ಪೊಲೀಸರ ವಶದಲ್ಲಿರುವ ಜಿಮ್ ತರಬೇತುದಾರ ಸಮೀರ್ ಮುಲ್ಲಾ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಸ್ವತಃ ಭೇಟಿ ನೀಡಿ ಕೆಲ ಹೊತ್ತು ವಿಚಾರಣೆ ನಡೆಸಿದರು. ವಿದ್ಯಾನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ದಾಖಲಾದ ಪ್ರಕರಣಗಳ ಕುರಿತು ಪೊಲೀಸರಿಂದ ಹಲವು ಮಾಹಿತಿ ಪಡೆದರು. ಇದೇ ವೇಳೆ ಯುವತಿಯನ್ನು ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.ವಿದ್ಯಾನಗರ ಹಾಗೂ ಅಶೋಕನಗರ ಠಾಣೆಯಲ್ಲಿ 4 ಪ್ರಕರಣಗಳು ದಾಖಲಾಗಿವೆ. ಶನಿವಾರ ಸಮೀರ್ ಬಾವ ಲೂಕ್ ಎಂಬುವರು ಯುವತಿ ಕುಟುಂಬಸ್ಥರ ಹಾಗೂ ಹಲವರ ಮೇಲೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಈ ಕುರಿತು ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಮಾಧ್ಯಮದರೊಂದಿಗೆ ಮಾತನಾಡಿ, ಯುವತಿ ತನ್ನ ಮೇಲೆ ಲೈಂಗಿಕ ದೌರ್ಜನ್ಯವಾಗಿದೆ, ಯುವತಿ ತಾಯಿ ಮನೆಗೆ ನುಗ್ಗಿ ಸಮೀರ್ ಮುಲ್ಲಾ ಕುಟುಂಬಸ್ಥರು ಹಲ್ಲೆ ಮಾಡಿ, ಮನೆ ಆಸ್ತಿಗಳಿಗೆ ಹಾನಿ ಮಾಡಿದ್ದಾರೆ ಎಂದು ಪ್ರಕರಣ ದಾಖಲಿಸಿದರೆ, ಯುವಕ ಸಮೀರ್, ಯುವತಿ ಕುಟುಂಬಸ್ಥರು ಹಾಗೂ ಹಲವರು ಸೇರಿ ನನ್ನ ಅಪಹರಿಸಿ ಹಲ್ಲೆ ಮಾಡಿದ್ದಾರೆ ಎಂದು ಪ್ರತಿದೂರು ನೀಡಿದ್ದಾರೆ ಎಂದರು.

ಯುವತಿ ಹಾಗೂ ಕುಟುಂಬಸ್ಥರು ಸಮೀರ್, ಆತನ ಸಹೋದರಿ ಹಾಗೂ ಬಾವ ಶೋಷಣೆ ಮಾಡಿದ್ದು, ಸಮೀರ್ ನೊಂದಿಗಿರು ಅಂತ ಬಲವಂತ ಮಾಡಿರುವುದಾಗಿ, ಬೇರೆ ಹುಡುಗಿಯರಿಗೆ ತೊಂದರೆ ಕೊಟ್ಟಿರುವುದುದಾಗಿ ಆರೋಪಿಸಿದ್ದು, ಅವರನ್ನು ಸಹ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಹೇಳಿದರು.

ಪೊಲೀಸರಿಂದ ಮೊಬೈಲ್ ವಶ

ಲೈಂಗಿಕ ದೌರ್ಜನ್ಯ ನಡೆಸಿರುವ ವಿಡಿಯೋವೊಂದರ ಕುರಿತು ಶುಕ್ರವಾರ ಯುವತಿ ಹಾಗೂ ಯುವಕ ಸಮೀರ್ ಮುಲ್ಲಾ ಆರೋಪ ಹಾಗೂ ಪ್ರತ್ಯಾರೋಪ ಮಾಡಿದ್ದರು. ಈ ಹಿನ್ನೆಲೆ ತನಿಖಾಧಿಕಾರಿಗಳು ಯುವಕ ಹಾಗೂ ಯುವತಿ ಮೊಬೈಲ್ ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ. ಪೊಲೀಸರಿಗೆ ತನಿಖೆ ವೇಳೆ ಹಲವು ಪ್ರಮುಖ ಮಾಹಿತಿ ದೊರೆಕಿವೆ. ಪ್ರಕರಣಕ್ಕೆ ಸಂಬಂಧಿಸಿ ಮೊಬೈಲ್‌ಗಳ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ತಿಳಿಸಿದರು.

ಸಮೀಕ್ಷೆಯಲ್ಲಿ ಆಘಾತಕಾರಿ ಅಂಶ ಬಹಿರಂಗ | ಸಾಮಾನ್ಯ ಗ್ಯಾಸ್ಟ್ರಿಕ್ ಅಥವಾ ಜೀರ್ಣಕ್ರಿಯೆ ಕ್ಯಾನ್ಸರ್‌ಗೆ ಆಹ್ವಾನ

ಗ್ಯಾಸ್ಟ್ರಿಕ್ ನಿರ್ಲಕ್ಷ್ಯವೇ ಕ್ಯಾನ್ಸರ್ ಕಾಯಿಲೆಗೆ ಮುನ್ನುಡಿ

▸ ಚಂದನ್ ಲಕ್ಕೂರು

ದಿಗಂತ ವಿಶೇಷ

ಬೆಂಗಳೂರು: ಸಿಲಿಕಾನ್ ಸಿಟಿಯ ಜನಜೀವನ ಎಷ್ಟು ವೇಗವಾಗಿದೆಯೋ, ಅಷ್ಟೇ ಅಪಾಯಕಾರಿಯಾಗಿ ಜನರ ಆರೋಗ್ಯ ಶೈಲಿ ಬದಲಾಗುತ್ತಿದೆ. ಸಾಮಾನ್ಯ ಗ್ಯಾಸ್ಟ್ರಿಕ್ ಅಥವಾ ಜೀರ್ಣಕ್ರಿಯೆಯ ತೊಂದರೆ ಎಂದು ಭಾವಿಸಿ ಮನೆಮದ್ದುಗಳಿಗೆ ಮೊರೆ ಹೋಗುವ ಬೆಂಗಳೂರಿನ ಶೇ. 88ರಷ್ಟು ಮಂದಿ, ತಿಳಿಯದೆಯೇ ಮಾರಕ ಕೊಲೊರೆಕ್ಟಲ್ (ದೊಡ್ಡ ಕರುಳು) ಕ್ಯಾನ್ಸರ್‌ಗೆ ಆಹ್ವಾನ ನೀಡುತ್ತಿದ್ದಾರೆ ಎಂಬ ಆತಂಕಕಾರಿ ವಿಷಯ ಈಗ ಬೆಳಕಿಗೆ ಬಂದಿದೆ.

ಮೆರ್ಕ್ ಸ್ಪೆಷಾಲಿಟಿಸ್ ಪ್ರೈವೇಟ್ ಲಿಮಿಟೆಡ್ ಇತ್ತೀಚೆಗೆ ನಡೆಸಿದ ಜೀವನ ಶೈಲಿ ಮತ್ತು ಜೀರ್ಣಾಂಗ ಆರೋಗ್ಯ ಜಾಗೃತಿ ಸಮೀಕ್ಷೆಯಲ್ಲಿ ದೃಢಪಟ್ಟಿದೆ. ನಗರದ ನಿವಾಸಿಗಳು ಸಣ್ಣಪುಟ್ಟ ಜೀರ್ಣಕ್ರಿಯೆಯ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿರುವುದು ಮತ್ತು ವೈದ್ಯಕೀಯ ಸಲಹೆ ಪಡೆಯುವಲ್ಲಿ ತೋರುತ್ತಿರುವ ವಿಳಂಬವು ಭವಿಷ್ಯದಲ್ಲಿ ದೊಡ್ಡ ಆರೋಗ್ಯ ದುರಂತಕ್ಕೆ ಕಾರಣವಾಗುವ ಮುನ್ಸೂಚನೆಯನ್ನು ನೀಡಿದೆ.

ಏನಿದು ಸಮೀಕ್ಷೆಯ ಅಂತರಾಳ? ದೇಶದ 14 ಪ್ರಮುಖ ನಗರಗಳಲ್ಲಿ 25 ರಿಂದ 65 ವರ್ಷದ ಸುಮಾರು 10,198 ಜನರನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಬೆಂಗಳೂರಿನವರು ಸಮೀಕ್ಷೆಯಲ್ಲಿ ಭಾಗವಹಿಸಿದ್ದ 932 ಜನರಲ್ಲಿ ಕೇವಲ ಶೇ.12ರಷ್ಟು ಮಂದಿ ಮಾತ್ರ ತಜ್ಞ ವೈದ್ಯರ ಸಲಹೆ ಪಡೆಯುತ್ತಿದ್ದಾರೆ. ಉಳಿದ ಶೇ. 88ರಷ್ಟು ಜನರು ಮಲಬದ್ಧತೆ ಮತ್ತು ಗ್ಯಾಸ್ಟ್ರಿಕ್‌ನಂತಹ ಸಮಸ್ಯೆಗಳಿಗೆ ತಾವೇ ಸ್ವಯಂ ಮದ್ದು ಅಥವಾ ಮನೆಮದ್ದು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಿಂತಲೂ ಭಯಾನಕ ಸಂಗತಿಯೆಂದರೆ, ಮಲವಿಸರ್ಜನೆಯ ಸಮಯದಲ್ಲಿ ರಕ್ತಸ್ರಾವ ಕಂಡುಬಂದರೂ ಶೇ. 26ರಷ್ಟು ಜನರು ವೈದ್ಯರ ಬಳಿ ಹೋಗದೆ ಮನೆಮದ್ದನ್ನೇ ನಂಬಿ ಕುಳಿತಿದ್ದಾರೆ.

ಆರಂಭದಲ್ಲೇ ಚಿಕಿತ್ಸೆ ಪಡೆದರೆ ಕ್ಯಾನ್ಸರನಿಂದ ಪಾರು: ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷಿಸುವುದೇ ಕ್ಯಾನ್ಸರ್ ಉಲ್ಬಣಕ್ಕೆ ಮೂಲ ಕಾರಣ. ಸಾಮಾನ್ಯವಾಗಿ ಗುದದ್ವಾರದಲ್ಲಿ ಕಾಣಿಸಿಕೊಳ್ಳುವ ಸಣ್ಣ ಗಂಟುಗಳನ್ನು (ಪಾಲಿಪ್ಸ್) ಆರಂಭ ದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡದಿದ್ದರೆ ಅವು ಕ್ಯಾನ್ಸರ್ ಗಡ್ಡೆಗಳಾಗಿ ಪರಿವರ್ತನೆಯಾಗುತ್ತವೆ. ನಾರಿನಂಶವಿಲ್ಲದ ಆಹಾರ, ಅತಿಯಾದ ಸಂಸ್ಕರಿತ ಆಹಾರ ಸೇವನೆ, ತಂಬಾಕು ಮತ್ತು ವ್ಯಾಯಾಮದ ಕೊರತೆಯು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಿವೆ.



ಬದಲಾಗಬೇಕಿದೆ ಜೀವನಶೈಲಿ

ಸಮೀಕ್ಷೆಯ ಪ್ರಕಾರ, ಬೆಂಗಳೂರಿನ ಶೇ. 80ರಷ್ಟು ಜನರು ಪ್ರತಿನಿತ್ಯ ಹೋಟೆಲ್ ಅಥವಾ ಸಂಸ್ಕರಿತ ಆಹಾರದ ಮೇಲೆ ಅವಲಂಬಿತರಾಗಿದ್ದಾರೆ. ವ್ಯಾಯಾಮ ಮಾಡುವವರ ಸಂಖ್ಯೆ ಶೇ. 47ರಷ್ಟಿದ್ದು, ಶೇ. 36ರಷ್ಟು ಜನರು ತಂಬಾಕು ವ್ಯಸನಿಗಳಾಗಿದ್ದಾರೆ. ನಿರಂತರ ತೂಕ ಇಳಿಕೆ, ಮಲದಲ್ಲಿ ರಕ್ತ ಕಾಣಿಸಿಕೊಳ್ಳುವುದು ಅಥವಾ ಪದೇ ಪದೇ ಹೊಟ್ಟೆಯ ತೊಂದರೆ ಕಾಡುತ್ತಿದ್ದರೆ ತಕ್ಷಣವೇ ಎಚ್ಚೆತ್ತುಕೊಳ್ಳುವುದು ಒಳಿತು. ಕೊಲೊರೆಕ್ಟಲ್ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ. ಆದರೆ ಕೇವಲ ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷಿಸಿದರೆ ಅದು ಜೀವಕ್ಕೇ ಕುತ್ತು ತರಬಹುದು ಎಂಬುದು ವೈದ್ಯಲೋಕದ ಕಳಕಳಿಯಾಗಿದೆ.

> ಜನರು ಉತ್ತಮ ಆರೋಗ್ಯ ಶೈಲಿ ರೂಪಿಸಿಕೊಳ್ಳದೇ ಇರುವುದು ಕೊಲೊರೆಕ್ಟಲ್ ಕ್ಯಾನ್ಸರ್‌ಗೆ ದಾರಿ ಮಾಡಿಕೊಡುತ್ತಿದೆ. ಗುದದ್ವಾರದಲ್ಲಿ ಸಣ್ಣದಾಗಿ ಗುಳ್ಳೆ ಮಾದರಿಯಲ್ಲಿ ಕಾಣಿಸಿಕೊಳ್ಳುವ ಪಾಲಿಪ್ಸ್ ಅನ್ನು ಕಡೆಗಣಿಸಿದರೆ ಅದು ಮುಂದೆ ಕ್ಯಾನ್ಸರ್ ಆಗಿ ಪರಿವರ್ತನೆಯಾಗುತ್ತದೆ.
> ■ ಡಾ. ಎಂ.ಸಿ. ಸುರೇಶ್ ಬಾಬು, ನಿರ್ದೇಶಕ ಕಿಮ್ಸ್

> ಸಮೀಕ್ಷೆಯ ಫಲಿತಾಂಶ ವೈದ್ಯಲೋಕಕ್ಕೆ ನಿಜಕ್ಕೂ ಆತಂಕಕಾರಿಯಾಗಿದೆ. ಜನರು ತಮಗಿರುವ ಆರೋಗ್ಯ ಸಮಸ್ಯೆಗಳಿಗೆ ವೈದ್ಯರಿಂದ ಸಲಹೆ ಪಡೆಯುವ ಬದಲು, ತಾವೇ ಸ್ವಯಂ ಔಷಧಿ ಮಾಡಿಕೊಳ್ಳುತ್ತಿರುವುದು ಅನಾರೋಗ್ಯಕ್ಕೆ ದೊಡ್ಡ ಆಹ್ವಾನ ನೀಡಿದಂತಿದೆ.
> ■ ಡಾ. ಮಾನಸಿ, ಹಿರಿಯ ವೈದ್ಯೆ, ಸ್ಪರ್ಶ ಆಸ್ಪತ್ರೆ

ಘಾಟಿ ವಿಭಾಗದಲ್ಲಿ ಸಂಚಾರಕ್ಕೆ ಸಮಸ್ಯೆಯಾಗದಂತೆ ಕ್ರಮವಹಿಸಿ

ಬೆಳ್ತಂಗಡಿ: ಮಳೆಗಾಲದಲ್ಲಿ ಘಾಟಿ ವಿಭಾಗದಲ್ಲಿ ಸಂಚಾರಕ್ಕೆ ಸಮಸ್ಯೆ ಉಂಟಾಗದಂತೆ ಕ್ರಮವಹಿಸುವಂತೆ ರಾಷ್ಟ್ರೀಯ ಹೆದ್ದಾರಿ ಇಲಾಖೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕೀಹೊಳಿ ಸೂಚನೆ ನೀಡಿದರು.

ಅವರು ಶುಕ್ರವಾರ ಸಂಜೆ ಚಾರ್ಮಾಡಿ ಘಾಟಿ ವಿಭಾಗ ಮತ್ತು ಪುಂಜಾಲಕಟ್ಟೆ- ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ವೀಕ್ಷಣೆ ನಡೆಸಿದರು.ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅಗತ್ಯ ಕಾಮಗಾರಿ ನಿರ್ವಹಿಸಲು ತಿಳಿಸಿದರು. ಪುಂಜಾಲಕಟ್ಟೆ- ಚಾರ್ಮಾಡಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ವೇಳೆ ತೆರವುಗೊಂಡ ಕಟ್ಟಡ, ಸ್ಥಳಗಳ ಮಾಲೀಕರಿಗೆ ನೀಡಲಾಗುವ ಪರಿಹಾರ ಧನ ವಿಳಂಬವಾಗುತ್ತಿರುವ ಕುರಿತು ಮಾಹಿತಿ ತಿಳಿದು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿದರು. ಸಾರ್ವಜನಿಕರು, ವಾಹನ ಸವಾರರಿಗೆ ತೊಂದರೆ ಉಂಟಾಗದಂತೆ ಮಳೆಗಾಲಕ್ಕೆ ಆರಂಭಕ್ಕೆ ಮೊದಲು ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ತಿಳಿಸಿದರು.

ರಸ್ತೆ ಅಭಿವೃದ್ಧಿ ಹೊಂದಿದ ಕೆಲವು ಕಡೆ ರಸ್ತೆ ಅಂಕುಡೊಂಕಾಗಿ ಇರುವ ಬಗ್ಗೆ ಪ್ರಶ್ನಿಸಿದರು. ಹೆದ್ದಾರಿ ಬದಿ ಬರುವ ಶಾಲೆಗಳ ಮಕ್ಕಳು ರಸ್ತೆ ದಾಟುವಾವ ವೇಳೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಹೇಳಿದರು. ಹೆದ್ದಾರಿ ಅಭಿವೃದ್ಧಿ ಅಂಗವಾಗಿ ಹೊಸ ಸೇತುವೆಗಳು ನಿರ್ಮಾಣಗೊಳ್ಳುತ್ತಿದ್ದು ಇವುಗಳ ಕೆಲಸವನ್ನು ಬೇಗನೆ ಪೂರ್ಣಗೊಳಿಸುವಂತೆ ಸೂಚಿಸಿದರು.

ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಪ್ರಶಂಸೆ ಮಾಡಲು ಯೋಗ್ಯವಾದುದು ಯಾವುದು?

▶ಉದಾರತಾ

ಔದಾರ್ಯ ಅಥವಾ ಉದಾರತಾ ಎಂಬ ಗುಣವು ಅತ್ಯಂತ ಶ್ರೇಷ್ಠವಾದದ್ದು. ಇದು ಯಾರಲ್ಲಿ ಇರುತ್ತದೆಯೋ ಆ ವ್ಯಕ್ತಿಯನ್ನು ಪ್ರಶಂಸೆ ಮಾಡುವುದರಲ್ಲಿ ಯಾವುದೇ ಅಂಜಿಕೆ ಇರಬಾರದು. ಏಕೆಂದರೆ ಆ ವ್ಯಕ್ತಿ ಈ ಗುಣದಿಂದ ಪ್ರಶಂಸೆಗೆ ಅರ್ಹನಾಗುತ್ತಾನೆ. ಹಾಗಾದರೆ ಈ 'ಉದಾರತಾ' ಎಂಬ ಗುಣವು ಏಕೆ ಅಷ್ಟು ಶ್ರೇಷ್ಠವಾಗಿದೆ ಎಂಬುದನ್ನು ತಿಳಿಯಬೇಕಾಗಿದೆ. 'ಔದಾರ್ಯ' ಎಂಬುದು ಒಂದು ಕೊಡುವ ಮನೋಧರ್ಮ. ಈ ಹಿಂದಿನ ಪ್ರಶ್ನೋತ್ತರದಲ್ಲಿ ಒಂದು ವಿಷಯವನ್ನು ಗಮನಿಸಿದ್ದೆವು. ಆ ವಿಷಯವನ್ನು ಇಲ್ಲಿ ನೆನಪಿಸಿಕೊಂಡು ಈ ಉತ್ತರವನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿಂದಿನ ಪ್ರಶ್ನೆಯಲ್ಲಿ ವೈಭವಿದ್ದರೂ ಮತ್ತೊಬ್ಬರಿಗೆ ಕೊಡದಿರುವ ಅತಿಹೇಯವಾದ ಕೃಪಣತಾ ಎಂಬ ದೋಷವನ್ನು ವಿವರಿಸಿದ್ದಾಗಿತ್ತು. ಇದಕ್ಕೆ ವಿರುದ್ಧವಾದ ಗುಣವೇ ಉದಾರತಾ ಎಂಬುದು. ಅಂದರೆ ತನ್ನಲ್ಲಿ ಏನಿದೆಯೋ ಅದರಲ್ಲಿ ಕೊಟ್ಟು ಸಂತೋಷಪಡುವ, ತೃಪ್ತಿಪಡುವ ಮನಸ್ಸು. ಈ ಔದಾರ್ಯವೆಂಬ ಗುಣವಿಲ್ಲದಿದ್ದರೆ ದಾನ ಮಾಡುವ ಸ್ವಾಭಾವ ಹೇಗೆ ಬರಲು ಸಾಧ್ಯ. ಇದ್ದು ಕೊಟ್ಟರೆ ಅದು ಔದಾರ್ಯವೆನಿಸುವುದು. ತನ್ನಲ್ಲಿ ಇರುವಷ್ಟನ್ನು ದೀನದರಿದ್ರರಿಗೆ ಅವರ ಅವಶ್ಯಕತೆಗೆ ಅನುಗುಣವಾಗಿ ಸ್ಪಂದಿಸುವ ವಿಶೇಷ ಗುಣವೇ ಉದಾರತಾ. ಹಾಗಾಗಿ ಇಂತಹ ವಿಶೇಷ ಗುಣವನ್ನು ಪ್ರಶಂಸಿಸಬೇಕಾದುದು ಅತ್ಯಂತ ಅವಶ್ಯಕ. ಈ ಗುಣವು ಬರಲು ಹೇಗೆ ಸಾಧ್ಯ? ಎಂಬುದಕ್ಕೆ ಭಗವದ್ಗೀತೆಯಲ್ಲಿ ಯಾರು ಉದಾರರು ಎಂಬುದನ್ನು ಹೀಗೆ ಹೇಳಲಾಗಿದೆ. ಆರ್ತ, ಜಿಜ್ಞಾಸು ಅರ್ಥಾರ್ಥೀ ಮತ್ತು ಜ್ಞಾನಿ ಈ ನಾಲ್ವರನ್ನು ಉದಾರರು ಎಂಬುದಾಗಿ ಕರೆಯಬೇಕು. ಈ ನಾಲ್ವರಲ್ಲಿ ಜ್ಞಾನಿಯಾದವನು ಅತ್ಯಂತ ಶ್ರೇಷ್ಠ ಉದಾರಿ ಎಂಬುದಾಗಿ ತಿಳಿಯಬೇಕು. ಅಂದರೆ ಅಂತಹ ಜ್ಞಾನಿಗೆ ಮಾತ್ರ ಈ ವಿಶೇಷಗುಣ ಬರಲು ಸಾಧ್ಯ ಎಂಬುದು ಇದರ ತಾತ್ಪರ್ಯ. ಸಾಮಾನ್ಯ ಮಾನವನಿಗೆ ಅಲ್ಪಸಲ್ಪ ಔದಾರ್ಯದ ಗುಣ ಬರಬಹುದು. ಆದರೆ ಜ್ಞಾನಿಗೆ ಪರಿಪೂರ್ಣ ಔದಾರ್ಯ ಗುಣವು ಬರುತ್ತದೆ. ಏಕೆಂದರೆ ಜ್ಞಾನಿಯಾದವನಿಗೆ ತ್ಯಾಗ ಎಂಬ ಗುಣವು ವಿಶೇಷವಾಗಿರುತ್ತದೆ. ತ್ಯಾಗದಿಂದಲೇ ಅವನು ಅಮೃತತ್ವವನ್ನು ಪಡೆಯಬಹುದು ಎಂಬುದನ್ನು ಬಲವಾಗಿ ನಂಬಿದವನಾಗಿರುತ್ತಾನೆ. ಕೇವಲ ಸಂಪತ್ತನ್ನು ಮಾತ್ರವಲ್ಲದೆ ಈ ಜನ್ಮಕ್ಕೆ ಕಾರಣವಾದ ಶರೀರವು ಕೂಡ ತ್ಯಾಜ್ಯವಾದದ್ದು ಎಂಬ ಎಂಬ ತ್ಯಾಗ ಮನೋಧರ್ಮ ಅವನಿಗೆ ಇರುತ್ತದೆ. ಔದಾರ್ಯ ಇರುವವನು ಎಲ್ಲಾ ಕಾಲದಲ್ಲೂ ಶುದ್ಧನಾಗಿ ಇರುತ್ತಾನೆ. ಕಾರಣ ಇಷ್ಟೇ. ಔದಾರ್ಯ ಎಂಬ ಗುಣ ಇರುವುದರಿಂದಲೇ ಅವನು ಜ್ಞಾನಿಯಾದ, ಯೋಗಿಯಾದ, ಶೋಭಾ ವಿಲಾಸೋ ಮಾಧುರ್ಯಂ ಗಾಂಭೀರ್ಯಂ ಧೈರ್ಯತೇಜಸೀ? ಲಲಿತಾ ಔದಾರ್ಯಂ ಇತಿ ಅಷ್ಟ ಸತ್ತ್ವಜಾಃ ಪುರುಷಾಃ ಗುಣಾಃ? " ಎಂದು ಸಾಹಿತ್ಯದರ್ಪಣ ಎಂಬ ಗ್ರಂಥದಲ್ಲಿ ಸಜ್ಜನಪುರುಷರ ಎಂಟು ಲಕ್ಷಣಗಳನ್ನು ಹೇಳಲಾಗಿದೆ. ಅದರಲ್ಲಿ ಔದಾರ್ಯ ಎಂಬ ಗುಣವನ್ನು ಎತ್ತಿ ಹೇಳಲಾಗಿದೆ. ಅಂದರೆ ಈ ಗುಣವು ಸತ್ತ್ವಗುಣದ ಪ್ರತೀಕವಾದದ್ದು. ಯಾರಲ್ಲಿ ಸತ್ತ್ವಗಣ ಇರುತ್ತದೆಯೋ, ಅವರಲ್ಲಿ ಉದಾರತೆ ಇರುತ್ತದೆ. ಅಥವಾ ಉದಾರತೆ ಎಂಬುದು ಸತ್ತ್ವಗುಣದಿಂದಲೇ ಜಾಗೃತವಾಗುತ್ತದೆ ಎಂಬ ಅರ್ಥವೂ ಸತ್ಯವಾದದ್ದು. ಒಟ್ಟರೆ ಇಂತಹ ಸತ್ಪುರುಷನು ಉದಾರತಾ ಎಂಬ ಗುಣದಿಂದ ಪ್ರಶಂಸೆಗೆ ಅರ್ಹನಾಗುತ್ತಾನೆ.

ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ವಾದದಲ್ಲಿ ಸರಿಸಮನೆನಿಸಿದ ಜರಾಸಂಧ!

ಜರಾಸಂಧನನ್ನು ಎದುರಿಸಿ ಕೃಷ್ಣ ಮತ್ತು ಪಾಂಡವರಿಬ್ಬರು ನಿಂತಿದ್ದಾರೆ. ವೇಷಾಂತರದಲ್ಲಿ ಬಂದಿರುವುದಾದರೂ ತಾವು ವಾಸ್ತವವಾಗಿ ಯಾರೆಂಬುದನ್ನು ತಿಳಿಸಹೊರಟ ಕೃಷ್ಣನು ತನ್ನ ಮಾತನ್ನು ಮುಂದುವರೆಸುತ್ತಿದ್ದಾನೆ. ಜರಾಸಂಧನೇ, ಸ್ವರ್ಗಪ್ರಾಪ್ತಿ ವೇದಾಧ್ಯಯನದಿಂದ ಪ್ರಾಪ್ತಿಯಾಗಬಲ್ಲದು. ಸ್ವರ್ಗವನ್ನು ಹೊಂದಲು ಕಾರಣವೆನಿಸುವುದು ಮಹಾಯಶಸ್ಸು; ಸ್ವರ್ಗಸಂಪಾದನೆಗೆ ಹೇತುವಾದದ್ದು ತಪಸ್ಸು; ಇವೆಲ್ಲಕ್ಕಿಂತಲೂ ಮಿಗಿಲಾದದ್ದೆಂದರೆ ಹಿಂಜರಿಯದೆಯೇ ಯುದ್ಧದಲ್ಲಿ ಕ್ಷತ್ರಿಯನು ಮೃತ್ಯುವನ್ನು ಹೊಂದುವಂತಹುದು. ಯುದ್ಧದಲ್ಲಿಯ ಸಾವೆಂದರೆ ಕ್ಷತ್ರಿಯನು ವೈಜಯಂತವನ್ನು ಹೊಂದಿದಂತೆಯೇ. ಅದಂತೂ, ಇಂದ್ರನ ರಾಜಗೃಹವೇ! ಸರ್ವಗುಣಗಳಿಂದಲೂ ಪರಿಪೂರ್ಣವಾದುದು. ಯುದ್ಧವೆಂಬುದನ್ನು ಆಧರಿಸಿಯೇ ಅಸುರರನ್ನು ಪರಾಭವಗೊಳಿಸಿ ಇಂದ್ರನು ಜಗದ್ರಕ್ಷಕನಾಗಿರುವುದು.

ಈಗ ನಮ್ಮೊಂದಿಗೆ ಯುದ್ಧವೆಂಬುದೇನುಂಟೋ ಅದು ನಿನಗೆ ಸ್ವರ್ಗಪ್ರಾಪಕವೇ ಸರಿ. ಈ ಬಗೆಯು ಮತ್ತಾರಿಗೆ ದೊರಕೀತು? ಮಾಗಧರ ವಿಪುಲವಾದ ಸೈನ್ಯವೆನಗಿದೆ ಎಂಬ ಬಾಹುಲ್ಯದ ಬಲದಿಂದ ನೀನು ದರ್ಪಗೊಂಡಿರುವೆ. ಹಾಗೆ ನೀನು ದರ್ಪಗೊಂಡು ಅನ್ಯರನ್ನು ಅವಮಾನಿಸುವುದಲ್ಲ, ತಿಳಿದುಕೋ. ನರನರನಲ್ಲೂ ವೀರ್ಯವಿರುವುದು, ನಿನಗೆ ಸಮಾನವೆನಿಸುವ ತೇಜಸ್ಸಿರುವುದು. ನಿನಗಿಂತಲೂ ಅತಿಶಯವಾದದ್ದೂ ಉಂಟು ರಾಜನೇ! ಎಲ್ಲಿಯವರೆಗೆ ಇದೆಲ್ಲಾ ನಿನ್ನ ಅರಿವಿಗೆ ಬರುವುದಿಲ್ಲವೋ, ಅಲ್ಲಿಯವರೆಗಷ್ಟೆ ಇದನ್ನೆಲ್ಲಾ ನಾವು ಸಹಿಸಿಕೊಳ್ಳಬೇಕಾಗಿಬರುವಂತಹುದು. ರಾಜನೇ, ನಾನು ನಿನಗೆ ಹೇಳುತ್ತಿರುವುದು ನಿನಗೆ ಯಾರು ಸಮಾನರೋ ಅಂತಹವರ ವಿಷಯದಲ್ಲಿ ನಿನ್ನ ಸ್ವಾಭಿಮಾನವನ್ನೂ ದರ್ಪವನ್ನೂ ಬಿಡು, ಮಾಗಧನೇ!

ನಿನ್ನ ಮಕ್ಕಳು ಮಂತ್ರಿಗಳೊಂದಿಗೆ ಹಾಗೂ ಸೈನ್ಯದೊಂದಿಗೆ ನೀನು ಯಮಲೋಕವನ್ನು ಸೇರಬಾರದಲ್ಲವೇ? ದಂಭೋದ್ಭವ, ಕಾರ್ತವೀರ್ಯ, ಉತ್ತರ, ಬೃಹದ್ರಥ-ಎಂಬೀ ನಾಲ್ವರು ರಾಜರೂ ನಾಶಹೊಂದಿದರು. ಏಕೆ? ತಮಗಿಂತಲೂ ಹಿರಿಯರನ್ನು ಅವಮಾನಗೊಳಿಸಿದ್ದಕ್ಕಾಗಿ. ನಿನ್ನೊಡನೆ ಯುದ್ಧಮಾಡಬಯಸುತ್ತಿರುವ ನಾವು ಬ್ರಾಹ್ಮಣರಲ್ಲ. ನಾನು ಶೌರಿಯಾದ ಹೃಷೀಕೇಶ, ಎಂದರೆ ವಸುದೇವಪುತ್ರ. ಹಾಗೂ ಇವರಿಬ್ಬರೂ ಪಾಂಡವರು. ಇವರಿಬ್ಬರಿಗೂ ನಾನು ಮಾತುಲೇಯ, ಎಂದರೆ ಸೋದರಮಾವನ ಮಗನಾದ ಕೃಷ್ಣ ನಿನ್ನ ಶತ್ರು ಎಂಬುದಾಗಿ ತಿಳಿ. ಇದೋ, ಯುದ್ಧಕ್ಕೆ ನಿನ್ನನ್ನು ಆಹ್ವಾನಿಸುತ್ತಿದ್ದೇವೆ. ರಾಜನೇ, ಸ್ಥಿರನಾಗಿ ಯುದ್ಧಮಾಡು. ಮಾಗಧ, ನಿನಗಿರುವುದು ಎರಡೇ ಆಯ್ಕೆಗಳು. ಎಲ್ಲ ರಾಜರನ್ನೂ ಬಂಧಮುಕ್ತಗೊಳಿಸು; ಇಲ್ಲವೇ ಯಮಸದನಕ್ಕೆ ಹೋಗು ಎಂದನು. ಕೃಷ್ಣನು ಹೀಗೆ ಹೇಳಲು, ಜರಾಸಂಧನು ನುಡಿದನು: ಮೊದಲು ನೀನಿದನ್ನು ತಿಳಿದುಕೋ, ಕೃಷ್ಣಾ! ಯಾವ ರಾಜರು ನನ್ನೊಡನೆ ಸೆಣಸಿನಲ್ಲಿ ಸೋತಿಲ್ಲವೋ, ಅಂತಹವರನ್ನೊಬ್ಬರನ್ನೂ ನಾನು ಕೈದಿಯಾಗಿಸಿಲ್ಲ. ನನಗೆ ಪ್ರತಿಭಟಿಸಿಯೂ ನನ್ನಿಂದ ಸೋಲನ್ನು ಕಾಣದ ಯಾವೊಬ್ಬ ವ್ಯಕ್ತಿಯೂ ಇಲ್ಲಿಲ್ಲ. ಕೃಷ್ಣಾ! ಇದನ್ನೇ ಅಲ್ಲವೆ ಕ್ಷತ್ರಿಯನ ಜೀವಿಕೆಯೆಂಬುದಾಗಿ ಹೇಳುವುದು. ಪರಾಕ್ರಮವನ್ನು ತೋರಿಸಿ, ಶತ್ರುವನ್ನು ವಶಕ್ಕೆ ತೆಗೆದುಕೊಂಡು, ಬಳಿಕ ತನಗೆ ತೋಚಿದಂತೆ ಆಚರಿಸುವುದು. ದೇವತೆಗಳಿಗೆ ಬಲಿಗೊಡಲೆಂದು ಈ ರಾಜರುಗಳನ್ನು ನಾನು, ಕ್ಷತ್ರಿಯ-ವ್ರತವನ್ನು ಮರೆಯದೆ, ಸೆರೆಯಾಗಿಸಿದ್ದೇನೆ. ಈಗೇನು ನಿನಗೆ ಭಯಪಟ್ಟುಕೊಂಡು ಅವರುಗಳನ್ನು ನಾನು ವಿಮುಕ್ತಗೊಳಿಸಬೇಕೇನು? ನಿನ್ನ ಸೇನಾವ್ಯೂಹದೊಂದಿಗೆ ನನ್ನ ಸೇನಾವ್ಯೂಹವು ಹೋರಲಿ. ಅಥವಾ ಒಂಟಿಯಾಗಿ ಒಂಟಿಯಾದವನ ಮೇಲೆ ಹೋರಾಡುವುದೆಂದರೆ ಹಾಗೂ ಸರಿಯೇ. ಅಥವಾ ಇಬ್ಬರೊಂದಿಗೋ ಮೂವರೊಂದಿಗೋ ಸೆಣಸುವುದೆಂದರೆ ಹಾಗೂ ಸರಿಯೇ. ನಾನು ಯಾವುದಕ್ಕೂ ಸಿದ್ಧ ಎಂದನು ಜರಾಸಂಧ.

ಪರಿಚಯದ ಪರಿಪರಿಯ ಕಿರಿಕಿರಿಗಳು

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com

ಬಹಳ ವರ್ಷಗಳ ಹಿಂದಿನ ಮಾತು. ಜರಗನಹಳ್ಳಿ ಶಿವಶಂಕರರು ಪ್ರತಿ ತಿಂಗಳು ನಡೆಸುತ್ತಿದ್ದ ಕಾರ್ಯಕ್ರಮವೊಂದಕ್ಕೆ ಮುಖ್ಯ ಅತಿಥಿಗಳಾಗಿ ಏಣಗಿ ಬಾಳಪ್ಪನವರು ಆಗಮಿಸಿದ್ದರು. ಪ್ರಾರ್ಥನೆ, ಸ್ವಾಗತಗಳ ನಂತರ ನಿರೂಪಕರು 'ಈಗ ಅತಿಥಿಗಳ ಪರಿಚಯವನ್ನು ಪರಮೇಶಿಯವರು (ನಿಜ ಹೆಸರಲ್ಲ) ಮಾಡಿಕೊಡುತ್ತಾರೆ' ಎಂದರು.

ಒರಳುಕಲ್ಲಿನಲ್ಲಿ ರುಬ್ಬುಗುಂಡು ಚಲಿಸುವ ರೀತಿಯಲ್ಲಿ ಉರುಟುನಡೆಯಲ್ಲಿ ವೇದಿಕೆಯನ್ನೇರಿದ ಪರಮೇಶಿಯವರು "ಇಂದಿನ ಮುಖ್ಯ ಅತಿಥಿಗಳು ಏಣಗಿ ಬಾಳಪ್ಪ ಉಕ್ಕೇರಿ" ಎನ್ನುತ್ತಾ ಪರಿಚಯಕ್ಕೆ ಉಪಕ್ರಮಿಸಿದರು. ಹೌಹಾರಿದ ನಾನು ಅವರ ಗಮನವನ್ನು ಸೆಳೆಯಲು ಸಕಲ ಪ್ರಯತ್ನಗಳನ್ನೂ ಮಾಡಲಾರಂಭಿಸಿದೆ. ಪರಿಣಾಮ ಶೂನ್ಯ. "ಏಣಗಿ ಬಾಳಪ್ಪ ಉಕ್ಕೇರಿಯವರು ಒಳ್ಳೆಯ ಆಡುಗಾರರು" ಮುಂದುವರಿಸಿದರು ವ್ಯತ್ತೋದರರು, "ಅವರು ಆಡಿದರೆ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ."

'ಆಡುವುದನ್ನು ನೋಡುವುದು ತಿಳಿದಿದೆ. ಆಡುವುದನ್ನು ಕೇಳುವುದೆ?' ಎಂಬ ಗೊಂದಲ ಯಾರಲ್ಲೂ ಮೂಡಲಿಲ್ಲ. ಆ ಹೊತ್ತಿಗೆ ಸಭೆಗೆ ಈ ಪರಿಚಯಕಾರನು ಹಕಾರ ಹಂತಕನೆಂದು ಅರಿವಾಗಿತ್ತು. ತತ್ಪರಿಣಾಮ ಮುಖ್ಯ ಅತಿಥಿಗಳು ಉಕ್ಕೇರಿಯಲ್ಲ, ಹುಕ್ಕೇರಿ ಎಂದೂ, ಪರಿಚಯ ಮಾಡಿಕೊಡುತ್ತಿರುವ ವ್ಯಕ್ತಿಗೆ ಗಾಯಕ ಬಾಳಪ್ಪ ಹುಕ್ಕೇರಿಯೂ ತಿಳಿದಿಲ್ಲ, ನಾಟಕಕಾರ ಏಣಗಿ ಬಾಳಪ್ಪನವರೂ ತಿಳಿದಿಲ್ಲವೆಂಬುದು ಸ್ಪಷ್ಟವಾಗಿತ್ತು. ಆದರೆ ಸ್ವಯಂ ಪರಿಚಯಕಾರನಿಗೆ ತಿಳಿದಿರಲಿಲ್ಲವಲ್ಲ, ಆತ ಮುಂದುವರಿಸಿದರು:

"ಏಣಗಿ ಬಾಳಪ್ಪ ಉಕ್ಕೇರಿಯವರಿಗೆ ಈಗ ತೊಂಬತ್ತೇಳು ವರ್ಷ ವಯಸ್ಸು" ಎಂದರವರು. ವಾಸ್ತವವಾಗಿ ಅಂದು ಏಣಗಿಯವರಿಗೆ ತೊಂಬತ್ತು ವರ್ಷಗಳು ತುಂಬಿದ್ದವು, ಇನ್ನು ಏಳು ವರ್ಷಗಳನ್ನು ಪರಿಚಯಕಾರರೇ ಬೋನಸ್ ಆಗಿ ನೀಡಿದ್ದರು. ಪರಿಚಯಕಾರರ ತಲೆಯನ್ನು ತುಂಬಿಕೊಂಡಿದ್ದ ಬಾಳಪ್ಪ ಹುಕ್ಕೇರಿ ಅಂದಿಗೆ ಗತಿಸಿ ಹಲವು ವರ್ಷಗಳಾಗಿದ್ದವು. "ಇವರ ಎಸರಿನಲ್ಲಿ ಉಕ್ಕೇರಿ ಅಂತ ಇರೋದು ಯಾಕೆ ಅಂದರೆ ಈ ವಯಸ್ಸಿನಲ್ಲೂ ಅವರ ಉತ್ಸಾಹವು ಆಲಿನಂತೆ ಉಕ್ಕೇರುತ್ತಿದೆ. ಆದ್ದರಿಂದಲೇ ಅವರ ಎಸರು ಬಾಳಪ್ಪ ಉಕ್ಕೇರಿ!"

ಏಣಗಿಯವರಿಗೆ ಒದಗಿದ್ದ ವಯೋಸಹಜವಾದ ಕಿವುಡು ಈ ಪರಿಚಯವನ್ನು ಕೇಳಿಸಿಕೊಳ್ಳುವ ಸಂಕಷ್ಟದಿಂದ ಅವರನ್ನು ಪಾರು ಮಾಡಿತ್ತು.

ವೇದಿಕೆಯಲ್ಲದೆ ಹೊರಜಗತ್ತಿನಲ್ಲಿಯೂ ಒಬ್ಬರನ್ನು ಮತ್ತೊಬ್ಬರೆಂದು ಗ್ರಹಿಸುವ ಸನ್ನಿವೇಶಗಳು ಉದ್ಭವಿಸುತ್ತವೆ. "ನಿಮ್ಮ 'ನಟಸಾರ್ವಭೌಮ' ಕಾದಂಬರಿಯನ್ನು ಓದಿದ್ದೇನೆ ಸಾರ್, ತುಂಬಾ ಚೆನ್ನಾಗಿದೆ" ಎಂದು ಕಾಲೇಜು ಹುಡುಗನೊಬ್ಬನು ಶಿವರಾಮ ಕಾರಂತರಿಗೆ ನುಡಿದಿದ್ದ. ಕಾರಂತರು "ಗುಡ್. ಅದರಲ್ಲಿ ಯಾವ ಪಾತ್ರ ಇಷ್ಟವಾಯಿತು?" ಎನ್ನುತ್ತಾ ಮಾತು ಮುಂದುವರೆಸಿದ್ದರು. ಆನಂತರ "ಕಾರಂತರೆ, ಅನಕೃ ಬರೆದ ಕೃತಿಯನ್ನು ನಿಮ್ಮದೆಂದರೂ ಸಮ್ಮತಿಸಿ ಮಾತನಾಡಿದ್ದೇಕೆ?" ಎಂದು ಕೇಳಿದರೆ, "ಯಾರದೇ ಆಗಲಿ, ಕನ್ನಡದ ಪುಸ್ತಕ ಓದಿದನಲ್ಲ, ಅದೇ ಸಂತೋಷ" ಎಂದು ನುಡಿದಿದ್ದರು.

ಬಿ.ವಿ. ಕಾರಂತ ಮತ್ತು ಶಿವರಾಮ ಕಾರಂತರನ್ನು ಪರಸ್ಪರ ತಪ್ಪಾಗಿ ಗ್ರಹಿಸಿದ ಪ್ರಸಂಗಗಳಿವೆ. "ನಿಮ್ಮ ಕಾದಂಬರಿಗಳನ್ನು ಓದಿದೆ ಸಾರ್" ಎಂದು ಬಿ.ವಿ. ಕಾರಂತರಿಗೂ, "ನಿಮ್ಮ 'ಹಯವದನ' ತುಂಬಾ ಚೆನ್ನಾಗಿದೆ ಸಾರ್" ಎಂದು ಶಿವರಾಮ ಕಾರಂತರಿಗೂ ಜನರು ಹೇಳಿದುದುಂಟು. ಶಿವರಾಮ ಕಾರಂತರು ಮನದಲ್ಲಿಯೇ 'ಹಯವದನನಂತೆ ಹಯವದನ. ನನ್ನ ಮುಖವೇನು ಕುದುರೆಯ ಮುಖದಂತೆ ಇದೆಯೆ?' ಎಂದುಕೊಂಡಿದ್ದರೂ ಆಚ್ಚರಿಯಿಲ್ಲ.

ಇಂತಹ ಬದಲುಗ್ರಹಿಕೆ ವಿಶ್ವವ್ಯಾಪಿಯಾದ ಗುಣ. ಹಾಲಿವುಡ್ಡಿನ ಖ್ಯಾತ ನಟರಾದ ಪೀಟರ್ ಸೆಲ್ಲರ್ಸ್ ಮತ್ತು ವುಡಿ ಆಲನ್ 'ಕೆಸಿನೋ ರಾಯೇಲ್' ಎಂಬ ಚಿತ್ರವೊಂದರಲ್ಲಿ ಅಭಿನಯಿಸಿದ್ದರು. ಯಾವುದೋ ಸನ್ನಿವೇಶದ ಬಗ್ಗೆ ಚರ್ಚಿಸಲೆಂದು ಪೀಟರ್ ಸೆಲ್ಲರ್ಸ್ ಸ್ಟುಡಿಯೋವೊಂದಕ್ಕೆ ಹೋದಾಗ ಸ್ಟುಡಿಯೋದವನು ಸೆಲ್ಲರ್ಸ್‌ರನ್ನು ಆಲನ್ ಎಂದು ಭ್ರಮಿಸಿ, "ಮಿಸ್ಟರ್ ಆಲನ್, ನೀವು ಬಂದದ್ದು ಬಹಳ ಸಂತೋಷ. ನಿಮ್ಮೊಡನೆ ನಟಿಸಿದ ಪೀಟರ್ ಸೆಲರ್ಸ್‌ನ ನಟನೆ ನನಗೆ ಏನೇನೂ ಹಿಡಿಸಲಿಲ್ಲ" ಎನ್ನುತ್ತಾ ಸೆಲ್ಲರ್ಸ್‌ರ ಅಭಿನಯದ ಬಗ್ಗೆ ಕಟುನುಡಿಗಳನ್ನು ಆಡತೊಡಗಿದನು. ಎಲ್ಲವನ್ನೂ ಕೇಳಿಸಿಕೊಂಡ ಸೆಲ್ಲರ್ಸ್, ಕಡೆಗೆ "ನಾನು ಆಲನ್ ಅಲ್ಲ, ಸೆಲ್ಲರ್ಸ್. ಗುಡ್ ಬೈ" ಎನ್ನುತ್ತಾ ಹೊರನಡೆದರು.

ಹಾಲಿವುಡ್ಡಿನದೇ ಮತ್ತೊಂದು ಪ್ರಸಂಗವು ಅಭಿಮಾನಿಗಳನ್ನು ಒಳಗೊಂಡಿದ್ದಾಗಿದೆ. ಚಹರೆಯಲ್ಲಿ ಒಂದಿಷ್ಟು ಹೋಲಿಕೆ ಇದ್ದ ಟಾಮ್ ಹ್ಯಾಂಕ್ಸ್ ಮತ್ತು ಬಿಲ್ ಮರ್ರೆ ಈರ್ವರನ್ನು ಅಭಿಮಾನಿಗಳು ತಪ್ಪಾಗಿ ಗ್ರಹಿಸುತ್ತಿದ್ದುದುಂಟು. ಟಾಮ್ ಹ್ಯಾಂಕ್ಸ್ "ನನ್ನನ್ನು ಮರ್ರೆ ಎಂದು ತಪ್ಪಾಗಿ ಗ್ರಹಿಸಿದ ಅಭಿಮಾನಿಗಳು ಮರ್ರೆಯ ಸ್ಮರಣಿಕೆಗಳ ಮೇಲೆ ನನ್ನ ಸಹಿಯನ್ನು ಕೋರಿದರು. ನಾನು ಅವುಗಳ ಮೇಲೆ ಬಿಲ್ ಮರ್ರೆ ಎಂದೇ ಸಹಿ ಹಾಕಿದೆ" ಎಂದು ನುಡಿದಿದ್ದರು.

ಇತ್ತೀಚಿನ ದಿನಗಳಲ್ಲಿ ನಮ್ಮಲ್ಲಿ ಅತಿ ಹೆಚ್ಚು ಗೊಂದಲ ಮೂಡಿಸಿದವರೆಂದರೆ ಗುಂಡೂರಾವ್‌ದ್ವಯರು. ವೈ.ವಿ. ಗುಂಡೂರಾವ್ ಅತ್ಯುತ್ತಮ ಮಾತುಗಾರರು. ಲೀಲಾಜಾಲವಾಗಿ ಮಾತನಾಡುವ ಅವರಿಗೆ ಸಿಗ್ನೇಚರ್ ಹಾಕಲೂ ಬರೆಹಾಲಸ್ಯ. ವೈ.ಎನ್. ಗುಂಡೂರಾವ್ ಉತ್ತಮ ಬರೆಹಗಾರರು. 'ಮಾತನಾಡಿ ಬನ್ನಿ ಸಾರ್' ಎಂದರೆ ನುಡಿವಿರಕ್ತಿ. ಇಂತಿರುವಾಗ ವೈ.ವಿ.ಗೆ "ನಿಮ್ಮ ಆರ್ಟಿಕಲ್ ಓದಿದೆ ಸಾರ್. ಸಖತ್ತಾಗಿ ಬರೀತೀರಿ ಸಾರ್" ಎಂಬ ಪ್ರಶಂಸೆಯೂ, ವೈ.ಎನ್.ಗೆ "ಯೂಟ್ಯೂಬಲ್ಲಿ ನಿಮ್ಮ ವಿಡಿಯೋ ನೋಡಿದೆ ಸಾರ್. ಏನ್ ಸೂಪರ್‌ರಾಗಿ ಮಾತಾಡ್ತೀರಾ ಸಾರ್! ಸಖತ್ ಹಾಸ್ಯ ನಿಮ್ಮದು" ಎಂಬ ಪ್ರಶಂಸೆಯೂ ಆಗಾಗ್ಗೆ ಸಂದಾಯ ಆಗುತ್ತಲೇ ಇರುತ್ತವೆ. "ನಾನವನಲ್ಲ" ಎಂದು ಹೇಳೀ ಹೇಳೀ ರೋಸಿರುವ ಇಬ್ಬರೂ 'ಬಂದದ್ದೆಲ್ಲ ಬರಲಿ, ಅಭಿಮಾನದ ಹೊನಲಿರಲಿ' ಎಂಬ ಭಾವದಿಂದ ಸ್ವೀಕರಿಸುತ್ತಾರೆ.

ಸಾರ್ವಜನಿಕರ ಮಧ್ಯೆ ಪದೇ ಪದೇ ಕಂಡುಬಂದರೂ ಜನಮನದಲ್ಲಿ ಚೆಹರೆಯು ಅಚ್ಚೊತ್ತದಿರುವುದು ಅಚ್ಚರಿಯ ಸಂಗತಿಯೇ. ವೈ.ವಿ. ಗುಂಡೂರಾವ್‌ರನ್ನು 'ನೀವು ಡುಂಡಿರಾಜ್ ಅಲ್ವಾ?' ಎಂದೂ, ಡುಂಡಿರಾಜರನ್ನು 'ನೀವು ಎಮ್ಮೆಸ್ನೆನ್ ಅಲ್ವಾ?' ಎಂದೂ, ಕೇಳಿದವರಿದ್ದಾರೆ. ನಾನಂತೂ ಜನರ ಕಣ್ಣಿಗೆ ಗಂಗಾವತಿ ಪ್ರಾಣೇಶ್, ನರಸಿಂಹಮೂರ್ತಿ, ಡುಂಡಿರಾಜ್ ಆಗಿ ಕಾಣಿಸಿಕೊಂಡಿದ್ದೇನೆ. ಡುಂಡಿಗೂ ನನಗೂ 'ಶಿರಸಾಮ್ಯ'ವಿದೆ. ಮಿಕ್ಕವರಿಗೂ ನನಗೂ ಯಾವುದೇ ಹೋಲಿಕೆ ಇಲ್ಲದಿದ್ದರೂ ಅದು ಹೇಗೆ ಅವರು ಹಾಗೆ ಗ್ರಹಿಸಿದರೆಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ಚೆಹರೆಯನ್ನು ತಪ್ಪಾಗಿ ಗ್ರಹಿಸುವುದು ಒಂದು ವಿಧವಾದರೆ ಹೆಸರನ್ನು ತಪ್ಪಾಗಿ ಗ್ರಹಿಸುವುದು ಮತ್ತೊಂದು ಪರಿ. ಎಷ್ಟೋ ಸಭೆಗಳಲ್ಲಿ ನಾನು 'ರಾಮಮೂರ್ತಿ' ಎಂದು ಪರಿಚಯಗೊಂಡಿದ್ದೇನೆ, 'ರಮಾನಾಥ'ನಾಗಿ ರಮೆಯೆಂಬ ಹೆಣ್ಣಿನ ಕೈ ಹಿಡಿದಿದ್ದೇನೆ, 'ರಮಾನಂದ' ಆಗಿ ಯಾರಿಗೋ ಆನಂದ ನೀಡಿದ್ದೇನೆ. ನನ್ನ ಇನಿಷಿಯಲ್ ಆದ ಎನ್ ನನ್ನ ತಂದೆಯವರಾದ ಎಸ್. ನರಸಿಂಹಮೂರ್ತಿಯವರನ್ನು ಸೂಚಿಸಿದರೆ, ಪರಿಚಯಕಾರರ ಪ್ರಕಾರ ನಾನು ಎಮ್ಮೆಸ್ನೆನ್‌ರ ಮಗನಾಗಿದ್ದೆ! ಇನಿಷಿಯಲ್ ಎನ್ ಅನ್ನೂ ಎಸ್ ಆಗಿಸಿ, ನಾನು ಎಷ್ಟೇ ಬಾರಿ 'ನೋ' ಎಂದರೂ, ಪರಿಚಯಕಾರರು 'ಎಸ್' ಎಂದೇ ಮುಂದುವರಿಸಿದ್ದಿದೆ.

ಸಭೆಯೊಂದರಲ್ಲಿ ನನ್ನನ್ನು 'ಅಣಕುಕಲೆಯಲ್ಲಿ ಪರಿಣತರಾದವರು' ಎಂದು ಪರಿಚಯಿಸಿದ್ದೇ ಅಲ್ಲದೆ, 'ಈಗ ಅಣಕುರಾಮನಾಥರಿಂದ ಮಿಮಿಕ್ರಿ! ಸಾರ್, ಸಿದ್ರಾಮಣ್ಣಂದೂ ಮಿಮಿಕ್ರಿ ಮಾಡ್ತೀರಾ ಸಾರ್?' ಎಂಬ ಉದ್ಘೋಷ!

"ನನ್ನದು ಮಿಮಿಕ್ರಿ ಅಲ್ಲ, ಅಣಕವಾಡು ಅಂದರೆ..."

ತಾಳ್ಮೆಗೂ, ಆ ಪರಿಚಯಕಾರನಿಗೂ ಬದ್ಧ ದ್ವೇಷ. ನನ್ನ ಮಾತನ್ನು ಅರ್ಧದಲ್ಲೇ ತುಂಡರಿಸಿದ ಅವನು, "ಗೊತ್ತಾಯ್ತು ಬಿಡಿ ಸಾರ್. ಮಾತಿನ ಬದಲು ಹಾಡ್ತೀರ. ಅಂಬರೀಷ್ 'ನಾವಾಡುವ ನುಡಿಯೆ' ಹಾಡಿದರೆ ಹೇಗಿರತ್ತೆ ಅಂತ ತೋರಿಸಿ ಸಾರ್" ಎಂದಿದ್ದ.

ಹಾಸ್ಯವಯಸ್ಯೆ ಭುವನೇಶ್ವರಿ ಹೆಗಡೆಯವರದು ಮತ್ತೊಂದು ವಿಧವಾದ ಪರಿಚಯಗ್ರಹಣ. ಅವರ ಪ್ರಬಂಧವೊಂದು ಬಿಬಿಎ ಮೊದಲ ಸೆಮಿಸ್ಟರ್‌ಗೆ ಪಠ್ಯವಾಗಿತ್ತು. ತತ್ಸಂಬಂಧವಾಗಿ ಪರೀಕ್ಷೆಯಲ್ಲಿ 'ನಾಲ್ಕು ಸಾಲುಗಳಲ್ಲಿ ಲೇಖಕಿಯ ಪರಿಚಯ ಬರೆಯಿರಿ' ಎಂಬ ನಾಲ್ಕು ಅಂಕಗಳ ಪ್ರಶ್ನೆಯಿದ್ದಿತು. ಅದಕ್ಕೆ ಬಂದ ಉತ್ತರಗಳು ಇಂತಿವೆ: "ಲೇಖಕಿಯು ಸುಮಾರು 13 ಶತಮಾನಗಳ ಕಾಲ ಅರ್ಥಶಾಸ್ತ್ರ ಬೋಧನೆ ಮಾಡಿದ್ದಾರೆ."

ಇನ್ನೊಬ್ಬರಿಗೆ ಹದಿಮೂರು ಶತಮಾನಗಳು ಮನುಷ್ಯರು ಇರಲಾರರೆಂಬ ಶಂಕೆ ಮೂಡಿದ್ದರಿಂದ, "ಲೇಖಕಿಯು 3 ಶತಮಾನಗಳ ಕಾಲ ಬೋಧನೆ ಮಾಡಿದ್ದಾರೆ" ಎಂದು ಬರೆದರೆ, ಮತ್ತೊಬ್ಬರಿಗೆ ಕೇವಲ ಶತಮಾನಗಳು ಚಿಲ್ಲರೆ ಸಮಯವೆನಿಸಿರಬೇಕು. ಅವರು "ಶ್ರೀಮತಿ ಭುವನೇಶ್ವರಿ ಹೆಗಡೆಯವರು 3 ದಶಕ ಶತಮಾನ ಸಾಹಿತ್ಯ ರಚಿಸಿದ್ದಾರೆ" ಎಂದಿದ್ದಾರೆ. ಅಲ್ಲದೆ ಭುವನೇಶ್ವರಿ ಹೆಗಡೆಯವರಿಗೆ ವಿದ್ಯಾರ್ಥಿಗಳ ಪ್ರಕಾರ ಕರ್ನಾಟಕ ರತ್ನ ಪ್ರಶಸ್ತಿ, ಜ್ಞಾನಪೀಠ ಹಾಗೂ ಪದ್ಮಭೂಷಣಗಳು ಲಭಿಸಿವೆ. ಲೇಖಕಿಯ ಜನನವು ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಆಗಿದೆ!

ಇಂದುಶ್ರೀಯೊಡನೆ ನಾನು ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಡಿಂಕು ಗೊಂಬೆಯೊಡನೆ ಇಂದು ಪ್ರದರ್ಶಿಸುವ ವೆಂಟ್ರಿಲಾಕ್ವಿಸಮ್ ಕಲೆಯನ್ನು 'ವೆಂಟ್ರಾಲಿಸಮ್', 'ವೆಂಟ್ರಿಕುಲಿಸಮ್', 'ವೆಂಟಲಿಸಮ್' ಎಂದವರಿದ್ದಾರೆ. 'ಎಂಟರ್‌ಟೈನ್‌ಮೆಂಟ್ ಕೇ ಲಿಯೇ ಕುಛ್ ಭೀ ಕರೇಗಾ'ದ ಫರಾ ಖಾನ್ ಅದನ್ನು 'ವೆಂಟ್ರಿಲೋಲೋಲೋಕ್ವಿಸಮ್' ಎಂದು ನುಡಿದು ಅದನ್ನು ಬಹಳ ಲೋ ಲೆವೆಲ್‌ಗೆ ಇಳಿಸಿದ್ದರು. ಇಂದುವಿನೊಡನೆ ನನ್ನನ್ನು ಕಂಡಿದ್ದ ಒಬ್ಬರು ನನ್ನತ್ತಲೇ ಪರೀಕ್ಷಾದೃಷ್ಟಿಯಿಂದ ನೋಡುತ್ತಿದ್ದರು. ಕುತೂಹಲವು ಕುದಿಮಟ್ಟವನ್ನು ತಲುಪಿದಾಗ ಬಳಿಸಾರಿ,

"ನೀವು... ನೀವೂ..." ಎನ್ನಲಾರಂಭಿಸಿದರು.

ಬರೆವಣಿಗೆಯಿಂದಲೇ ಖ್ಯಾತನಾಗಿರಬಹುದೆಂದೆಣಿಸಿ ನಾನು ನನ್ನ ಪ್ರವರವನ್ನು ಬಿಚ್ಚುವುದಕ್ಕೆ ಮುಂಚೆಯೇ ಅವರಿಗೆ ನನ್ನ ಗುರುತು ಹತ್ತಿಬಿಟ್ಟಿತು, ಕೇಳಿಯೇಬಿಟ್ಟರು,

"ನೀವು ಡಿಂಕು ಅಲ್ವಾ?"

ಬಲೂಚಿಸ್ತಾನ; ಇದು ಕತೆಯಲ್ಲ, ವ್ಯಥೆ

▶ ಗುರುಪ್ರಸಾದ್ ಭಟ್ ಉಡುಪಿ

ಧುರಂಧರ್ 2 ಸಿನಿಮಾದಲ್ಲಿ ಎಸ್.ಪಿ. ಅಸ್ಲಮ್ 'ಏ ಬಲೂಚ್' ಎಂದು ಬಲೂಚಿಗಳನ್ನು ತಾತ್ಸಾರದಿಂದ ಅವಮಾನಿಸುವುದನ್ನೂ, ಐದು ಅಮಾಯಕ ಬಲೂಚಿ ವಿದ್ಯಾರ್ಥಿಗಳನ್ನು ಎಳೆದು ತಂದು ಅವರ ಎನ್‌ಕೌಂಟರ್ ಮಾಡುವ ದೃಶ್ಯವನ್ನೂ ಕಂಡು ಹೌಹಾರಿದ್ದೇವೆ. ಕಳೆದ ಐದಾರು ದಶಕಗಳಲ್ಲಿ ಬಲೂಚಿಗಳ ಮೇಲೆ ಪಾಕಿಸ್ತಾನದ ಪಠಾಣರು ಮತ್ತು ಪಂಜಾಬಿ ಸುನ್ನಿ ಮುಸ್ಲಿಮರು ನಡೆಸಿದ ದೌರ್ಜನ್ಯಕ್ಕೆ ಹೋಲಿಸಿದರೆ, ಧುರಂಧರ್ 2 ಸಿನಿಮಾದಲ್ಲಿ ತೋರಿಸಿದ್ದು ಕೇವಲ ಒಂದು ಸ್ಯಾಂಪಲ್. ಈ ಬಲೂಚಿಗಳು ಯಾರು? ಅವರ ಇತಿಹಾಸವೇನು?

ಮಹಾಭಾರತದ ಸಮಯದಲ್ಲಿ ಭದ್ರಗಣ ಕ್ಷತ್ರಿಯರು ವಾಸಿಸುತ್ತಿದ್ದ ಪ್ರಾಂತವನ್ನು 'ಪಾರದರಾಜ' (ಪಾರದ) ಎಂದೂ ಕರೆಯುತ್ತಿದ್ದರು ಮತ್ತು ಅದು ಗಾಂಧಾರದ ಅಧೀನವಾಗಿತ್ತು. ಸ್ವಾಭಾವಿಕವಾಗಿ ಅವರೆಲ್ಲರೂ ಕೌರವರ ಕೈಜೋಡಿಸಿ ಕೆಟ್ಟರು. ಯುಧಿಷ್ಠಿರನ ಅಶ್ವಮೇಧ ಯಜ್ಞಕ್ಕಾಗಿ ಈ ಎಲ್ಲ ಪ್ರಾಂತಗಳನ್ನು ಅರ್ಜುನನು ಗೆದ್ದುಕೊಂಡನು.

'ಬಲೂಚ್' ಒಂದು ಸಂಸ್ಕೃತ ಶಬ್ದ 'ಬಲ+ಉಚ್ಚ', ಅಂದರೆ 'ಉಚ್ಚವರ್ಗೀಯ ಬಲವಂತ ಕ್ಷತ್ರಿಯರು' ಎಂದರ್ಥ. ಕ್ರಮೇಣ ಆಡುಭಾಷೆಯಲ್ಲಿ ಅದು 'ಬಲೂಚ್' ಎಂದಾಯಿತು. ಕೆಲವೊಂದು ವೇದಕಾಲದ ಗ್ರಂಥದಲ್ಲಿ ಈ ಕ್ಷೇತ್ರವನ್ನು 'ಬಲಾಕ್ಷ' ಎಂದೂ ಕರೆಯಲಾಗಿದೆ. ಬಲೂಚಿಸ್ತಾನವನ್ನು ಸಾವಿರಾರು ವರ್ಷಗಳಿಂದ ಉತ್ತಮ ಕ್ಷತ್ರಿಯ ಕುಲದ ಬಲಾಢ್ಯರ ನಾಡೆಂದೇ ಗುರುತಿಸಲಾಗುತ್ತಿತ್ತು. ಏಳನೆಯ ಶತಮಾನದಲ್ಲಿ ಚೀನಾದ ಪ್ರವಾಸಿಗ ಹುಯೆನ್‌ತ್ಸಾಂಗ್ ಕೂಡ ಇದರ ರಾಜಧಾನಿ 'ಶಂಭುರೀಶ್ವರ' ಎಂದೂ ಗುರುತಿಸಿ, ಇಲ್ಲೊಂದು ಬೃಹಸ್ಪತಿವನ ಮಂದಿರವಿತ್ತೆಂದು ಬರೆದಿದ್ದಾನೆ. ಗಾಂಧಾರವು ಇಸ್ಲಾಂ ದಾಳಿಗೆ ತತ್ತರಿಸಿ ಪತನವಾದ ನಂತರ, ಬಲೂಚ್ ಕೂಡ ಭಯೋತ್ಪಾದನೆಗೆ ತುತ್ತಾಗಿ ಸನಾತನ ಧರ್ಮ ನಶಿಸಿತು. ಇಸ್ಲಾಮಿಕ್ ಆಳ್ವಿಕೆ ಬಂದಿತು.

ಬಲೂಚ್ ಮತ್ತು ಮರಾಠರು

ಮೂರನೇ ಪಾಣಿಪತ್ ಯುದ್ಧದಲ್ಲಿ ಸೋತ ನಂತರ ಸುಮಾರು 30-50 ಸಾವಿರ ಮರಾಠಾ ಸೈನಿಕರನ್ನು ಮತ್ತವರ ಬಂಧು-ಬಾಂಧವರನ್ನು ಅಬ್ದಾಲಿ ಗುಲಾಮರನ್ನಾಗಿ ಸೆರೆಹಿಡಿದು 1500 ಕಿ.ಮೀ ದೂರದ ಬಲೂಚಿಸ್ತಾನ ಮೂಲಕ ಕಾಬೂಲಿಗೆ ಕೊಂಡೊಯ್ಯಲು ಪ್ರಯಾಣ ಬೆಳೆಸಿದ. ಸಾವಿರಾರು ಮರಾಠರು ಸರಿಯಾದ ಆಹಾರವಿಲ್ಲದೆ ಕಾಲ್ನಡಿಗೆಯಿಂದ ಬವಳಿ ಮಾರ್ಗದಲ್ಲಿಯೇ ಅಸುನೀಗಿದರು. ಅನೇಕ ಮರಾಠ ಸೈನಿಕರು ಹರ್ಯಾಣದ ಸುತ್ತುಮುತ್ತಲಿನ ಅರಣ್ಯಗಳಲ್ಲಿ ತಪ್ಪಿಸಿಕೊಂಡು ತಮ್ಮ ಜೀವ ರಕ್ಷಿಸಿಕೊಂಡರು. ಇಂದು ಕರ್ನಾಲ್, ರೊಹಟಕ್, ಭಿವಾನಿ ಪ್ರದೇಶದಲ್ಲಿ ಏಳರಿಂದ ಹತ್ತು ಲಕ್ಷ ಜನಸಂಖ್ಯೆಯಿರುವ ಅವರನ್ನು ರೋಡ ಅಥವಾ ರೋರ್ಮರಾಠರೆಂದು ಕರೆಯುತ್ತಾರೆ. ಅಳಿದುಳಿದ 25 ಸಾವಿರ ಮರಾಠರನ್ನು ಅಬ್ದಾಲಿ ಬಲೂಚಿಸ್ತಾನದ ದೇರಾ-ಬುಗ್ತಿ ಸುಲ್ತಾನ ಮೀರ್ನಾಸೀರ್ಖಾನನಿಗೆ ಸೈನಿಕ ಬೆಂಬಲ ನೀಡಿದ್ದಕ್ಕಾಗಿ ಉಡುಗೊರೆಯಾಗಿ ನೀಡಿದನು. ಈ ಮರಾಠರು ಮುಸ್ಲಿಮರಾಗಿ ಮತಾಂತರಗೊಂಡಿದ್ದರೂ ಇಂದಿಗೂ ತಮ್ಮತನವನ್ನು ಕಿಂಚಿತ್ ಕಾಪಾಡಿಕೊಂಡಿದ್ದಾರೆ. ತಾವೆಲ್ಲರೂ ಛತ್ರಪತಿ ಶಾಹು ಮಹಾರಾಜರ ವಂಶಜರೆಂದು ಹೆಮ್ಮೆಪಡುತ್ತಾರೆ. ಇಂದಿಗೂ ಬುಗ್ತಿ-ಮರಾಠರು ಬಲೂಚಿಸ್ತಾನದಲ್ಲಿ ಗಣೇಶೋತ್ಸವವನ್ನು ವೈಭವದಿಂದ ಆಚರಿಸಿಕೊಂಡು ಬಂದಿದ್ದಾರೆ. ಬುಗ್ತಿಗಳಲ್ಲಿ 'ಶಾಹು' ಎಂಬುದೊಂದು ಪ್ರತ್ಯೇಕ ಉಪಜಾತಿ.

ಸ್ವಾತಂತ್ರ್ಯ ಸಂಗ್ರಾಮ

ಬಲೂಚಿಗಳು ಮೀರ್ ಅಹ್ಮದ್ ಖಾನ್‌ಯಾರ ನೇತೃತ್ವದಲ್ಲಿ ತಮ್ಮದು ಸಂಪೂರ್ಣ ಸ್ವತಂತ್ರದೇಶವೆಂದು ಘೋಷಿಸಿಕೊಂಡರು. ಅವರ ಪರಿಕಲ್ಪನೆಯಲ್ಲಿ ಕಲಾತ್‌ರಾಜ್ಯ (ಬಲೂಚ್) ಹಾಗೂ ಸುತ್ತುಮುತ್ತಲಿನ ಖರನ್, ಲಾಸ್ಬೇಲ ಇತ್ಯಾದಿ ಪ್ರದೇಶಗಳನ್ನು ಒಳಗೊಂಡಿತ್ತು. ಬಲೂಚಿಸ್ತಾನದ ಸ್ವಾತಂತ್ರ್ಯ 226 ದಿನವಷ್ಟೇ ಬಾಳಿತು. ಅದರ ನಂತರ, ಬಲೂಚ್ ನಾಯಕ ಮೀರ್ ಯಾರ್‌ಖಾನನು ಜಿನ್ನಾನನ್ನು ತನ್ನ ದೇಶದ ಕಾನೂನು ಸಲಹೆಗಾರನನ್ನಾಗಿ ನಿಯುಕ್ತಿಮಾಡಿ ಕೆಟ್ಟನು. ಅದು ಕುರಿ ಹಿಂಡನ್ನು ಕಾಯಲು ತೋಳನಿಗೆ ಹೇಳಿದಂತಾಯಿತು. ಮೂಲತಃ ಜಿಹಾದಿ ಜಿನ್ನಾ ಎಂದಾದರೂ ಬಲೂಚಿಗಳ ಶುಭ ಕೋರಿಯಾನೇ? ಮಾರ್ಚ್ 26, 1948 ಪಾಕಿಸ್ತಾನಿ ಪಂಜಾಬಿ ಸುನ್ನಿ ಮತ್ತು ಪಠಾಣ ಮುಸ್ಲಿಂ ಸೈನ್ಯವು ಬಲೂಚಿಸ್ತಾನದಲ್ಲಿ ಸೈನ್ಯಕಾರ್ಯಚರಣೆ ನಡೆಸಿ, ಮಾರಣಹೋಮ ನಡೆಸಿತು. ಕಂಡವರನ್ನೆಲ್ಲ ಕೊಚ್ಚಿ ಹಾಕಲಾಯಿತು. ಅಳಿದವರೆಷ್ಟು, ಅಳಿಸಿಹೋದವರೆಷ್ಟು, ಉಳಿದವರೆಷ್ಟು ಎಂಬುದನ್ನು ಮೋಜಿನಲ್ಲಿದ್ದ ಜಿನ್ನಾ ಅಂತೂ ಲೆಕ್ಕವಿಡಲಿಲ್ಲ. ಬಂದೂಕಿಗೆ ಹೆದರಿ ಕಲಾತ್ ಪಾಕಿಸ್ತಾನದಲ್ಲಿ ತನ್ನ ಸ್ವತಂತ್ರದೇಶವನ್ನು ವಿಲೀನಗೊಳಿಸಲು ಸೇರ್ಪಡೆಯ ಒಪ್ಪಂದಕ್ಕೆ ಸಹಿಹಾಕಿದ. ಬಲೂಚಿಗಳ ಸಂಕಷ್ಟ ಎಣ್ಣೆಯ ಬಾಣಲಿಯಿಂದ ನೇರವಾಗಿ ಬೆಂಕಿಗೆ ಧುಮುಕಿದಂತಾಯಿತು.



ಕೈಬಿಟ್ಟ ನೆಹರೂ

ಮೀರ್ ಯಾರ್‌ಖಾನ್ ಕೊನೆ ಗಳಿಗೆಯಲ್ಲಿ ಒಂದು ದಾಳವನ್ನೆಸೆದ- ತಾನು ಬಲೂಚಿಸ್ತಾನವನ್ನು ಭಾರತ ದೇಶದೊಳಗೆ ವಿಲೀನಗೊಳಿಸಿದ್ದೇನೆ, ಪಾಕಿಸ್ತಾನದೊಳಗಲ್ಲ ಎಂದೂ ಹೇಳಿದ. ಆದರೆ, ನೆಹರೂ ಒಪ್ಪಿಕೊಳ್ಳಲಿಲ್ಲ. ಬಹುಶಃ ಪ್ರಿಯತಮೆ ಎಡ್ವಿನಾ ಬೇಡ ಎಂದಿರಬೇಕು. ಸರ್ದಾರ್ ವಲ್ಲಭಭಾಯ್ ಪಟೇಲ್ ಅಥವಾ ಮಂತ್ರಿಮಂಡಲದಲ್ಲಿ ಚರ್ಚಿಸದೇ ನನಗೆ ಬೇಡ ಎಂದುಬಿಟ್ಟರು. ಅದೇ ದಿನ ಸಂಜೆ ಭಾರತದ ರಾಜ್ಯ ಮಂತ್ರಾಲಯದ ಕಾರ್ಯದರ್ಶಿ ವಿ.ಪಿ. ಮೆನನ್ ಅವರು ಆಲ್ ಇಂಡಿಯಾ ರೇಡಿಯೋ ರೇಡಿಯೋ ಸಂದೇಶದಲ್ಲಿ ಬಲೂಚಿಸ್ತಾನದ ಖಾನ್ ಭಾರತದಲ್ಲಿ ತನ್ನ ದೇಶವನ್ನು ವಿಲೀನಗೊಳಿಸಬೇಕೆಂದು ನಿವೇದಿಸುತ್ತಿದ್ದಾನೆ. ಆದರೆ, ಪ್ರಧಾನಮಂತ್ರಿ ನೆಹರೂ ಅವರಿಗೆ ಇದರಲ್ಲಿ ಕಿಂಚಿತ್ತೂ ಅಭಿರುಚಿಯಿಲ್ಲ. ಬಲೂಚಿಸ್ತಾನ ಭಾರತದಲ್ಲಿ ಸೇರುವುದು ಬೇಡ. ಅವರ ಹಣೆಬರಹ ಅವರಿಗೆ ಎಂದುಬಿಟ್ಟರು! ಬಲೂಚಿಸ್ತಾನದ ಬೆನ್ನಿಗೆ ಬ್ರಿಟಿಷರು ಮೊದಲು ಚೂರಿ ಇರಿದರೆ, ನೆಹರೂ ಚುಚ್ಚಿದ್ದು ಎರಡನೆಯದು. ಅಲ್ಲಿಗೆ ಬಲೂಚಿಸ್ತಾನವನ್ನು ರಕ್ಷಿಸುವವರು, ಸಮರ್ಥಿಸುವವರು ಒಬ್ಬರೂ ಉಳಿಯಲಿಲ್ಲ. ಬಲೂಚ್ ಸುಲಭವಾಗಿ ಪಾಕಿಸ್ತಾನದ ವಶವಾಯಿತು. ಕಳೆದ 76 ವರ್ಷಗಳಲ್ಲಿ ಬಲೂಚಿಸ್ತಾನವು ಪುನಃ ಸ್ವಾತಂತ್ರ್ಯ ಪಡೆಯಲು ಹೋರಾಟ ಮಾಡುತ್ತಿದೆ. ಲಕ್ಷಾನುಗಟ್ಟಲೆ ಯುವಕ-ಯುವತಿಯರು ಬಲಿದಾನ ನೀಡಿದ್ದಾರೆ. ಅಕ್ಷರಶಃ ಜನರನ್ನು ರೇಗಿಸ್ತಾನದಲ್ಲಿ ಓಡಲು ಬಿಟ್ಟು, ಬೇಟೆನಾಯಿಗಳನ್ನು ಛೂಬಿಟ್ಟು, ಅವರನ್ನು ಬೆನ್ನಟ್ಟಿಕೊಂಡು ಹೊಡೆಯುವ ಮನೋರಂಜನಾ ಕ್ರೀಡೆ ಪಾಕಿಸ್ತಾನದ ಸುನ್ನಿ ಮುಸ್ಲಿಂ ಪಂಜಾಬಿ ಸೈನಿಕರ ಬಂದೂಕಿಗೆ ಶಿಕಾರಿಯಾಗಿದ್ದಾರೆ. 1947ರಲ್ಲಿ ಭಾರತಕ್ಕೆ ಸೇರುವ ಅವರ ನಿವೇದನೆಯನ್ನು ನೆಹರು ತಿರಸ್ಕರಿಸದಿದ್ದರೆ, ಬಹುಶಃ ಬಲೂಚಿಸ್ತಾನ ಇಂದು ಭಾರತಕ್ಕೆ ಸೇರಿದ ರಾಜ್ಯವಾಗಿರುತ್ತಿತ್ತು. ಇಂದಿಗೂ ಮರಾಠರು ಬಲೂಚಿಸ್ತಾನದ ಸ್ವಾತಂತ್ರ್ಯ ಸಮರದ ಮುಂಚೂಣಿಯಲ್ಲಿ ನಿಂತಿದ್ದು, ಅಪಾರ ಸಾವುನೋವಿನ ಹೊರತಾಗಿಯೂ ನಿರಂತರವಾಗಿ ಹೋರಾಡುತ್ತಿದ್ದಾರೆ. ಪಾಕಿಸ್ತಾನದ ಸೈನ್ಯಕ್ಕೆ ತೀವ್ರ ಪ್ರತಿರೋಧವನ್ನು ನೀಡುತ್ತಲೇ ಬಂದಿದ್ದು, ಅವರಿಗೆ ತಲೆನೋವಾಗಿದ್ದಾರೆ.

ಎರಡೂವರೆ ಶತಮಾನಗಳ ಹಿಂದೆ ಬಲವಂತದಿಂದ ಮುಸ್ಲಿಮರಾಗಬೇಕಾದರೂ ಮರಾಠರು ತಮ್ಮ ಧರ್ಮದ ಕೆಲವೊಂದು ಪ್ರಮುಖ ಕುರುಹುಗಳನ್ನು ಆಚರಣೆಯ ಮೂಲಕ ಕಾಯ್ದುಕೊಂಡಿದ್ದಾರೆ. ಅವರು ಈಗಲೂ ಮದುವೆಯ ಸಮಯದಲ್ಲಿ ವಧುವರರಿಗೆ ಅರಸಿನ ಅಭ್ಯಂಜನದ ರಿವಾಜು, ಸೆರಗು-ಶಲ್ಯಕ್ಕೆ ಗಂಟುಹಾಕುವುದು, ಮಾಂಗಲ್ಯ ತೊಡಿಸುವುದು, ಸಪ್ತಪದಿ, ನೂತನ ವಧು ಗೃಹಪ್ರವೇಶಿಸುವ ಮುನ್ನ ಹೊಸ್ತಿಲ ಮೇಲೆ ಅಕ್ಕಿಯ ಸೇರನ್ನಿಟ್ಟು ಅದನ್ನು ಬಲಗಾಲಿನಿಂದ ಮೆತ್ತನೆ ಒಳಗೆ ನೂಕಿ ಪ್ರವೇಶಿಸುವುದು ಇತ್ಯಾದಿ ಮರಾಠ ಪದ್ಧತಿಗಳನ್ನು ನಿಯಮಿತವಾಗಿ ಆಚರಿಸುವ ಮೂಲಕ ಕಾಪಾಡಿಕೊಂಡಿದ್ದಾರೆ. ಶಾಹು-ಬುಗ್ತಿ ಮರಾಠರು ತಮ್ಮ ತಾಯಿಯನ್ನು 'ಆಯಿ' ಎಂದೇ ಕರೆಯುತ್ತಾರೆ. ಗೋದಿ, ಗೋದಾ, ಕೋಮಲ್, ಕಮ್ಲಾ, ಜೀಜಾ, ಸಯೀ ಇತ್ಯಾದಿ ಹೆಣ್ಣುಮಕ್ಕಳ ಹೆಸರುಗಳು ಮರಾಠ ಸೊಗಡನ್ನು ಬೀರುತ್ತವೆ. ಬಲೂಚಿಸ್ತಾನದ ಭಾಷೆಯಲ್ಲಿಯೂ ಮರಾಠಿ ಭಾಷೆಯ ಪ್ರಭಾವ ಸಾಕಷ್ಟಿದೆ.

ಬಲೂಚಿಸ್ತಾನದ ಸ್ವಾತಂತ್ರ್ಯಹೋರಾಟದಲ್ಲಿ ಅಗ್ರೇಸರರಾಗಿರುವ ಬುಗ್ತಿ ವಂಶಜರು ಕಟ್ಟಿದ 'ದಿ ಮರ್ಹಟ್ಟಕ್ವಾಮೀ ಇತ್ತೇಹಾದ್ ಪಾಕಿಸ್ತಾನ' ಎಂಬ ಸಂಸ್ಥೆಯು ಅಲ್ಲಿಯ ಅಧಿಕೃತ ಸೈನ್ಯವನ್ನೇ ಸೋಲಿಸುವಷ್ಟು ಬಲಶಾಲಿಗಳಾಗಿ ಸಶಸ್ತ್ರ ಪ್ರತಿರೋಧವನ್ನು ನೀಡುತ್ತಿದೆ. ಇಲ್ಲಿ 'ಮರ್ಹಟ್ಟ' ಅಂದರೆ 'ಮರಾಠಾ' ಎಂದರ್ಥ. ಬುಗ್ತಿ-ಮರಾಠ ಬುಡಕಟ್ಟು ಜನರು ತಮ್ಮ ಕ್ಷತ್ರಿಯ ಮೂಲ ಮತ್ತು ಇತಿಹಾಸವನ್ನು ಮರೆತಿಲ್ಲ. ನೂರಾರು ವರ್ಷಗಳಿಂದಲೂ ತಮ್ಮ ಪಾರಂಪರಿಕ ಸಂಸ್ಕೃತಿ ಮತ್ತು ಹಬ್ಬಹರಿದಿನಗಳ ಆಚರಣೆಯನ್ನು ಮರೆತಿಲ್ಲ. ಬುಗ್ತಿ-ಮರಾಠ ಮೂಲದ ಜನರು ಸೈನ್ಯ, ಶಿಕ್ಷಣ, ರಾಜಕೀಯ, ಕೃಷಿ ಕ್ಷೇತ್ರಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಅನೇಕ ಮರಾಠಿ ಶಬ್ದಗಳು, ಹೆಸರುಗಳು ಬಲೂಚಿಸ್ತಾನದ ಬುಗ್ತಿಯವರ ಭಾಷೆಯಲ್ಲಿ ಸಾಮರಸ್ಯದಿಂದ ವಿಲೀನಗೊಂಡಿವೆ.

ಇಂದಿಗೂ ಅವರು ಅನುಸರಿಸುತ್ತಿರುವುದು ಶಿವಾಜಿ ಮಹಾರಾಜರ 'ಗಣೀಮಿಕಾವ' ಅಂದರೆ ಹೊಂಚುಹಾಕಿ ಕಾಯ್ದುಕೊಂಡಿದ್ದು ಹಠಾತ್ ಆಗಿ ದಾಳಿಮಾಡಿ ವೈರಿಯನ್ನು ಚಕಿತಗೊಳಿಸುವ ಗೆರಿಲ್ಲಾ ಯುದ್ಧನೀತಿ. ಬಲೂಚಿಸ್ತಾನದಲ್ಲಿ ಮೂರು ಲಕ್ಷ ಬಲಾಢ್ಯ ಬುಗ್ತಿ ಮತ್ತು ಮರ್ಹಟ್ಟ ಸ್ವಾತಂತ್ರ್ಯ ಹೋರಾಟಗಾರರಿಗೆ ಆದಷ್ಟು ಬೇಗನೆ ಪಾಕಿಸ್ತಾನದಿಂದ ವಿಮೋಚನೆಯಾಗಲಿ ಎಂಬುದೇ ಭಾರತೀಯರ ಆಶಯ.

ಮೌಲ್ಯ ತುಂಬುವ ಕಾರ್ಯಕರ್ತ

ಪತ್ರ ಮಿತ್ರ

ಹೊಸದಿಗಂತದಲ್ಲಿ ಎಪ್ರಿಲ್ 3ರಂದು ಪ್ರಕಟವಾದ 'ಕಾರ್ಯಕರ್ತ? ಆತ ಬಂಗಾಳದಲ್ಲಿದ್ದಾನೆ!' ಲೇಖನವು ಕೇವಲ ರಾಜಕೀಯ ವಿಶ್ಲೇಷಣೆಯಲ್ಲ, ಬದಲಾಗಿ ಕಾರ್ಯಕರ್ತ ಎಂಬ ಪರಿಕಲ್ಪನೆಯ ಮರುಶೋಧನೆಯಂತಿದೆ. ಇಂದಿನ ರಾಜಕಾರಣದಲ್ಲಿ ಕಾರ್ಯಕರ್ತ ಎಂದರೆ ಕೇವಲ ಬಾವುಟ ಹಿಡಿಯುವವನು ಅಥವಾ ಸೌಲಭ್ಯಗಳನ್ನು ಆಶಿಸುವವನು ಎಂಬ ಸಾರ್ವತ್ರಿಕ ಲಕ್ಷಣಗಳ ನಡುವೆ, ಬಂಗಾಳದ ನೆಲದ ವಾಸ್ತವವನ್ನು ಬಳಸಿಕೊಂಡು ನೈಜ ಕಾರ್ಯಕರ್ತನ ವ್ಯಾಖ್ಯಾನವನ್ನು ಕಟ್ಟಿಕೊಡಲಾಗಿದೆ. ದೀನದಯಾಳ್ ಉಪಾಧ್ಯಾಯ ಮತ್ತು ಶ್ಯಾಮಪ್ರಸಾದ್ ಮುಖರ್ಜಿಯವರ ಆದರ್ಶಗಳನ್ನು ಪ್ರಸ್ತಾಪಿಸುವ ಮೂಲಕ ಲೇಖನವು ಬಲವಾದ ಸೈದ್ಧಾಂತಿಕ ಚೌಕಟ್ಟನ್ನು ಹೊಂದಿದೆ.

ಐಪಿಎಲ್ ಟಿಕೆಟ್ ಕೇಳುವ ಅಥವಾ ಅಧಿಕಾರಕ್ಕಾಗಿ ಬೆನ್ನುಬೀಳುವ ಇಂದಿನ ಕಾಲದ ಪುಡಾರಿ ಸಂಸ್ಕೃತಿಯನ್ನು ಪ್ರಶ್ನಿಸುವ ಮೂಲಕ ಲೇಖನವು ನೈತಿಕ ಎಚ್ಚರಿಕೆಯನ್ನು ನೀಡುತ್ತದೆ. ಪ್ರಾಣದ ಭಯದ ನಡುವೆಯೂ ಬಂಗಾಳದ ಕಾರ್ಯಕರ್ತ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ 20 ಗಂಟೆ ಪ್ರಯಾಣಿಸಿ ನಾಯಕನನ್ನು ನೋಡಲು ಬರುವ ಚಿತ್ರಣ ಓದುಗರ ಕಣ್ಣಾಲಿಗಳನ್ನು ತೇವಗೊಳಿಸುವಂತಿದೆ.

ಈ ಲೇಖನವು ರಾಜಕೀಯ ಪಕ್ಷದ ಕಾರ್ಯಕರ್ತರಿಗೆ ಮಾತ್ರವಲ್ಲದೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಂಬುವ ಪ್ರತಿಯೊಬ್ಬರಿಗೂ ತಲುಪಬೇಕಾದ ಬರಹವಾಗಿದೆ. ಇದು ರಾಜಕೀಯ ಅಂಧಾಭಿಮಾನಕ್ಕಿಂತ ಹೆಚ್ಚಾಗಿ ನೆಲದ ಸತ್ಯ ಮತ್ತು ಸಿದ್ಧಾಂತದ ಬದ್ಧತೆಯನ್ನು ಎತ್ತಿ ಹಿಡಿಯುತ್ತದೆ.

-ಶ್ರೀನಿವಾಸ್ ಹಳಗತ್ತಿ, ಮುಧೋಳ

ಝೂಂಬಿ ಡ್ರಗ್ : ಇದು ಹೊಸ ಕಾಲದ ಹೊಸ ಭೀತಿ

ಇತ್ತೀಚೆಗೆ ಚಂಡೀಗಢದ ವಸತಿ ಪ್ರದೇಶವೊಂದರಲ್ಲಿ ಬೆನ್ನಿನ ಮೇಲೆ ಡೆಲಿವರಿ ಬ್ಯಾಗನ್ನು ಹೊತ್ತ ಬ್ಲಿಂಕಿಟ್ ಡೆಲಿವರಿ ಬಾಯ್ ಒಬ್ಬ ಸುಮಾರು 2 ಗಂಟೆಗಳ ಕಾಲ ರಸ್ತೆಯಲ್ಲಿ ಯಾವುದೇ ಚಲನೆಯಿಲ್ಲದೆ, ತನ್ನ ಸುತ್ತಲ ಪರಿಸರದ ಬಗ್ಗೆ ಅರಿವಿಲ್ಲದೆ ಅರೆಪ್ರಜ್ಞಾವಸ್ಥೆಯ ಸ್ಥಿತಿಯಲ್ಲಿ ನಿಂತಿರುವ ವಿಚಿತ್ರ ಘಟನೆಯ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿರುವುದನ್ನು ಗಮನಿಸಿದ್ದೇವೆ. ಈ ವೀಡಿಯೋದಲ್ಲಿ ಅವನ ಬಾಯಿಯಲ್ಲಿ ಬೀಡಿಯಿರುವುದು, ಕಣ್ಣುಗಳು ನೆಟ್ಟಗಿರುವುದನ್ನು ಗಮನಿಸಬಹುದಾಗಿದೆ. ಇದು ಬಹುಶಃ ಡ್ರಗ್ ಸೇವನೆಯ ಪರಿಣಾಮವಾಗಿದ್ದು, ಅಮೆರಿಕಾದಲ್ಲಿ ಕುಖ್ಯಾತಿ ಪಡೆದಿರುವ ಝೂಂಬಿ ಡ್ರಗ್ ಭಾರತಕ್ಕೂ ಬಂದಿದೆಯಾ ಎಂದು ಆತಂಕವನ್ನೂ ಸೃಷ್ಟಿಸಿದೆ. ಇದು ಹೌದಾದಲ್ಲಿ, ರಸ್ತೆಯ ಮಧ್ಯೆ ಅಸ್ಥಿರವಾಗಿ ನಡೆಯುತ್ತಿರುವ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲು ಅಸಮರ್ಥನಾಗಿರುವ ಆ ಯುವಕನ ವರ್ತನೆ ಭೀತಿ ಹುಟ್ಟಿಸುವುದು ಸಹಜ.

ಏನಿದು ಝೂಂಬಿ ಡ್ರಗ್? ಪ್ರಾಣಿಗಳಿಗೆ ಬಳಸುವ ಕ್ಸೈಲಜಿನ್ ಎಂಬ ಟ್ರ್ಯಾಂಕ್ವಿಲೈಜರ್ ಅನ್ನು ಝೂಂಬಿ ಡ್ರಗ್ ಎಂದು ಹೇಳಲಾಗುತ್ತದೆ. ಪ್ರಾಣಿಗಳ ನೋವಿಗೆ ಪರಿಹಾರ ನೀಡಲು ಉತ್ಪಾದಿಸಲಾದ ಇದು ಒಂದು ಬಗೆಯ ಶಾಂತಕ(sedative) ವಾಗಿದ್ದು, ಮಾನವರಿಗೆ ಬಳಸಲು ಅನುಮೋದಿತವಾಗಿಲ್ಲ. ಇದನ್ನು ಫೆಂಟನಿಲ್, ಮಾರ್ಫಿನ್ ಹಾಗೂ ಹೆರಾಯಿನ್‌ನಂತಹ ಒಪಿಯಾಯ್ಡ್‌ಗಳಲ್ಲಿ ಬೆರೆಸಲ್ಪಡುತ್ತದೆ. ಇದನ್ನು ಸೇವಿಸಿದವರು ಅರಿವಿಲ್ಲದ ಸ್ಥಿತಿ ತಲುಪಿ ದೇಹದ ನಿಯಂತ್ರಣ ಕಳೆದುಕೊಂಡಂತೆ ಕಾಣುವುದರಿಂದಲೇ 'ಝೂಂಬಿ ಡ್ರಗ್' ಎಂಬ ಹೆಸರು ಬಂದಿದೆ. ಇಂತಹ ಪ್ರಕರಣಗಳು ಹೆಚ್ಚಾಗಿ ಅಮೆರಿಕಾದಲ್ಲಿ ಕಂಡುಬರುತ್ತವೆ.



ಈ ಮದ್ದು ದೇಹದ ಮೇಲೆ ಬೀರುವ ಪರಿಣಾಮಗಳು ಅತ್ಯಂತ ಗಂಭೀರ. ಇದು ನರಮಂಡಲವನ್ನು ಮಂದಗೊಳಿಸಿ, ಉಸಿರಾಟದ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಕೆಲವೊಮ್ಮೆ ಚರ್ಮದಲ್ಲಿ ಗಾಯಗಳು ಉಂಟಾಗಿ ಅವು ಗಂಭೀರ ಸೋಂಕಿಗೆ ಕಾರಣವಾಗಬಹುದು. ದೀರ್ಘಕಾಲ ಬಳಸಿದರೆ ಅಂಗಾಂಗ ವೈಫಲ್ಯಕ್ಕೂ ದಾರಿ ಮಾಡಿಕೊಡಬಹುದು. ಮುಖ್ಯವಾಗಿ ಇದು ಒಪಿಯಾಯ್ಡ್ ಅಲ್ಲದಿರುವುದರಿಂದ ಕ್ಸೈಲಜಿನ್ ಮಿಶ್ರಿತ ಮದ್ದು ಸೇವಿಸಿದ ವ್ಯಕ್ತಿಯನ್ನು ಸಾಮಾನ್ಯ ನಾರ್ಕೋಟಿಕ್ ಔಷಧಗಳಿಂದ ತಕ್ಷಣ ರಕ್ಷಿಸುವುದು ಕಷ್ಟವಾಗಬಹುದು.

ಇತ್ತೀಚಿನ ವರ್ಷಗಳಲ್ಲಿ ಜಾಗತಿಕವಾಗಿ ಡ್ರಗ್ಸ್ ಸೇವನೆಯ ರೂಪಗಳು ಬದಲಾಗುತ್ತಿದ್ದು, ಹೊಸ ರಾಸಾಯನಿಕ ಸಂಯೋಜನೆಗಳು ಕಾಣಿಸಿಕೊಳ್ಳುತ್ತಿವೆ. ಡ್ರಗ್ಸ್ ಸೇವನೆಗೆ ಬಲಿಯಾಗುತ್ತಿರುವ ಯುವ ಸಮೂಹದ ಸಮಸ್ಯೆಯ ಮೂಲವನ್ನು ಗಮನಿಸಿದರೆ ಯುವಜನರಲ್ಲಿ ಹೆಚ್ಚುತ್ತಿರುವ ಒತ್ತಡ, ಉದ್ಯೋಗದ ಅನಿಶ್ಚಿತತೆ, ಮಾನಸಿಕ ಸಮಸ್ಯೆಗಳು ಮತ್ತು ಸಾಮಾಜಿಕ ಬೆಂಬಲದ ಕೊರತೆಗಳು ಪ್ರಮುಖ ಕಾರಣಗಳಾಗಿವೆ. ಡ್ರಗ್ಸ್ ಸೇವನೆ ಕೆಲವರಿಗೆ ತಾತ್ಕಾಲಿಕ ನಿರಾಳತೆಯನ್ನು ನೀಡಬಹುದು. ಆದರೆ ಅದು ದೀರ್ಘಕಾಲದಲ್ಲಿ ಜೀವಕ್ಕೆ ಕುತ್ತನ್ನು ಉಂಟುಮಾಡುತ್ತದೆ. ಆದರಲ್ಲೂ, 'ಝೂಂಬಿ ಡ್ರಗ್'ನಂತಹ ಅಪಾಯಕಾರಿ ಪದಾರ್ಥಗಳು ವ್ಯಕ್ತಿಯ ಜೀವನವನ್ನೇ ಸಂಪೂರ್ಣವಾಗಿ ಹಾಳು ಮಾಡಬಹುದು.

ಆದುದರಿಂದ, ಸರ್ಕಾರ ಈ ಬಗ್ಗೆ ಗಮನ ಹರಿಸಿ ಸೂಕ್ತ ಕಾನೂನು ಜಾರಿಗೊಳಿಸಬೇಕಾದ ಅವಶ್ಯಕತೆಯಿದೆ. ಹೊಸ ಹೊಸ ಬಗೆಯ ಡ್ರಗ್ಸ್ ಸಾಗಾಣಿಕೆಯನ್ನು ತಡೆಯಲು ಗಡಿ ನಿಯಂತ್ರಣ, ಗುಪ್ತಚರ ಮಾಹಿತಿ ವ್ಯವಸ್ಥೆ ಮತ್ತು ಕಠಿಣ ಕ್ರಮಗಳು ಅಗತ್ಯ. ಒಟ್ಟಿನಲ್ಲಿ, ಚಂಡೀಗಢದ ಈ ಘಟನೆ ನಮಗೆ ಒಂದು ಎಚ್ಚರಿಕೆಯ ಘಂಟೆಯಾಗಿದೆ. 'ಝೂಂಬಿ ಡ್ರಗ್'ನಂತಹ ಅಪಾಯಕಾರಿ ಪದಾರ್ಥಗಳು ನಮ್ಮ ಸಮಾಜಕ್ಕೆ ಪ್ರವೇಶಿಸದಂತೆ ತಡೆಯಲು ಜಾಗೃತಿ, ಕಠಿಣ ಕಾನೂನು ಕ್ರಮಗಳು ಮತ್ತು ಮಾನಸಿಕ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ.

-ಡಾ. ಮೈತ್ರಿ ಭಟ್, ವಿಟ್ಲ

ಜಾಗತಿಕ ಯುದ್ಧ ಮಧ್ಯೆ ಭಾರತದ ಸುಗಮ ಹಾದಿ

ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧದಿಂದಾಗಿ ಕಳೆದೊಂದು ತಿಂಗಳಿನಿಂದ ಜಗತ್ತು ಹಲವಾರು ರೀತಿಯ ಸಮಸ್ಯೆಯನ್ನು ಎದುರಿಸುತ್ತಿದೆ. ಇಂಧನ ಸರಬರಾಜು ಕೊರತೆಯಿಂದ ಹಲವು ದೇಶಗಳಲ್ಲಿ ಮನೆಯಿಂದಲೇ ಕೆಲಸ(ವರ್ಕ್ ಫ್ರಂ ಹೋಮ್) ಶಾಲಾ ಮಕ್ಕಳಿಗೆ ಆನ್‌ಲೈನ್ ತರಗತಿ ಸೇರಿದಂತೆ ಹಲವು ಬದಲಾವಣೆಗಳನ್ನು ತಂದಿದೆ. ಆದರೇ ಭಾರತ ಮಾತ್ರ ಯಾವುದೇ ಬದಲಾವಣೆಗಳನ್ನು ತರದೇ ಎಂದಿನಂತೇ ಜೀವನ ನಡೆಸುತ್ತಿದೆ. ನಿರ್ಬಂಧಗಳ ಹೊರತಾಗಿಯೂ, ಯುದ್ಧಗ್ರಸ್ತ ಮಾರ್ಗದ ಮೂಲಕ ಅತಿ ಹೆಚ್ಚು ಹಡಗುಗಳನ್ನು ಸಾಗಣೆ ಮಾಡಿದ ದೇಶಗಳಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಇದಕ್ಕೆ ಜ್ವಲಂತ ಸಾಕ್ಷಿ ಎಂಬಂತೆ ಸಂಘರ್ಷ ಆರಂಭವಾದ ನಂತರ ಈ ವರೆಗೂ ಕನಿಷ್ಠ 8 ಭಾರತೀಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಸಂಘರ್ಷದ ನಡುವೆ ಶುಕ್ರವಾರ ಭಾರತ ಧ್ವಜ ಹಾರಿಸಿರುವ ಏಳನೇ ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಸಾನ್ವಿ ಹಾರ್ಮುಜ್ ಜಲಸಂಧಿಯನ್ನು ದಾಟಿದ ಸಂದರ್ಭದಲ್ಲಿ, ಇರಾನ್ ಭಾರತಕ್ಕೆ ವಿಶೇಷ ಸಂದೇಶವೊಂದನ್ನು ರವಾನಿಸಿದೆ. ಭಾರತದ ರಾಜತಂತ್ರದ ಯಶಸ್ಸನ್ನು ಜಗತ್ತೇ ನಿಬ್ಬೆರಗಾಗಿ ನೋಡುವಂತೆ ಮಾಡಿದೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಮಾಡಿದ ಪೋಸ್ಟ್‌ನಲ್ಲಿ ಮುಂಬೈಯಲ್ಲಿರುವ ಇರಾನ್ ದೂತಾವಾಸ ಕಚೇರಿ ಭಾರತ, ವಿಶೇಷವಾಗಿ ಗುಜರಾತ್, ನಮ್ಮ ಸಾಮೂಹಿಕ ಇತಿಹಾಸದಲ್ಲಿ ಒಂದು ಅತ್ಯಂತ ಮೌಲ್ಯವಾದ ಸ್ಥಾನ ಹೊಂದಿದೆ ಎಂದು ತಿಳಿಸಿದೆ.



ಶತ್ರು ಪೈಲಟ್ ಹುಡುಕಿ

ಟೆಲ್ ಅವಿವ್/ಟೆಹ್ರಾನ್: ನೈಋತ್ಯ ಇರಾನ್‌ನ ದೂರದ ಪ್ರದೇಶದಲ್ಲಿ ನಾಪತ್ತೆಯಾದ ಪೈಲಟ್‌ನನ್ನು ಪತ್ತೆಹಚ್ಚಲು ಅಮೆರಿಕ ಸೇನೆ ಶನಿವಾರ ತೀವ್ರ ಹುಡುಕಾಟ ನಡೆಸಿತು. ಇಸ್ಲಾಮಿಕ್ ರಿಪಬ್ಲಿಕ್ ಶುಕ್ರವಾರ ಅಮೆರಿಕದ ಯುದ್ಧವಿಮಾನವನ್ನು ಹೊಡೆದುರುಳಿಸಿ, ಪೈಲಟ್‌ನನ್ನು ಒಪ್ಪಿಸುವವರಿಗೆ ಬಹುಮಾನ ಘೋಷಿಸಿದೆ. ಅಮೆರಿಕ ಪೈಲಟ್‌ಗಾಗಿ ಹುಡುಕಾಟ ಇರಾನ್‌ನ ನೈಋತ್ಯ ಪ್ರಾಂತ್ಯ ಕೊಹ್ಗಿಲ್ಯೂಯೆ ಮತ್ತು ಬೊಯರ್-ಅಹ್ಮದ್‌ನ ಪರ್ವತ ಪ್ರದೇಶದಲ್ಲಿ ಕೇಂದ್ರೀಕೃತವಾಗಿದೆ. ಇರಾನ್ ತನ್ನ ನಿವಾಸಿಗಳಿಗೆ ಯಾವುದೇ ಶತ್ರು ಪೈಲಟ್ ಸಿಕ್ಕರೆ ಪೊಲೀಸರಿಗೆ ಒಪ್ಪಿಸಿ ಎಂದು ಕರೆ ನೀಡಿದೆ. ಪ್ರತ್ಯೇಕವಾಗಿ, ಇರಾನ್ ಸರಕಾರ ಮಾಧ್ಯಮ ತಿಳಿಸಿದ ಪ್ರಕಾರ ಅಮೆರಿಕದ ಎ-10 ದಾಳಿ ವಿಮಾನ ಒಂದು ಇರಾನಿ ರಕ್ಷಣಾ ಪಡೆಯ ಹೊಡೆತಕ್ಕೆ ಸಿಲುಕಿ ಪರ್ಷಿಯನ್ ಕೊಲ್ಲಿಯಲ್ಲಿ ಪತನಗೊಂಡಿದೆ.

ಮಾತುಕತೆ ನಿಂತಿಲ್ಲ

ಟರ್ಕಿ ಮತ್ತು ಈಜಿಪ್ಟ್, ಪಾಕಿಸ್ತಾನ, ಮಧ್ಯವರ್ತಿಗಳು ಅಮೆರಿಕ ಮತ್ತು ಇರಾನ್ ಅನ್ನು ಮತ್ತೆ ಮಾತುಕತೆಯ ಮೇಜಿಗೆ ತರಲು ಇನ್ನೂ ಕೆಲಸ ಮಾಡುತ್ತಿದ್ದಾರೆ. ಯುದ್ಧವನ್ನು ನಿಲ್ಲಿಸಲು ಮತ್ತು ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಅಮೆರಿಕ ಮತ್ತು ಇರಾನಿನ ಬೇಡಿಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಪ್ರಾದೇಶಿಕ ಶಕ್ತಿಗಳು ರಾಜಿ ಮಾರ್ಗ ಹುಡುಕುತ್ತಿವೆ ಎಂದು ಮೂಲಗಳು ಹೇಳಿವೆ.

ಪಾಕ್‌ಗೆ ಹೋಗಲ್ಲ ಎಂದಿಲ್ಲ

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಅವರು ಮಾತನಾಡಿ, ಮಾತುಕತೆಗಾಗಿ ಪಾಕ್‌ಗೆ ಹೋಗಲ್ಲ ಎಂದು ತಾನು ಹೇಳಿಲ್ಲ ಎಂದಿದ್ದಾರೆ. ಜತೆಗೆ ಅಮೆರಿಕ ಜತೆಗೆ ಮಾತುಕತೆ ಆರಂಭಿಸಲು ಇಚ್ಛೆ ಇದೆ ಎಂದಿದ್ದಾರೆ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಟರ್ಕಿ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿರುವುದಾಗಿ ಹೇಳಿದ್ದಾರೆ.





ದುಬೈನಲ್ಲಿ ಒರಾಕಲ್ ಕಚೇರಿಗೆ ಹಾನಿ

ಇರಾನ್‌ನ ಅರೆಸೈನಿಕ ರಿವಲ್ಯೂಷನರಿ ಗಾರ್ಡ್ ಒರಾಕಲ್ ಕಂಪನಿಯನ್ನು ಗುರಿ ಮಾಡಿ ಬೆದರಿಕೆ ಹಾಕಿದ ನಂತರ, ಯುಎಇ ದುಬೈನಲ್ಲಿರುವ ಒರಾಕಲ್ ಕಚೇರಿಗೆ ಅನುಮಾನಾಸ್ಪದ ಇರಾನಿ ಡ್ರೋನ್ ಹಾನಿ ಮಾಡಿದೆ. ಎಪಿ ಸಂಸ್ಥೆಯು ಕಟ್ಟಡದ ನೈಋತ್ಯ ಮೂಲೆಯಲ್ಲಿ ದೊಡ್ಡ ರಂಧ್ರ ಕಾಣಿಸಿದ ದೃಶ್ಯಗಳನ್ನು ಪರಿಶೀಲಿಸಿ ದೃಢಪಡಿಸಿದೆ. ದುಬೈ ಮೀಡಿಯಾ ಕಚೇರಿ ಇದನ್ನು ವೈಮಾನಿಕ ತಡೆ ಸಮಯದಲ್ಲಿ ಬಿದ್ದ ಅವಶೇಷಗಳಿಂದ ಉಂಟಾದ ಸಣ್ಣ ಘಟನೆ ಎಂದು ಬಣ್ಣಿಸಿ, ಯಾವುದೇ ಗಾಯಗಳಾಗಿಲ್ಲ ಎಂದಿದೆ.

ಇಸ್ರೇಲ್ ವೈಮಾನಿಕ ದಾಳಿ

ಟೆಹ್ರಾನ್‌ನಲ್ಲಿರುವ ಬ್ಯಾಲಿಸ್ಟಿಕ್ ಮತ್ತು ವಿಮಾನ ವಿರೋಧಿ ಕ್ಷಿಪಣಿ ಸಂಗ್ರಹಣಾ ಕೇಂದ್ರಗಳ ಮೇಲೆ ಶನಿವಾರ ತನ್ನ ವಾಯುಪಡೆ ದಾಳಿ ನಡೆಸಿದೆ ಎಂದು ಇಸ್ರೇಲ್ ಸೇನೆ ಖಚಿತಪಡಿಸಿದೆ. ಶಸ್ತ್ರಾಸ್ತ್ರ ತಯಾರಿಕಾ ಘಟಕಗಳು ಮತ್ತು ಮಿಲಿಟರಿ ಸಂಶೋಧನಾ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಇರಾನ್‌ನ ಪ್ರಮುಖ ರಕ್ಷಣಾ ವ್ಯವಸ್ಥೆಗಳಿಗೆ ಹಾನಿ ಮಾಡುವ ಉದ್ದೇಶದಿಂದ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ, ಎಂದು ಇಸ್ರೇಲ್ ಹೇಳಿದೆ.

ಇರಾನ್‌ನ ಪೆಟ್ರೋಕೆಮಿಕಲ್ ಘಟಕದ ಮೇಲೆ ದಾಳಿ

ಯುಎಸ್ ಮತ್ತು ಇಸ್ರೇಲಿ ಯುದ್ಧ ವಿಮಾನಗಳು ಶನಿವಾರ ಇರಾನ್ ಮೇಲೆ ದಾಳಿ ಮಾಡುವುದನ್ನು ಮುಂದುವರಿಸಿದ್ದು, ಪೆಟ್ರೋಕೆಮಿಕಲ್ ಸೌಲಭ್ಯ ಸೇರಿದಂತೆ ಹಲವಾರು ಗುರಿಗಳನ್ನು ಹೊಡೆದಿವೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಇರಾನ್‌ನ ಅಧಿಕೃತ ಇಂಗ್ಲಿಷ್ ಭಾಷೆಯ ಪತ್ರಿಕೆ ಟೆಹ್ರಾನ್ ಟೈಮ್ಸ್ ಪಶ್ಚಿಮ ನಗರವಾದ ಮೆಹ್ರಾನ್ ನಲ್ಲಿರುವ ಇರಾನ್‌ನ ಕೃಷಿ ಸಚಿವಾಲಯಕ್ಕೆ ಸೇರಿದ ಕೇಂದ್ರದ ಮೇಲೆ ವೈಮಾನಿಕ ದಾಳಿ ನಡೆದಿದೆ ಎಂದು ವರದಿ ಮಾಡಿದೆ.

ವಿಕಿರಣಶೀಲ ಪರಿಣಾಮ ಎಲ್ಲರ ಮೇಲೆ

ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಮೇಲಿನ ನಿರಂತರ ದಾಳಿಯ ವಿಕಿರಣಶೀಲ ಪರಿಣಾಮವು ಟೆಹ್ರಾನ್ ಅಲ್ಲ, ಪ್ರಾದೇಶಿಕ ರಾಜಧಾನಿಗಳಲ್ಲಿ ಜೀವನವನ್ನು ಕೊನೆಗೊಳಿಸುತ್ತದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶನಿವಾರ ಎಚ್ಚರಿಕೆ ನೀಡಿದ್ದಾರೆ. ಸ್ಥಾವರದ ಮೇಲೆ ಪದೇ ಪದೆ ನಡೆಯುತ್ತಿರುವ ದಾಳಿಗಳ ಬಗ್ಗೆ ಪಾಶ್ಚಿಮಾತ್ಯ ಸರ್ಕಾರಗಳು ಮೌನವಾಗಿವೆ ಎಂದು ಅವರು ಆರೋಪಿಸಿದರು. ಬುಶೆಹರ್ ಸಂಕೀರ್ಣದ ಮೇಲೆ ಶನಿವಾರ ನಾಲ್ಕನೇ ದಾಳಿ ನಡೆದಿದ್ದು, ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಆದರೆ, ಇಂಟರ್ನ್ಯಾಷನಲ್ ಅಟಾಮಿಕ್ ಎನರ್ಜಿ ಏಜೆನ್ಸಿಯ ಪ್ರಕಾರ, ವಿಕಿರಣದ ಮಟ್ಟದಲ್ಲಿ ಯಾವುದೇ ಹೆಚ್ಚಳ ವರದಿಯಾಗಿಲ್ಲ.

ಕತಾರ್‌ಗೆ ಮೆಲೋನಿ ಭೇಟಿ

ಇರಾನ್ ಬಾಂಬ್ ದಾಳಿಯಿಂದ ಹಾನಿಗೊಳಗಾದ ಕತಾರ್ ಇಂಧನ ಮೂಲಸೌಕರ್ಯವನ್ನು ಪುನಃಸ್ಥಾಪಿಸಲು ಸಹಾಯ ಮಾಡುವುದಾಗಿ ಇಟಲಿ ಪ್ರಧಾನಿ ಮೆಲೋನಿ ಕತಾರ್ ನಾಯಕರಿಗೆ ಭರವಸೆ ನೀಡಿದರು. ಇರಾನ್ ವಿರುದ್ಧ ಯುಎಸ್-ಇಸ್ರೇಲ್ ಯುದ್ಧ ಪ್ರಾರಂಭವಾದ ನಂತರ ಗಲ್ಫ್ ಪ್ರದೇಶಕ್ಕೆ ಭೇಟಿ ನೀಡಿದ ಮೊದಲ ಇಯು, ಜಿ20 ಮತ್ತು ನ್ಯಾಟೋ ನಾಯಕಿ ಎಂಬ ಹೆಗ್ಗಳಿಕೆಗೂ ಮೆಲೋನಿ ಪಾತ್ರರಾಗಿದ್ದಾರೆ. ಸೌದಿ ಅರೇಬಿಯಾದಲ್ಲಿ ಶುಕ್ರವಾರ ಎರಡು ದಿನಗಳ ಭೇಟಿಯನ್ನು ಪ್ರಾರಂಭಿಸಿದ ಅವರು ಯುಎಇಗೂ ಭೇಟಿ ನೀಡಲಿದ್ದಾರೆ. ಮೆಲೋನಿ ಮತ್ತು ಕತಾರ್‌ನ ಅಮೀರ್ ಶೇಖ್ ತಮೀಮ್ ಬಿನ್ ಹಮದ್ ಅಲ್-ಥಾನಿ ಅವರು ಹೋರ್ಮುಜ್ ಜಲಸಂಧಿಯನ್ನು ತೆರೆಯುವ ಅಗತ್ಯವನ್ನು ಪುನರುಚ್ಚರಿಸಿದರು.

ಬುಶೆಹರ್ ಪರಮಾಣು ಸ್ಥಾವರ ಬಳಿ ದಾಳಿ

ಬುಶೆಹರ್: ಇರಾನ್‌ನ ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಸಮೀಪ ಶನಿವಾರ ಕ್ಷಿಪಣಿಯೊಂದು ಅಪ್ಪಳಿಸಿದ್ದು, ಭದ್ರತಾ ತಂಡದ ಓರ್ವ ಸದಸ್ಯ ಮೃತಪಟ್ಟಿದ್ದಾರೆ. ಕಳೆದ ಎರಡು ವಾರಗಳಲ್ಲಿ ಈ ಪ್ರದೇಶದ ಮೇಲೆ ನಡೆದ ನಾಲ್ಕನೇ ದಾಳಿ ಇದಾಗಿದೆ. ಸ್ಫೋಟದ ಅವಶೇಷಗಳು ತಗುಲಿ ಸ್ಥಾವರದ ಭೌತಿಕ ರಕ್ಷಣಾ ವಿಭಾಗದ ಸಿಬ್ಬಂದಿಯೊಬ್ಬರು ಮೃತಪಟ್ಟಿರುವುದನ್ನು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಖಚಿತಪಡಿಸಿದೆ. ಸ್ಫೋಟದ ತೀವ್ರತೆ ಮತ್ತು ಅವಶೇಷಗಳಿಂದಾಗಿ ಸ್ಥಾವರದ ಒಳಗಿನ ಕಟ್ಟಡವೊಂದಕ್ಕೂ ಹಾನಿಯಾಗಿದೆ. ಆದರೆ, ದಾಳಿಯ ನಂತರ ವಿಕಿರಣ ಮಟ್ಟದಲ್ಲಿ ಯಾವುದೇ ಹೆಚ್ಚಳ ಕಂಡುಬಂದಿಲ್ಲ ಎಂದು ಇರಾನ್ ಅಧಿಕಾರಿಗಳು ಮತ್ತು ಅಂತಾರಾಷ್ಟ್ರೀಯ ವೀಕ್ಷಕರು ವರದಿ ಮಾಡಿದ್ದಾರೆ. ಐಎಇಎ ಮಹಾನಿರ್ದೇಶಕ ರಾಫೆಲ್ ಮರಿಯಾನೊ ಗ್ರೋಸಿ ಈ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಇರಾನ್‌ನೊಂದಿಗೆ ಯಾವುದೇ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

ಹೊಸದಿಲ್ಲಿ: ಭಾರತದತ್ತ ಬರುತ್ತಿದ್ದ ಕಚ್ಚಾ ತೈಲ ಕ್ಯಾರಿಯರ್ ಹಡಗು ಪಾವತಿ ಸಮಸ್ಯೆಯಿಂದ ಚೀನಾಗೆ ಮಾರ್ಗ ಬದಲಾಯಿಸಿದೆಯೆಂಬ ವರದಿಯನ್ನು ತೈಲ ಸಚಿವಾಲಯವು ತಳ್ಳಿಹಾಕಿದೆ. ಇರಾನ್‌ನೊಂದಿಗೆ ಯಾವುದೇ ಪಾವತಿ ಸಂಬಂಧಿತ ಸಮಸ್ಯೆಗಳಿಲ್ಲ. ನಮಗೆ ಬರಬೇಕಾಗಿದ್ದ ಸಂಪೂರ್ಣ ಕಚ್ಚಾ ತೈಲ ಈಗಾಗಲೇ ಪೂರೈಕೆಯಾಗಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಶನಿವಾರ ಸ್ಪಷ್ಟಪಡಿಸಿದೆ.

ಭಾರತದ ವದಿನಾರ್‌ನಿಂದ ಇರಾನಿ ಕಚ್ಚಾ ತೈಲ ಹಡಗು ಚೀನಾಗೆ ಮಾರ್ಗ ಬದಲಿಸಿದ್ದು ಪಾವತಿ ಸಮಸ್ಯೆಗಳಿಂದ ಎಂಬುದು ತಪ್ಪು ಮಾಹಿತಿ. ಹಣಕಾಸು ಲೆಕ್ಕಾಚಾರಗಳನ್ನು ಗಮನದಲ್ಲಿಟ್ಟು, ಇರಾನ್ ಸಹಿತ 40 ರಾಷ್ಟ್ರಗಳ ವಿವಿಧ ಕಂಪನಿಗಳಿಂದ ಭಾರತ ಕಚ್ಚಾ ತೈಲ ಆಮದು ಮಾಡುತ್ತದೆ. ಹೀಗಾಗಿ ಇರಾನ್ ತೈಲ ಖರೀದಿಯಲ್ಲೂ ಯಾವುದೇ ಪಾವತಿ ಸಮಸ್ಯೆ ಎದುರಾಗಿಲ್ಲ ಎಂದು ಅದು ಹೇಳಿಕೊಂಡಿದೆ. ಹಡಗಿನ ಮಾರ್ಗ ಬದಲಾವಣೆ ಸುದ್ದಿಯಲ್ಲಿ ತೈಲ ವ್ಯಾಪಾರ ಹೇಗೆ ನಡೆಯುತ್ತದೆ ಎಂಬ ಸತ್ಯವನ್ನು ಕಡೆಗಣಿಸಲ್ಪಟ್ಟಿದೆ. ಬಿಲ್ ಪಾವತಿಸಿದ ಬಳಿಕ ಹಡಗುಗಳು ತಮ್ಮ ಸಂಚಾರ ಆರಂಭಿಸುತ್ತವೆ. ಮುಂದಿನ ತಿಂಗಳುಗಳಿಗೆ ಅಗತ್ಯವಿರುವ ಕಚ್ಚಾ ತೈಲವನ್ನು ಭಾರತ ಹೊಂದಿದೆ. ಇರಾನ್‌ನಿಂದ ಬರಬೇಕಾಗಿದ್ದ ಕಚ್ಚಾ ತೈಲ ಈಗಾಗಲೇ ಬಂದಿವೆ ಎಂದು ತೈಲ ಸಚಿವಾಲಯ ತಿಳಿಸಿದೆ. ಎಲ್‌ಪಿಜಿ ಪೂರೈಕೆ ವಿಚಾರದಲ್ಲೂ ಈ ರೀತಿ ತಪ್ಪು ಮಾಹಿತಿ ಪ್ರಸರಿಸಲಾಗಿದೆ.

ಇರಾನ್‌ಗೆ ಮತ್ತೆ ಟ್ರಂಪ್ ಗಡುವು

- ಇರಾನ್ ವಿರುದ್ಧ ಮತ್ತೆ ಕಿಡಿಕಾರಿದ ಟ್ರಂಪ್
- ಯುದ್ಧ ವಿಮಾನ ಪತನವಾದ ಮೇಲೆ ಆಕ್ರೋಶ
- ಮತ್ತೊಬ್ಬ ಪೈಲಟ್‌ಗಾಗಿ ನಡೆಯುತ್ತಲೇ ಇದೆ ಶೋಧ

ದುಬೈ/ವಾಷಿಂಗ್ಟನ್: ಇರಾನ್ ವಿರುದ್ಧದ ಯುದ್ಧದಲ್ಲಿ ಅಮೆರಿಕದ ಎರಡು ಯುದ್ಧ ವಿಮಾನ ಪತನವಾಗಿರುವ ಘಟನೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ತೀವ್ರ ಆಕ್ರೋಶದ ವಿಚಾರವಾಗಿದ್ದು, ಈಗ ತನ್ನ ಜತೆ ಡೀಲ್ ಮಾಡಿಕೊಳ್ಳಲು 48 ಗಂಟೆಗಳ ಗಡುವು ನೀಡಿದ್ದಾರೆ. ಈ ಹಿಂದೆ ಯುದ್ಧದಲ್ಲಿ ಇರಾನ್ ಸೋತಿದೆ ಎಂದು ಟ್ರಂಪ್ ಘೋಷಿಸಿದ ತರುವಾಯ, ಈ ದೇಶವು ಅಮೆರಿಕದ ಯುದ್ಧ ವಿಮಾನಗಳನ್ನು ಟಾರ್ಗೆಟ್ ಮಾಡಿತ್ತು. ಅಷ್ಟೇ ಅಲ್ಲ, ಯಶಸ್ವಿಯಾಗಿ ಒಂದು ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿದೆ. ಇದನ್ನು ಅಮೆರಿಕ ಕೂಡ ಒಪ್ಪಿಕೊಂಡಿದೆ. ಆದರೆ ಒಬ್ಬ ಪೈಲಟ್ ಮಾತ್ರ ಸಿಕ್ಕಿದ್ದು, ಮತ್ತೊಬ್ಬರ ಬಗ್ಗೆ ಸುಳಿವೇ ಇಲ್ಲ. ಇದೂ ಆಕ್ರೋಶಕ್ಕೆ ಕಾರಣವಾಗಿದೆ.

ಸಿಬ್ಬಂದಿಗಾಗಿ ಹುಡುಕಾಟ

ಸುಮಾರು ಐದು ವಾರಗಳ ಹಿಂದೆ ಇರಾನ್ ಯುದ್ಧ ಪ್ರಾರಂಭವಾದ ನಂತರ ಮೊದಲ ಗುಂಡಿನ ದಾಳಿ ಸೇರಿದಂತೆ ಎರಡು ಯುಎಸ್ ಯುದ್ಧ ವಿಮಾನಗಳು ಪತನಗೊಂಡ ನಂತರ, ಕಾಣೆಯಾದ ಯುಎಸ್ ಪೈಲಟ್‌ಗಾಗಿ ಹುಡುಕಾಟ ನಡೆಯುತ್ತಿದ್ದು, ಇನ್ನೊಬ್ಬರನ್ನು ರಕ್ಷಿಸಲಾಗಿದೆ.



ಕಿರುಸುದ್ದಿ

ಎಟಿಎಸ್‌ನಿಂದ ನಾಲ್ವರು ಉಗ್ರರ ಸೆರೆ

ಲಖನೌ: ರಾಷ್ಟ್ರೀಯ ಮೂಲಸೌಕರ್ಯ ಮತ್ತು ರಾಜಕೀಯ ಮುಖಂಡರ ಮೇಲೆ ದಾಳಿ ನಡೆಸಲು ಸಂಚು ರೂಪಿಸಿದ್ದ ಪಾಕಿಸ್ತಾನ ಮೂಲದ ಜಾಲಕ್ಕೆ ಸೇರಿದ ನಾಲ್ವರು ವ್ಯಕ್ತಿಗಳನ್ನು ಉತ್ತರ ಪ್ರದೇಶ ಭಯೋತ್ಪಾದನಾ ನಿರೋಧಕ ದಳ (ಎಟಿಎಸ್) ಏಪ್ರಿಲ್ 2 ರಂದು ಬಂಧಿಸಿದೆ. ಲಕ್ನೋ ರೈಲ್ವೇ ನಿಲ್ದಾಣದ ಬಳಿ ರೈಲ್ವೆ ಸಿಗ್ನಲ್‌ಗಳನ್ನು ಗುರಿಯಾಗಿಸಿಕೊಂಡಿದ್ದ ಸಾಕಿಬ್, ಅರ್ಬಾಬ್, ವಿಕಾಸ್ ಪೆಹ್ಲಾವತ್ ಮತ್ತು ಲೋಕೇಶ್ ಅವರನ್ನು ಬಂಧಿಸಲಾಗಿದೆ. ಬಂಧಿತರಿಂದ ದಹನಕಾರಿ ವಸ್ತುಗಳು, ಸ್ಮಾರ್ಟ್‌ಫೋನ್‌ಗಳು ಮತ್ತು ಕರಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ತಂಡ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಸಾಧಿಸಲು ಸಾಮಾಜಿಕ ಮಾಧ್ಯಮಗಳನ್ನು ಬಳಸುತ್ತಿತ್ತು ಹಾಗೂ ಘಾಜಿಯಾಬಾದ್, ಅಲಿಗಢ ಮತ್ತು ಲಕ್ನೋಗಳಲ್ಲಿ ಸಂಚು ರೂಪಿಸಲು ಸ್ಥಳ ಪರಿಶೀಲನೆ ನಡೆಸಿತ್ತು ಎಂದು ತಿಳಿದುಬಂದಿದೆ.

ಸಂಕಷ್ಟ ನಡುವೆಯೂ ಭಾರತ ದೃಢ: ಜೈಶಂಕರ್

ರಾಯ್ಪುರ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಮಿಲಿಟರಿ ಸಂಘರ್ಷದಂತಹ ಜಾಗತಿಕ ಆಘಾತಗಳನ್ನು ಭಾರತ ಯಶಸ್ವಿಯಾಗಿ ಎದುರಿಸಿದೆ. ತನ್ನ ಸದೃಢತೆಯನ್ನು ಸಾಬೀತುಪಡಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ತಿಳಿಸಿದ್ದಾರೆ. ಭಾರತ ಇಂದು ವಿಶ್ವದ ಅಗ್ರ ಐದು ಆರ್ಥಿಕತೆಗಳಲ್ಲಿ ಒಂದಾಗಿದೆ. ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ, ಪ್ರಾತಿನಿಧಿಕ ರಾಜಕಾರಣ ಮತ್ತು ನಿರ್ಣಾಯಕ ನಾಯಕತ್ವದಿಂದ ಈ ಸ್ಥಾನ ಲಭ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಫೆ.28ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿದ ನಂತರ ಆರಂಭವಾದ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ನಡುವೆಯೂ ದೇಶ ಆಂತರಿಕ ಮತ್ತು ಬಾಹ್ಯ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂದು ಅವರು ಹೇಳಿದರು.

ಸಾವಿರ ಕೆಜಿ ತೂಕದ ದೇಸಿ ವೈಮಾನಿಕ ಬಾಂಬ್ ಅಭಿವೃದ್ಧಿ

ಹೊಸದಿಲ್ಲಿ: ಭಾರತೀಯ ವಾಯುಪಡೆಗೆ (ಐಎಎಫ್) ಬೆಂಬಲ ನೀಡಲು 1,000 ಕೆಜಿ ತೂಕದ ವೈಮಾನಿಕ ಬಾಂಬ್‌ಗಳ ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ಖರೀದಿಗಾಗಿ ರಕ್ಷಣಾ ಸಚಿವಾಲಯ ಆಸಕ್ತಿ ಪತ್ರವನ್ನು (ಇಒಐ) ಹೊರಡಿಸಿದೆ. ಈ ಯೋಜನೆ ಕೈಗಾರಿಕಾ ಅನುದಾನಿತ 'ಮೇಕ್-' ಉಪ-ವರ್ಗದಲ್ಲಿ ನಡೆಯಲಿದ್ದು, ಎರಡು ಪ್ರತ್ಯೇಕ ಹಂತಗಳನ್ನು ಒಳಗೊಂಡಿದೆ. ಆರಂಭದಲ್ಲಿ, ಅಭಿವೃದ್ಧಿ ಸಂಸ್ಥೆಗಳು ಆರು ಮಾದರಿಗಳನ್ನು (ಪ್ರೊಟೊಟೈಪ್ಸ್) ತಯಾರಿಸಲಿವೆ. ಯಶಸ್ವಿ ಪ್ರಯೋಗಗಳ ನಂತರ, ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆ (ಐಡಿಡಿಎಂ) ವರ್ಗದಲ್ಲಿ 600 ಬಾಂಬ್‌ಗಳನ್ನು ಖರೀದಿಸಲು ಸಚಿವಾಲಯ ಯೋಜಿಸಿದೆ.

ರಕ್ಷಣಾ ರಫ್ತು ದಾಖಲೆ ಮಟ್ಟದ ಏರಿಕೆ

ಹೊಸದಿಲ್ಲಿ: ಭಾರತದ ರಕ್ಷಣಾ ರಫ್ತು 2025-26 ಆರ್ಥಿಕ ವರ್ಷದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದ್ದು, ಒಟ್ಟು 38,424 ಕೋಟಿ ರೂ. ದಾಖಲಾಗಿದೆ. 2016-17ರಲ್ಲಿ ಕೇವಲ 1,522 ಕೋಟಿ ರೂ. ಇದ್ದ ರಫ್ತು, ಕಳೆದ ದಶಕದಲ್ಲಿ ಸುಮಾರು 25 ಪಟ್ಟು ಏರಿಕೆಯಾಗಿರುವುದು ಗಮನಾರ್ಹವಾಗಿದೆ. ಇದರಿಂದ ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಭಾರತದ ಸ್ಥಾನ ಮತ್ತಷ್ಟು ಬಲಗೊಂಡಿದೆ. ಭಾರತೀಯ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಹೆಚ್ಚುತ್ತಿದ್ದು, ಮ್ಯಾನ್ಮಾರ್ ಅತಿ ದೊಡ್ಡ ಖರೀದಿದಾರ ದೇಶವಾಗಿ ಹೊರಹೊಮ್ಮಿದೆ. ಒಟ್ಟು ರಫ್ತಿನಲ್ಲಿ ಸುಮಾರು ಶೇ.28 ಪಾಲು ಮ್ಯಾನ್ಮಾರ್‌ಗೆ ಸೇರಿದೆ. ಫಿಲಿಪೈನ್ಸ್ (19%) ಮತ್ತು ಆರ್ಮೇನಿಯಾ (15%) ಮುಂದಿನ ಸ್ಥಾನಗಳಲ್ಲಿ ಇದ್ದು, ಈ ಮೂರು ದೇಶಗಳೇ ಒಟ್ಟು ರಫ್ತಿನ 60% ಕ್ಕೂ ಹೆಚ್ಚು ಪಾಲು ಹೊಂದಿವೆ. ಇದಲ್ಲದೆ ಶ್ರೀಲಂಕಾ, ಮೋರಿಷಸ್, ಸೆಶೆಲ್ಸ್, ವಿಯೆಟ್ನಾಂ ಸೇರಿದಂತೆ ಅನೇಕ ದೇಶಗಳೂ ಭಾರತೀಯ ರಕ್ಷಣಾ ಸಾಧನಗಳನ್ನು ಖರೀದಿಸುತ್ತಿವೆ.



ರಫ್ತಾಗುತ್ತಿರುವ ಉತ್ಪನ್ನಗಳಲ್ಲಿ ನೌಕಾಪಡೆಗೆ ಸಂಬಂಧಿಸಿದ ಸಾಧನಗಳೇ ಪ್ರಮುಖವಾಗಿದ್ದು, ಒಟ್ಟು ರಫ್ತಿನಲ್ಲಿ ಸುಮಾರು ಶೇ.55 ಪಾಲು ಹೊಂದಿವೆ. ಇದಕ್ಕೆ ಜೊತೆಗೆ ಗನ್ ಮತ್ತು ತೋಪು ವ್ಯವಸ್ಥೆಗಳು, ಕ್ಷಿಪಣಿ ವ್ಯವಸ್ಥೆಗಳು, ನಿಗಾ ಸಾಧನಗಳು, ಸೆನ್ಸರ್‌ಗಳು, ವಿಮಾನ ಮತ್ತು ಇತರೆ ಉನ್ನತ ತಂತ್ರಜ್ಞಾನಾಧಾರಿತ ರಕ್ಷಣಾ ಸಾಧನಗಳೂ ರಫ್ತಾಗುತ್ತಿವೆ.

ಕೊರೊನಾ ಅವಧಿಯಲ್ಲಿ ಸ್ವಲ್ಪ ಕುಸಿತ ಕಂಡಿದ್ದರೂ, 2021-22ರಿಂದ ರಫ್ತು ಮತ್ತೆ ವೇಗ ಪಡೆದುಕೊಂಡಿದ್ದು, 2023-24ರಿಂದ 2025-26ರ ಅವಧಿಯಲ್ಲಿ 21,083 ಕೋಟಿ ರೂ.ನಿಂದ 38,424 ಕೋಟಿ ರೂ.ಗೆ ಏರಿಕೆಯಾಗಿದೆ.

ಈ ಸಾಧನೆ ಆತ್ಮನಿರ್ಭರ ಭಾರತ ದೃಷ್ಟಿಕೋನಕ್ಕೆ ಮತ್ತಷ್ಟು ಬಲ ನೀಡಿದ್ದು, ಭಾರತವು ಜಾಗತಿಕ ರಕ್ಷಣಾ ಸರಬರಾಜು ಕ್ಷೇತ್ರದಲ್ಲಿ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಮುಂದಿನ ವರ್ಷಗಳಲ್ಲಿ ಭಾರತದ ರಕ್ಷಣಾ ರಫ್ತು ಇನ್ನಷ್ಟು ಏರಿಕೆಯಾಗುವ ನಿರೀಕ್ಷೆ ವ್ಯಕ್ತವಾಗಿದೆ.

- 38,424 ಕೋಟಿ ರೂ. ಇತಿಹಾಸದಲ್ಲೇ ಅತಿ ಹೆಚ್ಚು ರಫ್ತು
- 2016ರಿಂದ 25 ಪಟ್ಟು ಏರಿಕೆ
- ಮ್ಯಾನ್ಮಾರ್, ಫಿಲಿಪೈನ್ಸ್, ಆರ್ಮೇನಿಯಾ ಪ್ರಮುಖ ಖರೀದಿದಾರರು
- ನೌಕಾ ಸಾಧನಗಳಿಗೆ 55% ಪಾಲು

ಭಾರತ ಏನು ರಫ್ತು ಮಾಡುತ್ತಿದೆ?

ಭಾರತದ ರಕ್ಷಣಾ ರಫ್ತಿನಲ್ಲಿ ನೌಕಾಪಡೆಗೆ ಸಂಬಂಧಿಸಿದ ಸಾಧನಗಳೇ ಮುಂಚೂಣಿಯಲ್ಲಿದ್ದು, ಒಟ್ಟು ರಫ್ತಿನಲ್ಲಿ ಸುಮಾರು 55% ಪಾಲು ಹೊಂದಿವೆ.

- ಗನ್ ಹಾಗೂ ತೋಪು ವ್ಯವಸ್ಥೆಗಳು
- ಕ್ಷಿಪಣಿ ವ್ಯವಸ್ಥೆಗಳು
- ನಿಗಾವ್ಯವಸ್ಥೆ ಮತ್ತು ಸೆನ್ಸರ್‌ಗಳು
- ವಿಮಾನ ಹಾಗೂ ರಕ್ಷಣಾ ತಂತ್ರಜ್ಞಾನ

ಲಡಾಖ್: ಗಗನಯಾತ್ರಿಗಳ ಮಾನಸಿಕ, ದೈಹಿಕ ಪರೀಕ್ಷೆ

ಹೊಸದಿಲ್ಲಿ: ಗಗನಯಾತ್ರಿಗಳ ಮಾನಸಿಕ, ದೈಹಿಕ, ಮತ್ತು ಕಾರ್ಯಾಚರಣಾ ಸಾಮರ್ಥ್ಯ ಪರೀಕ್ಷೆಯ ಉದ್ದೇಶದಿಂದ ಇಸ್ರೋ ಲಡಾಖ್‌ನಲ್ಲಿ ಮಿಷನ್ ಮಿತ್ರ ಕಾರ್ಯಾಚರಣೆಗೆ ಚಾಲನೆ ನೀಡಿದೆ. ಅತಿ ಎತ್ತರದ ಪ್ರದೇಶಗಳಲ್ಲಿ ಕ್ರೂ ಸದಸ್ಯರು ಹೇಗೆ ಕಾರ್ಯಾಚರಣೆ ನಡೆಸುತ್ತಾರೆಂದು ಗಮನಿಸಲಾಗುವುದು. ಭಾರತದ ಮಹತ್ವಾಕಾಂಕ್ಷಿ ಬಾಹ್ಯಾಕಾಶ ಯೋಜನೆ ಗಗನಯಾನ ಹಾಗೂ ಮುಂಬರುವ ದೀರ್ಘಕಾಲದ ಯೋಜನೆಗಳಿಗಾಗಿ ಕ್ರೂ ಸದಸ್ಯರ ಪ್ರದರ್ಶನವನ್ನು ಅಳೆಯಲಾಗುವುದು. ಸಮುದ್ರ ಮಟ್ಟದಿಂದ 3,500 ಮೀ. ಎತ್ತರದ ಲೇಹ್‌ನಲ್ಲಿ ಏ.9ರವರೆಗೆ ಮಿಷನ್ ಮಿತ್ರ (ಪರಸ್ಪರ ಕಾರ್ಯಸಾಧ್ಯಗಳ ನಕ್ಷೆ ಮತ್ತು ಪ್ರತಿಕ್ರಿಯೆ ಮೌಲ್ಯಮಾಪನ) ನಡೆಸಲಾಗುತ್ತಿದೆ. ಹೈಪೋಕ್ಸಿಯಾ (ಆಮ್ಲಜನಕದ ಕೊರತೆ), ಕಡಿಮೆ ತಾಪಮಾನದ ಪರಿಸ್ಥಿತಿಯ ಅನುಕರಣೆ ಮತ್ತು ಬಾಹ್ಯಾಕಾಶ ಯಾನಕ್ಕೆ ಸ್ವಾಭಾವಿಕ ಹೋಲಿಕೆಯ ಏಕಾಂಗಿತನದ ಪರಿಸರದಲ್ಲಿದ್ದು ಪರೀಕ್ಷೆ ನಡೆಸಲಾಗುತ್ತದೆ. ಇಸ್ರೋ ಹಾಗೂ ಭಾರತೀಯ ವಾಯುಪಡೆಯ ಏರೋಸ್ಪೇಸ್ ಮೆಡಿಸಿನ್ ಸಂಸ್ಥೆ ಈ ಮಿಷನ್ ಅನ್ನು ವಿನ್ಯಾಸಗೊಳಿಸಿದ್ದು, ಬೆಂಗಳೂರಿನ ನವೋದ್ಯಮ ಪ್ರೋಟೋಪ್ಲಾನೆಟ್ ಸೌಲಭ್ಯ ನಿರ್ವಹಣೆ ಮತ್ತು ಕಾನೂನುಬದ್ಧ ಪ್ರೋಟೋಕಾಲ್‌ಗಳ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಎಲ್ಲಾ ಮಾನವ ಬಾಹ್ಯಾಕಾಶ ಯೋಜನೆಗಳಲ್ಲಿ ಸಿಬ್ಬಂದಿಯ ಸುರಕ್ಷತೆ ಮತ್ತು ಕಾರ್ಯಕ್ಷಮತೆ ಅತ್ಯಂತ ಮುಖ್ಯ ಅಂಶಗಳಾಗಿವೆ. ಪರಿಣಾಮಕಾರಿ ಸಂವಹನ ನಡೆಸುವುದು, ಒತ್ತಡಕ್ಕೆ ಹೊಂದಿಕೊಳ್ಳುವುದು, ಮಾನಸಿಕ ಸ್ಥೈರ್ಯವನ್ನು ಕಾಪಾಡುವುದು ಮತ್ತು ಪರಸ್ಪರ ಬೆಂಬಲಿಸುವ ಸಾಮರ್ಥ್ಯವೇ ಎಲ್ಲಾ ಯೋಜನೆಗಳ ಯಶಸ್ಸು ಮತ್ತು ಸುರಕ್ಷತೆಯನ್ನು ನಿರ್ಧರಿಸುತ್ತದೆ ಎಂದು ಇಸ್ರೋ ತನ್ನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಫ್ಘಾನಿಸ್ತಾನದಲ್ಲಿ 5.8 ತೀವ್ರತೆಯ ಭೂಕಂಪ: 8 ಮಂದಿ ಸಾವು

ಕಾಬೂಲ್: ಅಫ್ಘಾನಿಸ್ತಾನದ ಉತ್ತರ ಮತ್ತು ಪೂರ್ವ ಭಾಗ ಹಾಗೂ ಪಾಕಿಸ್ತಾನದ ಪಶ್ಚಿಮ ಭಾಗದಲ್ಲಿ ಶುಕ್ರವಾರ ತಡರಾತ್ರಿ 5.8 ತೀವ್ರತೆಯ ಭೂಕಂಪ ಸಂಭವಿಸಿದ್ದು, ಕಾಬೂಲ್‌ನಲ್ಲಿ ಕನಿಷ್ಠ ಎಂಟು ಜನರು ಮೃತಪಟ್ಟಿದ್ದಾರೆ. ಕಾಬೂಲ್ ಗವರ್ನರ್ ವಕ್ತಾರ ಹಫೀಜುಲ್ಲಾ ಬಶಾರತ್ ಮಾತನಾಡಿ, ಕಾಬೂಲ್‌ನ ಹೊರವಲಯದಲ್ಲಿ ಮನೆಯೊಂದು ಕುಸಿದು ಒಂದೇ ಕುಟುಂಬದ ಎಂಟು ಮಂದಿ ಮೃತಪಟ್ಟಿದ್ದು, ಮಗುವೊಂದು ಗಾಯಗೊಂಡಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಸಚಿವಾಲಯದ ವಕ್ತಾರ ಶರಾಫತ್ ಜಮಾನ್ ಅವರು ಪ್ರಾಂತೀಯ ಆರೋಗ್ಯ ಅಧಿಕಾರಿಗಳನ್ನು ಜಾಗರೂಕರಾಗಿರುವಂತೆ ಸೂಚಿಸಿದ್ದಾರೆ. ಭೂಕಂಪದ ಕೇಂದ್ರಬಿಂದು ಕುಂದುಜ್ ನಗರದಿಂದ 150 ಕಿಲೋಮೀಟರ್ ದೂರದಲ್ಲಿರುವ ಹಿಂದೂ ಕುಶ್ ಪರ್ವತ ಶ್ರೇಣಿಯಲ್ಲಿತ್ತು. ಇಸ್ಲಾಮಾಬಾದ್, ಪೇಶಾವರ ಮತ್ತು ಸ್ವಾತ್ ನಗರಗಳಲ್ಲಿಯೂ ನಡುಕ ಉಂಟಾಗಿದೆಯಾದರೂ, ಪಾಕಿಸ್ತಾನದಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಕಳೆದ ಆಗಸ್ಟ್‌ನಲ್ಲಿ ಸಂಭವಿಸಿದ 6.0 ತೀವ್ರತೆಯ ಭೂಕಂಪಕ್ಕೆ 2,200 ಜನರು ಬಲಿಯಾಗಿದ್ದರು.

ರಾಷ್ಟ್ರೀಯ ಚೇತನ ಜಾಗೃತಿಗೆ ಆರ್‌ಎಸ್‌ಎಸ್ ಭಾರೀ ಅಭಿಯಾನ | 62 ಸಾವಿರ ಕಾರ್ಯಕ್ರಮ, 32 ಲಕ್ಷ ಸ್ವಯಂಸೇವಕರು

ಹತ್ತು ಕೋಟಿ ಮನೆಗಳನ್ನು ತಲುಪಿದ ಆರ್‌ಎಸ್‌ಎಸ್

ಹೊಸದಿಲ್ಲಿ : ಸಮಾಜದಲ್ಲಿ ಗುರುತು ಆಧಾರಿತ ಭೇದಗಳನ್ನು ಉಂಟುಮಾಡುವ ಯತ್ನಗಳ ನಡುವೆಯೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದೇಶದಲ್ಲಿ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಮಹತ್ತರ ಸಾಧನೆ ಮಾಡಿದೆ ಎಂದು ಸಂಘದೊಂದಿಗೆ ಸಂಬಂಧಿತ ವಾರಪತ್ರಿಕೆ ಆರ್ಗನೈಸರ್ ತನ್ನ ಸಂಪಾದಕೀಯದಲ್ಲಿ ಪ್ರಶಂಸಿಸಿದೆ. 2025ರ ವಿಜಯದಶಮಿ ಉತ್ಸವದಿಂದ ಆರಂಭವಾದ ಸಂಘದ ಈ ಭಾರೀ ಅಭಿಯಾನವು ದೇಶವ್ಯಾಪಿಯಾಗಿ ಬಿರುಸುಗೊಂಡಿದ್ದು, ಕೇವಲ 15 ದಿನಗಳ ಅವಧಿಯಲ್ಲಿ 62,000ಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆಸಿದ್ದು, 32 ಲಕ್ಷಕ್ಕೂ ಅಧಿಕ ಸ್ವಯಂಸೇವಕರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. 22,000 ಸ್ಥಳಗಳಲ್ಲಿ ನಡೆದ ಪಥ ಸಂಚಲನಗಳಲ್ಲಿ 25 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿರುವುದು ಗಮನಾರ್ಹವಾಗಿದೆ.

ಇದಕ್ಕೂ ಮೀರಿ, ಮನೆಮನೆಗೆ ತಲುಪುವ ಗೃಹ ಸಂಪರ್ಕ ಅಭಿಯಾನದ ಮೂಲಕ ಸಂಘವು ತನ್ನ ಪಂಚ ಪರಿವರ್ತನೆ ಸಂದೇಶವನ್ನು 10 ಕೋಟಿಗೂ ಅಧಿಕ ಕುಟುಂಬಗಳಿಗೆ ತಲುಪಿಸಿದೆ. ಈ ಅಭಿಯಾನವು 46 ಪ್ರಾಂತಗಳಲ್ಲಿ 37 ಪ್ರಾಂತಗಳನ್ನು ವ್ಯಾಪಿಸಿದೆ ಎಂದು ಸಂಪಾದಕೀಯ ತಿಳಿಸಿದೆ.

ಈ ಪ್ರಕ್ರಿಯೆಯಿಂದ ರಾಷ್ಟ್ರದ 'ಸುಪ್ತ ಶಕ್ತಿ' ಜಾಗೃತಿಗೊಂಡಿದ್ದು, ಸಂಘದ ಕಾರ್ಯಗಳ ಬಗ್ಗೆ ಜನರಲ್ಲಿ ಇರುವ ಪ್ರಶ್ನೆಗಳು ಮತ್ತು ಭಿನ್ನಾಭಿಪ್ರಾಯಗಳನ್ನೂ ನೇರವಾಗಿ ಅರಿಯುವ ಅವಕಾಶ ಸಿಕ್ಕಿದೆ ಎಂದು ಉಲ್ಲೇಖಿಸಲಾಗಿದೆ.



ದೇಶದಾದ್ಯಂತ ನಡೆದ ಹಿಂದೂ ಸಮಾವೇಶಗಳಲ್ಲಿ ಜಾತಿ, ಪಂಥ, ರಾಜಕೀಯ ಭೇದಗಳನ್ನು ಮೀರಿ 3 ಕೋಟಿಗೂ ಹೆಚ್ಚು ಜನರು ಭಾಗವಹಿಸಿದ್ದು, ಸಾಮಾಜಿಕ ಏಕತೆ ಬಲಪಡಿಸುವಲ್ಲಿ ಸಂಘದ ಪ್ರಯತ್ನಗಳು ಸ್ಪಷ್ಟವಾಗಿವೆ. ಸ್ಥಳೀಯ ಮಟ್ಟದಲ್ಲಿ 20ರಿಂದ 40 ಪ್ರಮುಖ ವ್ಯಕ್ತಿಗಳು ಹಾಗೂ ಸಂಘಟನೆಗಳ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮಗಳು ನಡೆದವು.

ಸದ್ಭಾವ ಬೈಠಕ್ ಹಾಗೂ ಪ್ರಮುಖ ಜನ ಸಂಗೋಷ್ಠಿಗಳ ಮೂಲಕ ಸಮಾಜದ ಬೌದ್ಧಿಕ ಹಾಗೂ ಸಾಮಾಜಿಕ ನಾಯಕತ್ವವನ್ನು ಒಂದೇ ವೇದಿಕೆಗೆ ತರಲಾಗಿದ್ದು, ಸಾಮಾಜಿಕ ಸೌಹಾರ್ದತೆಗೆ ಒತ್ತು ನೀಡಲಾಗಿದೆ. ಸಂಘದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಲು ಮುಕ್ತ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಜನಸಂಪರ್ಕದ ಮೂಲಕ ನೇರ ಸಂವಾದ ನಡೆಸಲಾಗಿದೆ ಎಂದು ಸಂಪಾದಕೀಯ ಹೇಳಿದೆ.

ರಾಷ್ಟ್ರಪುನರ್‌ನಿರ್ಮಾಣಕ್ಕೆ 'ಜಾಗೃತಿ ಶಕ್ತಿ, ಸುಪ್ತ ಶಕ್ತಿ ಹಾಗೂ ಸಜ್ಜನ ಶಕ್ತಿ' ಪ್ರಮುಖ ಕಂಬಗಳೆಂದು ಉಲ್ಲೇಖಿಸಿದ ಪತ್ರಿಕೆ, ಸಂಘವು ದೇಶದ ತಲುಪದ ವರ್ಗಗಳತ್ತವೂ ಗಮನ ಹರಿಸಿದೆ ಎಂದು ತಿಳಿಸಿದೆ.

ಇದೇ ವೇಳೆ, ಹರಿಯಾಣದ ಸಮಾಲ್ಖಾದಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭೆಯಲ್ಲಿ 2025-26ರ ಕಾರ್ಯಗಳನ್ನು ಪರಿಶೀಲಿಸಿ, ಮುಂದಿನ ಕಾರ್ಯಯೋಜನೆ ರೂಪಿಸಲಾಗಿದೆ. ಸಂಘದ ಕಾರ್ಯವಿಸ್ತರಣೆ, ಸಕಾರಾತ್ಮಕ ಶಕ್ತಿಗಳ ಸಕ್ರಿಯ ಪಾಲ್ಗೊಳ್ಳಿಕೆ ಹಾಗೂ ಸಾಮಾಜಿಕ ಸೌಹಾರ್ದತೆ ಬಲಪಡಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಸರಸಂಘಚಾಲಕ್ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿದಂತೆ ಹಿರಿಯ ಪದಾಧಿಕಾರಿಗಳು ಹಾಗೂ ಬಿಜೆಪಿ ಸೇರಿ 32 ಸಹೋದರ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು.

- 22 ಸಾವಿರ ಸ್ಥಳಗಳಲ್ಲಿ ಪಥ ಸಂಚಲನ, 25 ಲಕ್ಷ ಮಂದಿ ಭಾಗಿ
- ಆರ್ಗನೈಸರ್ ಸಂಪಾದಕೀಯದಲ್ಲಿ ಸಂಘದ ಕಾರ್ಯಗಳಿಗೆ ಮೆಚ್ಚುಗೆ



ಸಮಾಜವನ್ನು ಗುರುತು ಆಧಾರಿತ ಭೇದಗಳ ಮೂಲಕ ವಿಭಜಿಸಲು ನಡೆಯುವ ಯತ್ನಗಳು ಮತ್ತು ಜಾಗತಿಕ ಅಸ್ಥಿರ ಪರಿಸ್ಥಿತಿಗಳು ಒಂದಾಗಿರುವ ಸಂದರ್ಭದಲ್ಲಿ, ಸಂಘವು ಭಾರತದ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವ ಮತ್ತು ವಿಸ್ತರಿಸುವಲ್ಲಿ ಗಮನಾರ್ಹ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

■ ಪ್ರಫುಲ್ಲ ಕೆತ್ಕರ್, ಆರ್ಗನೈಸರ್ ಸಂಪಾದಕ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ,
ಚಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560 015.
E-mail: dcf.buzp@yahoo.in Phone No: 080-29900992.

ಸಂಖ್ಯೆ: ಎ1/ಬಿಯುಡಿ/ಟೆಂಡರ್/ಸಿಆರ್–26/2025–26 ದಿನಾಂಕ: 04–04–2026

ಮರು–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್, ಕಗ್ಗಲೀಪುರ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ ಮತ್ತು 3ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2025–26ನೇ ಸಾಲಿನಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರು ಹಾಗೂ 2026–27ನೇ ಸಾಲಿನಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಲು ಇಚ್ಛಿಸುವ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ ಪೋರ್ಟಲ್ (https://.kppp.karnataka.gov.in) ಮೂಲಕ ಮರು–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 13–04–2026 ರಂದು ಸಂಜೆ 4:00 ಗಂಟೆ.** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 16–04–2026 ರಂದು ಪೂರ್ವಾಹ್ನ 11.00 ಗಂಟೆ** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ 18–04–2026 ಸಂಜೆ 3.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾ ದಿನಗಳನ್ನು ಹೊರತು ಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/61/ಆಕಾರ್/2026–27

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಧಾರವಾಡ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಧಾರವಾಡ

Phone : 0836-2447483 E Mail : dhodharwad@gmail.com
ಕ್ರಸಂ:ಪೂರೈಕೆ/ಮಾ.ಸಂ.ಗು/ವಹಿ/01/2026–2027 ದಿನಾಂಕ: 02.04.2026

ಟೆಂಡರ್ ಪ್ರಕಟಣೆ

ವಿಷಯ: 2026–2027 ನೇ ಸಾಲಿಗಾಗಿ ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ನೇಮಿಸಲು ಇ–ಪೋರ್ಟಲ್ ಮೂಲಕ ಟೆಂಡರ ಆಹ್ವಾನಿಸುವ ಕುರಿತು.

ಉಲ್ಲೇಖ : 1. ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರ ಅನುಮೋದಿತ ಕಡತ ಕಂಡಿಕೆ ಸಂಖ್ಯೆ: 65/ದಿನಾಂಕ 31.03.2026
2. Tender No: DHFWS/2026-27 /SE2130

ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ ಶಹರದ ಪ್ರತಿಷ್ಠಿತ ಕೆ.ಎಮ್.ಸಿ.ಐ.ಆರ್. ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಲು ಅತೀ ಅವಶ್ಯವಿರುವ ವಿವಿಧ ವೃಂದಗಳ ಖಾಲಿ ಹುದ್ದೆಗಳಿಗೆ ಮಾನವ ಸಂಪನ್ಮೂಲ ಹೊರಗುತ್ತಿಗೆ ಸಂಸ್ಥೆಗಳಿಂದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವಂತೆ ಮಾನ್ಯ ಸರಕಾರದ ಆದೇಶವಿರುವ ಪ್ರಯುಕ್ತ ಉಲ್ಲೇಖ 1 ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರು ದಿನಾಂಕ : 31.03.2026 ರಂದು ಅನುಮೋದನೆ ನೀಡಿರುತ್ತಾರೆ.

ಟೆಂಡರಗಿಟ್ಟ ಮೊತ್ತ ರೂ. **70.00** ಲಕ್ಷಗಳು ಎಂದು ಅಂದಾಜಿಸಲಾಗಿದೆ. ಒಟ್ಟು ಟೆಂಡರ ಮೊತ್ತದ ಇ.ಎಮ್.ಡಿ ಮೊತ್ತ ರೂ. **1.40.000–00** (2.%) ಗಳನ್ನು ಆನ್ ಮೂಲಕ ಭರಿಸಬಹುದಾಗಿದೆ. ಇ–ಪೋರ್ಟಲ್‌ನಲ್ಲಿ ಬಿಡ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **16.04.2026** at 16.30 pm ಆಗಿದ್ದು ಇಚ್ಛೆಯುಳ್ಳ ಸಂಸ್ಥೆಯವರು ಟೆಂಡರ ಬಿಡ್‌ನ್ನು ಇ–ಪೋರ್ಟಲ್ ವೆಬ್ ಸೈಟ್ http://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು ಧಾರವಾಡ

ವಾಸಾಸಂಇ/ಧಾ/ಕೆಎಸ್‌ಎಂಸಿಎ/12/2026–27

(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2025–26 ದಿನಾಂಕ:01.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕಾರ್ಯ ಅಭೀವೃದ್ಧಿ ಯೋಜನೆಯಡಿ INDENT NO:(1) RDPR/2025-26/BD/WORK_INDENT25517 (2)RDPR/2025-26/RD/WORK_INDENT25520 (3) RDPR/2025-26/BD/WORK_INDENT25516 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 02.04.2026 ರಿಂದ ದಿ:13.04.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:13.04.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:10.04.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರೀ–ಬಿಡ್ ಮೀಟಿಂಗನ್ನು ದಿನಾಂಕ:08.04.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜಿನಿಯಿರಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:15.04.2026 ರಂದು ಬೆಳಗೆ 11.00 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/12/ಕೆಎಸ್‌ಎಂಸಿಎ/2026–27

ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ ಕೋಲಾರ – 563101

e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152–222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –4 ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–01/2026–27 ದಿನಾಂಕ: 02.04.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 8443–ಠೇವಣಿ ವಂತಿಗೆ** ಅಡಿಯಲ್ಲಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ರೂ.330.00 ಲಕ್ಷಗಳು **ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ,** ಕಾಲಾವಧಿ : 11 ತಿಂಗಳು ನಿರ್ವಹಿಸಲು **ಕೆಡಬ್ಲ್ಯು–4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು–4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ**: 18.04.2026** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **21.04.2026** ರಂದು ಬೆಳಗ್ಗೆ **11.30 ಗಂಟೆಯ** ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:10/ಕೆಎಸ್‌ಎಂಸಿಎ/2026–27

ತುಮಕೂರು ಜಿಲ್ಲಾ ಪಂಚಾಯತ್,

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ತುಮಕೂರು ವಿಭಾಗ, ತುಮಕೂರು. ದೂ:0816–2252937
ಸಂಖ್ಯೆ:ಕಾಇಂ/ಪಂರಾಇವಿ/ತುಮ/ತಾಂಶಾ/ಟೆಂಡರ್/2026–27/01 ದಿನಾಂಕ 02.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–01/2026–27 (ಕೆ.ಪಿ.ಪಿ ಪೋರ್ಟಲ್ ಮುಖಾಂತರ ಏಕ & ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1, KW-2, KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ: 080–22485867, 080–22485927ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್/ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಅರ್ಹ (ಸಿವಿಲ್) ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವ್ಯಾಪ್ತಿಯ 2025–26 ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ, 2025–26ನೇ ಸಾಲಿನ 5054–ರ ಕಾರ್ಯಕ್ರಮ, 2024–25ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ಥಿ ಯೋಜನೆ, 2024–25 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಶೌಚಾಲಯ ಬ್ಲಾಕ್ ನಿರ್ಮಾಣ, 2018–19 ನೇ ಸಾಲಿನ ಪರಿಶಿಷ್ಟ ಜಾತಿ ವಿವಿಧ ಅಭಿವೃದ್ಧಿ ಯೋಜನೆ (ಬಂಡವಾಳ ಲೆ.ಶೀ4225–01–796–0–01) ಯೋಜನೆಗಳಡಿ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

(Indent No:
1.RDPR/2025-26/BD/WORK_INDENT24930,
2.RDPR/2025-26/BD/WORK_INDENT24926,
3.RDPR/2025-26/BD/WORK_INDENT22856/CALL-2,
4.RDPR/2025-26/RD/WORK_INDENT25755,
5.RDPR/2025-26/RD/WORK_INDENT25756,
6.RDPR/2025-26/BD/WORK_INDENT25902,
7.RDPR/2025-26/BD/WORK_INDENT25901,
8.RDPR/2026-27/BD/WORK_INDENT25932,
9.RDPR/2025-26/BD/WORK_INDENT24189)

ಕಾಮಗಾರಿಗಳ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ – ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ http://www.KPPP.karnataka.gov.in ಮುಖಾಂತರ ದಿನಾಂಕ: 02.04.2026 ರಿಂದ 17.04.2026 ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ.–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/07/KSMCA/2026-27

GOVERNMENT OF KARNATAKA
KARNATAKA FOREST DEPARTMENT
Assistant Conservator of Forests,
Nagamangala Territorial Sub Division, Mandya Division
No: Acf/NMG/Outource/Tender/CR-1/2026-27
Date: 01-04-2026

Tender Notification

TENDER No. : Acf/NMG/Outsource/Tender/CR-1/2026-27. PROCUREMENT ENTITY : Karnataka Forest Department. TENDER INVITING AUTHORITY : Assistant Conservator of Forest, Nagamangala Territorial Sub Division, Mandya Division. PUBLISHED DATE : 01.04.2026. MAIL ID/ADDRESS TO REQUEST CLARIFICATIONS : acfnagamangala@gmail.com. CONTACT PERSON : Assistant Conservator of Forest, Nagamangala Territorial Sub Division, Mandya Division.

First Time Tender

LAST DATE & TIME FOR TENDER QUERIES/CLARFICATIONS : 13-04-2026, 5.30 PM. LAST DATE & TIME FOR SUBMISSION OF TENDERS : 15.04.2026-5.00 PM. ONLINE IN KARNATAKA PUBLIC PROCUREMENT PORTAL : https://kppp.karnataka.gov.in. DATE & TIME FOR OPENING OF TECHNICAL TENDER ONLINE IN KARNATAKA PUBLIC PROCUREMENT PORTAL : 16.04.2026, 5.10 PM. DATE & TIME FOR OPENING OF FINANCIAL TENDERS : 21.04.2026-5.20 PM.

Second Time Tender (If no successfull bids are received on first time)

LAST DATE & TIME FOR SUBMISSION OF TENDERS : 20.04.2026-5.30 PM. DATE AND TIME FOR OPENING OF TECHNICAL TENDER ONLINE IN KARNATAKA PUBLIC PROCUREMENT PORTAL : 27.04.2026, 5.00 PM. DATE & TIME FOR OPENING OF FINANCIAL TENDERS : 28.04.2026, 5.00 PM. ADDRESS FOR COMMUNICATION : Assistant Conservator of Forest, Nagamangala Territorial Sub Division, TB Extension, Nagamangala. AMOUNT PUT TO TENDER (Including Service charge, GST) : Rs.54,85,804.00/-. AMOUNT OF EARNEST MONEY DEPOSIT : Show in Table 1.1.

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

PERIOD OF CONTRACT : 01.04.2026 to 31.03.2027 = 12 Months.

VALIDITY OF TENDER : 45 days from the last date for Submission of Tenders.

Sd/-Assitant Conservator of Forests, Nagamangala Sub Division, Mandya Division

ವಾಸಾಸಂಇ/ಸಂ–ಮಂ/ಕೆಎಸ್‌ಎಂಸಿಎ/008/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು
ಟೆಂಡರ್ ಅಧಿಸೂಚನೆ ಸಂಖ್ಯೆ:ದ.ಕ.ಜಿ.ಪ/ಮಂ/ಟೆಂಡರ್–1/ಎಇ–1/ಜೆಇ1/ಜೆಇ2/2026–27/11/ ದಿನಾಂಕ:04–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವರ್ಷನ್–2 ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ.

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17–04–2026 ಅಪರಾಹ್ನ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18–04–2026 ಅಪರಾಹ್ನ 4.30 ಗಂಟೆಗೆ (3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಂತರ್‌ಜಾಲ https://kppp.karnataka.gov.in ನಲ್ಲಿ, ಕಛೇರಿ ದೂರವಾಣಿ ಸಂಖ್ಯೆ: 0824–2451281 ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು

DIPR/DK/KSMCA/22/26-27 Dt. 04.04.2026

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಬ್ರಹ್ಮಣ್ಯ ಉಪವಿಭಾಗ, ಸುಳ್ಯ, ಗಾಂಧಿನಗರ ಸುಳ್ಯ 574239

ಸಂಖ್ಯೆ:ಸ.ಅ.ಸಂ:ಟೆಂ(ಮಂ.ವಿ)ವಿವ–01/2026–27 ದಿನಾಂಕ: 01–04–2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ಸುಬ್ರಹ್ಮಣ್ಯ ಉಪ ವಿಭಾಗ ಸುಳ್ಯದ ವ್ಯಾಪ್ತಿಗೊಳಪಡುವ ವಿವಿಧ ವಲಯಗಳಲ್ಲಿ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ, ನೆಡುತೋಪು ಪೋಷಣೆ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15–04–2026 ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 17–04–2026 ರಂದು ಪೂರ್ವಾಹ್ನ 11.00 ಗಂಟೆಗೆ ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ–ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 24–04–2026 ರಂದು ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 27–04–2026 ರಂದು ಪೂರ್ವಾಹ್ನ 11.00 ಗಂಟೆಗೆ ಹೆಚ್ಚಿನ ವಿವರಗಳನ್ನು ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸುಬ್ರಹ್ಮಣ್ಯ ಉಪ ವಿಭಾಗ, ಸುಳ್ಯ


DIPR/DK/KSMCA/21/26-27 dt.04.04.2026

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ

ನೋ ಸಂ :ಆರ್.ಎಸ್. ಆರ್. ಸೌ.ಕಾ. 128–009–2001–02
ಪ್ರಧಾನ ಕಛೇರಿ: ದರ್ಬೆ, ಪುತ್ತೂರು –574202, ದ.ಕ.
ಶಾಖೆ: ಪ್ರಥಮ ಮಹಡಿ, ವಿವಾ ಕಾಂಪ್ಲೆಕ್ಸ್, ಮುಖ್ಯರಸ್ತೆ, ಬೆಳ್ತಂಗಡಿ, ದ.ಕ.–574214.
ಫೋನ್: 08256–232373, 9739986841 Email: bly@saraswathisahakari.com

ವಾಹನ ಹರಾಜು ಪ್ರಕಟಣೆ

ಈ ಕೆಳಕಂಡ ಮಹನೀಯರು ನಮ್ಮ ಸಹಕಾರಿಯಿಂದ ವಾಹನ ಸಾಲ ಪಡೆದುಕೊಂಡು ಸಮಯಕ್ಕೆ ಸರಿಯಾಗಿ ಮರುಪಾವತಿಸದ ಕಾರಣ, ಈ ಕೆಳಗೆ ಕಾಣಿಸಿದ ವಾಹನವನ್ನು ಮುಟ್ಟುಗೋಲು ಹಾಕಲಾಗಿದ್ದು, ಸದ್ರಿ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲವನ್ನು ದಿನಾಂಕ: 15.04.2026 ರೊಳಗಾಗಿ ಮರುಪಾವತಿಸದಿದ್ದರೆ, ಸದ್ರಿ ವಾಹನವನ್ನು ದಿನಾಂಕ 16.04.2026 ರಂದು ಸಮಯ ಬೆಳಿಗ್ಗೆ 11.30ಕ್ಕೆ ಬೆಳ್ತಂಗಡಿ ಶಾಖೆಯ ಆವರಣದಲ್ಲಿ ಬಹಿರಂಗ ಯಾ ನೋಟೀಸು ಕೊಡದೇನೆ ಖಾಸಗಿಯಾಗಿ "ಎಲ್ಲಿ ಹೇಗಿದೆಯೋ ಹಾಗೇ" ಯಥಾ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು.

ಕ್ರ.ಸಂ.	ವಾಹನ ಸಂಖ್ಯೆ ಮತ್ತು ವಿಧ	ಸಾಲಗಾರರ ಹೆಸರು ಮತ್ತು ವಿಳಾಸ
01	ವಾಹನ ಸಂಖ್ಯೆ: KA-70-7116 ವಿಧ: BAJAJ RE 4S LPG BI FUEL ವರ್ಷ : 2023	ಸಾಲದ ಸಂಖ್ಯೆ : 008/154/230119 ಸಾಲಗಾರರು : ಮೆ.ನಂ. ಎ–6426 ಎಂ ಕೃಷ್ಣ ಬಿನ್ ಎಂ ಮಾಂಕು, ಬೂಡುಜಾಲು ಮನೆ, ನಿಡ್ಲೆ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲೂಕು ದ.ಕ.–574216  ಸಹಜವಾಬ್ದಾರರು : ಮೆ.ನಂ. ಎ–33623 ಹೊನ್ನಮ್ಮ ಕೋಂ. ಶಿದ್ದ, ಬೂಡುಜಾಲು ಮನೆ, ನಿಡ್ಲೆ ಅಂಚೆ ಮತ್ತು ಗ್ರಾಮ, ಬೆಳ್ತಂಗಡಿ ತಾಲೂಕು ದ.ಕ.–574216 

ದಿನಾಂಕ 04.04.2026 ರಂತೆ ಶಾಖೆಗೆ ಬರಬೇಕಾಗಿರುವ ಒಟ್ಟು ಬಾಕಿ ಮೊತ್ತ ರೂ. 2,25,651.63 + ನಂತರದ ಬಡ್ಡಿ ಮತ್ತು ಇತರ ಖರ್ಚು.

(ಆಡಳಿತ ಮಂಡಲಿ ಅನುಮತಿ ಮೇರೆಗೆ)
ಸೂಚನೆ: ಸದ್ರಿ ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಯಾ ರದ್ದುಗೊಳಿಸುವ ಅಧಿಕಾರವನ್ನು ಸಹಕಾರಿಯ ಆಡಳಿತ ಮಂಡಲಿ ಕಾಯ್ದಿರಿಸಿದೆ.
ದಿನಾಂಕ: 04.04.2026
ಸ್ಥಳ: ಬೆಳ್ತಂಗಡಿ

ಸಹಿ/–
ಪ್ರಧಾನ ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ

Ph- 08182-222983 e-mail -acfwlshimoga@gmail.com
ಸಂಖ್ಯೆ/ಸಅಸಂ/ವಉವಿಶಿ/ಸಿಆರ್–/2026–27 Date: 01.04.2026

ಟೆಂಡರ್ ಅಧಿಸೂಚನೆ

2026–27ನೇ ಸಾಲಿನಲ್ಲಿ ಶಿವಮೊಗ್ಗ ವನ್ಯಜೀವಿ ವಿಭಾಗದ, ಸಕ್ರೆಬೈಲು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಆನೆಗಳಿಗೆ ಆಹಾರ 01/04/2026 ರಿಂದ 31/03/2027ರ ವರೆಗೆ ವಿವಿಧ ಪಡಿತರ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸರಬರಾಜುದಾರರು ಕೆಳಕಂಡ ದಿನಾಂಕದಂದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ.ಸಂ. 1. **ಕೆಲಸದ ವಿವರ:** ಸಕ್ರೆಬೈಲು ವನ್ಯಜೀವಿ ವಲಯ, ಗಾಜನೂರು ಆನೆ ಶಿಬಿರದ ಇಲಾಖಾ ಆನೆಗಳಿಗೆ ಪಡಿತರ ಸರಬರಾಜು **ಅಂದಾಜು ಮೊತ್ತ ಎಲ್ಲಾ ತೆರಿಗೆ ಸೇರಿ (ರೂ.ಲಕ್ಷಗಳಲ್ಲಿ):** 97.93315

*) ಮೇಲಿನ ಅನುಸೂಚಿಯಲ್ಲಿ ಆಹ್ವಾನಿಸಿರುವ ಕಾಮಗಾರಿಯನ್ನು ಸರ್ಕಾರದಿಂದ ನಿಗಧಿಪಡಿಸುವ ಅನುದಾನ ಮತ್ತು ಬಿಡುಗಡೆಯಾಗುವ ಅನುದಾನದ ನಿರೀಕ್ಷೆಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. *) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.05.2026 ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/28/04/31

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ

ಇ–ಟೆಂಡರ್ ಪ್ರಕಟಣೆ (E-Procurement mode only)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಚಿಕ್ಕೋಡಿ ಉಪ–ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ವಿದ್ಯಾರ್ಥಿನಿಲಯ ಹಾಗೂ ತಾಲ್ಲೂಕಾ ಮಾಹಿತಿ ಕೇಂದ್ರಗಳಿಗೆ, ಡಾಟಾ ಎಂಟ್ರಿ ಆಪರೇಟರ್, ಸ್ಟಾಫ್ ನರ್ಸ, ವಾಹನ ಚಾಲಕರು, ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ ಮತ್ತು ಗ್ರೂಪ್–ಡಿ ಒಟ್ಟು 54 ಜನ ಸಿಬ್ಬಂದಿಗಳ ಸೇವೆಯನ್ನು ಹೊರ ಮಾನವ ಸಂಪನ್ಮೂಲ ಸಂಸ್ಥೆಯಿಂದ ಆರ್ಥಿಕ ವರ್ಷ 2026–27ನೇ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಸಿಬ್ಬಂದಿ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು 2000 ರ ಪ್ರಕಾರ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ http:// kppp.karnataka.gov.in ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ:ಸಂ/ಅಸಂಕಇಬೆ/ಜಿ.ವಿ/ಹೊ.ಸಿ/ ಟೆಂಡರ್/ಸಿಆರ್–78/2025–26, ಟೆಂಡರ್ ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) 120.10, ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ) 1.80, ಸೆಕ್ಯೂರಿಟಿ ಡಿಪಾಜಿಟ್ (ಅನುಮೋದನೆಗೊಂಡ ಟೆಂಡರದಾರರು ಮಾತ್ರ) ಬಿಡ್ ಮೊತ್ತದ ಶೇ.5 ರಷ್ಟು, ಟೆಂಡರ್ ಸಲ್ಲಿಸುವ ಆರಂಭ ದಿನಾಂಕ:02.04.2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ 04.05.2026 ಸಾಯಂಕಾಲ 5.00 ಗಂಟೆ

ಹೆಚ್ಚಿನ ಮಾಹಿತಿಯನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಅಥವಾ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ:0831–2950349 ಮೂಲಕ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,ಬೆಳಗಾವಿ.

DIPR/BGM/RO-NO-27/KSMCA/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-748) ಡ್ರಾ ಏಪ್ರಿಲ್ 4ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KF 265220 (IRINJALAKUDA)

Consolation Prize Rs.5,000/-
KA 265220 KB 265220 KC 265220 KD 265220
KE 265220 KG 265220 KH 265220 KJ 265220
KK 265220 KL 265220 KM 265220

2nd Prize Rs.25,00,000/- [25 Lakhs]
KL 776918 (KOLLAM)

3rd Prize Rs.10,00,000/- [10 Lakhs]
KA 435946 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0091 0646 1818 2042 2435 2539 3472 3530 3865 4000
4519 5427 6006 6605 6810 6893 9121 9669 9746

5th Prize Rs.2,000/-
4057 4064 5383 7809 8626 9465

6th Prize Rs.1,000/-
0248 0504 1128 1692 2400 2413 2521 2863 4138 4751
4914 5332 5858 5862 6397 6509 6597 6783 7709 8032
8241 8299 9119 9821 9886

7th Prize Rs.500/-
0041 0101 0196 0389 0492 0588 0639 0743 0895 1002
1025 1038 1091 1139 1158 1479 1601 1795 1866 1867
1876 2018 2132 2291 2354 2640 2979 3060 3068 3210
3252 3303 3566 3767 4124 4225 4279 4537 4620 4768
4777 5068 5157 5210 5286 5296 5330 5400 5671 5742
5886 6164 6206 6537 6827 6854 6918 7293 7588 8189
8210 8240 8339 8874 8928 8995 9018 9089 9373 9574
9725 9817 9835 9850 9896 9942

8th Prize Rs.200/-
0021 0321 0393 0643 0995 1112 1169 1250 1511 1728
1783 1944 2342 2424 2582 2638 2655 2703 2743 2904
3055 3089 3201 3392 3441 3502 3581 3796 3853 3868
3916 4017 4220 4286 4346 4368 4532 4540 4552 4555
4710 4749 4826 5011 5124 5177 5252 5299 5375 5574
5603 5892 5905 5914 6014 6062 6388 6396 6459 6821
6851 6871 6947 7253 7288 7507 7606 7995 8015 8020
8120 8133 8160 8370 8385 8436 8529 8629 8633 8655
8659 8709 8728 8978 9234 9264 9287 9395 9400 9416
9517 9665

9th Prize Rs.100/-
0069 0085 0088 0197 0246 0360 0669 0731 0739 0807
0843 0849 0899 1023 1066 1136 1250 1359 1362 1422
1458 1617 1719 1734 1833 1834 1846 1988 2010 2077
2197 2233 2235 2294 2299 2388 2407 2449 2463 2529
2569 2695 2770 2843 2897 3020 3044 3064 3120 3177
3213 3247 3370 3466 3482 3626 3679 3703 3927 3948
4006 4147 4151 4198 4202 4316 4321 4542 4549 4583
4610 4713 4758 4781 4787 4792 4793 4840 4930 4939
5051 5115 5199 5426 5614 5805 5881 5981 6085 6223
6227 6273 6297 6555 6563 6664 6735 6848 7326 7344
7360 7364 7460 7477 7502 7536 7623 7662 7685 7693
7695 7855 7889 7920 7942 8153 8159 8182 8239 8293
8379 8400 8483 8555 8571 8675 8778 9191 9197 9253
9311 9318 9331 9356 9425 9428 9473 9506 9655 9661
9664 9819 9926 9975

ಪುತ್ತೂರು ಮಾರುಕಟ್ಟೆ ಧಾರಣೆ

04-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 500
ಚೋಲ್ ಅಡಿಕೆ	530 - 555
ಡಬಲ್ ಚೋಲ್	530 - 555
ಹೊಸ ಪಠೋರ	350 - 400
ಹಳೆ ಪಠೋರ	380 - 410
ಹೊಸ ಉಳ್ಳಿ	120 - 290
ಹಳೆ ಉಳ್ಳಿ	105 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು : 450 - 660

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	225.00
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	135.00
ಸ್ಕ್ರಾಪ್ 2	125.00

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಸಂಖ್ಯೆ: ಶಿಮನಪಾಶಿ/ಕಾ.ವಿ/ಟೆಂಡರ್/57/2025–26 ದಿನಾಂಕ: 31.03.2026

ಟೆಂಡರ್ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ **www.kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು

1) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:02.05.2026 (ಸಂಜೆ: 4.00 ಗಂಟೆಗೆ). 2) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.05.2026 (ಸಂಜೆ 4.30 ಗಂಟೆಗೆ). 3) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಆರ್ಥಿಕ್ ಬಿಡ್ ತೆರೆಯುವ ದಿನಾಂಕ: 05.05.2026 (ಸಂಜೆ 4.30 ಗಂಟೆಗೆ)

ಕ್ರ ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿ/ಸೇವೆಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.
1.	56311	Restoration and continuation work of Poura Karmika Housing Block no.09 and 11 in Shivamogga City Corporation limits	314.00	3,98,000/–
2.	55923	Restoration and continuation work of Poura Karmika Housing Block no.04,06,16 in Shivamogga City Corporation limits	478.00	6,06,000/–
3.	56966	Restoration and continuation work of Poura Karmika Housing Block no.01 and 14 in Shivamogga City Corporation limits	294.00	3,73,000/–

ಸೂಚನೆ: 1. ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ವಾ.ಸಾ.ಸಂ.ಇ./ಶಿ/ನಂ.21.04/
ಝೀಂಕಾರ್/2026–27

ಸಹಿ/–
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಕಿರುಸುದ್ದಿ

ಜಮೀನಿಗೆ ಅಳವಡಿಸಿದ್ದ ಕಂಬ, ತಂತಿ ಮುಳ್ಳು ಕಳವು

ಬಂಟ್ವಾಳ: ಜಮೀನಿಗೆ ಅಕ್ರಮ ಪ್ರವೇಶ ಮಾಡಿ ತಂತಿ ಮುಳ್ಳು ಬೇಲಿ ಕಿತ್ತಾಕಿದಲ್ಲದೆ ತಂತಿ ಮುಳ್ಳು ಅಳವಡಿಸಿದ 20 ಕಾಂಕ್ರಿಟ್ ಕಂಬಗಳನ್ನು ಹಾಗೂ ತಂತಿ ಮುಳ್ಳನ್ನು ಕಳವುಗೈದ ಘಟನೆ ಬಂಟ್ವಾಳ ಗ್ರಾಮಾಂತರ ಠಾಣಾ ವ್ಯಾಪ್ತಿಯ ಚೇಳೂರು ಗ್ರಾಮದಲ್ಲಿ ಸಂಭವಿಸಿದೆ. ಈ ಬಗ್ಗೆ ಬೊಳ್ಳಾರು ನಿವಾಸಿ ರೋಬರ್ಟ್ ಡಿಸೋಜ ಅವರು ಬಂಟ್ವಾಳ ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದು, ಉಳ್ಳಾಲ ತಾಲೂಕು ಚೇಳೂರು ಗ್ರಾಮದ ಕೆದೂರು ಚರ್ಚ್‌ಗೆ ಸಂಬಂಧಪಟ್ಟ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ ಆರೋಪಿಗಳಾದ ಜೋನ್ ಸ್ಟೀಫನ್ ಡಿಸೋಜ, ಡೈಯಾನಾ ಜೆಸ್ಟಿನ್ ಡಿಸೋಜ, ಡೆರಿಕ್ ಪ್ರಕಾಶ್ ಡಿ ಸೋಜಾ, ಪ್ರಶಾಂತ್ ಡಿಸೋಜ ಹಾಗೂ ವಿನಿಲ್ ಎಂಬವರು ಜಮೀನಿಗೆ ಅಳವಡಿಸಿದ ಕಬ್ಬಿಣದ ಗೇಟ್ ಹಾಗೂ ತಂತಿ ಮುಳ್ಳು ಬೇಲಿಯನ್ನು ಕಬ್ಬಿಣದ ಗೇಟನ್ನು ಕಿತ್ತು ಶಾಲಾ ಬಳಿ ಬಿಸಾಕಿದ್ದಲ್ಲದೆ ತಂತಿ ಮುಳ್ಳು ಅಳವಡಿಸಿದ 20 ಕಾಂಕ್ರೀಟ್ ಕಂಬಗಳನ್ನು ಹಾಗೂ ತಂತಿ ಮುಳ್ಳನ್ನು ಕಳವುಗೈದು ಪರಾರಿಯಾಗಿದ್ದಾರೆ. ಕಳವುಗೈದ 20 ಕಾಂಕ್ರೀಟ್ ಕಂಬ ಹಾಗೂ ತಂತಿ ಮುಳ್ಳಿನ ಮೌಲ್ಯ ಸುಮಾರು 15 ಸಾ. ರೂ. ಎಂದು ಅಂದಾಜಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲೇಜು ವಿದ್ಯಾರ್ಥಿಗಳ ಹೊಡೆದಾಟ : ಪ್ರಕರಣ ದಾಖಲು

ಕೊಣಾಜೆ: ಕೊಣಾಜೆ ಠಾಣಾ ವ್ಯಾಪ್ತಿಯ ನಡುಪದವು ಇಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿಗಳ ಗುಂಪು ಕಾಲೇಜಿನ ಹೊರಗಡೆ ಪರಸ್ಪರ ಹೊಡೆದಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಣಾಜೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಎ.1 ರಂದು ಮಧ್ಯಾಹ್ನ ಪಿ.ಎ.ಇಂಜಿನಿಯರಿಂಗ್ ಕಾಲೇಜಿನ ಗೇಟ್‌ನ ಹೊರಭಾಗದಲ್ಲಿ ಸುಮಾರು 10–15 ಜನರ ತಂಡ ಅವ್ಯಾಚ್ಯವಾಗಿ ಮಾತನಾಡಿಕೊಂಡು ಪರಸ್ಪರ ಹೊಡೆದಾಡಿಕೊಂಡಿದ್ದರು. ಹೊಡೆದಾಡಿಕೊಂಡ ದೃಶ್ಯವನ್ನು ಯಾರೋ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದರು. ಬಳಿಕ ಪೊಲೀಸರು ಕಾಲೇಜಿನ ಸಂಬಂಧಪಟ್ಟವರಲ್ಲಿ ವಿಚಾರಿಸಿ ಹಾಗೂ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದು ಹೊಡೆದಾಡಿಕೊಂಡ ಪದವಿ ಹಾಗೂ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಡಿ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕರಿಗೆ ಸಾರ್ವಜನಿಕರ ನೆಮ್ಮದಿಗೆ ಭಂಗವುಂಟುಮಾಡಿದರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ, ಹಿರ್ನಿ, ಅರಳ, ಬಂಟ್ವಾಳ (ತಾ).
2. ಯಕ್ಷಗಾನ ಸೇವಾ ಸಮಿತಿ, ಮಠದಬೈಲು, ಗುರುಪುರ.
3. ರಾಧಾಕೃಷ್ಣ ಅಡ್ಯಂತಾಯ, ಕಲ್ಕಾರು, ಮಂಚಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
4. ಪ್ರೇಮಾ ದೇವಪ್ಪ ಶೆಟ್ಟಿ ಮತ್ತು ಮನೆಯವರು, ಕೊಡೆತ್ತೂರು ಕೆಳಗಿನ ಮನೆ, ನಡುಗೋಡು.
5. ಲಕ್ಷ್ಮ, 'ಲಕ್ಷ್ಮಿ ನಿವಾಸ', ಮೊಗರ್ನಾಡು, ನರಿಕೊಂಬು, ಶ್ರೀ ಭಯಂಕೇಶ್ವರ ದೇವಸ್ಥಾನ ವಠಾರ, ಬಂಟ್ವಾಳ (ತಾ).
6. ಶ್ರೀ ಕಾವೀಃ ಸುಬ್ರಹ್ಮಣ್ಯ ದೇವಸ್ಥಾನ, ವರ್ಕಾಡಿ, ಮಂಜೇಶ್ವರ, ಕಾಸರಗೋಡು (ತಾ).
7. ಉಮೇಶ್ ಭಂಡಾರಿ, ರಾಮಲ್ ಕಟ್ಟೆ ಹೌಸ್, ತುಂಬೆ, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ದಬ್ಬೆಕಟ್ಟೆಯಲ್ಲಿ
ಶ್ರೀಮತಿ ಸಂಗೀತ ಪ್ರಕಾಶ್ ಶೆಟ್ಟಿ ಕಟೀಲೇಶ್ವರಿ ಹಿಲ್ಲೋಮೆ

ಶ್ರೀ ಸಾಲಿಗ್ರಾಮ ಮೇಳ
ಇಡಗುಂದಿ, ಶೇಡಿಗುರಿ

ಶ್ರೀ ಪೆರ್ಡೂರು ಮೇಳ
ಯಡ್ತಾಡಿ - **ಚದುರಂಗ**

ಶ್ರೀ ಹನುಮಗಿರಿ ಮೇಳ
ಹೇರೂರು ಬಿ.ಸಿ.ರೋಡಿನಲ್ಲಿ

ಶ್ರೀ ಪಾವಂಜೆ ಮೇಳ
ಇಂದ್ರಾಳಿ ಉಡುಪಿ
ಛಾಯಾನಂದನ

ನಿಧನ ಸುದ್ದಿ

ರವಿಶಂಕರ್



ಕುಂದಾಪುರ: ವಿಠಲವಾಡಿಯ ಮೈನಾಡಿ ರಸ್ತೆಯ ನಿವಾಸಿ ಇಂಜಿನಿಯರ್ ರವಿಶಂಕರ್ (62) ಅಲ್ಪಕಾಲದ ಅಸ್ವಸ್ಥತೆಯಿಂದ ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರು. ಪುರಸಭೆ ಕಾಮಗಾರಿ ಗುತ್ತಿಗೆದಾರರಾಗಿದ್ದ ಇವರು ಪರಿಸರದ ಅನೇಕ ಬಡ ಜನರಿಗೆ ಮನೆ ಕಟ್ಟಲು ತಾಂತ್ರಿಕ ಪರಿಣತಿಯ ಸೇವೆ ನೀಡಿ ಪುರಭೆಯ ಅನುಮೋದನೆ ಒದಗಿಸಿ ಕೊಡುತ್ತಿದ್ದರು. ಪತ್ನಿ ಪುರಸಭೆಯ ಮಾಜಿ ಅಧ್ಯಕ್ಷೆ ಯು.ಕಲಾವತಿ, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಭುಜಂಗ ಶೆಟ್ಟಿ



ಬಂಟ್ವಾಳ: ಮಂಗಳೂರು ಕೋಟೆಕಾರಿನ ತಾರಿಪಡ್ಪು ನಿವಾಸಿ ಮೇಗಿನ ಮಾಲಾಡಿ ಭುಜಂಗ ಶೆಟ್ಟಿ (73) ಹೃದಯಾಘಾತದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.



ನಾವುಂದ ಗ್ರಾಮದ ಬಡಾಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಶೃಂಗೇರಿ ಶ್ರೀ ಶಾರದಾ ಪೀಠಂ ವತಿಯಿಂದ ಶ್ರೀ ಶಾರದಾದೇವಿಯ ಪ್ರಸಾದ ರೂಪದಲ್ಲಿ ಸುಮಾರು ರೂ.20 ಲಕ್ಷ ಮೌಲ್ಯದ ಶಾಲಾ ವಾಹನವನ್ನು ಜಗದ್ಗುರು ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳು ಶ್ರೀ ಶಾರದಾ ಪೀಠಂನ ಪ್ರಾಂತೀಯ ಧರ್ಮಾಧಿಕಾರಿ ವೇದಮೂರ್ತಿ ಲೋಕೇಶ ಅಡಿಗ ಬಡಾಕೆರೆ ಹಾಗೂ ಶಾಸಕ ಗುರುರಾಜ್ ಗಂಟಿಹೊಳೆ ಅವರಿಗೆ ಹಸ್ತಾಂತರಿಸಿದರು. ಕೆ. ಆರ್. ಪೇಟೆ ಶಾಸಕ ಹೆಚ್. ಓ. ಮಂಜು, ಅನುರಾಧಾ ಗುರುರಾಜ್ ಶೆಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ್ ಕೆ. ನಾಯಕ್ ಶಿಕ್ಷಣ ಸಂಯೋಜಕ ಸತ್ಯನಾರಾಯಣ ಕೊಡೆರಿ, ಎಸ್‌ಡಿಎಂಸಿ ಅಧ್ಯಕ್ಷ ಶ್ರೀಧರ ದೇವಾಡಿಗ, ಮುಖ್ಯ ಶಿಕ್ಷಕಿ ರಶ್ಮಿ ಪಿ. ಸಿ., ಜೆಪಿ ಬಡಾಕೆರೆ, ನಾಗರಾಜ್ ಮಯ್ಯ ಗುಜ್ಜಾಡಿ, ಅರುಣ್ ಹಕ್ಲಾಡಿ ಮೊದಲಾದವರಿದ್ದರು.

ಏ.10-11: ಮಂಗಳೂರು ಫಿಸಿಯೋಕಾನ್-2026

ಮಂಗಳೂರು: ನಗರದ ಟಿ.ಎಂ.ಎ.ಪೈ ಸಭಾಂಗಣದಲ್ಲಿ ಸೌತ್ ಕೆನರಾ ಫಿಸಿಯೋಥೆರಫಿ ಟೀಚರ್ಸ್ ಅಸೋಸಿಯೇಶನ್ ವತಿಯಿಂದ ಏ.10 ಮತ್ತು 11ರಂದು ಅಂತಾರಾಷ್ಟ್ರೀಯ ಭೌತ ಚಿಕಿತ್ಸೆಯ ಸಮ್ಮೇಳನ 'ಮಂಗಳೂರು ಫಿಸಿಯೋಕಾನ್–2026' ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಅಲೈಡ್ ಮತ್ತು ಹೆಲ್ತ್ ಕೇರ್ ಕೌನ್ಸಿಲ್‌ನ ಅಧ್ಯಕ್ಷ ಡಾ.ಯು.ಟಿ. ಇಫ್ತಿಕರ್ ಫರೀದ್ ತಿಳಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.10ರಂದು ಬೆಳಗ್ಗೆ 9 ಗಂಟೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್. ಪಾಟೀಲ್ ಉದ್ಘಾಟಿಸಲಿದ್ದು, ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಅಧ್ಯಕ್ಷತೆ ವಹಿಸಲಿದ್ದಾರೆ. ಆರೋಗ್ಯ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರು ಮುಖ್ಯ ಭಾಷಣ ಮಾಡಲಿದ್ದಾರೆ ಎಂದರು.

26ನೇ ವರ್ಷದ ಕಾರ್ಯಕ್ರಮ ಇದಾಗಿದ್ದು, ಫಿಲಿಫೈನ್ಸ್, ಮಸ್ಕತ್, ದುಬೈ ಸೇರಿದಂತೆ ದೇಶ ವಿದೇಶಗಳ ಸುಮಾರು ಆರು ಸಾವಿರಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದವರು ಮಾಹಿತಿ ನೀಡಿದರು.

ಕಾರ್ಯಕ್ರಮದ ಭಾಗವಾಗಿ ವಾರವಿಡಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಏಯ6ರಂದು ಬೆಳಗ್ಗೆ 10 ಗಂಟೆಗೆ ನೀರುಮಾರ್ಗದ ಮಂಗಳಾ ಫಿಸಿಯೋಥೆರಪಿ ಕಾಲೇಜಿನಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಉದ್ಘಾಟಿಸಲಿದ್ದಾರೆ. 100ಕ್ಕೂ ಅಧಿಕ ರಕ್ತದಾನಿಗಳು ಭಾಗವಹಿಸುವ ನಿರೀಕ್ಷೆ ಇದೆ. ಏ.7ರಂದು ಬೆಳಗ್ಗೆ 10ಕ್ಕೆ ವೆನ್ಲಾಕ್ ಆಸ್ಪತ್ರೆಯಲ್ಲಿ ಹಣ್ಣು ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ. ಅದೇ ದಿನ ಬೆಳಗ್ಗೆ 9ಕ್ಕೆ ಮಂಗಳೂರಿನ ಯೇನೆಪೋಯ ವಿವಿಯಲ್ಲಿ ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ ಆಯೋಜಿಸಲಾಗಿದೆ. ಏ.8ರಂದು ಬೆಳಗ್ಗೆ 9 ಗಂಟೆಗೆ ಪೂರ್ವ ಸಮ್ಮೇಳನ ಕಾರ್ಯಗಾರ ನಗರದ 5 ಕಡೆಗಳಲ್ಲಿ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಫಿಸಿಯೋಕಾನ್ ನ ಖಜಾಂಚಿ ಡಾ.ವಿಜಯ್ ಪಿ., ಸಂಚಾಲಕರಾದ ಡಾ. ಮೊಹಮ್ಮದ್ ಸುಹೈಲ್, ಡಾ.ವೈಶಾಲಿ ಶ್ರೀಜಿತ್, ಜಂಟಿ ಕಾರ್ಯದರ್ಶಿ ಡಾ.ಭರತ್ ಉಪಸ್ಥಿತರಿದ್ದರು.

ಶ್ರೀ ಮಾಧವ ಶಿಶು ಮಂದಿರದ ವಾರ್ಷಿಕೋತ್ಸವದಲ್ಲಿ ನಿವೃತ್ತ ಯೋಧರ ಸಹಿತ ನಾಲ್ವರಿಗೆ ಸನ್ಮಾನ

ಯೋಧರನ್ನು ಗೌರವಿಸುವುದು ಕರ್ತವ್ಯ

ಉಪ್ಪಿನಂಗಡಿ: ರಾಷ್ಟ್ರಕ್ಕಾಗಿ ಬದುಕನ್ನು ಮುಡುಪಾಗಿಟ್ಟ ಯೋಧರನ್ನು ಸದಾ ಹಾಗೂ ಸರ್ವತ್ರ ಗೌರವಿಸಬೇಕಾದದ್ದು ದೇಶವಾಸಿಗರ ಕರ್ತವ್ಯವಾಗಿದೆ. ರಾಷ್ಟ್ರಕ್ಕಾಗಿ ಬದುಕುವ ಧ್ಯೇಯವನ್ನು ಮುಂದಿರಿಸಿ ಜೀವನ ನಡೆಸುವುದು ಒಂದು ರೀತಿಯ ಪವಿತ್ರ ವ್ರತವಾಗಿದೆ ಎಂದು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ತಿಳಿಸಿದರು.

ಅವರು ಉಪ್ಪಿನಂಗಡಿಯ ವೇದಶಂಕರ ನಗರದಲ್ಲಿನ ಶ್ರೀ ಮಾಧವ ಶಿಶು ಮಂದಿರದ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ನಿವೃತ್ತ ಯೋಧರ ಸಹಿತ ನಾಲ್ವರು ಸಾಧಕರನ್ನು ಸನ್ಮಾನಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹಾಯಕ ಕಾರ್ಯನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಂಕುಡೆ ಮಾತನಾಡಿ, ಒಂದು ಜೀವನ ಒಂದು ಧ್ಯೇಯ ಎಂಬ ತತ್ವದಡಿ , ರಾಷ್ಟ್ರದುನ್ನತಿಗಾಗಿ ಬದುಕುವ , ಶ್ರಮಿಸುವ ಸಂಕಲ್ಪವನ್ನು ತಾಳಬೇಕೆಂದು ಕರೆನೀಡಿದರು.

ಉಪ್ಪಿನಂಗಡಿ ಸಿಎ ಬ್ಯಾಂಕ್ ಅಧ್ಯಕ್ಷ ಸುನಿಲ್ ಕುಮಾರ್ ದಡ್ಡು ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಪುತ್ತೂರಿನ ವರ್ಣ ಕುಟೀರ ದ ಆಶ್ರಯದಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಪಡೆದ ಶಮಿಕಾ ಎಂ. ಕೆ. ಎಂಬ ಸಾಧಕಿಯ ಸ್ಪರ್ಧಾ ಕಣದಲ್ಲಿ ಗಾಯನದ ಸಾಥ್ ನೀಡಿರುವ ಮೂಲಕ ಗಾಯನಕ್ಕೆ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯು ಪದಕ ಹಾಗೂ ಪ್ರಮಾಣಪತ್ರವನ್ನು ಪಡೆದ ನಿವೃತ್ತ ಯೋಧ ಕೆ. ಸುರೇಶ್, ಶಿಶು ಮಂದಿರದ ಹಿರಿಯ ವಿದ್ಯಾರ್ಥಿ ಲಕ್ಷ್ಮೀ ಸಾಗರ್ ಹಾಗೂ ಹಿರಿಯ ಸಮಾಜಸೇವಕರಾದ ಕಂಗ್ವೆ ವಿಶ್ವನಾಥ ಶೆಟ್ಟಿ ಮತ್ತು ಹರಿರಾಮಚಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.



ಸನ್ಮಾನಿತರೊಂದಿಗೆ ಡಾ. ಕಲ್ಲಡ್ಕ ಪ್ರಭಾಕರ ಭಟ್ ಮತ್ತಿತರರು.

ಸಂಸ್ಥೆಯ ಸ್ಥಾಪಕ ಜೊತೆ ಕಾರ್ಯದರ್ಶಿ ದಿವಂಗತ ರೋಹಿತಾಕ್ಷ ಯು. ಕೆ. ಅವರಿಗೆ ಕೆ. ಸುಧಾಕರ ಶೆಟ್ಟಿ ನುಡಿನಮನ ಸಲ್ಲಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಶಿಶು ಮಂದಿರದ ಗೌರವಾಧ್ಯಕ್ಷ ಯು. ರಾಮ, ಅಧ್ಯಕ್ಷ ಮನೋಜ್ ಶೆಟ್ಟಿ, ಪೋಷಕ ಸಂಘದ ಅಧ್ಯಕ್ಷೆ ದಿವ್ಯಾ ಸುಧೀರ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಯು. ಜಿ. ರಾಧಾ, ರಾಧಾಕೃಷ್ಣ ಬೊಳ್ಳಾವು, ರಾಮಚಂದ್ರ ಮಣಿಯಾಣಿ, ವಿದ್ಯಾಧರ ಜೈನ್, ರಮೇಶ್ ನಟ್ಟಿಬೈಲ್, ವೆಂಕಪ್ಪ ಗೌಡ, ಕಿರಣ್ ಹರಿನಗರ, ಭಾರತಿ, ಶೋಭಾ ದಯಾನಂದ್, ಪುಷ್ಪಲತಾ ಜನಾರ್ಧನ್, ಪೂರ್ಣಿಮಾ ಸುರೇಶ್, ಧನಂಜಯ ನಟ್ಟಿಬೈಲ್, ಲೋಕೇಶ್ ಆಚಾರ್ಯ, ಜಯಶ್ರೀ ಜನಾರ್ಧನ್, ಕೆ. ರಾಘವೇಂದ್ರ ನಾಯಕ್, ಸುಬ್ರಹ್ಮಣ್ಯ ಶೆಣೈ, ಕೆ. ಜಗದೀಶ್ ಶೆಟ್ಟಿ, ಯತೀಶ್ ಶೆಟ್ಟಿ, ಸುಜಯ್ ಶೆಟ್ಟಿ ಮೊದಲಾದವರು ಭಾಗವಹಿಸಿದ್ದರು.

ಜ್ಯೋತಿ ಮಾತಾಜಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ, ಸುಜಾತಕೃಷ್ಣ ಆಚಾರ್ಯ ಸ್ವಾಗತಿಸಿ, ಯು. ರಾಜೇಶ್ ಪೈ ವಂದಿಸಿದರು. ಶಿಶು ಮಂದಿರದ ಚೈತ್ರಾ, ಕಾಂತಿಮಣಿ, ಚಂದ್ರಾವತಿ ಮಾತಾಜಿಯವರು ವಿವಿಧ ಕಾರ್ಯಕ್ರಮ ನಡೆಸಿದರು.

> **ಅವಿಭಕ್ತ ಕುಟುಂಬ ಪದ್ಧತಿಯಿಂದ ನ್ಯೂಕ್ಲಿಯರ್ ಫ್ಯಾಮಿಲಿ ಎಂಬ ಕಲ್ಪನೆಯತ್ತ ಸಮಾಜ ವಾಲಿದ ಕ್ಷಣದಿಂದ ಹಲವಾರು ಸಾಮಾಜಿಕ ಸಮಸ್ಯೆಗಳು ಉದ್ಭವಿಸಲು ಪ್ರಾರಂಭವಾಗಿದೆ. ತತ್ ಪರಿಣಾಮ ಅದೇ ಪ್ರಮಾಣದಲ್ಲಿ ಸಮಾಜಕ್ಕೆ ಸಮಸ್ಯೆಗಳೂ ಎದುರಾಗತೊಡಗಿದೆ. ಇಂತಹ ಸೂಕ್ಷ್ಮ ಸ್ಥಿತಿಯಲ್ಲಿ ಸಮಾಜಕ್ಕೆ ಶಕ್ತಿ ತುಂಬಿಸುವ ಕಾರ್ಯ ಶಿಶು ಮಂದಿರದಂತಹ ಸಂಸ್ಕಾರ ಕೇಂದ್ರಗಳಿಂದ ನಡೆಯುತ್ತಿದೆ. ಈ ಕಾರ್ಯಕ್ಕೆ ಸಮಾಜದ ಪೂರ್ಣ ಪ್ರಮಾಣದ ಸಹಕಾರ ಲಭಿಸಬೇಕಾಗಿದೆ**
>
> ■ ಡಾ. ಕಲ್ಲಡ್ಕ ಪ್ರಭಾಕರ ಭಟ್, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ

ವಿಪ್ರ ಸಮುದಾಯಕ್ಕೆ ವಿವಿಧ ಯೋಜನೆಗಳು

ಮಂಗಳೂರು: ರಾಜ್ಯ ಸರ್ಕಾರವು 2025 ಸೆಪ್ಟಂಬರ್‌ನಿಂದ ಕಾರ್ಮಿಕ ಇಲಾಖೆಯ ಮೂಲಕ ಅರ್ಚಕರು, ಪುರೋಹಿತರು, ಪ್ರಾಥಮಿಕ ಶಾಲಾ ಶಿಕ್ಷಕರು (ಮನೆ ಪಾಠ ಮಾಡುವವರು), ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು, ಬೇಕರಿ ಮತ್ತು ಅಡಿಕೆ ಕೆಲಸ ಮಾಡುವವರು, ಕರಕುಶಲ ಕೆಲಸಗಾರರು, ಭೂರಹಿತ ಕೃಷಿ ಕಾರ್ಮಿಕರನ್ನು ಅಸಂಘಟಿತ ವರ್ಗಕ್ಕೆ ಸೇರಿಸಿರುವುದರಿಂದ ವಿಪ್ರ ಸಮುದಾಯಕ್ಕೆ ಹೆಚ್ಚಿನ ಅನುಕೂಲ ಆಗಲಿದೆ ಎಂದು ಮಂಡಳಿಯ ನಿರ್ದೇಶಕ ಪಿ.ಎಂ. ಮಾಲತೇಶ ತಿಳಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಸಾಂದೀಪನಿ ಶಿಷ್ಯ ವೇತನ, ವಿಪ್ರ ಸ್ವ ಉದ್ಯಮ ನೇರ ಸಾಲ, ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ, ಚಾಣಕ್ಯ ಆಡಳಿತ ತರಬೇತಿ, ಆಚಾರ್ಯತ್ರಯರ ಜಯಂತಿ ಆಚರಣೆ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಈಗಾಗಲೇ ಈ ನಿಟ್ಟಿನಲ್ಲಿ ನೋಂದಣಿಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಶಿವಮೊಗ್ಗದಲ್ಲಿ 250 ಮಂದಿ ಅರ್ಹ ಫಲಾನುವಿಗಳನ್ನು ಮಂಡಳಿ ಮೂಲಕ ನೋಂದಣಿ ಮಾಡಲಾಗಿದ್ದು, ಮಂಗಳೂರಿನಲ್ಲಿ ನೋಂದಣಿಯಾಗಿರುವ 100 ಮಂದಿಗೆ ರಾಜ್ಯದಲ್ಲಿಯೇ ಮೊದಲ ಬಾರಿಗೆ ಕಾರ್ಡುಗಳನ್ನು ವಿತರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ ಎಂದರು.

ಸಮುದಾಯದ ಆಸಕ್ತರಿಗೆ ತರಬೇತಿ ನೀಡಿ ಜಿಲ್ಲೆಯಾದ್ಯಂತ ಈ ಯೋಜನೆಯಡಿ ಇನ್ನಷ್ಟು ಮಂದಿಯಿಂದ ಅರ್ಜಿ ಸ್ವೀಕರಿಸಲಾಗುವುದು. ಈ ಕಾರ್ಡ್ ಮೂಲಕ ಕಾರ್ಮಿಕ ಇಲಾಖೆಯಿಂದ ಅಸಂಘಟಿತ ಕಾರ್ಮಿಕರಿಗೆ ಲಭ್ಯವಾಗುವ ಸೌಲಭ್ಯಗಳು ಸಿಗಲಿವೆ ಎಂದವರು ಹೇಳಿದರು.

ಸುದ್ದಿಗೋಷ್ಠಿ ಪ್ರಮುಖರಾದ ನಮಿತಾ ಡಿ. ರಾವ್, ಶ್ರೀಧರ ಹೊಳ್ಳ, ರಾಘವೇಂದ್ರ ರಾವ್, ಎಚ್. ನಾಗೇಶ್ ಉಪಸ್ಥಿತರಿದ್ದರು.

ಆಳ್ವಾಸ್ ಹೆಲ್ತ್‌ಸೆಂಟರ್‌ನಲ್ಲಿ ಇಂಟಿಗ್ರೇಟೆಡ್ ಕ್ಲಿನಿಕಲ್ ಡಯಾಗ್ನಾಸ್ಟಿಕ್ಸ್ ಲ್ಯಾಬೋರೇಟರಿ ಉದ್ಘಾಟನೆ

ಮೂಡುಬಿದಿರೆ: ಆಳ್ವಾಸ್ ಹೆಲ್ತ್ ಸೆಂಟರ್‌ನಲ್ಲಿ ಶನಿವಾರ 'ಆಳ್ವಾಸ್ ಇಂಟಿಗ್ರೇಟೆಡ್ ಕ್ಲಿನಿಕಲ್ ಡಯಾಗ್ನಾಸ್ಟಿಕ್ಸ್ ಲ್ಯಾಬೋರೇಟರಿ' ಉದ್ಘಾಟನಾ ಕಾರ್ಯಕ್ರಮ ನಡೆಯಿತು. ನಿಟ್ಟೆ ಇನ್ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್‌ನ ಡೀನ್ ಡಾ. ಜಯಪ್ರಕಾಶ್ ಶೆಟ್ಟಿ ಕೆ. ದೀಪ ಬೆಳಗಿಸಿ ಉದ್ಘಾಟಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಕೇಂದ್ರ ಪ್ರಯೋಗಾಲಯ ಮತ್ತು ರೇಡಿಯಾಲಜಿ ವಿಭಾಗಗಳು ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿವೆ. ರಾಷ್ಟ್ರೀಯ ವೈದ್ಯಕೀಯ ಆಯೋಗ ಹಾಗೂ ಭಾರತೀಯ ವೈದ್ಯಕೀಯ ಮಂಡಳಿಯ ಪರಿಶೀಲನೆಗಳಲ್ಲಿ ಈ ಎರಡು ವಿಭಾಗಗಳು ಪ್ರಮುಖವಾಗಿ ಗಮನ ಸೆಳೆಯುತ್ತವೆ. ಯಾವುದೇ ವೈದ್ಯಕೀಯ ಸಂಸ್ಥೆಯ ಮೂಲಸೌಕರ್ಯ ಮತ್ತು ಗುಣಮಟ್ಟದ ಮೌಲ್ಯಮಾಪನದಲ್ಲಿ ಈ ವಿಭಾಗಗಳನ್ನು ಕಡೆಗಣಿಸಲು ಸಾಧ್ಯವಿಲ್ಲ ಎಂದರು. ಕೇಂದ್ರ ಪ್ರಯೋಗಾಲಯದ ಸ್ಥಾಪನೆ, ಕೇವಲ ಸೌಲಭ್ಯವಲ್ಲ, ಅದು ಒಂದು ಸಂಸ್ಥೆಯ ಶೈಕ್ಷಣಿಕ ಹಾಗೂ ವೈದ್ಯಕೀಯ ಗುಣಮಟ್ಟದ ಪ್ರತಿಬಿಂಬವಾಗಿದೆ. ಇಂತಹ ಪ್ರಯೋಗಾಲಯಗಳು ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗೆ ಸಹಕಾರಿಯಾಗುವುದರ ಜೊತೆಗೆ, ರೋಗಿಗಳಿಗೆ ನಿಖರ ಮತ್ತು ವೇಗವಾದ ನಿರ್ಧಾರಾತ್ಮಕ ಸೇವೆಯನ್ನು ಒದಗಿಸುತ್ತದೆ ಎಂದರು.

ಆಳ್ವಾಸ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಆ್ಯಂಡ್ ರಿಸರ್ಚ್ ಸೆಂಟರ್‌ನ ವೈದ್ಯಕೀಯ ಅಧೀಕ್ಷಕ ಡಾ ಪಾಂಗಾಳ ಹರೀಶ್ ನಾಯಕ್ ಮಾತನಾಡಿ, ಆರೋಗ್ಯ ಸೇವೆಯಲ್ಲಿ ನಿಖರವಾದ ರೋಗನಿರ್ಣಯ ಅತ್ಯಂತ ಪ್ರಮುಖವಾಗಿದೆ. ಸರಿಯಾದ ಚಿಕಿತ್ಸೆ ನೀಡಲು ಸರಿಯಾದ ಪರೀಕ್ಷೆಗಳು ಅವಶ್ಯಕ. ಈ ಲ್ಯಾಬೋರೇಟರಿ ಮೂಲಕ ವಿವಿಧ ಪರೀಕ್ಷೆಗಳು ಒಂದೇ ಸ್ಥಳದಲ್ಲಿ ಲಭ್ಯವಾಗುವುದರಿಂದ ರೋಗಿಗಳಿಗೆ ಸಮಯ ಮತ್ತು ವೆಚ್ಚ ಎರಡೂ ಉಳಿತಾಯವಾಗುತ್ತದೆ.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ಡಾ. ವಿನಯ ಆಳ್ವ ಅಧ್ಯಕ್ಷತೆವಹಿಸಿ ಮಾತನಾಡಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ, ಡಾ. ಹನ, ಡಾ. ಗ್ರೀಷ್ಮಾ ಇದ್ದರು.

ಆಳ್ವಾಸ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಆ್ಯಂಡ್ ರಿಸರ್ಚ್ ಸೆಂಟರ್‌ನ ಡೀನ್ ಡಾ. ಮಹಾಬಲ ಶೆಟ್ಟಿ ಸ್ವಾಗತಿಸಿ, ಡಾ. ಆಶಾರಾಣಿ ವಂದಿಸಿ, ನರೇಶ್ ರೈ ಕಾರ್ಯಕ್ರಮ ನಿರೂಪಿಸಿದರು.

ಬಾವಿಗೆ ಹಾರಿ ಯುವತಿ ಆತ್ಮಹತ್ಯೆ

ಕುಂದಾಪುರ: ಕುಂದಾಪುರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಕ್ಲಿನಿಂಗ್ ಕೆಲಸ ಮಾಡಿಕೊಂಡಿದ್ದ ತಲ್ಲೂರು ಕೋಟೆಬಾಗಿಲು ನಿವಾಸಿ ಶಶಿಕಲಾ (20) ಎಂಬವರು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಶಿಕಲಾ ಒಂದು ವರ್ಷದ ಹಿಂದೆ ಮಂಜುನಾಥ ಎಂಬಾತನ ಸಂಪರ್ಕದಲ್ಲಿದ್ದು ಆತನನ್ನು ಪ್ರೀತಿಸುತ್ತಿದ್ದಳು. ಏ.3ರಂದು ಕೆಲಸಕ್ಕೆ ರಜೆ ಹಾಕಿ ಮನೆಯಲ್ಲಿದ್ದ ಶಶಿಕಲಾ, ಸಂಜೆ ಸುಮಾರು 7 ಗಂಟೆಯಿಂದ ನಾಪತ್ತೆಯಾಗಿದ್ದರು. ಹುಡುಕಾಡಿದಾಗ ರಾತ್ರಿ ಮನೆಯಿಂದ 100 ಮೀಟರ್ ದೂರದಲ್ಲಿರುವ ಕನಕಮ್ಮ ಶೆಡ್ತಿ ಎಂಬವರ ಜಾಗದಲ್ಲಿ ಹೊಸದಾಗಿ ನಿರ್ಮಿಸಿದ ಬಾವಿಯಲ್ಲಿ ಶಶಿಕಲಾ ಮೃತ ದೇಹ ಪತ್ತೆಯಾಗಿದೆ. ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೇಡಿಗೋಷನ್ ಆಸ್ಪತ್ರೆಗೆ ಹೆಚ್‌ಪಿಸಿಎಲ್‌ನಿಂದ

ಅಲ್ಟ್ರಾಸೌಂಡ್ ಉಪಕರಣದ ಕೊಡುಗೆ

ಮಂಗಳೂರು: ಸರಕಾರಿ ಲೇಡಿ ಗೋಷನ್ ಆಸ್ಪತ್ರೆಗೆ ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ವತಿಯಿಂದ ಸುಮಾರು 25 ಲಕ್ಷದ ಅಲ್ಟ್ರಾಸೌಂಡ್ ಉಪಕರಣವನ್ನು ಸಿ.ಎಸ್.ಆರ್. ಅನುದಾನದಿಂದ ಕೊಡುಗೆಯಾಗಿ ನೀಡಲಾಯಿತು.

ಅಧ್ಯಕ್ಷತೆಯನ್ನು ವಹಿಸಿದ್ದ ವೈದ್ಯಕೀಯ ಅಧೀಕ್ಷಕರಾದ ಡಾ. ದುರ್ಗಾಪ್ರಸಾದ್ ಎಂ.ಆರ್. ಮಾತನಾಡಿ, ತಾಯಿ–ಮಕ್ಕಳ ಆರೋಗ್ಯ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಲೇಡಿಗೋಷನ್ ಆಸ್ಪತ್ರೆ ಯಲ್ಲಿ ದಿನಂಪ್ರತಿ 130 ಕ್ಕಿಂತಲೂ ಹೆಚ್ಚು ಸ್ಕ್ಯಾನಿಂಗ್‌ಗಳು ನಡೆಯುತ್ತಿದ್ದು ಗುಣಮಟ್ಟದ ಸೇವೆಯನ್ನು ಜನತೆಗೆ ನೀಡಲು ಇದು ಸಹಕಾರಿಯಾಗಲಿದೆ ಎಂದರು.



ಉಪಕರಣದ ಅನಾವರಣ ಮಾಡಿದ ಕೆ.ಎಂ.ಸಿ . ಅಸೋಸಿಯೇಟ್ ಡೀನ್ ಡಾ. ಅಶ್ಫಾಕ್ ಆಲಿ ಅವರು ಕೆ.ಎಂ.ಸಿ ಹಾಗೂ ಸರಕಾರಿ ಸಹಭಾಗಿತ್ವದಿಂದ ನಡೆಯುತ್ತಿರುವ ಲೇಡಿಗೋಷನ್ ಆಸ್ಪತ್ರೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ವಿಶೇಷ ಅರ್ಥವಿದೆ ಎಂದರು. ಕಾರ್ಯಕ್ರಮ ಉದ್ಘಾಟಿಸಿ ಮಾತ ನಾಡಿದ ಹೆಚ್.ಪಿ.ಸಿ.ಎಲ್. ಜನರಲ್ ಮ್ಯಾನೇಜರ್ ಅಜಿತ್ ಅವರು, ಮುಂದಿನ ಹಂತಗಳಲ್ಲಿ ಮತ್ತಷ್ಟು ಅನುದಾನವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದರು. ಹೆಚ್.ಪಿ.ಸಿ.ಎಲ್.ನ ದಿನೇಶನ್, ಆಶೀಶ್ ಅಭಿಮನ್ಯು, ಮೊಹಮ್ಮದ್ ಕಾಸಿಂ, ದ್ಯಾವರಿ ಭರತ್ ಕುಮಾರ್, ಕೆ.ಎಂ.ಸಿ.ಯ ಡಾ.ನಿಖಿಲ್ ಶೆಟ್ಟಿ, ಡಾ.ಸುಪ್ರಸನ್ನ , ಡಾ. ಶ್ವೇತಾ ಪೂಜಾರಿ, ವೈದ್ಯಾಧಿಕಾರಿ ಡಾ.ಜಗದೀಶ್ ಉಪಸ್ಥಿತರಿದ್ದರು.

ಅಂಬಿಕಾ ಮತ್ತು ಜಯಲಕ್ಷ್ಮಿ ನಿರೂಪಿಸಿದರು. ಲವೀನಾ ವಂದಿಸಿದರು.

ಕಿರುಸುದ್ದಿ

ಇಂದು ಕರ್ನಾಟಕ ಸಿಎಂ ವರ್ಕಾಡಿಗೆ

ಕಾಸರಗೋಡು: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಐಕ್ಯರಂಗದ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್ ಅವರ ಚುನಾವಣಾ ಪ್ರಚಾರಾರ್ಥವಾಗಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏ.5ರಂದು ಸಂಜೆ 4 ಗಂಟೆಗೆ ವರ್ಕಾಡಿಯ ಮಜೀರ್‌ಪಳ್ಳ ಜಂಕ್ಷನ್‌ನಲ್ಲಿ ನಡೆಯುವ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೆ ಕಾಸರಗೋಡು ವಿಧಾನಸಭಾ ಕ್ಷೇತ್ರದ ಐಕ್ಯರಂಗದ ಅಭ್ಯರ್ಥಿ ಕಲ್ಲಟ್ರ ಮಾಹಿನ್‌ರ ಪರವಾಗಿ ಮತ ಯಾಚಿಸಲು ಕರ್ನಾಟಕ ಮುಖ್ಯಮಂತ್ರಿ ಸಂಜೆ 5 ಗಂಟೆಗೆ ಮುಳ್ಳೇರಿಯಕ್ಕೆ ಆಗಮಿಸಿ ಚುನಾವಣಾ ಸಭೆಯಲ್ಲಿ ಮಾತನಾಡುವರು.

ಮನೆಗೆ ಅತಿಕ್ರಮಿಸಿ ನುಗ್ಗಿ ಯುವತಿಗೆ ಹಲ್ಲೆ

ಕುಂಬಳೆ: ಮನೆಗೆ ನುಗ್ಗಿ ಯುವತಿಗೆ ಹಲ್ಲೆಗೈದು ಅತ್ಯಾಚಾರಕ್ಕೆತ್ನಿಸಿದ ಆರೋಪದಂತೆ ಕಳತ್ತೂರು ಶಿವಕೃಪಾದ ಸಜೀಶ್ (37) ಎಂಬಾತನನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಕುಂಬಳೆ ಪೊಲೀಸ್ ಠಾಣೆ ವ್ಯಾಪ್ತಿಯ 30ರ ಹರೆಯದ ಯುವತಿ ನೀಡಿದ ದೂರಿನಂತೆ ಸಜೀಶ್‌ನನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಯುವತಿ ಮಾತ್ರ ಇದ್ದ ವೇಳೆ ಮನೆಗೆ ಅತಿಕ್ರಮಿಸಿ ನುಗ್ಗಿದ ಆರೋಪಿ ಯುವತಿಗೆ ಹಲ್ಲೆ ನಡೆಸಿ ಅತ್ಯಾಚಾರಕ್ಕೆತ್ನಿಸಿರುವುದಾಗಿ ದೂರಿನಲ್ಲಿ ತಿಳಿಸಲಾಗಿದೆ.

ಮಣ್ಣಿನ ರಾಶಿ ಮೇಲೆ ನಿಂತ ಕಾರು



ಕಾರ್ಕಳ: ನಗರದ ಆನೆಕೆರೆ ಪುಲ್ಕೇರಿ ಬೈಪಾಸ್ ಸಂಪರ್ಕ ರಸ್ತೆ ಅಗಲೀಕರಣಕ್ಕಾಗಿ ಮೋರಿ ನಿರ್ಮಾಣದ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ಬಳಿ ಯಾವುದೇ ಮುನ್ಸೂಚನಾ ಫಲಕ ಅಳವಡಿಸದ ಹಿನ್ನಲೆಯಲ್ಲಿ ಪದೇಪದೇ ಅಪಘಾತ ಸಂಭವಿಸುತ್ತಿದೆ. ಶನಿವಾರ ಮುಂಜಾನೆ ಕಾರ್ಕಳ ಕಡೆಯಿಂದ ಪುಲ್ಕೇರಿ ಕಡೆಗೆ ಹೋಗುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಮೋರಿಗೆ ಡಿಕ್ಕಿಯಾಗಿ ಮಣ್ಣಿನ ರಾಶಿ ಮೇಲೆ ಹೋಗಿ ನಿಂತಿದೆ. ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದ್ದು, ಕಾಮಗಾರಿ ನಡೆಯುತ್ತಿರುವ ವಿಚಾರ ಅರಿವಿಗೆ ಬಾರದೇ ವೇಗವಾಗಿ ಬಂದ ಕಾರು ಚಾಲಕ ನಿಯಂತ್ರಣ ಕಳೆದುಕೊಂಡು ನಿರ್ಮಾಣ ಹಂತದ ಮೋರಿಗೆ ಡಿಕ್ಕಿಯಾಗಿ ಕಾರಿನ ಮುಂಭಾಗ ಜಖಂಗೊಂಡಿದೆ. ಈ ಭಾಗದಲ್ಲಿ ವಾಹನಗಳು ವೇಗವಾಗಿ ಸಾಗುತ್ತಿರುವ ಹಿನ್ನಲೆಯಲ್ಲಿ ಕಾಮಗಾರಿ ಬಳಿ ಬ್ಯಾರಿಕೇಡ್ ಅಳವಡಿಸಿ ಸೂಕ್ತ ಮುನ್ನೆಚ್ಚರಿಕೆ ವಹಿಸಬೇಕಾಗಿದೆ.

ಗಾಂಜಾ ಮಾರಾಟ ಪ್ರಕರಣ: ಅಪರಾಧಿಗೆ 7 ವರ್ಷ ಸಜೆ

ಮಂಗಳೂರು: ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ ಮಾಡಿದ ಅಪರಾಧಿಗೆ 7 ವರ್ಷ ಕಠಿಣ ಸಜೆ ಮತ್ತು 50 ಸಾವಿರ ರೂ. ದಂಡ ವಿಧಿಸಿ ಮಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ದಂಡ ಪಾವತಿಸಲು ವಿಫಲನಾದರೆ 2 ತಿಂಗಳ ಸಾದಾ ಸಜೆಯ ಜೊತೆಗೆ ಅಪರಾಧಿಯಿಂದ ವಶಪಡಿಸಿಕೊಂಡ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿ ಆದೇಶಿಸಿದೆ.

ನಗರದ ಬಂದರು ಅನ್ಸಾರಿ ಕ್ರಾಸ್ ರೋಡ್ ನಿವಾಸಿ ಟಿ.ಪಿ. ಫಾರೂಕ್ (50) ಶಿಕ್ಷೆಗೊಳಗಾದಾತ. ಪ್ರಕರಣದ 2ನೇ ಆರೋಪಿ ಸಾಗರ್ ಸಿಂಗ್ ನ್ಯಾಯಾಲಯದಿಂದ ಜಾಮೀನು ಪಡೆದು ತಲೆಮರೆಸಿಕೊಂಡಿರುವ ಕಾರಣ ಆತನ ವಿರುದ್ಧದ ಪ್ರಕರಣವನ್ನು ವಿಭಜಿಸಲಾಗಿದೆ.

2020ರ ನ.10ರಂದು ಸಂಜೆ 5.30ಕ್ಕೆ ಫಾರೂಕ್, ಸಾಗರ್ ಸಿಂಗ್‌ನೊಂದಿಗೆ ಮೆಲ್ಕಾರ್‌ನಲ್ಲಿ ಕಾರಿನಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದುದನ್ನು ಬಂಟ್ವಾಳ ನಗರ ಠಾಣೆಯ ಆಗಿನ ಪೊಲೀಸ್ ನಿರೀಕ್ಷಕ ಚೆಲುವರಾಜು ಬಿ. ಪತ್ತೆ ಹಚ್ಚಿ ಇಬ್ಬರನ್ನು ಬಂಧಿಸಿದ್ದರು. ಬಂಟ್ವಾಳದ ಆಗಿನ ಪೊಲೀಸ್ ವೃತ್ತ ನಿರೀಕ್ಷಕ ಟಿ.ಡಿ. ನಾಗರಾಜ್ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು. ಒಟ್ಟು 10 ಸಾಕ್ಷಿದಾರರನ್ನು ಸರ್ಕಾರಿ ಅಭಿಯೋಜಕಿ ಜುಡಿತ್ ಓಲ್ಗ ಮಾರ್ಗರೆಟ್ ಕ್ರಾಸ್ತಾ ವಿಚಾರಣೆಗೆ ಒಳಪಡಿಸಿದ್ದು, 29 ದಾಖಲೆಗಳನ್ನು ಗುರುತಿಸಿದ್ದರು. ತೀರ್ಪು ಪ್ರಕಟಿಸಿದ ನ್ಯಾಯಾಲಯವು, ಫಾರೂಕ್‌ಗೆ 7 ವರ್ಷ ಕಠಿಣ ಸಜೆ ಮತ್ತು 50 ಸಾವಿರ ರೂ. ದಂಡ ವಿಧಿಸಿದೆ.

ಕಾಲು ಜಾರಿ ಬಾವಿಗೆ ಬಿದ್ದು ವೃದ್ಧೆ ಸಾವು

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಪಂಚಮಹಲ್ ಬಳಿ ವೃದ್ಧೆಯೊಬ್ಬರು ಕಾಲು ಜಾರಿ ಬಾವಿಗೆ ಬಿದ್ದು ಸಾವನ್ನಪ್ಪಿದ್ದಾರೆ. ಮೃತ ವೃದ್ಧೆಯನ್ನು ಬಾದಾಮಿ ಮೂಲದ ಮುಲ್ಕಿಯಲ್ಲಿ ವಾಸ್ತವ್ಯವಿರುವ ಫಕೀರವ್ವ (90)ಎಂದು ಗುರುತಿಸಲಾಗಿದೆ. ಮೃತ ಫಕೀರವ್ವ ಕಳೆದ ಹಲವಾರು ವರ್ಷಗಳಿಂದ ಮುಲ್ಕಿಯಲ್ಲಿ ನೆಲೆಸಿದ್ದು ರಾತ್ರಿ ಹೊತ್ತು ಪಂಚಮಲ್ ರಸ್ತೆಯ ಬಳಿ ನಡೆದುಕೊಂಡು ಹೋಗುತ್ತಿರುವಾಗ ಕಟ್ಟಡ ಒಂದರ ಎದುರು ಬದಿಯಲ್ಲಿ ಕಾಮಗಾರಿ ನಡೆಯುತ್ತಿದ್ದ ಬಾವಿಗೆ ಆಕಸ್ಮಿಕವಾಗಿ ಬಿದ್ದು ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ.

ಮಾಜೀ ನಪಂ ಸದಸ್ಯ ಹರ್ಷ ರಾಜ ಶೆಟ್ಟಿ, ಮುಲ್ಕಿ ಪೊಲೀಸರು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು ಬಳಿಕ ಅಗ್ನಿಶಾಮಕ ದಳ ಆಗಮಿಸಿ ಮೃತ ದೇಹವನ್ನು ಬಾವಿಯಿಂದ ತೆರವುಗೊಳಿಸಿದ್ದಾರೆ. ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನದಿ ನೀರಿಗೆ ಬಿದ್ದು ವ್ಯಕ್ತಿ ಸಾವು

ಕುಂದಾಪುರ : ಕೃಷಿ ಹಾಗೂ ಮೀನುಗಾರಿಕೆ ಕೆಲಸ ಮಾಡಿಕೊಂಡಿದ್ದ ಕುಂದಬಾರಂದಾಡಿ ಗ್ರಾಮದ ತೊರೊಳ್ಳಿ ಅಂಕೋಲಿ ಮನೆ ನಿವಾಸಿ ಜನಾರ್ಧನ ಪೂಜಾರಿ (43) ಎಂಬವರು ಕುಂದಬಾರಂದಾಡಿ ಗ್ರಾಮದ ತೊರೊಳ್ಳಿ ಬಳಿಯ ಚಕ್ರ ನದಿಯಲ್ಲಿ ಮೀನು ಹಿಡಿಯುತ್ತಿರುವಾಗ ಆಕಸ್ಮಿಕವಾಗಿ ಕಾಲು ಜಾರಿ ನೀರಿಗೆ ಬಿದ್ದು, ನೀರಿನಲ್ಲಿ ಮುಳುಗಿ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಶನಿವಾರ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಎಸ್.ಶ್ಯಾನುಭೋಗ್, ಎಂ.ಸುಧಾಮ ಗೋಸಾಡ, ಸುಕುಮಾರ ಕುದ್ರೆಪ್ಪಾಡಿ ಸಹಿತ ಪ್ರಮುಖರು, ಕಾರ್ಯಕರ್ತರು ಪಾಲ್ಗೊಂಡಿದ್ದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಡರಂಗ ಅಭ್ಯರ್ಥಿ ಕೆ.ಆರ್.ಜಯಾನಂದ ಅವರು ಎರಡನೇ ಹಂತದ ಪರ್ಯಾಟನೆ ನಡೆಸಿ ಮತದಾರರನ್ನು ಭೇಟಿಯಾದರು. ಉದ್ಯಾವರ ಸಾವಿರ ಜಮಾಅತ್, ಕುಂಬಳೆಯ ಕೊಯಿಪ್ಪಾಡಿ ಕಡಪ್ಪರ, ಅರಿಕ್ಕಾಡಿ ಕಡವತ್, ಮಂಗಲ್ಪಾಡಿಯ ಬಂದ್ಯೋಡು, ಬೇರಿಕೆ, ಕನ್ನಟಿಪಾರೆ ಮೊದಲಾದೆಡೆಗಳಿಗೆ ಪರ್ಯಟನೆ ನಡೆಸಿದರು.

ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ವಾಹನ ಪ್ರಚಾರ ಜಾಥಾ ಉದ್ಘಾಟಿಸಿ ಎ.ಪಿ.ಅಬ್ದುಲ್ಲಕುಟ್ಟಿ

ಈ ಬಾರಿ ಸಿಎಂ ಆಯ್ಕೆ ಬಿಜೆಪಿಯದ್ದು

ಕಾಸರಗೋಡು: ಈ ಬಾರಿಯ ಚುನಾವಣೆಯ ಬಳಿಕ ಕೇರಳದ ಮುಖ್ಯಮಂತ್ರಿ ಯಾರಾಗಬೇಕೆಂದು ತೀರ್ಮಾನಿಸುವುದು ಬಿಜೆಪಿ ಆಗಿದೆ ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಎ.ಪಿ.ಅಬ್ದುಲ್ಲಕುಟ್ಟಿ ಹೇಳಿದ್ದಾರೆ.

ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿಯವರ ವಾಹನ ಪ್ರಚಾರ ಜಾಥಾವನ್ನು ಶನಿವಾರ ಕಾಸರಗೋಡು ಹೊಸ ಬಸ್ ನಿಲ್ದಾಣ ಪರಿಸರದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಇದುವರೆಗೆ ಕೇರಳದಲ್ಲಿ ಕಾಣದಂತಹ ಅಬ್ಬರದ ಚರ್ಚೆಗಳು ಈ ಬಾರಿಯ ಚುನಾವಣೆಯಲ್ಲಿ ಎಲ್ಲೆಡೆ ಕಾಣಲ್ಪಡುತ್ತಿದೆ. ಇದಕ್ಕೆ ಈ ಬಾರಿಯ ಚುನಾವಣೆಯಲ್ಲಿ ಕೇರಳದ ಹಲವೆಡೆ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ಖಚಿತವೆಂದು ಮನಗಂಡ ಹಿನ್ನೆಲೆಯಲ್ಲಿ ಆಗಿದೆ ಎಂದರು.

ಈ ಬಾರಿಯ ಎಲ್ಲಾ ಸರ್ವೇಗಳು ಎನ್‌ಡಿಎ ಪರವಾಗಿದೆ. ತಿರುವನಂತಪುರ ಕಾರ್ಪೋರೇಶನ್‌ನ ಬಿಜೆಪಿ ಗೆಲುವು ಇದಕ್ಕೆ ಕಾರಣವಾಗಿದೆ. ಯುಪಿಎ ಸರಕಾರದ ಆಡಳಿತಾವಧಿಯಲ್ಲಿ 12 ಲಕ್ಷ ಕೋಟಿಗಳ ಭ್ರಷ್ಟಾಚಾರ ನಡೆದಿದೆ. ಆದರೆ ಕಳೆದ 12 ವರ್ಷಗಳಲ್ಲಿ ಮೋದಿ ಸರಕಾರದ ಆಡಳಿತಾವಧಿಯಲ್ಲಿ ಭ್ರಷ್ಟಾಚಾರ ಎಂಬುವುದೇ ನಡೆದಿಲ್ಲ. ಇದಕ್ಕೆ ಮೋದಿಜೀಯವರ ದಿಟ್ಟ



ಮತ್ತು ಭ್ರಷ್ಟಾಚಾರರಹಿತ ಆಡಳಿತವು ಕಾರಣವಾಗಿದೆ. ಇದು ಭ್ರಷ್ಟಾಚಾರ ವಿರುದ್ಧದ ಚುನಾವಣೆಯಾಗಿದೆ. ನರೇಂದ್ರ ಮೋದಿಯವರು ನಮ್ಮ ದೇಶದಲ್ಲಿ ಮಹಾ ಅದ್ಭುತದ ಅಭಿವೃದ್ಧಿಯನ್ನು ಸೃಷ್ಟಿಸಿದ್ದಾರೆ. ಇದರಿಂದ ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ಖಚಿತ ಎಂದು ಅಬ್ದುಲ್ಲಕುಟ್ಟಿ ಹೇಳಿದ್ದಾರೆ.



ಯಾವುದೇ ಅಭಿವೃದ್ಧಿ ಆಗಿಲ್ಲ

ಕಾಸರಗೋಡು ವಿಧಾನಸಭಾ ಕ್ಷೇತ್ರದಿಂದ ಕಳೆದ ಹಲವಾರು ವರ್ಷಗಳಿಂದ ಎಡ ಮತ್ತು ಐಕ್ಯರಂಗದ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿದ್ದರೂ ಇಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿ ಉಂಟಾಗಿಲ್ಲ. ಇದು ಈ ಪ್ರದೇಶದ ಜನರ ದುರದೃಷ್ಟಕರ ಎಂದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಹೇಳಿದರು.

ಕಾಸರಗೋಡು ಹೈಟೆಕ್ ಕೇಂದ್ರವಾಗಬೇಕು. ಮಾದರಿ ಸ್ಮಾರ್ಟ್ ಜಿಲ್ಲೆಯಾಗಬೇಕು. ಇಲ್ಲಿ ಎಲ್ಲಾ ಕ್ಷೇತ್ರದ ಉದ್ಯೋಗಗಳು ಸೃಷ್ಟಿಯಾಗಬೇಕು. ನಗರದಲ್ಲಿ ರಾತ್ರಿ ಬಸ್ ಸಂಚಾರವಿಲ್ಲ. ಗ್ರಾಮೀಣ ಪ್ರದೇಶಗಳು ತ್ಯಾಜ್ಯ ರಾಶಿಗಳ ಕೇಂದ್ರವಾಗಿದೆ. ವೇಸ್ಟ್ ಮೆನೇಜ್‌ಮೆಂಟ್ ವ್ಯವಸ್ಥೆ ಇಲ್ಲದಿರುವುದೇ ಈ ದುಸ್ಥಿತಿಗೆ ಕಾರಣ. ಈ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶಗಳು ಹಲವು ವಿಧದ ಸಮಸ್ಯೆಗಳನ್ನು ಎದುರಿಸುತ್ತಿದೆ. ನಾಡು ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಎಲ್ಲರೂ ಎನ್‌ಡಿಎ ಅಭ್ಯರ್ಥಿಯಾದ ತನಗೆ ಮತ ನೀಡಿ ತನ್ನನ್ನು ಅತ್ಯಧಿಕ ಮತಗಳಿಂದ ಆರಿಸಬೇಕೆಂದು ಎಂ.ಎಲ್. ಅಶ್ವಿನಿ ವಿನಂತಿಸಿದರು.

ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಜ್ಯ ಸಮಿತಿ ಸದಸ್ಯೆ ಸವಿತಾ ಟೀಚರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್ ಸನಿಲ್, ಒಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಟಿ.ಡಿ.ಮುರಳೀಧರನ್, ಅಲ್ಪಸಂಖ್ಯಾತ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಅಶ್ರಫ್ ಉದುಮ, ಸಿಪಿಎಂ ತ್ಯಜಿಸಿ ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಗೊಂಡ ಪನತ್ತಡಿ ನಿವಾಸಿ ರಜನಿದೇವಿ, ಜಿಲ್ಲಾ ಸೆಲ್ ಕೋಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಜಿಲ್ಲಾ ಕಾರ್ಯದರ್ಶಿ ಪ್ರಮೀಳಾ ಮಜಲ್, ಮಧೂರು ಗ್ರಾಮ ಪಮಚಾಯತ್ ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್ ಉಪಸ್ಥಿತರಿದ್ದರು.

ಜಿಲ್ಲಾ ಕಾರ್ಯದರ್ಶಿ ಪುಷ್ಪಾ ಗೋಪಾಲನ್ ಸ್ವಾಗತಿಸಿ, ದಿವ್ಯಾ ಸಂದೀಪ್ ವಂದಿಸಿದರು.



ಮಂಜೇಶ್ವರಕ್ಕೆ ಆಗಮಿಸಿದ ರಾಜ್ಯಸಭಾ ಸದಸ್ಯೆ, ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆ, ಪದ್ಮಶ್ರೀ ಪಿ.ಟಿ.ಉಷಾ ಅವರನ್ನು ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಸ್ವಾಗತಿಸಿದರು. ಉಡುಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಉಪಸ್ಥಿತರಿದ್ದರು.

ಸಮುದ್ರ ತೀರ ಪ್ರದೇಶದಲ್ಲಿ ಕೆ.ಸುರೇಂದ್ರನ್ ಪ್ರಚಾರ

ಮೀನುಗಾರರಿಗೆ ಬಿಜೆಪಿ ಶಕ್ತಿ



ಉಪ್ಪಳ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರು ಶುಕ್ರವಾರ ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯಲ್ಲಿ ಮತದಾರರನ್ನು ಭೇಟಿಯಾದರು. ಸಂಜೆ ಹನುಮಾನ್‌ನಗರ ಸಮುದ್ರ ತೀರಾ ಪ್ರದೇಶಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಎಡ ಮತ್ತು ಬಲ ಸರಕಾರಗಳೆರಡೂ ಬಹಳ ಸಮಯದಿಂದ ಮೀನುಗಾರರನ್ನು ಮೋಸ ಮಾಡುತ್ತಿವೆ ಎಂದು ಆರೋಪಿಸಿದರು. ಮೀನುಗಾರಿಕೆಗೆ ಬಿಜೆಪಿ ಶಕ್ತಿಯಾಗಿ ನಿಂತಿದೆ ಎಂದರು.

ತೀವ್ರ ಸಮುದ್ರ ಕೊರೆತದ ಸಮಯದಲ್ಲೂ ಮೀನುಗಾರರು ತಮ್ಮ ಕೃಷಿ ಮತ್ತು ಮನೆಗಳನ್ನು ಕಳೆದುಕೊಂಡಾಗಲೂ ಹಿಂತಿರುಗಿ ನೋಡದ ಒಬ್ಬ ಶಾಸಕ ಮಂಜೇಶ್ವರದಲ್ಲಿ ಇದ್ದಾರೆ ಎಂದು ಸುರೇಂದ್ರನ್ ಹೇಳಿದರು.

ಇದು ಬದಲಾಗಬೇಕು ಮತ್ತು ಬಹಳ ಕಾಲದಿಂದ ಮೀನುಗಾರರನ್ನು ವಂಚಿಸುತ್ತಿರುವ ಸರಕಾರವನ್ನು ಹಾಗೂ ಸ್ಥಳೀಯ ಶಾಸಕರಿಗೆ ಪಾಠ ಕಲಿಸಬೇಕು ಎಂದು ಸುರೇಂದ್ರನ್ ಹೇಳಿದರು.

> ▸▸ **ಬಹಳ ಕಾಲದಿಂದ ಮೀನುಗಾರರನ್ನು ವಂಚಿಸುತ್ತಿರುವ ಸರಕಾರಗಳಿಗೆ, ಸ್ಥಳೀಯ ಶಾಸಕರಿಗೆ ಪಾಠ ಕಲಿಸಬೇಕು ಸುರೇಂದ್ರನ್ ಹೇಳಿದರು.**

ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಬಿಜೆಪಿ ಕುಂಬಳೆ ಮಂಡಲಾಧ್ಯಕ್ಷ ಸುನೀಲ್ ಅನಂತಪುರ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಕೆ.ಪಿ.ವಲ್ಸರಾಜ್, ಜಿತೇಶ್ ಕಡಪ್ಪುರ, ಹಿರಿಯ ಕಾರ್ಯಕರ್ತರಾದ ಮಾಧವ ಕಡಪ್ಪುರಂ, ಜ್ಯೋತಿರಾಜ್ ಕಡಪ್ಪುರ, ಕೃಷ್ಣ ಕಡಪ್ಪುರ ಏಲ ಉಪಸ್ಥಿತರಿದ್ದರು.

ಕ್ರೀಡಾರಂಗದಲ್ಲೂ ಮಂಜೇಶ್ವರ ಅವಗಣನೆ : ಪಿ.ಟಿ. ಉಷಾ



ಮಂಜೇಶ್ವರ: ಮಂಜೇಶ್ವರ ಅಭಿವೃದ್ಧಿಯಲ್ಲಿ ಮಾತ್ರವಲ್ಲ ಕ್ರೀಡಾರಂಗದಲ್ಲಿಯೂ ಸಂಪೂರ್ಣ ಕಡೆಗಣಿಸಲ್ಪಟ್ಟ ಮಂಡಲವಾಗಿದೆ. ಇಲ್ಲಿನ ಪ್ರತಿಭಾವಂತ ಕ್ರೀಡಾಳುಗಳಿಗೆ ಅಭ್ಯಾಸಿಸಲು ಮೈದಾನಗಳಿಲ್ಲ. ಅಂತಾರಾಷ್ಟ್ರೀಯ ಮಾನ್ಯತೆಯ ಸ್ಟೇಡಿಯಂಗಳಿಲ್ಲ, ತನ್ನ ಪ್ರತಿಭೆ ತೋರ್ಪಡಿಸಬೇಕಾದ ಕ್ರೀಡಾಳುಗಳು ಬೆಳಗ್ಗೆ ಎದ್ದು ಮಂಗಳೂರು ಹೋಗುವುದೇ ಇಲ್ಲಿನ ಜನರ ಕ್ರೀಡೆಯಾಗಿದೆ ಎಂದು ರಾಜ್ಯಸಭಾ ಸದಸ್ಯೆ, ಭಾರತೀಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆ, ಪದ್ಮಶ್ರೀ ಪಿ.ಟಿ.ಉಷಾ ಹೇಳಿದ್ದಾರೆ.

ಕ್ರೀಡಾ ಭಾರತಿ ಕಾಸರಗೋಡು ಹೊಸಂಗಡಿ ಪ್ರೇರಣಾದಲ್ಲಿ ಹಮ್ಮಿಕೊಂಡ ಯುವ ಸಂವಾದ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು. ಭಾಷಾ ಪ್ರಾವಿಣ್ಯತೆಯ ಮಂಜೇಶ್ವರದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಳುಗಳು ತಯಾರಾಗುತ್ತಿಲ್ಲ. ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ತರಬೇತಿ ಲಭಿಸುತ್ತಿಲ್ಲವೆಂದು ಅವರು ಆಪಾದಿಸಿದರು.

ಮೀರಾ ಟೀಚರ್ ಅಧ್ಯಕ್ಷತೆ ವಹಿಸಿದ್ದರು. ಉಡುಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ವಕೀಲ ಕೆ.ಶ್ರೀಕಾಂತ್, ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಎ.ಕೆ.ಕಯ್ಯಾರ್, ಸಮಂತಾ ಶೆಟ್ಟಿ ಉಪಸ್ಥಿತರಿದ್ದರು.

ಆದರ್ಶ್ ಬಿ.ಎಂ. ಸ್ವಾಗತಿಸಿ, ಸುನಿಲ್ ಅನಂತಪುರ ವಂದಿಸಿದರು.

ಗೆದ್ದಲ್ಲಿ ಕಾಸರಗೋಡು ವೈದ್ಯಕೀಯ ಕಾಲೇಜು 6 ತಿಂಗಳೊಳಗೆ ಸಜ್ಜು: ಸತೀಶನ್



ಬದಿಯಡ್ಕ: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕೇರಳದಲ್ಲಿ ಯುಡಿಎಫ್ ಸರಕಾರ ಅಧಿಕಾರಕ್ಕೆ ಬಂದ ಆರು ತಿಂಗಳೊಳಗೆ ಉಕ್ಕಿನಡ್ಕದಲ್ಲಿರುವ ಕಾಸರಗೋಡು ವೈದ್ಯಕೀಯ ಕಾಲೇಜನ್ನು ಸಂಪೂರ್ಣವಾಗಿ ಸಜ್ಜುಗೊಳಿಸಲಾಗುವುದು ಎಂದು ರಾಜ್ಯದ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಹೇಳಿದ್ದಾರೆ.

ಕಾಸರಗೋಡು ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಕೀಟನಾಶಕದಿಂದಾಗಿ ಬಳಲುತ್ತಿರುವ ಜನರಿಗೆ ಯಾವುದೇ ಸೌಲಭ್ಯಗಳನ್ನು ಎಡರಂಗ ಸರಕಾರವು ಒದಗಿಸಿಲ್ಲ. ರಾಜ್ಯವನ್ನು ಕಳೆದ 10 ವರ್ಷಗಳ ಕಾಲ ಆಡಳಿತ ನಡೆಸಿದ ಎಲ್‌ಡಿಎಫ್ ಒಕ್ಕೂಟವು ಜನವಿರೋಧಿಯಾಗಿ ಮಾರ್ಪಟ್ಟಿದೆ ಎಂದಿ ಅವರು ತಿಳಿಸಿದರು.

ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಅವರ ಚುನಾವಣಾ ಪ್ರಚಾರ ಸಭೆಯನ್ನು ಬದಿಯಡ್ಕದಲ್ಲಿ ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಬದಿಯಡ್ಕ ಮಂಡಲ ಚುನಾವಣಾ ಸಮಿತಿ ಅಧ್ಯಕ್ಷ, ವಕೀಲ ಎ.ಗೋವಿಂದನ್ ನಾಯರ್ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಮುಖ್ಯ ಭಾಷಣ ಮಾಡಿದರು. ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು, ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್, ಬಾಲಕೃಷ್ಣನ್ ಪೆರಿಯ, ಅಬ್ದುಲ್ಲ ಕುಂಞ ಚೆರ್ಕಳ, ಸೋಮಶೇಖರ ಎಂ.ಎಸ್., ಅನ್ವರ್ ಓಜೋನ್, ಶ್ಯಾಮ್‌ಪ್ರಸಾದ್ ಮಾನ್ಯ ಮುಂತಾದವರು ಮಾತನಾಡಿದರು. ಮಂಡಲ ಚುನಾವಣಾ ಸಮಿತಿ ಸಂಚಾಲಕ ಮಾಹಿನ್ ಕೇಳೋಟ್ ಸ್ವಾಗತಿಸಿ, ವಂದಿಸಿದರು.

ಮಾಣಿಬೆಟ್ಟು ಕಂಬಳ ಉದ್ಘಾಟಿಸಿ ಮಾಜಿ ಸಂಸದ ಡಿ.ಕೆ.ಸುರೇಶ್

ಕಂಬಳ ಧಾರ್ಮಿಕತೆಯ ಸಂಕೇತವೂ ಹೌದು



ಮಂಗಳೂರು: ಜಾನಪದ ಕ್ರೀಡೆಯಾದ ಕಂಬಳ ಕೇವಲ ಒಂದು ಕ್ರೀಡೆಯಲ್ಲ, ಧಾರ್ಮಿಕ ಸಂಕೇತ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಅವರು ಗುರುವಾರ ಗುರುಪುರ ಮಾಣಿಬೆಟ್ಟು ಗುತ್ತುವಿನಲ್ಲಿ ನಡೆದ 'ಗುರುಪುರ ಕಂಬಳ' ಉದ್ಘಾಟಿಸಿ ಮಾತನಾಡಿದರು.

ಇನಾಯತ್ ಅಲಿ ಅವರು ಕಳೆದ ಮೂರು ವರ್ಷದಿಂದ ಕಂಬಳ ಆಯೋಜಿಸುವ ಮೂಲಕ ನಮ್ಮ ಸಂಸ್ಕೃತಿ ಉಳಿಸುವ ಕೆಲಸ ಮಾಡುತ್ತಿದ್ದಾರೆ. ಯುವಜನತೆ ಇಂತಹ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ತುಳುನಾಡಿನ ಸಂಸ್ಕೃತಿ ದೇಶಕ್ಕೆ ಕಲಶವಿದ್ದಂತೆ. ವಿವಿಧ ಸಂಸ್ಕೃತಿ, ಆಚಾರ ವಿಚಾರಗಳ ಮೂಲಕ ಧರ್ಮವನ್ನು ಉಳಿಸುವ ಕೆಲಸ ಇಲ್ಲಿ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಮುಳೂರು-ಅಡ್ಡೂರು ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷ ಇನಾಯತ್ ಅಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಸ್ಕೃತಿ ಪರಂಪರೆ ಸದಾಕಾಲ ಉಳಿಯಬೇಕು. ಈ ನೆಲೆಯಲ್ಲಿ ಎಲ್ಲರನ್ನು ಒಟ್ಟುಸೇರಿಸಿಕೊಂಡು ಕಂಬಳ ಆಯೋಜನೆ ಮಾಡಲಾಗುತ್ತಿದೆ ಎಂದರು.

ಸಾಧಕರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. ಸತೀಶ್ಚಂದ್ರ ಸಾಲ್ಯಾನ್, ಯಾಕೂಬ್ ಗುರುಪುರ, ಮೊಹಮ್ಮದ್ ಕುಂಞ ಅವರನ್ನು ಗುರುಪುರ ಕಂಬಳ ಸಮಿತಿ ವತಿಯಿಂದ ಡಿ.ಕೆ. ಸುರೇಶ್ ಅವರಿಗೆ ಚಿನ್ನದ ನೊಗ ಮತ್ತು ಬೆಳ್ಳಿಯ ಪಟ್ಟಿಯ ಕಂಬಳದ ಕೋಲು ನೀಡಿ ಗೌರವಿಸಿದರು. ಅಲ್ಲದೆ ಆರ್ಥಿಕ ಸಮಸ್ಯೆ ಇರುವ ನೂರು ಕುಟುಂಬಕ್ಕೆ ಮದುವೆಗಾಗಿ ಒಟ್ಟು 25 ಲಕ್ಷ ರೂ. ನೆರವು ನೀಡಲಾಯಿತು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಮಾಜಿ ಸಚಿವ ಅಭಯಚಂದ್ರ ಜೈನ್, ಶ್ರೀ ಕ್ಷೇತ್ರ ಕುದ್ರೋಳಿ ಖಜಾಂಚಿ ಪದ್ಮರಾಜ್ ಆರ್., ರಾಜ್ಯ ಕಂಬಳ ಅಸೋಸಿಯೇಶನ್ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ, ಜಿಲ್ಲಾ ಕಂಬಳ ಸಮಿತಿ ಪ್ರಧಾನ ಕಾರ್ಯದರ್ಶಿ ಲೋಕೇಶ್ ಶೆಟ್ಟಿ, ಅದಾನಿ ಸಂಸ್ಥೆಯ ಕಿಶೋರ್ ಆಳ್ವ, ಪ್ರಮುಖರಾದ ಜಗದೀಶ್ ಅಧಿಕಾರಿ, ದಿನೇಶ್ ಕರ್ಕೇರ, ಕೀರ್ತಿ ಗಣೇಶ್, ವಿನಯಕುಮಾರ್ ಶೆಟ್ಟಿ, ಲೋಕೇಶ್ ಶೆಟ್ಟಿ, ಕಂಬಳ ಸಮಿತಿ ಗೌರವಾಧ್ಯಕ್ಷ ಪದ್ಮನಾಭ ಕೋಟ್ಯಾನ್, ಸ್ಥಾಪಕಾಧ್ಯಕ್ಷ ರಾಜ್‌ಕುಮಾರ್ ಶೆಟ್ಟಿ ತಿರುವೈಲುಗುತ್ತು, ಕಾರ್ಯಾಧ್ಯಕ್ಷ ಜಗದೀಶ್ ಶೆಟ್ಟಿ ಮಾಣಿಬೆಟ್ಟು ಗುತ್ತು, ಪ್ರ. ಕಾರ್ಯದರ್ಶಿ ಯಶವಂತಕುಮಾರ್ ಶೆಟ್ಟಿ ಬೆಳ್ಳೂರು ಗುತ್ತು, ಸೇರಿದಂತೆ ವಿವಿಧ ಗಣ್ಯರು ಉಪಸ್ಥಿತರಿದ್ದರು. ಚೇತನ್ ಪಿಲಿಕುಳ ಕಾರ್ಯಕ್ರಮ ನಿರೂಪಿಸಿದರು.

ಇಂದ್ರಾಣೆ ಶ್ರೀ ಮುಖ್ಯಪ್ರಾಣ ದೇವರ ಪ್ರತಿಷ್ಠಾಪನಾ ಮಹೋತ್ಸವ ಸಂಪನ್ನ

ಉಡುಪಿ: ನಗರದ ಇಂದ್ರಾಳಿಯ ಇಂದ್ರಾಣೆ ಶ್ರೀ ಮುಖ್ಯಪ್ರಾಣ ದೇವರ ಅಷ್ಟಬಂಧ ಸಹಿತ ಪುನಃ ಪ್ರತಿಷ್ಠಾಪನಾ ಕಾರ್ಯಕ್ರಮವು ಶನಿವಾರ ಶಿಲಾಮಯ ಗುಡಿಯಲ್ಲಿ ಅತ್ಯಂತ ವೈಭವದಿಂದ ಜರುಗಿತು.

ಧಾರ್ಮಿಕ ವಿಧಿ-ವಿಧಾನಗಳು

ಶನಿವಾರ ಮುಂಜಾನೆ 6.48ಕ್ಕೆ ಸರಿಯಾಗಿ ಶುಭ ಮೀನ ಲಗ್ನ ಮುಹೂರ್ತದಲ್ಲಿ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯಿತು. ಮುಂಜಾನೆಯಿಂದಲೇ ಗಣಯಾಗ, ಪ್ರತಿಷ್ಠಾಪನಾ ಹೋಮ, ಕಲಶಾಭಿಷೇಕ, ಪ್ರಾಯಶ್ಚಿತ ಹೋಮ, ಶ್ರೀವಾಯುಸ್ತುತಿ ಹೋಮ, ನವಗ್ರಹ ಹೋಮ ಹಾಗೂ ಪವಮಾನ ಹೋಮಗಳು ಶ್ರದ್ಧಾಭಕ್ತಿಯಿಂದ ನೆರವೇರಿದವು. ಮಧ್ಯಾಹ್ನ 12.15ಕ್ಕೆ ಮಹಾಪೂಜೆ ನಡೆದು, ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಸಂಜೆ ಮಹಾಸುದರ್ಶನ ಹೋಮ, ದಿಶಾ ಹೋಮ ಹಾಗೂ ಮಂಡಲ ರಚನೆಯೊಂದಿಗೆ ಅಧಿವಾಸ ಪೂಜೆಗಳು ಜರುಗಿದವು.

> ▸▸ **ಮಧ್ಯಾಹ್ನ 12.15ಕ್ಕೆ ಮಹಾಪೂಜೆ ನಡೆದು, ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು.**
>
> ▸▸ **ಸಂಜೆ ಮಹಾಸುದರ್ಶನ ಹೋಮ, ದಿಶಾ ಹೋಮ ಹಾಗೂ ಮಂಡಲ ರಚನೆಯೊಂದಿಗೆ ಅಧಿವಾಸ ಪೂಜೆಗಳು ಜರುಗಿದವು.**



ಸಾಂಸ್ಕೃತಿಕ ವೈಭವ

ದೇವಸ್ಥಾನದ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರ ಗಮನ ಸೆಳೆದವು. ಬೆಳಿಗ್ಗೆ 11ಕ್ಕೆ ವಿದುಷಿ ಸವಿತಾ ಮುರಲೀಧರ್ ಶಿಷ್ಯರಿಂದ 'ನೃತ್ಯ ವೈಭವ' ಪ್ರದರ್ಶನಗೊಂಡಿತು. ಮಧ್ಯಾಹ್ನ 2ಕ್ಕೆ ಗುಂಡಿಬೈಲು ಯಕ್ಷಗಾನ ಕಲಾ ಕ್ಷೇತ್ರದಿಂದ ತಾಳಮದ್ದಳೆ ಹಾಗೂ ಮಧ್ಯಾಹ್ನ 4ರಿಂದ ವಿದುಷಿ ಉಷಾ ಹೆಬ್ಬಾರ್ ಮತ್ತು ತಂಡದಿಂದ 'ಭಜನಾಮೃತಂ' ಕಾರ್ಯಕ್ರಮ ನಡೆಯಿತು. ರಾತ್ರಿ 7.30ಕ್ಕೆ ಉಡುಪಿಯ ಕಲಾಮಯಂ ವತಿಯಿಂದ ಜನಪದ ಕಲರವ ಮತ್ತು ರಂಗ ಸಂಗೀತದ ಸಮ್ಮಿಲನ ಜರುಗಿತು.

ರಿಜ್ವಿ ಆಟಕ್ಕೆ ಮಂಕಾದ ಮುಂಬೈ | ಅಕ್ಷರ್ ಪಡೆಗೆ ಎರಡನೇ ಗೆಲುವು | ಸೂರ್ಯ ಹೋರಾಟ ವ್ಯರ್ಥ

ದಿಲ್ಲಿಯಲ್ಲಿ ರಿಜ್ವಿ ದರ್ಬಾರ್!

ಹೊಸದಿಲ್ಲಿ: ಒತ್ತಡದ ಸಮಯದಲ್ಲಿ ಮತ್ತೊಮ್ಮೆ ತಂಡದ ಕೈ ಹಿಡಿದ ಸಮೀರ್ ರಿಜ್ವಿ ತಮ್ಮ ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ದಿಲ್ಲಿ ತಂಡಕ್ಕೆ ಸತತ ಎರಡನೇ ಗೆಲುವು ತಂದಿಟ್ಟರು. ತಂಡದ ಸಾಂಘಿಕ ಬೌಲಿಂಗ್ ಮಾಡಿದ ನಂತರ ಗುರಿ ಪೇರಿಸುವಾಗ ಮಿಂಚಿದ ದಿಲ್ಲಿ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ದಿಲ್ಲಿಯ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಿಜ್ವಿಯದ್ದೇ ಆಟ ನಡೆಯಿತು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಅಕ್ಷರ್ ಪಡೆ ಮಾರಕ ದಾಳಿ ಸಂಘಟಿಸಿತು. ರೋಹಿತ್ ಶರ್ಮ, ರಿಕೆಲ್ಟನ್, ಸೂರ್ಯ ಹೀಗೆ ಬ್ಯಾಟಗರ ದಂಡೇ ಇದ್ದ ತಂಡವನ್ನು ಕರಾರುವಾಕ್ಕಾಗಿ 162 ರನ್‌ಗಳಿಗೆ ತಡೆದು ನಿಲ್ಲಿಸಿತು. ಮುಂಬೈ ಪರ ಸೂರ್ಯಕುಮಾರ್ ಯಾದವ್ 51 ರನ್ ಗಳಿಸಿ ಹೋರಾಡಿದರು. ಇತ್ತ ದಿಲ್ಲಿ ಪರ ಮುಖೇಶ್ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ದಿಲ್ಲಿಗೆ ನಾಗಾಲೋಟ. ಮೊದಲಿಗೆ ದೀಪಕ್ ಚಾಹರ್ ಅವರ ಮಾರಕ ದಾಳಿಗೆ ವಿಕೆಟ್ ಕಳೆದುಕೊಂಡರೂ ನಂತರ ರಿಜ್ವಿ ಗೆಲ್ಲಿಸುವ ಜವಾಬ್ದಾರಿ ಮೈಗೆತ್ತಿಕೊಂಡರು. ಅವರಿಗೆ ನಿಸ್ಸಂಕಾ ಸಾಥ್ ಸಿಕ್ಕ ನಂತರ ತಂಡ 18.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿ ಗೆದ್ದುಕೊಂಡಿತು.

ಪಂದ್ಯಶ್ರೇಷ್ಠ ಮತ್ತೊಮ್ಮೆ ರಿಜ್ವಿ ಪಡೆದುಕೊಂಡರೆ, 2 ವಿಕೆಟ್ ಪಡೆದ ಮುಖೇಶ್ ಪಂದ್ಯದ ಬೆಸ್ಟ್ ಬೌಲರ್ ಅನ್ನಿಸಿಕೊಂಡರು. ಸೂರ್ಯ 52 ರನ್ ಬಾರಿಸಿ ಹೋರಾಟ ನಡೆಸಿದ ಏಕೈಕ ಆಟಗಾರ ಎನ್ನಿಸಿಕೊಂಡರು. ಉಳಿದಂತೆ ನಿಸ್ಸಂಕಾ ಮತ್ತು ರೋಹಿತ್ ಶರ್ಮ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ.

ಸಮೀರ್ ಅಬ್ಬರ: ಗುರಿ ಬೆನ್ನತ್ತುವಾಗ ದಿಲ್ಲಿಗೆ ರಾಹುಲ್ ವಿಕೆಟ್ ಕಳೆದುಕೊಂಡ ಆಘಾತ. ನಿತಿಶ್ ರಾಣಾ ವಿಕೆಟ್ ಮುಂಬೈಗೆ ರನೌಟ್ ಮೂಲಕ ಉಡುಗೊರೆ ಸಿಕ್ಕಂತೆ ಸಿಕ್ಕಿತು. ಅಲ್ಲಿ ಪಂದ್ಯದಲ್ಲಿ ಮುನ್ನಡೆ ಸಾಧಿಸಿದ್ದ ಮುಂಬೈ ಇಂಡಿಯನ್ಸ್ ಅದೇ ಮುಂದುವರಿಸಲು ಶಕ್ತವಾಗಲಿಲ್ಲ. ನಾಲ್ಕನೇ ವಿಕೆಟ್‌ಗೆ ಜೊತೆಯಾದ ನಿಸ್ಸಂಕಾ ಮತ್ತು ರಿಜ್ವಿ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. ಸಮೀರ್ ಸೆಟ್ ಆದರು. ನಿಸ್ಸಂಕಾ ವಿಕೆಟ್ ಒಪ್ಪಿಸಿದರು, ಇವರಿಬ್ಬರ ಜೊತೆಯಾಟ 66 ರನ್ ಗಳಿಸಿತು. ಅದರಲ್ಲಿ ಸಮೀರ್ 25 ರನ್ ಮಾತ್ರ ಗಳಿಸಿದರು.



ಔಪಚಾರಿಕತೆ ಮುಗಿಸಿಕೊಂಡಿದ್ದ ಸಮೀರ್ ನಂತರ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಬಂದರು. ಮುಂಬೈ ಕಡೆಯಿಂದ ಪಂದ್ಯ ಕಸಿದರು. ಅವರಿಗೆ ಮಿಲ್ಲರ್ ಅಚ್ಚುಕಟ್ಟಾದ ಸಾಥ್ ಕೊಟ್ಟರು. ಮುಂದಿನ 28 ಬಾಲ್‌ಗಳಲ್ಲಿ ರಿಜ್ವಿ 65 ರನ್ ಚಚ್ಚಿದರು. 90 ರನ್‌ಗಳಿಸಿದ್ದಾಗ ಬಾಷ್‌ಗೆ ಕ್ಯಾಚ್ ಆದರು. ಅಲ್ಲಿಗೆ ಪಂದ್ಯ ಮುಂಬೈ ಕಡೆಯಿಂದ ಹೋಗಿತ್ತು. ಉಳಿದ ಔಪಚಾರಿಕತೆಯನ್ನು ಮಿಲ್ಲರ್ ಸಂಪನ್ನಗೊಳಿಸಿದರು. ದಿಲ್ಲಿ 6 ವಿಕೆಟ್ ಜಯ ಸಾಧಿಸಿತು.

ಮುಂಬೈಗೆ ಸೂರ್ಯ ಆಸರೆ: ಬ್ಯಾಟಿಂಗ್‌ಗಿಳಿದ ಮುಂಬೈ ಇಂಡಿಯನ್ಸ್‌ಗೆ ಆರಂಭಿಕ ಆಘಾತ. 9 ರನ್ ಗಳಿಸಿದ್ದ ರಯಾನ್ ರಿಕೆಲ್ಟನ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ತಿಲಕ್ ವರ್ಮಾ ಶೂನ್ಯ ಸುತ್ತಿದರು. ಸಂಕಷ್ಟಕ್ಕೆ ಸಿಲುಕಿದ ಮುಂಬೈಗೆ ಸೂರ್ಯ ಹಾಗೂ ರೋಹಿತ್ ಕೊಂಚ ಹೊತ್ತು ಆಸರೆಯಾದರು. 35 ರನ್ ಗಳಿಸಿದ್ದ ರೋಹಿತ್ ಶರ್ಮ ವಿಕೆಟ್ ಒಪ್ಪಿಸಿದರು. ಸೂರ್ಯ ನಿಧಾನವಾಗಿ ಅರ್ಧಶತಕ ಬಾರಿಸಿದರು. ರುದರ್‌ಫೋರ್ಡ್ 5 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ನಮನ್ ಧಿರ್ 28 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಸೂರ್ಯ 51 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ದಿಲ್ಲಿ ಪರ ಮುಖೇಶ್ 2 ವಿಕೆಟ್ ಪಡೆದರು.



ಸ್ಕೋರ್ ಬೋರ್ಡ್

ಮುಂಬೈ 20 ಓವರ್‌ಗಳಲ್ಲಿ 162/6

ರಿಕೆಲ್ಟನ್	ಸಿ ಅಕ್ಷರ್ ಬಿ ಮುಖೇಶ್	9
ರೋಹಿತ್	ಸಿ ನಿತಿಶ್ ಬಿ ಅಕ್ಷರ್	35
ತಿಲಕ್	ಸಿ ಮತ್ತು ಬಿ ಮುಕೇಶ್	0
ಸೂರ್ಯ	ಎಲ್‌ಬಿ ಬಿ ಲುಂಗಿ	51
ರುದರ್‌ಫೋರ್ಡ್	ಸಿ ಮುಖೇಶ್ ಬಿ ವಿಪ್ರಾಜ್	5
ನಮನ್	ಸಿ ಸ್ಟಬ್ಸ್ ಬಿ ನಟರಾಜನ್	28
ಸ್ಯಾಂಟ್ನರ್	ನಾಟೌಟ್	18
ಬಾಷ್	ನಾಟೌಟ್	11
ಇತರೆ		5

ಬೌಲಿಂಗ್ ವಿವರ

ಮುಖೇಶ್	3–0–26–2
ಲುಂಗಿ	4–0–34–1
ಅಕ್ಷರ್	4–0–22–1
ವಿಪ್ರಾಜ್	3–0–24–1
ಕುಲ್ದೀಪ್	3–0–31–0
ನಟರಾಜನ್	3–0–24–1

ದಿಲ್ಲಿ 18.1 ಓವರ್‌ಗಳಲ್ಲಿ 164/4

ರಾಹುಲ್	ಸಿ ರಿಕೆಲ್ಟನ್ ಬಿ ಚಾಹರ್	1
ನಿಸ್ಸಂಕಾ	ಸಿ ಮಯಾಂಕ್ ಬಿ ಸ್ಯಾಂಟ್ನರ್	44
ನಿತಿಶ್	ರನೌಟ್	0
ರಿಜ್ವಿ	ಸಿ ವರ್ಮಾ ಬಿ ಬಾಷ್	90
ಮಿಲ್ಲರ್	ನಾಟೌಟ್	21
ಸ್ಟಬ್ಸ್	ನಾಟೌಟ್	3
ಇತರೆ		5

ಬೌಲಿಂಗ್ ವಿವರ

ಚಾಹರ್	3–0–20–1
ಬೂಮ್ರಾ	4–0–21–0
ಸ್ಯಾಂಟ್ನರ್	3–0–22–1
ಶಾರ್ದೂಲ್	3–0–41–0
ಮಯಾಂಕ್	2–0–20–0
ಬಾಷ್	3.1–0–39–1

ಜುರೇಲ್ ಮಿಂಚಿನಾಟ | ಜೈಸ್ವಾಲ್ ಅಬ್ಬರ

ಆರ್‌ಆರ್ 210/6

ಅಹಮದಾಬಾದ್: ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ ಮತ್ತು ಧ್ರುವ್ ಜುರೇಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಗುಜರಾತ್ ತಂಡವನ್ನು ದಂಡಿಸಿರುವ ರಾಜಸ್ಥಾನ ರಾಯಲ್ಸ್ ತಂಡವು 200ಕ್ಕೂ ಅಧಿಕ ಸ್ಕೋರ್ ನಿರ್ಮಿಸಿದೆ. ಪಂದ್ಯಾವಳಿಯ 9ನೇ ಪಂದ್ಯದಲ್ಲಿ ರಾಜಸ್ಥಾನ ಮತ್ತು ಗುಜರಾತ್ ತಂಡಗಳು ಮುಖಾಮುಖಿಯಾಗಿದ್ದವು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಇಬ್ಬರು ಯುವಕರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಜುರೇಲ್ ಅವರ ಆಸರೆ ಪಡೆಯಿತು. ಹೆಟ್ಮೇರ್ ಅವರ ಚಿಕ್ಕ–ಚೊಕ್ಕ ಪ್ರದರ್ಶನದೊಂದಿಗೆ ತಂಡ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿದೆ.



ಆರಂಭಿಕರ ಅರ್ಭಟ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ರಾಜಸ್ಥಾನ ಎಂದಿನಂತೆ ಸ್ಫೋಟಕ ಆರಂಭ ಪಡೆಯಿತು. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಮೊದಲನಿಂದಲೂ ಬಿರುಸಿನ ಬ್ಯಾಟಿಂಗ್ ಮಾಡುವತ್ತ ಸಾಗಿತ್ತು. ಒಂದು ಹಂತದಲ್ಲಿ ವೈಭವ್ ಸೆಟ್ ಆಗಲು ಸ್ವಲ್ಪ ಸಮಯ ತೆಗೆದುಕೊಂಡರೆ, ಜೈಸ್ವಾಲ್ ಹೊಡೆಯದೊಂದಿಗೆ ಇನ್ನಿಂಗ್ಸ್ ಆರಂಭಿಸಿದರು. ಇಬ್ಬರ ಆಟಕ್ಕೆ ಗುಜರಾತ್ ತಂಡದ ಬೌಲಿಂಗ್ ಪಡೆ ತತ್ತರಿಸಿತು. ಸ್ವಲ್ಪ ಸಮಯದ ನಂತರ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ವೈಭವ್ 5 ಬೌಂಡರಿ ಹಾಗೂ 1 ಸಿಕ್ಸರ್‌ಗಳೊಂದಿಗೆ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಜೈಸ್ವಾಲ್ 36 ಬಾಲ್‌ಗಳಲ್ಲಿ 6 ಬೌಂಡರಿ 3 ಸಿಕ್ಸರ್‌ಗಳೊಂದಿಗೆ 55 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಜುರೇಲ್ ಮಿಂಚಿನಾಟ: ಧ್ರುವ್ ಜುರೇಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಅವರು, ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡ ನಂತರ ಬಿರುಸಿನ ಆಟ ಶುರು ಮಾಡಿದರು. ಮಧ್ಯಮ ಕ್ರಮಾಂಕದಲ್ಲಿ ರಿಯಾನ್ 8, ಹೆಟ್ಮೇರ್ 18 ರನ್ ಮತ್ತು ಫೆರಾರಿಯಾ 1 ರನ್‌ಗೆ ವಿಕೆಟ್ ಕಳೆದುಕೊಂಡರು. ಇಷ್ಟಾದರೂ ಒಂದು ಬದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಜುರೇಲ್ 42 ಬಾಲ್ ಮತ್ರ ಎದುರಿಸಿ 5 ಬೌಂಡರಿ ಮತ್ತು 5 ಸಿಕ್ಸರ್‌ಗಳೊಂದಿಗೆ 75 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇದರೊಂದಿಗೆ ಸ್ಕೋರ್ ಹಿಗ್ಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಗಿಲ್ ಅಲಭ್ಯ: ಗುಜರಾತ್ ಜೇಂಟ್ಸ್ ತಂಡದ ನಾಯಕ ಶುಭಮನ್ ಗಿಲ್ ಗಾಯದ ಕಾರಣದಿಂದಾಗಿ ರಾಜಸ್ಥಾನ ವಿರುದ್ಧದ ಪಂದ್ಯದಿಂದ ಹೊರಗುಳಿದರು. ಅವರ ಬದಲಿಗೆ ತಂಡದ ಪ್ರಮುಖ ಆಟಗಾರ ರಶೀದ್ ಖಾನ್ ಅವರನ್ನು ಹಂಗಾಮಿ ನಾಯಕರನ್ನಾಗಿ ನೇಮಿಸಲಾಗಿತ್ತು.



ಕಿರುಸುದ್ದಿ

ಪಂಜಾಬ್‌ಗೆ ಸತತ ಎರಡನೇ ಗೆಲುವು

ಚೆನ್ನೈ: ಯುವ ಬ್ಯಾಟರ್ ಪ್ರಿಯಾಂಶ್ ಆರ್ಯ ಅವರ ಸ್ಫೋಟಕ ಬ್ಯಾಟಿಂಗ್ ನಂತರ ನಾಯಕನಾಟವಾಡಿದ ಶ್ರೇಯಸ್ ಅಯ್ಯರ್ ಪ್ರತಿಷ್ಠಿತ ಲೀಗ್‌ನಲ್ಲಿ ಸತತ ಪಂಜಾಬ್ ತಂಡಕ್ಕೆ ಸತತ ಎರಡನೇ ಗೆಲುವು ತಂದುಕೊಟ್ಟರು. ಚೆನ್ನೈ ಎರಡನೇ ಸೋಲು ಅನುಭವಿಸಿತು. ಆಯುಷ್ ಮಾತ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ದುಬೆ ಮತ್ತು ಸರ್ಫರಾಜ್ ಖಾನ್ ಅವರ ಕರಾರುವಾಕ್ ಬ್ಯಾಟಿಂಗ್‌ನಿಂದಾಗಿ ಚೆನ್ನೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಪಂಜಾಬ್ ಪರ ವಿಜಯ್‌ಕುಮಾರ್ 2 ವಿಕೆಟ್ ಪಡೆದುಕೊಂಡಿದ್ದರು. ಗುರಿ ಬೆನ್ನತ್ತಿದ ಶ್ರೇಯಸ್ ಪಡೆ ಪ್ರಿಯಾಂಶ್ ಆರ್ಯ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಬಿರುಸಿನ ಆರಂಭ ಪಡೆದು ಪಂದ್ಯ ಕಸಿದುಕೊಂಡಿತು. ಅವರ ವಿಕೆಟ್ ಬಿದ್ದ ನಂತರ ಶ್ರೇಯಸ್ ಅಯ್ಯರ್ ನಾಯಕನಾಟದೊಂದಿಗೆ ಅಬ್ಬರಿಸಿ 18.4 ಅನ್ನುವಷ್ಟರಲ್ಲಿ 210 ರನ್ ಗಳಿಸುವಂತೆ ಮಾಡಿದರು. ಚೆನ್ನೈ 5 ವಿಕೆಟ್ ಪಡೆದುಕೊಂಡಿತ್ತು.

ಪ್ರಿಯಾಂಶ್ ಆರ್ಯ 11 ಬಾಲ್‌ಗಳಲ್ಲಿ 39 ರನ್ ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಪ್ರಭಸಿಮ್ರನ್ ಕೂಡ 43ರನ್‌ಗಳ ಕೊಡುಗೆ ನೀಡಿದರು. ಮೂರನೇ ಕ್ರಮಾಂಕದಲ್ಲಿ ಕೂಪರ್ 36, ಶ್ರೇಯಸ್ ಅಯ್ಯರ್ 50 ರನ್ ಗಳಿಸಿ ಗೆಲುವಿನ ರೂವಾರಿ ಅನ್ನಿಸಿಕೊಂಡರು. ಚೆನ್ನೈ ಪರ ಮಾತ್ ಹೆನ್ರಿ ಹಾಗೂ ಕಂಬೋಜ್ ತಲಾ 2 ವಿಕೆಟ್ ಪಡೆದುಕೊಂಡರು.

ಲಖನೌಗೆ ಹೈದರಾಬಾದ್ ಸವಾಲು

ಹೈದರಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಭಾನುವಾರದ ಮೊದಲನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಮೊದಲ ಪಂದ್ಯದಲ್ಲಿ ಸೋತರೂ ಎರಡನೇ ಪಂದ್ಯದಲ್ಲಿ ಗೆಲುವು ಸಾಧಿಸಿದ ಹೈದರಾಬಾದ್ ತನ್ನ ಮೊದಲನೇ ತವರು ಪಂದ್ಯವನ್ನಾಡಲಿದೆ. ಇತ್ತ ಮೊದಲ ಪಂದ್ಯದಲ್ಲಿ ಗೆಲುವಿನ ಆಟವಾಡಿದರೂ ಕೊನೆಯಲ್ಲಿ ಭಾರೀ ನಿರಾಸೆ ಅನುಭವಿಸಿದ ಲಖನೌ ತನ್ನ ಮೊದಲ ಜಯದ ಹುಡುಕಾಟದಲ್ಲಿದೆ. ಪಂತ್, ಮಾಕ್ರಂ, ಮಾರ್ಷ್, ಪೂರಣ್ ಸೇರಿದಂತೆ ಪ್ರಮುಖ ಆಟಗಾರರನ್ನು ಲಖನೌ ತಂಡ ಹೊಂದಿದೆ. ಇತ್ತ ಹೈದರಾಬಾದ್‌ನಲ್ಲೂ ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಕ್ಲಾಸೆನ್ ಅಂತಹ ಪ್ರಮುಖ ಆಟಗಾರರಿದ್ದಾರೆ. ಉಭಯ ತಂಡಗಳಲ್ಲೂ ಬ್ಯಾಟಿಗರ ಪಡೆಗಳಿವೆ. ಹೈದರಾಬಾದ್‌ನ ಬ್ಯಾಟಿಂಗ್ ಪ್ರಾಬಲ್ಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂದ್ಯದ ಸಮಯ: ಮಧ್ಯಾಹ್ನ 3:30

ಪಾಯಲ್‌ಗೆ ಚಿನ್ನದ ಪದಕ

ಹೊಸದಿಲ್ಲಿ: ವಿಶ್ವ ಆರ್ಚರಿ ಪ್ಯಾರಾ ಸಿರೀಸ್‌ನಲ್ಲಿ ಭಾರತದ ಯುವ ಪ್ಯಾರಾ ಆರ್ಚರಿ ತಾರೆ ಪಾಯಲ್ ನಾಗ್ ಭಾರೀ ಸಂಚಲನ ಮೂಡಿಸಿ ಚಿನ್ನದ ಪದಕ ಗೆದ್ದಿದ್ದಾರೆ. ಬ್ಯಾಂಕಾಕ್‌ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ, ನಾಲ್ಕು ಅಂಗವಿಕಲತೆಯನ್ನು ಎದುರಿಸುತ್ತಿರುವ 18 ವರ್ಷದ ಪಾಯಲ್, ವಿಶ್ವ ನಂ.1 ಹಾಗೂ ತನ್ನದೇ ಸಹ ಆಟಗಾರ್ತಿ ಶೀತಲ್ ದೇವಿ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ಶನಿವಾರದಂದು ಮಹಿಳೆಯರ ಕಂಪೌಂಡ್ ಫೈನಲ್‌ನಲ್ಲಿ ಪಾಯಲ್ 139–136 ಅಂತರದಲ್ಲಿ ಜಯ ಸಾಧಿಸಿ, ತನ್ನ ಅದ್ಭುತ ಅಭಿಯಾನವನ್ನು ಚಿನ್ನದೊಂದಿಗೆ ಮುಕ್ತಾಯಗೊಳಿಸಿದರು. ಸ್ಪರ್ಧೆಯ ಮೊದಲ ಎಂಡ್‌ನಲ್ಲೇ ಪರಿಪೂರ್ಣ 10ರ ಗುರಿಯನ್ನು ಹೊಡೆದು ಮುನ್ನಡೆ ಪಡೆದ ಅವರು, ಎರಡನೇ ಎಂಡ್ ನಂತರ 54–54 ಸಮಬಲದ ಬಳಿಕ ಮೂರನೇ ಎಂಡ್‌ನಲ್ಲಿ ಮುನ್ನಡೆ ಸಾಧಿಸಿದರು. ಅಂತಿಮ ಎಂಡ್‌ನಲ್ಲಿ ಎರಡು 10ಗಳೊಂದಿಗೆ ದೃಢ ಆಟದ ಮೂಲಕ ಗೆಲುವು ತಮ್ಮದಾಗಿಸಿಕೊಂಡರು.

ಇದು ಕಳೆದ ಒಂದೇ ವರ್ಷದೊಳಗೆ ಶೀತಲ್ ದೇವಿ ವಿರುದ್ಧ ಪಾಯಲ್ ಅವರ ಎರಡನೇ ಜಯವಾಗಿದೆ. 2025 ಜನವರಿಯಲ್ಲಿ ಜೈಪುರದಲ್ಲಿ ನಡೆದ ಪ್ಯಾರಾ ನ್ಯಾಷನಲ್ಸ್‌ನಲ್ಲಿ ಕೂಡ ಅವರು ಶೀತಲ್ ಅವರನ್ನು ಸೋಲಿಸಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೇವಲ ಎರಡನೇ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಪಾಯಲ್, ಒತ್ತಡದ ಸಂದರ್ಭದಲ್ಲೂ ತಾಳ್ಮೆಯಿಂದ ಆಡಿದುದು ವಿಶೇಷವಾಗಿದೆ.

- ವಿಶ್ವ ಆರ್ಚರಿ ಪ್ಯಾರಾ ಸಿರೀಸ್‌ನಲ್ಲಿ ಭಾರತೀಯರ ಮಿಂಚಿನಾಟ
- ದೇಶಕ್ಕೆ ಒಟ್ಟು 13 ಪದಕ
- ಅಂಕಪಟ್ಟಿಯಲ್ಲಿ ಮೊದಲನೇ ಸ್ಥಾನ



ಸೋಲಿನಿಂದ ಹೊರಬರುವುದೇ ಚೆನ್ನೈ? | ಆತ್ಮವಿಶ್ವಾಸದಲ್ಲಿ ಆರ್‌ಸಿಬಿ

ಸೂಪರ್ ತಂಡ ರಾಯಲ್ ಸಮರ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 19ನೇ ಆವೃತ್ತಿಗೆ ರಾಯಲ್ ಎಂಟ್ರಿ ಕೊಟ್ಟಿರುವ ಚಾಂಪಿಯನ್ ಬೆಂಗಳೂರು ಗೆಲುವಿನ ವಿಶ್ವಾಸದೊಂದಿಗೆ ಕಣಕ್ಕಿಳಿಯಲು ಅಣಿಯಾಗಿದೆ. ಗೆಲುವಿನ ಶುಭಾರಂಭ ಪಡೆದಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸೋಲುಗಳಿಂದ ಹೈರಾಣಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಭಾನುವಾರದ ಎಲ್–ಕ್ಲಾಸಿಕೋ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಗೆಲುವಿನ ಇಂಗಿತದೊಂದಿಗೆ ಗೆಲುವಿನ ಸರಪಳಿ ಹೊತ್ತು ತರುತ್ತಿರುವ ಬೆಂಗಳೂರು ಶನಿವಾರ ಅಭ್ಯಾಸದಲ್ಲಿ ಮತ್ತೊಮ್ಮೆ ಆತ್ಮವಿಶ್ವಾಸ ವ್ಯಕ್ತಪಡಿಸಿತು. ಮಾಧ್ಯಮದೊಂದಿಗೆ ಮಾತನಾಡಿದ ತಂಡದ ಉಪನಾಯಕ ಜಿತೇಶ್ ಶರ್ಮ ನಾವು ಎಂದಿನಂತೆ ನಮ್ಮ ಸ್ವಾಭಾವಿಕ ಆಟ ಆಡಲು ಸಿದ್ಧ ಎಂದರು.

ಇಂದಿನ ಪಂದ್ಯ



ಶನಿವಾರದಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಆರ್‌ಸಿಬಿ ಬಂದಿಳಿಯಿತು. ಸಂಜೆ ಹೊತ್ತಿನಲ್ಲಿ ವಿರಾಟ್ ಕೊಹ್ಲಿ, ರಜತ್ ಪಾಟಿದಾರ್ ಸೇರಿದಂತೆ ವಿವಿಧ ಆಟಗಾರರು ನೆಟ್‌ನಲ್ಲಿ ಶ್ರಮಿಸಿದರು. ಕೋಚಿಂಗ್ ಸ್ಟಾಫ್ ಪಿಚ್ ಬಗ್ಗೆ ಲೆಕ್ಕಾಚಾರ ಹಾಕುತ್ತಿದ್ದರು. ರೋಚಕ ಹಣಾಹಣಿಗೆ ಪಿಚ್ ಕೂಡ ಸಜ್ಜಾಗಿ ನಿಂತಿತ್ತು. ಮೈದಾನದೆಲ್ಲೆಡೆ ಕ್ರಿಕೆಟ್ ಹಬ್ಬದ ವಾತಾವರಣ ಮತ್ತೊಮ್ಮೆ ಸೃಷ್ಟಿಯಾಗಿತ್ತು.

ಮೈದಾನದಲ್ಲಿ ಕಾಣಿಸಿಕೊಂಡ ಹ್ಯಾಜೆಲ್ವುಡ್: ಬೆಂಗಳೂರು ತಂಡದ ಪ್ರಮುಖ ಬೌಲರ್ ವೇಗಿ ಜೋಶ್ ಹ್ಯಾಜೆಲ್ವುಡ್ ಮೈದಾನದಲ್ಲಿ ಕಾಣಿಸಿಕೊಂಡರು. ಕಳೆದ ಪಂದ್ಯದಲ್ಲಿ ಜೋಶ್ ಇಲ್ಲದೆ ಆಡಿದ್ದರೂ ಭರ್ಜರಿ ಪ್ರದರ್ಶನ ನೀಡಿತ್ತು ಆರ್‌ಸಿಬಿ. ಶನಿವಾರದಂದು ಅವರು ಮೈದಾನಕ್ಕೆ ಬಂದರು. ಗಾಯದ ಕಾರಣದಿಂದಾಗಿ ಮೊದಲಿನ ಪಂದ್ಯಗಳಲ್ಲಿ ಅಲಭ್ಯರಾಗಿದ್ದಾರೆ ಎಂಬ ಸುದ್ದಿಯಿದ್ದರೂ, ಎಷ್ಟು ಪಂದ್ಯಕ್ಕೆ ಅಲಭ್ಯರಾಗಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಇರಲಿಲ್ಲ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವಾಗ ಜಿತೇಶ್ ಶರ್ಮ, ಈ ಬಗ್ಗೆ ಇನ್ನೂ ಸ್ಪಷ್ಟ ನಿರ್ಧಾರವಾಗಿಲ್ಲ. ಮ್ಯಾನೇಜ್‌ಮೆಂಟ್ ಏನು ಹೇಳುತ್ತೆ ನೋಡಬೇಕು ಎಂದರು.

ಅಭ್ಯಾಸಕ್ಕಿಳಿಯದ ಚೆನ್ನೈ: ಮೂರು ದಿನಗಳಲ್ಲಿ ಎರಡು ಪಂದ್ಯಗಳನ್ನಾಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ ಶನಿವಾರದಂದು ಅಭ್ಯಾಸ ಮಾಡಲಿಲ್ಲ. ಶುಕ್ರವಾರದಂದು ಪಂಜಾಬ್ ವಿರುದ್ಧ ಸೋತಿರುವ ಸಿಎಸ್‌ಕೆ ಪಂದ್ಯವನ್ನು ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಆಡಿತ್ತು. ಭಾನುವಾರದಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಶನಿವಾರದಂದು ಪ್ರಯಾಣದಲ್ಲಿದ್ದ ಚೆನ್ನೈ ಅಭ್ಯಾಸ ಮಾಡಲಿಲ್ಲ. ಸತತ ಎರಡು ಸೋಲುಗಳ ನಿರಾಶೆ ಹೊತ್ತಿಕೊಂಡು ಬರುತ್ತಿರುವ ತಂಡಕ್ಕೆ ಗೆಲುವೊಂದೇ ಹಾದಿಯಾಗಿದೆ.

ಎಂದಿನಂತೆ ನಾವು ಸಿದ್ಧ

ಚೆನ್ನೈನ ಚಾಲೆಂಜ್‌ಗಳ ಬಗ್ಗೆ ಮಾತನಾಡುತ್ತಾ, ಜಿತೇಶ್ ಶರ್ಮ ಅವರು ನಮ್ಮ ಆಟವಾಡುವುದಕ್ಕೆ ನಾವು ಸಿದ್ಧ. ಟಿ20 ಕ್ರಿಕೆಟ್‌ನಲ್ಲಿ ಏಳು ಮತ್ತು ಬೀಳು ಇದ್ದದ್ದೇ. ಹೀಗಿರುವಾಗ ಯಾವುದೇ ತಂಡವೂ ಸ್ವಂತ ಪ್ರದರ್ಶನ ಮೇಲೆ ಗಮನ ಹರಿಸುತ್ತದೆ. ನಾವು ಕೂಡ ಅಷ್ಟೇ. ತಂಡದ ಪ್ರದರ್ಶನ ಮತ್ತು ಸಾಮರ್ಥ್ಯ ತಕ್ಕಂತೆ ಕೆಲವು ಯೋಜನೆ ಹಾಕಿಕೊಳ್ಳುತ್ತೇವೆ. ಆಟಗಾರರು ಹೆಚ್ಚಿನ ಶ್ರಮಕ್ಕೆ ಯತ್ನಿಸುತ್ತಾರೆ ಎಂದು ಹೇಳಿದರು.

ನಮ್ಮಲ್ಲಿ ಹಾಲಿ ಚಾಂಪಿಯನ್ಸ್ ಎಂಬ ವಿಶ್ವಾಸವಿದ್ದರೂ, ಇದು ಹೊಸ ಆವೃತ್ತಿ ಗೆಲ್ಲಲೇಬೇಕು ಎಂಬ ಮನಸ್ಥಿತಿ ಇದೆ. ನಮ್ಮ ಮ್ಯಾನೇಜ್‌ಮೆಂಟ್ ಕೂಡ ಹಾಗೆ, ನಾವು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ. ಟ್ರೋಫಿಯನ್ನು ಚೇಸ್ ಮಾಡುತ್ತೇವೆ ಎಂದು ಹೇಳುತ್ತಾರೆ. ಅದರಂತೆ ನಾವು ಗೆಲುವಿನ ಹಂಬಲದೊಂದಿಗೆ ಮೈದಾನಕ್ಕಿಳಿಯುತ್ತೇವೆ.

■ ಜಿತೇಶ್ ಶರ್ಮ, ಆರ್‌ಸಿಬಿ ಉಪನಾಯಕ

ಪಿಚ್ ಹೇಗಿದೆ?

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.

ಪಂದ್ಯದ ಸಮಯ: ಸಂಜೆ 7:30



ಚೆಸ್: ಜಾವೊಖಿರ್ ಅಗ್ರಸ್ಥಾನ

ಹೊಸದಿಲ್ಲಿ: ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಜಾವೊಖಿರ್ ಸಿಂದಾರೊವ್ ತಮ್ಮ ಅದ್ಭುತ ಪ್ರದರ್ಶನ ಮುಂದುವರಿಸಿ ಐದನೇ ಸುತ್ತಿನ ಬಳಿಕ 4.5 ಅಂಕಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಅವರು ಬಲಿಷ್ಠ ವಿರುದ್ಧ ಜಯ ಸಾಧಿಸಿ ನಿರಂತರ ಮೂರನೇ ಗೆಲುವು ದಾಖಲಿಸಿದರು.

ಸಿಂದಾರೊವ್ ಮಧ್ಯಭಾಗದಲ್ಲಿ ಸೂಕ್ತ ಸಮಯದಲ್ಲಿ ತಮ್ಮ ಚಾಣಾಕ್ಷ್ಯತೆಯಿಂದ ಆಟದ ನಿಯಂತ್ರಣ ಪಡೆದರು. 14ನೇ ನಡೆಯಲ್ಲಿ ಎನ್‌ಎಕ್ಸ್‌ಬಿ4 ಮೂಲಕ ಎದುರಾಳಿಯ ರಾಣಿ ಮೇಲೆ ನಿಗಾ ಇಟ್ಟರು. ನಂತರ 16ನೇ ನಡೆಯಲ್ಲಿ ಸಿ–5 ಮೂಲಕ ಮಧ್ಯಭಾಗವನ್ನು ಮುಕ್ತಗೊಳಿಸಿದರು. ಮುಂದೆ ಎಫ್–6, ಎಚ್–6 ಮತ್ತು ಜಿ–5 ನಡೆಗಳ ಮೂಲಕ ಎದುರಾಳಿ ಮೇಲೆ ಒತ್ತಡ ಹೆಚ್ಚಿಸಿದರು. ಕೊನೆಗೆ 41ನೇ ನಡೆಯಲ್ಲಿ ಜಿಎಕ್ಸ್‌ಎಚ್–4 ಮೂಲಕ ನಿರ್ಣಾಯಕ ಮುನ್ನಡೆ ಪಡೆದು ಗೆಲುವು ಸಾಧಿಸಿದರು.



ಅತ್ತ ಭಾರತದ ಆರ್. ಪ್ರಜ್ಞಾನಂದ ಆಂಡ್ರೇ ಎಸಿಪೆಂಕೋ ವಿರುದ್ಧ ಸಮಬಲ ಸಾಧಿಸಿ ನಿರಂತರ ಎರಡನೇ ಡ್ರಾ ಮಾಡಿಕೊಂಡರು. ಇಬ್ಬರೂ ಆಟಗಾರರು ಸ್ಪಷ್ಟ ಮುನ್ನಡೆ ಪಡೆಯಲು ಸಾಧ್ಯವಾಗದೆ ಸಮಬಲದಲ್ಲಿ ಆಟ ಮುಗಿಸಿದರು. ಮಹಿಳಾ ವಿಭಾಗದಲ್ಲಿ ದಿವ್ಯಾ ದೇಶಮುಖ್ ನಾಲ್ಕನೇ ಸುತ್ತಿನ ಸೋಲಿನ ನಂತರ ಟಾನ್ ಝೋಂಗ್ ವಿರುದ್ಧ ಸಮಬಲ ಸಾಧಿಸಿ ಮರುಸ್ಥಿರತೆ ಕಂಡುಕೊಂಡರು. ಎದುರಾಳಿಯ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿ ಕೊನೆಯಲ್ಲಿ ಡ್ರಾ ಮಾಡಿಕೊಂಡರು.

ಬಾಕ್ಸಿಂಗ್: ವಿಶ್ವನಾಥ್‌ಗೆ ಅಚ್ಚರಿಯ ಗೆಲುವು


ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭರ್ಜರಿ ಪ್ರದರ್ಶನ ಮುಂದುವರಿದಿದ್ದು, ಹವಾಲ್ದಾರ್ ವಿಶ್ವನಾಥ್ ಸುರೇಶ್ ವಿಶ್ವ ಚಾಂಪಿಯನ್ ಹಾಗೂ ವಿಶ್ವ ನಂ.1 ಸಾಂಝುರ್ ತಶ್ಕೆನ್‌ಬಾಯ್ ವಿರುದ್ಧ 5–0 ಅಂತರದಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.



ಮಹಿಳೆಯರ 65 ಕೆಜಿ ವಿಭಾಗದಲ್ಲಿ ಅಂಕುಶಿತಾ ಬೊರೊ ಕಜಾಕಿಸ್ತಾನದ ಲೋರಾ ಯೆಸೆಂಕೆಲ್ಡಿ ವಿರುದ್ಧ 4–1 ಅಂತರದಲ್ಲಿ ಜಯ ಸಾಧಿಸಿ ಅಂತಿಮ ನಾಲ್ವರಿಗೆ ಪ್ರವೇಶಿಸಿದರು. ಮುಂದಿನ ಸೆಮಿಫೈನಲ್‌ನಲ್ಲಿ ಅವರು ಚೈನೀಸ್ ತೈಪೆಯ ನಿಯೆನ್–ಚಿನ್ ಚೆನ್ ವಿರುದ್ಧ ಸೆಣಸಲಿದ್ದಾರೆ. ಪುರುಷರ ವಿಭಾಗದಲ್ಲಿ ನರೇಂದರ್ ಕೂಡ ಉತ್ತಮ ಆಟ ಮುಂದುವರಿಸಿ ಯುಎಇಯ ಒರ್ಖಾನ್ ಅಗಾಯೇವ್ ವಿರುದ್ಧ 5–0 ಅಂತರದಲ್ಲಿ ಗೆದ್ದು ಸೆಮಿಫೈನಲ್‌ಗೆ ಅರ್ಹತೆ ಪಡೆದರು. ಮುಂದಿನ ಪಂದ್ಯದಲ್ಲಿ ಅವರು ಚೀನಾದ ಬಾಯಿಕೆವುಜಿ ದನಾಬಿಯೆಕೆ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಪ ದ ಬಂ ಧ

ರಾಜಾ ಸಂಗಮೇಶ ಹಿರೇಮಠ



5944

ಎಡದಿಂದ ಬಲಕ್ಕೆ
1.ಮರದ ನಡುವೆ ಹೂವಿನ ಶರವಿದೆ (4)
3.ಸಿಟ್ಟಿನಿಂದ ಕೂಡಿದ ವದನ (4)
5.ಪಾರದರ್ಶಕ ಖನಿಜ ಶಿಲೆಯಿದು (3)
6.ಮಂದವಾಗಿ ಪ್ರಕಾಶಿಸು (3)
8.ಕಳಾಹೀನವಾಗುವುದು–ಬಣ್ಣಗೆಡು (3)
10.ಆಶ್ರಯ ಕೋರು (3)
11.ಕಲ ಕಡೆಯಲ್ಲಿರುವ ತುಂಡು ತಿರುಗಿದೆ (3)
15.ಲಕ್ಷ್ಮಿಯ ಒಡೆಯ ಈ ವಿಷ್ಣು (3)
16.ಒಂಬತ್ತು ಬಗೆಯ ಕಾಳುಕಡ್ಡಿಗಳು (4)
17.ಈತ ಸುಖವನ್ನು ಬಯಸುವವನು (4)

ಮೇಲಿನಿಂದ ಕೆಳಕ್ಕೆ
1.ಮುಂದೆ ಚಲಿಸುವವನು–ನಾಯಕ (4)
2.ರಣದ ನಡುವೆ ಅಡಗಿದ ಆಸ್ತಿ (3)
3.ಕರಿ ಕಡೆಯಲ್ಲಿಟ್ಟುಕೊಂಡು ಮಾರುವುದು (3)
4.ಆನೆ–ಕಿವಿ ಸೇರಿ ಚರ್ಮರೋಗವಾಯ್ತು (4)
7.ಆಶ್ರಯ ಕೋರು (3)
9.ಕಣಿ ಕಡೆಯಲ್ಲಿ ತಿರುಗಿ ವ್ಯಾಪಾರಿಯಾದ (3)
10.ಇದು ಜೀವಿತ ಕಾಲಾವಧಿ (4)
12.ಆಯುಧಗಳನ್ನಿಡುವಂಥಹ ಕಟ್ಟಡ (4)
13.ಸಾಧಾರಣ–ವಿಶೇಷವಲ್ಲದ್ದು (3)
14.ಕುಚೋದ್ಯವಿಲ್ಲಿ ತಲೆಕೆಳಗಾಗಿದೆ (3)

5943 ಉತ್ತರ

ಎಡದಿಂದ ಬಲಕ್ಕೆ:
2.ಮೋಹನಮಾಲೆ 5.ವಿರಹ
6.ಬಾಡಿಗೆ 7.ಮನೋಗತ
8.ರಾಗಿಬೀಸು 10.ಆವೇದನೆ
12.ಜಮಖಾನೆ 14.ಜಾಳಿಗೆ
15.ತಟಾಕ 17.ರಿಮಕದನ

ಮೇಲಿನಿಂದ ಕೆಳಕ್ಕೆ :
1.ಬಾವಿ 2.ಮೋಹನಾಂಗ
3.ಗಿರಿಬಾಲೆ 4.ಬೇಗೆ
7.ಆರಾಮ 9.ಸುಮ್ಮನೆ
11.ದನುಜಾರಿ 13.ಮನೆತನ
14.ಗೆಜ್ಜೆ 16.ಕತ್ತೆ

ಸುದ್ದಿಗೋಷ್ಠಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್.ರಾಜೇಂದ್ರಕುಮಾರ್‌ರಿಂದ ಮಾಹಿತಿ

ದಾಖಲೆಯ ₹131.14 ಕೋಟಿ ಲಾಭ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ 2025-26ನೇ ಆರ್ಥಿಕ ವರ್ಷದಲ್ಲಿ ದಾಖಲೆಯ 20226.19 ಕೋಟಿ ರೂ. ವ್ಯವಹಾರ ನಡೆಸಿ, ದಾಖಲೆಯ 131.14 ಕೋಟಿ ರೂ. ಲಾಭ ಗಳಿಸಿದೆ. ಆ ಮೂಲಕ ಬ್ಯಾಂಕ್ ಹೊಸ ಇತಿಹಾಸ ನಿರ್ಮಾಣ ಮಾಡಿದೆ ಎಂದು ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್.ರಾಜೇಂದ್ರಕುಮಾರ್ ತಿಳಿಸಿದರು.

ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಗ್ರಾಹಕರನ್ನು ಹೆಚ್ಚು ಆಕರ್ಷಿಸುತ್ತಿದ್ದು, 2025-26ನೇ ವರದಿ ವರ್ಷದಲ್ಲಿ 20226.19 ಕೋಟಿ ರೂ. ಒಟ್ಟು ವ್ಯವಹಾರ ದಾಖಲಿಸಿ ಹೊಸ ಇತಿಹಾಸ ನಿರ್ಮಿಸಿದೆ. ಕಳೆದ ಸಾಲಿನ ಒಟ್ಟು ವ್ಯವಹಾರಕ್ಕೆ (17366.68 ಕೋಟಿ ರೂ.) ಹೋಲಿಸಿದರೆ ಈ ಬಾರಿ ಶೇ.16.47 ಏರಿಕೆಯನು ಕಂಡು ರಾಜ್ಯದಲ್ಲೇ ಹೊಸ ದಾಖಲೆಯನ್ನು ನಿರ್ಮಿಸಿದೆ. 2026-27ನೇ ಸಾಲಿಗೆ 22500.00 ಕೋಟಿ ರೂ. ವ್ಯವಹಾರದ ಗುರಿಯನ್ನು ಬ್ಯಾಂಕ್ ಹೊಂದಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಬ್ಯಾಂಕು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತನ್ನ 113 ಶಾಖೆಗಳ ಮೂಲಕ ವರದಿ ವರ್ಷದಲ್ಲಿ ಅಮೋಘ ಸಾಧನೆಗೈದು, 2026ರ ಮಾರ್ಚ್ 31ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ 131.14 ಕೋಟಿ ಲಾಭ ರೂ. ಗಳಿಸಿದೆ. ಇದು ಕಳೆದ ವರ್ಷದ ಲಾಭ (110.41ಕೋಟಿ ರೂ.)ಕ್ಕಿಂತ ಶೇ. 18.78ರಷ್ಟು ಏರಿಕೆಯಾಗಿದೆ. ಇದು ರಾಜ್ಯದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪೈಕಿ ಸಾರ್ವಕಾಲಿಕ ದಾಖಲೆ ಲಾಭ. ಬ್ಯಾಂಕಿನ ಅನುತ್ಪಾದಕ ಆಸ್ತಿಯ ಪ್ರಮಾಣವು ಶೇ.2.42ನಿಂದ ಶೇ.2.21ರಷ್ಟು ಪ್ರಮಾಣಕ್ಕೆ ಇಳಿಕೆಯಾಗಿದೆ. ಇದು ಬ್ಯಾಂಕಿನ ಪ್ರಗತಿಯನ್ನು ಸೂಚಿಸುತ್ತದೆ ಎಂದರು.

9264.64 ಕೋಟಿ ರೂ. ಠೇವಣಿ

ಕೇಂದ್ರ ಹಾಗೂ ರಾಜ್ಯ ಸರಕಾರದ ಯಾವುದೇ ಠೇವಣಾತಿ ಇಲ್ಲದೆಯೂ ತನ್ನ 113 ಶಾಖೆಗಳ ಮುಖಾಂತರ ಒಟ್ಟು 9264.64 ಕೋಟಿ ರೂ. ಠೇವಣಿ ಸಂಗ್ರಹಿಸಿ ಬ್ಯಾಂಕ್ ಸಾಧನೆಗೈದಿದೆ. ಈ ಮೂಲಕ ಠೇವಣಿ ಸಂಗ್ರಹಣೆಯಲ್ಲಿ ರಾಜ್ಯದ ಇತರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಲ್ಲಿ ಮುಂಚೂಣಿಯಲ್ಲಿದೆ. ಕಳೆದ ಸಾಲಿನ ಠೇವಣಿ ಸಂಗ್ರಹಣೆಗಿಂತ ಈ ಬಾರಿ ಶೇ.17.53ರಷ್ಟು ಹೆಚ್ಚಾಗಿದೆ.

9766.75 ಕೋಟಿ ರೂ. ಮುಂಗಡ

ಸ್ಪರ್ಧಾತ್ಮಕ ವ್ಯವಹಾರದಲ್ಲಿ ಬ್ಯಾಂಕ್ 9766.75 ಕೋಟಿ ರೂ. ಮುಂಗಡ ನೀಡಿದೆ. ಕೃಷಿ ಹಾಗೂ ಕೃಷಿ ಅಭಿವೃದ್ಧಿಗೆ ಅಲ್ಪಾವಧಿ ಸಾಲವಾಗಿ 2156.59 ಕೋಟಿ ರೂ., ಮಧ್ಯಮಾವಧಿ ಸಾಲ 183.46 ಕೋಟಿ ರೂ. ಹೀಗೆ ಕೃಷಿ ಕ್ಷೇತ್ರಕ್ಕೆ ಒಟ್ಟು 2340.05 ಕೋಟಿ ರೂ. ಸಾಲ ನೀಡಲಾಗಿದ್ದು, ಕೃಷಿಯೇತರ ಕ್ಷೇತ್ರಕ್ಕೆ 7426.70 ಕೋಟಿ ರೂ. ಸಾಲ ನೀಡಲಾಗಿದೆ. ಕೃಷಿ ಹಾಗೂ ಕೃಷಿಯೇತರ ಸಾಲಗಳ ಹೊರಬಾಕಿ 10961.55 ಕೋಟಿ ರೂ. ಆಗಿದೆ.

ಬ್ಯಾಂಕಿನ ಆರ್ಥಿಕ ತಖ್ತೆ

ಬ್ಯಾಂಕ್‌ಗೆ ಒಟ್ಟು 1104 ಸಂಘಗಳು ಸದಸ್ಯರಾಗಿವೆ. ಬ್ಯಾಂಕಿನ ಒಟ್ಟು ಪಾಲು ಬಂಡವಾಳ 554.08 ಕೋಟಿ ರೂ. ಆಗಿರುತ್ತದೆ. ದುಡಿಯುವ ಬಂಡವಾಳ 15027.66 ಕೋಟಿ ರೂ. ಆಗಿದ್ದು, ಇದು ಕಳೆದ ವರ್ಷಕ್ಕಿಂತ (12764.99 ಕೋಟಿ ರೂ.) ಶೇ.17.73 ರಷ್ಟು ಏರಿಕೆ ಕಂಡಿದೆ. ಬ್ಯಾಂಕ್ 312.84 ಕೋಟಿ ರೂ. ವಿವಿಧ ನಿಧಿಗಳನ್ನು ಹೊಂದಿರುತ್ತದೆ. ಶೇ. 16.10ರಷ್ಟು ಏರಿಕೆ ಕಂಡಿದೆ.

ಟ್ಯಾಬ್ ಬ್ಯಾಂಕಿಂಗ್

ಬ್ಯಾಂಕ್ ವ್ಯವಹಾರವನ್ನು ಸರಳೀಕರಿಸುವ ನಿಟ್ಟಿನಲ್ಲಿ ಟ್ಯಾಬ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಗ್ರಾಹಕರಿಗೆ ಬ್ಯಾಂಕ್ ಪರಿಚಯಿಸಿದೆ.



ರೈತರಿಗೆ ಅನ್ಯಾಯ ಆಗದಂತೆ ಕ್ರಮ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮಾಪನ ಸಮರ್ಪಕವಾಗಿ ನಡೆಯದ ಕಾರಣ ಪುತ್ತೂರು, ಸುಳ್ಯ ಭಾಗದ ರೈತರಿಗೆ ಬೆಳೆವಿಮೆ ಪಾವತಿಯಲ್ಲಿ ವ್ಯತ್ಯಾಸ ಆಗಿದೆ. ಪ್ರತಿ ಗ್ರಾಮದಲ್ಲಿ ಮಳೆ ಮಾಪಕ ಹೊಸದಾಗಿ ಅಳವಡಿಸಲಾಗುವುದು ಎಂದು ಸಂಬಂಧಪಟ್ಟವರು ತಿಳಿಸಿದ್ದಾರೆ. ಇನ್ನು ಮುಂದೆ ರೈತರಿಗೆ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಲಾಗುವುದು. ತಿಳಿಸಿದ್ದಾರೆ ಎಂದು ಡಾ.ಎಂಎನ್. ರಾಜೇಂದ್ರಕುಮಾರ್ ಪ್ರತಿಕ್ರಿಯಿಸಿದರು.

'ರುಪೇ' ಕಿಸಾನ್ ಕ್ರೆಡಿಟ್ ಕಾರ್ಡ್

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮಂಗಳ ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಯನ್ನು ಹೊಂದಿರುವ ರೈತರಿಗೆ ಬ್ಯಾಂಕ್ ರುಪೇ ಕಿಸಾನ್ ಕಾರ್ಡ್‌ನ್ನು ನೀಡಿದೆ. ಈಗಾಗಲೇ 1,44,701 ರುಪೇ ಕಿಸಾನ್ ಕಾಡ್‌ಗಳನ್ನು ರೈತರಿಗೆ ವಿತರಿಸಲಾಗಿದೆ. 92,531 ರುಪೇ ಡೆಬಿಟ್ ಕಾರ್ಡ್‌ಗಳನ್ನು ಬ್ಯಾಂಕ್‌ನ ಇತರ ಗ್ರಾಹಕರಿಗೆ ನೀಡಲಾಗಿದೆ



ಎಂದು ಡಾ.ಎಂ.ಎನ್.ಆರ್ ವಿವರಿಸಿದರು. ಬ್ಯಾಂಕಿಗೆ 23 ಬಾರಿ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ, 19 ಬಾರಿ ನಬಾರ್ಡ್ ಪ್ರಶಸ್ತಿ ದೊರೆತಿದೆ. ಎರಡು ಬಾರಿ 'ಎಫ್‌ಸಿಬಿಎ' ರಾಷ್ಟ್ರೀಯ ಪ್ರಶಸ್ತಿಯಿಂದ ಬ್ಯಾಂಕ್ ಪುರಸ್ಕೃತಗೊಂಡಿದೆ. ಬ್ಯಾಂಕಿನ ಸರ್ವಾಂಗೀಣ ಸಾಧನೆಗಾಗಿ ಎರಡು ಬಾರಿ ಪ್ರತಿಷ್ಠಿತ 'ಬ್ಯಾಂಕೊ ಬ್ಲೂ ರಿಬ್ಬನ್ ಪ್ರಶಸ್ತಿ' ಲಭಿಸಿದೆ. ಕೇಂದ್ರ ಸರಕಾರದ ಮಹತ್ತರ ಯೋಜನೆಯಾದ 'ಅಟಲ್ ಪಿಂಚಣಿ ಯೋಜನೆ'ಯನ್ನು ಬ್ಯಾಂಕ್ ಸಮರ್ಪಕವಾಗಿ ಜಾರಿಗೆ ತಂದಿದ್ದು, ಈ ಯೋಜನೆಯಲ್ಲಿ ದಾಖಲೆಯ ಪ್ರಮಾಣದಲ್ಲಿ ಚಂದಾದಾರರನ್ನು ನೋಂದಾಯಿಸಿ, ಭಾರತ ಸರ್ಕಾರದ ಹಣಕಾಸು ಸಚಿವಾಲಯದಿಂದ 4 ಬಾರಿ ಪ್ರಶಸ್ತಿಗೆ ಪಾತ್ರವಾಗಿದೆ.

ಮುಂದಿನ ಯೋಜನೆ: 10 ಹೊಸ ಶಾಖೆಗಳು

ಬ್ಯಾಂಕ್ ಮುಂದಿನ ಅವಧಿಯಲ್ಲಿ 10 ಹೊಸ ಶಾಖೆಗಳನ್ನು ತೆರೆಯುವ ಯೋಜನೆಯನ್ನು ಹಮ್ಮಿಕೊಂಡಿದೆ.



ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ 112 ವರ್ಷಗಳ ಸಮೃದ್ಧ ಪರಂಪರೆಯನ್ನು ಹೊಂದಿರುವ ಎಸ್‌ಸಿಡಿಸಿಸಿ ಬ್ಯಾಂಕ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಿಶಿಷ್ಟ ಹಾಗೂ ವಿನೂತನ ಸೇವೆಗಳನ್ನು ಅಳವಡಿಸಿಕೊಂಡು ದೇಶಕ್ಕೆ ಮಾದರಿಯಾಗಿದೆ. ಅಭಿವೃದ್ಧಿಯ ಮುಂಚೂಣಿಯಲ್ಲಿರುವ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಂತಹ ಉತ್ಕೃಷ್ಠ ಬ್ಯಾಂಕಿಂಗ್ ವ್ಯವಸ್ಥೆಯ ಜತೆಗೆ ಗ್ರಾಹಕರಿಗೆ ಡಿಜಿಟಲ್ ಬ್ಯಾಂಕಿಂಗ್ ಮೂಲಕ ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ ಅಳವಡಿಸಿಕೊಂಡು ಗಣನೀಯ ಪ್ರಗತಿ ಸಾಧಿಸಿದೆ.

■ ಡಾ.ಎಂ.ಎನ್. ರಾಜೇಂದ್ರಕುಮಾರ್
ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರು

ಸತತ 31 ವರ್ಷಗಳಿಂದ ಕೃಷಿ ಸಾಲ ಮರುಪಾವತಿಯಲ್ಲಿ ಶೇ.100ರ ಸಾಧನೆ

ಬ್ಯಾಂಕ್ ವರದಿ ವರ್ಷದಲ್ಲಿ ನೀಡಿದ ಎಲ್ಲಾ ಕೃಷಿ ಸಾಲಗಳು ಶೇ. 100ರ ಮರುಪಾವತಿಯನ್ನು ಕಂಡು ದಾಖಲೆ ನಿರ್ಮಿಸಿ ಸಾಧನೆಗೈದಿದೆ. ಇಂತಹ ಸಾಧನೆಯನ್ನು ಕಳೆದ 31 ವರ್ಷಗಳಿಂದ ಬ್ಯಾಂಕ್ ಸತತವಾಗಿ ಮಾಡಿರುವುದು ರಾಷ್ಟ್ರೀಯ ದಾಖಲೆಯಾಗಿದೆ ಎಂದು ಡಾ. ಎಂಎನ್‌ಆರ್ ತಿಳಿಸಿದರು.

ಮೊಬೈಲ್ ಆ್ಯಪ್

ಈ ಯೋಜನೆಯ ಮುಖಾಂತರ ಗ್ರಾಹಕರ ಮೊಬೈಲ್ ಮೂಲಕ ಬ್ಯಾಂಕಿನ ಶಾಖೆಗಳ ನಡುವೆ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ವರ್ಗಾಯಿಸಬಹುದು. ಮೊಬೈಲ್ ಮುಖಾಂತರವೇ ಗ್ರಾಹಕರ ಖಾತೆಯ ವ್ಯವಹಾರದ ವಿಚಾರಣೆ, ಮಿನಿಸ್ಟೇಟ್‌ಮೆಂಟ್ ಹಾಗೂ ಪಾಸ್ ಬುಕ್ ನಿರ್ವಹಣೆಯ ಸೌಲಭ್ಯ ಪಡೆಯಬಹುದಾಗಿದೆ.

SCDCC BANK

ಗ್ರಾಹಕರ ಮನೆ ಬಾಗಿಲಿಗೆ ಬ್ಯಾಂಕ್ ಎನ್ನುವ ಆಶಯದೊಂದಿಗೆ ಸುಸಜ್ಜಿತ ವಾಹನದಲ್ಲಿ ಎಲ್ಲಾ ರೀತಿಯ ಬ್ಯಾಂಕಿಂಗ್ ಸೇವೆಯನ್ನು ಹಾಗೂ ಎ.ಟಿ.ಎಂ. ಸೌಲಭ್ಯವನ್ನು ಕಾರ್ಯರೂಪಕ್ಕೆ ತಂದ ದೇಶದ ಮೊದಲ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಎನ್ನುವ ಹೆಗ್ಗಳಿಕೆ. ಈಗಾಗಲೇ ಮಂಗಳೂರು ಹಾಗೂ ಉಡುಪಿಯಲ್ಲಿ 'ಮೊಬೈಲ್ ಬ್ಯಾಂಕಿಂಗ್' ವ್ಯವಸ್ಥೆ ಕಾರ್ಯರೂಪದಲ್ಲಿದೆ.

- ಕೇಂದ್ರ ಹಾಗೂ ರಾಜ್ಯ ಸರಕಾರದ ಯಾವುದೇ ಠೇವಣಾತಿ ಇಲ್ಲದೆಯೂ ತನ್ನ 113 ಶಾಖೆಗಳ ಮುಖಾಂತರ ಒಟ್ಟು 9264.64 ಕೋಟಿ ರೂ. ಠೇವಣಿ ಸಂಗ್ರಹಿಸಿ ಬ್ಯಾಂಕ್ ಸಾಧನೆಗೈದಿದೆ.
- ಸ್ಪರ್ಧಾತ್ಮಕ ವ್ಯವಹಾರದಲ್ಲಿ ಬ್ಯಾಂಕ್ 9766.75 ಕೋಟಿ ರೂ. ಮುಂಗಡ ನೀಡಿದೆ.
- ಬ್ಯಾಂಕ್‌ಗೆ ಒಟ್ಟು 1104 ಸಂಘಗಳು ಸದಸ್ಯರಾಗಿವೆ. ಬ್ಯಾಂಕಿನ ಒಟ್ಟು ಪಾಲು ಬಂಡವಾಳ 554.08 ಕೋಟಿ ರೂ. ಆಗಿರುತ್ತದೆ.

ಬ್ಯಾಂಕಿನ ಸಾಧನೆ

ಇಂಟರ್ ಬ್ಯಾಂಕ್ ಮೊಬೈಲ್ ಪೇಮೆಂಟ್ ಸಿಸ್ಟಮ್ (ಐಎಂಪಿಎಸ್) ಯೋಜನೆಯನ್ನು ಬ್ಯಾಂಕ್ ವರದಿ ವರ್ಷದಲ್ಲಿ ಕಾರ್ಯಗತಗೊಳಿಸಿದೆ. ಈ ಯೋಜನೆಯಿಂದ ಗ್ರಾಹಕರು ಹೆಚ್ಚು ಆಕರ್ಷಿತರಾಗಿರುವುದು ಕಂಡುಬಂದಿದೆ. ಮೊಬೈಲ್ ಮುಖಾಂತರ ತಮ್ಮ ಖಾತೆಯಿಂದ ಇತರ ಬ್ಯಾಂಕಿನ ಖಾತೆಗೆ ಹಣವನ್ನು ಸುಲಭವಾಗಿ ವರ್ಗಾಯಿಸುತ್ತಿದ್ದಾರೆ.

ಬ್ಯಾಂಕಿನ ಮತ್ತೊಂದು ಮಹಾತ್ವಾಕಾಂಕ್ಷೆಯ ಯುನಿಫೈಡ್ ಪೇಮೆಂಟ್ಸ್‌ಇಂಟರ್‌ಫೇಸ್ (ಯುಪಿಐ) ಯೋಜನೆ ಜನಸಾಮಾನ್ಯರು ಉಪಯೋಗಿಸುವ ಯುಪಿಐ ಪಾವತಿ ವಿಧಾನವಾಗಿದ್ದು, ಈ ವಿಧಾನದಲ್ಲೂ ಗ್ರಾಹಕರು ತಮ್ಮ ಸ್ಮಾರ್ಟ್‌ಫೋನ್‌ನ್ನು ವರ್ಚುವಲ್ ಡೆಬಿಟ್ ಕಾರ್ಡ್‌ನಂತೆ ಬಳಸಿ, ತ್ವರಿತವಾಗಿ ಪಾವತಿ ಮತ್ತು ಸ್ವೀಕೃತಿ ಸಾಧ್ಯವಾಗಿರುತ್ತದೆ. ಮಾತ್ರವಲ್ಲ ಯುಪಿಐ ಸೇವೆಗಳಾದ ಗೂಗಲ್ ಪೇ, ಫೋನ್ ಪೇ ಹಾಗೂ ಇತರ ಪಾವತಿ ವಿಧಾನವನ್ನು ಸುಲಭವಾಗಿ ಬಳಸುತ್ತಿದ್ದಾರೆ. ಇದರಿಂದ ವಿದ್ಯುತ್ ಬಿಲ್, ನೀರಿನ ಬಿಲ್ ಹಾಗೂ ಟೆಲಿಫೋನ್ ಬಿಲ್‌ಗಳನ್ನು ಗ್ರಾಹಕರು ಸುಲಭವಾಗಿ ಪಾವತಿಸುತ್ತಿದ್ದಾರೆ. ಯುಪಿಐ ಚಾಲಿತ ಆ್ಯಪ್‌ಗಳೊಂದಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ವ್ಯಾಪಾರ ಕೇಂದ್ರಗಳಲ್ಲೂ ಈ ಮಾದರಿಯನ್ನು ಉಪಯೋಗಿಸುತ್ತಿದ್ದಾರೆ. ಸ್ವ ಸಹಾಯ ಗುಂಪುಗಳ ಸಮರ್ಪಕ ಅನುಷ್ಠಾನದಲ್ಲಿ ಬ್ಯಾಂಕ್‌ಗೆ ರಾಜ್ಯದಲ್ಲೇ ಪ್ರಥಮ ಸ್ಥಾನ. ಬ್ಯಾಂಕ್ ಒಟ್ಟು 34765 ಗುಂಪುಗಳನ್ನು ಹೊಂದಿದೆ. ಉಭಯ ಜಿಲ್ಲೆಗಳ ಎಲ್ಲಾ ನವೋದಯ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯೆಯರಿಗೆ ಸಮವಸ್ತ್ರ ವಿತರಣೆಯನ್ನು ಮಾಡಲಾಗಿದೆ.

ಜಿಲ್ಲೆಯಲ್ಲಿ ಒಟ್ಟು 1,68,583 ರೈತರಿಗೆ ಮಂಗಳಾ ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ ವಿತರಿಸಲಾಗಿದೆ. 84,797 ಕಿಸಾನ್ ಕ್ರೆಡಿಟ್ ಕಾರ್ಡುದಾರರಿಗೆ ವೈಯುಕ್ತಿಕ ಅಪಘಾತ ವಿಮಾ ಸೌಲಭ್ಯವನ್ನು ಒದಗಿಸಲಾಗಿದೆ.

ಎ.ಟಿ.ಎಂ. ಅಳವಡಿಕೆ

ಬ್ಯಾಂಕಿನ ಮುಖ್ಯ ಶಾಖೆಗಳಲ್ಲಿ ಎಟಿಎಂ ಅಳವಡಿಸಲಾಗಿದ್ದು, ಈಗಾಗಲೇ ಉಭಯ ಜಿಲ್ಲೆಗಳ 16 ಶಾಖೆಗಳಲ್ಲಿ ಎ.ಟಿ.ಎಂ. ಅಳವಡಿಸಲಾಗಿದೆ ಎಂದು ಡಾ. ಎಂ.ಎನ್. ರಾಜೇಂದ್ರಕುಮಾರ್ ತಿಳಿಸಿದರು.

ಎಸ್‌ಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರಾದ ಎಂ. ವಾದಿರಾಜ ಶೆಟ್ಟಿ, ಭಾಸ್ಕರ್ ಎಸ್. ಕೋಟ್ಯಾನ್, ಶಶಿಕುಮಾರ್ ರೈ ಬಾಲ್ಯೊಟ್ಟು, ದೇವಿಪ್ರಸಾದ್ ಶೆಟ್ಟಿ ಬೆಳಪು, ಅಶೋಕ್ ಕುಮಾರ್ ಶೆಟ್ಟಿ, ಎಂ.ಮಹೇಶ್ ಹೆಗ್ಡೆ, ಮೋನಪ್ಪ ಶೆಟ್ಟಿ ಎಕ್ಕಾರು, ಜೈರಾಜ್ ಬಿ.ರೈ, ಸದಾಶಿವ ಉಳ್ಳಾಲ್, ರಾಜೇಶ್ ರಾವ್, ಎಸ್.ಎನ್. ಮನ್ಮಥ, ಕುಶಾಲಪ್ಪ ಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ. ಉಪಸ್ಥಿತರಿದ್ದರು.

ಕಾರು ಅಪಘಾತ : ವ್ಯಕ್ತಿ ಬಲಿ

ಮಡಿಕೇರಿ: ಶುಕ್ರವಾರ ತಡರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ. ಮರಗೋ ಡು ನಿವಾಸಿ ಬಿದ್ರುಪಣೆ ಸೋಮಣ್ಣ ಅವರ ಪುತ್ರ ಪ್ರವೀಣ್ (35) ಮೃತ ದುರ್ದೈವಿ.

ಹಾಕತ್ತೂರು - ಮರಗೋಡು ರಸ್ತೆಯ ಬಕ್ಕ ಬಳಿ ಶುಕ್ರವಾರ ರಾತ್ರಿ 9 ಗಂಟೆಗೆ ಪ್ರವೀಣ್ ಅವರ ಕಾರು ಅಪಘಾತಕ್ಕೊಳಗಾಗಿದೆ. ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಗಾಂಜಾ ಸೇವನೆ: ಆರೋಪಿಗಳ ಬಂಧನ

ಮಂಗಳೂರು: ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಸೇವನೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಕುಲಶೇಖರ ನಿವಾಸಿ ನೆಲ್ಸನ್ ಜಾನ್ ಅರೋಜಾ (24) ಮತ್ತು ಜಪ್ಪು ಕುಡುಪಾಡಿಯ ಅನ್ವಿತ್ (19) ಬಂಧಿತರು. ಇವರು ನಗರದ ಕೂಳೂರು ಹೆದ್ದಾರಿ ಬದಿಯಲ್ಲಿ ಮಾದಕ ವಸ್ತು ಸೇವನೆ ಮಾಡುತ್ತಿದ್ದು, ಅನುಮಾನಾಸ್ಪದವಾಗಿ ಇದ್ದ ಕಾರಣ ಗಸ್ತಿನಲ್ಲಿದ್ದ ಕಾವೂರು ಠಾಣಾ ಪೊಲೀಸರು ವಿಚಾರಣೆಗೊಳಪಡಿಸಿದ್ದರು. ಈ ವೇಳೆ ಗಾಂಜಾ ಸೇವನೆಯ ಬಗ್ಗೆ ಆರೋಪಿಗಳು ಬಾಯ್ಬಿಟ್ಟಿದ್ದಾರೆ. ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳ ಪಡಿಸಿದಾಗ ಮಾದಕ ವಸ್ತು ಸೇವನೆ ಮಾಡಿರುವುದು ದೃಢ ಪಟ್ಟಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಟೇನರ್‌ನಲ್ಲಿ ಕೇರಳಕ್ಕೆ ಅಕ್ರಮ ಗೋಸಾಗಾಟ ಪತ್ತೆ; ಓರ್ವನ ಸೆರೆ

ಕಡಬ: ಹಾಸನದಿಂದ ಕೇರಳಕ್ಕೆ ಅತ್ಯಂತ ಅಮಾನವೀಯವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಕಂಟೇನರ್ ವಾಹನವನ್ನು ಕಡಬ ಪೊಲೀಸರು ತಡೆದು ಸುಮಾರು 20 ಜಾನುವಾರುಗಳನ್ನು ರಕ್ಷಿಸಲಾಗಿದ್ದು, ಓರ್ವ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ಜಾನುವಾರು ಸಾಗಾಟ ಮಾಡುತ್ತಿದ್ದ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹೊಸೂರು ಗ್ರಾಮದ ಇರ್ಫಾನ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದ್ದು, ವಾಹನ ಚಾಲಕ ನಯಾರುಘ್ ಎಂಬಾತನು ಪರಾರಿಯಾಗಿದ್ದಾನೆ. ಲಾರಿ ಮಾಲಿಕ ಅಬ್ದುಲ್ ರಹಿಮಾನ್ ವಿರುದ್ಧ ಪ್ರಕರಣ ದಾಖಲಾಗಿದೆ.

ಶುಕ್ರವಾರ ಬೆಳಗಿನ ಜಾವ ಹಾಸನದಿಂದ ಕೇರಳದ ಕಡೆಗೆ ಕಂಟೈನರ್ ವಾಹನದಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಕಡಬ ಪೊಲೀಸ್ ಉಪನಿರೀಕ್ಷಕ ಜಂಬೂರಾಜ್ ಮಹಾಜನ್ ಅವರ ನೇತೃತ್ವದ ತಂಡವು ಕಡಬ ತಾಲೂಕಿನ ನೂಜಿಬಾಳ್ತಿಲ ಗ್ರಾಮದ ಕನ್ವಾರೆ ಎಂಬಲ್ಲಿ ವಾಹನವನ್ನು ತಡೆದು ತಪಾಸಣೆ ನಡೆಸಿದಾಗ ಕಂಟೈನರ್ ಒಳಗಡೆ, ಅಮಾನವೀಯ ರೀತಿಯಲ್ಲಿ ತುಂಬಿಸಲಾಗಿದ್ದ 20 ಜಾನುವಾರುಗಳು ಪತ್ತೆಯಾಗಿವೆ. ಪೊಲೀಸರು ಜಾನುವಾರುಗಳನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ರವಾನಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಕಾರ್ಯಾಚರಣೆ ವೇಳೆ ಚಾಲಕ ನಯಾರುಘ್ ಪರಾರಿಯಾಗಿದ್ದಾನೆ. ಜಾನುವಾರುಗಳನ್ನು ವಾಹನಕ್ಕೆ ತುಂಬಿಸಿಕೊಟ್ಟಿರುವ ಬಗ್ಗೆ ವಶಕ್ಕೆ ಪಡೆದ ಆರೋಪಿ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಕಂಟೈನರ್ ಮಾಲಿಕ ಅಬ್ದುಲ್ ರಹಿಮಾನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಡಬ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.



ಸುಮಾರು 20 ಜಾನುವಾರುಗಳ ರಕ್ಷಿಸಿ, ಓರ್ವ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ಚುನಾವಣೆ: ಬೇಡಗಂನಲ್ಲಿ ನಡೆದ ಮಿನಿ ಮ್ಯಾರಥಾನ್

ಕಾಸರಗೋಡು: ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯನ್ನು ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಇದರ ಭಾಗವಾಗಿ ಮತದಾನವನ್ನು ಬೆಂಬಲಿಸಲು ಮತ್ತು ಎಲ್ಲರೂ ಮತದಾನದಲ್ಲಿ ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಸ್ವೀಪ್ ಆಯೋಜಿಸಿರುವ ವೋಟಾಯಾನಂ - 2026 ಜಿಲ್ಲಾ ಮಟ್ಟದ ಅಭಿಯಾನದ ಪ್ರಯುಕ್ತ ಬೇಡಗಂನಲ್ಲಿ ಮಿನಿ ಮ್ಯಾರಥಾನ್ ಓಟ ಆಯೋಜಿಸಲಾಯಿತು.

ಬೇಡಗಂನಲ್ಲಿ ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್ (ಎಡಿಎಂ) ಕೆ.ವಿ.ಶ್ರುತಿ ಚಾಲನೆ ನೀಡಿದರು. ಬೇಡಗಂನಿಂದ ಕುಂಡಂಗುಳಿ ವರೆಗೆ ನಡೆದ ಮಿನಿ ಮ್ಯಾರಥಾನ್‌ನಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಕೇವಲ ಅರ್ಧ ಗಂಟೆಯಲ್ಲಿ ಸುಮಾರು ಐದು ಕಿಲೋ ಮೀಟರ್ ದೂರ ಓಡುವ ಮೂಲಕ ಅಂತಿಮ ಹಂತವನ್ನು ತಲುಪಿದರು. ಪುರುಷ ವಿಭಾಗದಲ್ಲಿ ಚನ್ನಕೇಶವ ದೇಲಂಪಾಡಿ ಪ್ರಥಮ ಸ್ಥಾನ ಪಡೆದರು. ಮಹೇಶ್ ದೇಲಂಪಾಡಿ ಎರಡನೇ ಸ್ಥಾನ ಮತ್ತು ಪ್ರಜೀಶ್ ಕಾರಡ್ಕ ಮೂರನೇ ಸ್ಥಾನ ಗಳಿಸಿದರು. ಮಹಿಳಾ ವಿಭಾಗದಲ್ಲಿ ಜಯಶ್ರೀ ದೇಲಂಪಾಡಿ ಪ್ರಥಮ ಸ್ಥಾನ ಮತ್ತು ಧನ್ಯಾ ದೇಲಂಪಾಡಿ ಎರಡನೇ ಸ್ಥಾನ ಪಡೆದರು. ಸಂಜನಾ ಕರಿಂದಳ ಮೂರನೇ ಸ್ಥಾನ ಗಳಿಸಿದರು. ಕುಂಡಂಗುಳಿ ಪೇಟೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಹೆಚ್ಚುವರಿ ಎಸ್‌ಪಿ ದೇವದಾಸ್ ಸಿ.ಎಂ. ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಸ್ವೀಪ್ ನೋಡಲ್ ಅಧಿಕಾರಿ ಮತ್ತು ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕೆ.ಎಂ.ಕಿಶೋರ್ ಕುಮಾರ್ ಸ್ವಾಗತಿಸಿ, ಸಿ.ಕೆ.ವಿಜಯನ್ ಧನ್ಯವಾದವಿತ್ತರು. ಕುಟುಂಬಶ್ರೀ ಸಿಡಿಎಸ್ ಅಧ್ಯಕ್ಷೆ ಗುಲಾಬಿ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಎಸ್.ಮನು, ಕೊರಗ ವಿಭಾಗದ ವಿಶೇಷ ಸಂಯೋಜಕ ಯದುರಾಜ್, ಪಿ.ರಾಜು, ಬ್ಲಾಕ್ ಸಂಯೋಜಕಿಯರಾದ ಎಂ.ಜಿಶಾ, ಪಿ.ಗೀತು ನೇತೃತ್ವ ವಹಿಸಿದ್ದರು.



ಪತ್ತೆ ಕಾರ್ಯಕ್ಕೆ ಆ್ಯಂಟಿ ನಕ್ಸಲ್ ಫೋರ್ಸ್ ಆಗಮನ | ಕುಡಿಯ ಜನಾಂಗದವರಿಂದ ಆರಾಧ್ಯ ದೈವಕ್ಕೆ ಪೂಜೆ

ಮಡಿಕೇರಿ: ಚಾರಣಕ್ಕೆ ತೆರಳಿದ್ದ ಕೇರಳದ ಮಹಿಳೆ ಇನ್ನೂ ನಾಪತ್ತೆ

ಮಡಿಕೇರಿ: ಕಕ್ಕಬ್ಬೆಯ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ತೆರಳಿದ್ದ ಕೇರಳದ ಮಹಿಳೆಯ ನಾಪತ್ತೆ ಪ್ರಕರಣ ಕುತೂಹಲಕ್ಕೆ ಎಡೆ ಮಾಡಿದೆ.

ಕೇರಳ ರಾಜ್ಯದ ಕೊಯಿಕ್ಕೋಡು ನಾದಾಪುರಂ ಗ್ರಾಮದ ನಿವಾಸಿ ಶರಣ್ಯ, ಮೂರು ದಿನಗಳ ಹಿಂದೆ ಕೊಡಗಿಗೆ ಆಗಮಿಸಿ ಕಕ್ಕಬ್ಬೆಯ ಹೋಂಸ್ಟೇಯೊಂದರಲ್ಲಿ ವಾಸ್ತವ್ಯ ಹೂಡಿದ್ದರು.



ಒಬ್ಬಂಟಿಯಾಗಿ ಆಗಮಿಸಿದ್ದ ಆಕೆ ಗುರುವಾರ ಕೊಡಗಿನ ಅತ್ಯಂತ ಎತ್ತರದ ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ತೆರಳುವ ಇಂಗಿತ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮತ್ತು ಆ ಭಾಗದಲ್ಲಿ ಕಾಡಾನೆಗಳ ಸಂಚಾರ ವಿರುವುದರಿಂದ ಇತರ ಪ್ರವಾಸಿಗರೊಂದಿಗೆ ಚಾರಣಕ್ಕೆ ಕಳುಹಿಸಲಾಗಿತ್ತು.

ಆದರೆ ಸಂಜೆ ಇತರ ಪ್ರವಾಸಿಗರು ಆಗಮಿಸಿದರೂ ಶರಣ್ಯ ಬಾರದಿದ್ದಾಗ ಸ್ಥಳೀಯರು ಅರಣ್ಯ ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ, ಹುಡುಕಾಟ ಪ್ರಾರಂಭಿಸಿದರೂ, ಆಕೆಯ ಸುಳಿವು ಲಭ್ಯವಾಗಿರಲಿಲ್ಲ.

ಶರಣ್ಯಾಳ ಮೊಬೈಲ್ ಕೇರಳದ ನೆಟ್‌ವರ್ಕ್‌ನಲ್ಲಿರುವುದು ಗೊತ್ತಾದ ಹಿನ್ನೆಲೆಯಲ್ಲಿ ಶುಕ್ರವಾರ ಪೊಲೀಸರು, ಅರಣ್ಯ ಇಲಾಖೆ ಸಿಬ್ಬಂದಿಗಳು ಹಾಗೂ ಸ್ಥಳೀಯರು ಶ್ವಾನದಳದ ನೆರವಿನಿಂದ ದಿನವಿಡೀ ಶೋಧ ನಡೆಸಿದ್ದರೂ ಆಕೆಯ ಸುಳಿವು ದೊರಕಿರಲಿಲ್ಲ.

ಈ ನಡುವೆ ಆಕೆಯ ಸಹೋದರ ಶ್ಯಾಂ ಹಾಗೂ ಕುಟುಂಬಸ್ಥರು ಕೂಡಾ ಕೊಡಗಿಗೆ ಆಗಮಿಸಿ ಶೋಧ ಕಾರ್ಯದಲ್ಲಿ ಜೊತೆಗೂಡಿದ್ದು, ಶನಿವಾರ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ಕ್ಷೇತ್ರದ ಶಾಸಕ ಎ. ಎಸ್ ಪೊನ್ನಣ್ಣ ಅವರನ್ನು ಭೇಟಿ ಮಾಡಿ ಶರಣ್ಯಳ ಪತ್ತೆಗೆ ನೆರವು ಯಾಚಿಸಿದ್ದಾರೆ.

ಕಾರ್ಯಾಚರಣೆ ಚುರುಕುಗೊಳಿಸಲು ಪೊಲೀಸ್ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಶಾಸಕ ಎ. ಎಸ್. ಪೊನ್ನಣ್ಣ ಸೂಚನೆ ನೀಡಿದ್ದಾರೆ.

ಶನಿವಾರ ಡ್ರೋನ್ ಕ್ಯಾಮೆರಾ, ಶ್ವಾನದಳದೊಂದಿಗೆ ಪೊಲೀಸ್ ಹಾಗೂ ಅರಣ್ಯ ಇಲಾಖೆಯ 4 ತಂಡಗಳು ಬಿರುಸಿನ ಶೋಧ ನಡೆಸಿದ್ದು, ಮೊಬೈಲ್ ಸಿಮ್ ಲೋಕೇಶನ್ ಟ್ರ್ಯಾಕಿಂಗ್ ಮೂಲಕವೂ ಹುಡುಕಾಟ ಮಾಡಲಾಗಿದೆ. ಆದರೆ ಸಂಜೆವರೆಗೂ ಆಕೆಯ ಬಗ್ಗೆ ಯಾವುದೇ ಸುಳಿವು ಲಭ್ಯವಾಗಿಲ್ಲ ಎನ್ನಲಾಗಿದೆ.

ಚಾರಣಿಗರು ದಾರಿತಪ್ಪಲು ಸಾಧ್ಯವೇ ಇಲ್ಲದ, ಕಷ್ಟಕರವಲ್ಲದ ಚಾರಣ ಮಾರ್ಗವಾಗಿರುವ ತಡಿಯಂಡಮೋಳ್‌ನಲ್ಲಿ ಮೂರು ದಿನಗಳಿಂದ ನಾಪತ್ತೆಯಾಗಿರುವ ಶರಣ್ಯ ಬಗ್ಗೆ ಇದೀಗ ಕುತೂಹಲ ತೀವ್ರಗೊಂಡಿದೆ.

ಆಕೆ ಬೆಟ್ಟದ ಇಳಿಜಾರಿನಲ್ಲಿ ಜಾರಿ ಯಾವುದಾದರೂ ಕಂದಕಕ್ಕೆ ಬಿದ್ದಿರಬಹುದೇ? ಅಥವಾ ವನ್ಯಪ್ರಾಣಿಗಳ ದಾಳಿಗೆ ಸಿಲುಕಿರಬಹುದೇ ಎಂಬ ಶಂಕೆಯೂ ವ್ಯಕ್ತವಾಗಿದೆ.



ಕುಡಿಯ ಜನಾಂಗದವರಿಂದ ಪೂಜೆ

ಮೂರು ದಿನಗಳಿಂದ ನಾಪತ್ತೆಯಾಗಿರುವ ಶರಣ್ಯಳನ್ನು ಪತ್ತೆ ಹಚ್ಚಿ ಸುರಕ್ಷಿತವಾಗಿ ವಾಪಸ್ ಕರೆತರುವಂತಾಗಲೆಂದು ಅಲ್ಲಿನ ಕುಡಿಯ ಜನಾಂಗದವರು ಶನಿವಾರ ತಮ್ಮ ಆರಾಧ್ಯ ದೈವಕ್ಕೆ ಪೂಜೆ ಸಲ್ಲಿಸಿದ್ದಾರೆ. ಆದರೆ ಸಂಜೆವರೆಗೂ ಆಕೆ ಪತ್ತೆಯಾಗಿಲ್ಲ.

ಎನ್‌ಎನ್‌ಎಫ್ ಆಗಮನ

ಇದೀಗ ಪೊಲೀಸರು ಆ್ಯಂಟಿ ನಕ್ಸಲ್ ಫೋರ್ಸ್ (ಎನ್‌ಎನ್‌ಎಫ್) ನ ನೆರವು ಯಾಚಿಸಿದ್ದು, ಅದರಂತೆ ತಂಡವೊಂದು ತಡಿಯಂಡಮೋಳ್ ಬೆಟ್ಟಕ್ಕೆ ಆಗಮಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 24°
ಉಡುಪಿ 32° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 05, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 5
268 ಮತಗಟ್ಟೆಗಳಲ್ಲಿ ಭದ್ರತೆ ಬಲಪಡಿಸಲು ನಿರ್ದೇಶನ


ಪುಟ 6
ತಾಯಿ ಮಕ್ಕಳ ಆಸ್ಪತ್ರೆಗೆ ಎಕ್ಸ್‌ರೇ, ರೇಡಿಯೋಗ್ರಫಿ ಉಪಕರಣ ಹಸ್ತಾಂತರ

ಕೇರಳ ಚುನಾವಣೆ: ಎನ್‌ಡಿಎ ಅಭ್ಯರ್ಥಿಗಳಿಂದ ಬಿರುಸಿನ ಮತಪ್ರಚಾರ



ಕೇರಳದ ವಿಧಾನ ಸಭಾ ಚುನಾವಣೆಗೆ ದಿನ ಗಣನೆಯು ಆರಂಭವಾಗಿರುವ ಬೆನ್ನಿಗೇ ಅಭ್ಯರ್ಥಿಗಳ ಪ್ರಚಾರ ಕಾರ್ಯವು ಬಿರುಸು ಪಡೆಯುತಿದ್ದು, ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಹಾಗೂ ಕಾಸರಗೋಡು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರು ತಮ್ಮ ಸ್ವಕ್ಷೇತ್ರದುದ್ದಕ್ಕೂ ಬಿರುಸಿನ ಚುನಾವಣಾ ಪ್ರಚಾರವನ್ನು ನಡೆಸುತ್ತಿದ್ದಾರೆ.

ಸುತ್ತ ಮುತ್ತ

ಏ.5ರಂದು ಕರಾವಳಿ ಭಾಗದಲ್ಲಿ ಮತ್ತೆ ಮಳೆಯ ಮುನ್ಸೂಚನೆ

ಉಡುಪಿ: ಕರಾವಳಿ ಭಾಗದಲ್ಲಿ ಏ.5ರಂದು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಇಂದು ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಆ ಬಳಿಕ ಜಿಲ್ಲೆಯಲ್ಲಿ ಸದ್ಯ ಯಾವುದೇ ಮಳೆಯ ಮುನ್ಸೂಚನೆ ಇಲ್ಲ ಎಂದು ಇಲಾಖೆ ತಿಳಿಸಿದೆ.

ಏರುಗತಿ ಬಳಿಕ ಸ್ಥಿರತೆ ಕಾಯ್ದುಕೊಂಡ ಅಡಿಕೆ ಧಾರಣೆ

ಮಂಗಳೂರು: ಏರುಗತಿಯಲ್ಲಿ ಸಾಗುತಿದ್ದ ಅಡಿಕೆ ಧಾರಣೆಯು ಸದ್ಯ ಸ್ಥಿರವಾಗಿದ್ದು, ಹೊಸ ಅಡಿಕೆಯು 500 ರೂ.ವಿನಲ್ಲಿ ಹಾಗೂ ಹಳೆ ಅಡಿಕೆ 555 ರೂ.ವಿನಲ್ಲಿ ಮಾರಾಟವಾಗುತ್ತಿದೆ. ಕಳೆದ ಎರಡು ವಾರದಿಂದ ಧಾರಣೆ ಏರಿಕೆ ಕಂಡಿದ್ದು, ಹೊಸ ಅಡಿಕೆ 465 ರೂ.ವಿನಲ್ಲಿ 500ರ ಗಡಿ ದಾಟಿದೆ. ಅಲ್ಲದೇ ಡಬಲ್ ಚೋಲ್ 555 ರೂ.ವಿನಲ್ಲಿ ಸ್ಥಿರವಾಗಿದೆ. ಧಾರಣೆ ಏರಿಕೆ ಹಿನ್ನಲೆಯಲ್ಲಿ ಕೃಷಿಕರು ಮಾರಾಟದತ್ತ ಒಲವು ತೋರುತ್ತಿದ್ದು, ಅಲ್ಲದೇ ಮಾರುಕಟ್ಟೆಲ್ಲಿ ಆವಕ ಕೂಡ ಮೊದಲಿಗಿಂತ ಹೆಚ್ಚಿದೆ.
ಉಳಿದಂತೆ ಪಠೋರ,ಕರಿಗೋಟು ಧಾರಣೆಯು ಏರಿಕೆ ಕಂಡಿದ್ದು, ಕೃಷಿಕ ಮೊಗದಲ್ಲಿ ಸಂತಸ ತಂದಿದೆ.

ದಾಸ್ತಾನಿಟ್ಟಿದ್ದ ಕಬ್ಬಿಣದ ಪಿಲ್ಲರ್‌ಗಳ ಕಳವು: ದೂರು ದಾಖಲು

ಬಂಟ್ವಾಳ: ಪಿಡಬ್ಲ್ಯುಡಿ ಗುತ್ತಿಗೆದಾರರು ಕಟ್ಟಡ ನಿರ್ಮಾಣಕ್ಕೆ ದಾಸ್ತಾನಿಟ್ಟಿದ್ದ ಕಬ್ಬಿಣದ ಪಿಲ್ಲರ್‌ಗಳನ್ನು ಕಳವುಗೈದ ಘಟನೆ ಇರಾ ಗ್ರಾಮದ ಆಚೆಬೈಲು ಎಂಬಲ್ಲಿ ನಡೆದಿದೆ. ಈ ಬಗ್ಗೆ ಇರಾ ಗ್ರಾಮದ ಪರಪ್ಪು ನಿವಾಸಿ ಹನೀಫ್ ಎಂಬವರು ಬಂಟ್ವಾಳ ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದು, ಉಳ್ಳಾಲ ತಾಲೂಕು ಇರಾ ಗ್ರಾಮದ ಆಚೆಬೈಲು ಎಂಬಲ್ಲಿ ಕಟ್ಟಡ ನಿರ್ಮಾಣಕ್ಕೆ ಕಲ್ಲು, ಜಲ್ಲಿ, ಮರಳು ಹಾಗೂ ಕಬ್ಬಿಣ ಸರಳುಗಳನ್ನು ಏ.2ರಂದು ದಾಸ್ತಾನು ಮಾಡಲಾಗಿತ್ತು. ಏ.3ರಂದು ಸ್ಥಳಕ್ಕೆ ಹೋಗಿ ನೋಡಿದಾಗ, ಅಲ್ಲಿದ್ದ 10 ಕಬ್ಬಿಣದ ಪಿಲ್ಲರ್‌ಗಳ ಪೈಕಿ 5 ಕಬ್ಬಿಣ ಪಿಲ್ಲರ್‌ಗಳು ಕಾಣೆಯಾಗಿದ್ದು, ಯಾರೋ ಕಳವು ಮಾಡಿಕೊಂಡು ಹೋಗಿರುವುದಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಕಳ್ಳತನವಾದ 300 ಕೆ.ಜಿ. ಕಬ್ಬಿಣದ ಪಿಲ್ಲರ್ ಮೌಲ್ಯ ಸುಮಾರು 18 ಸಾವಿರ ರೂ. ಆಗಿರಬಹುದೆಂದು ಅಂದಾಜಿಸಲಾಗಿದೆ. ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲ್ಲೆಂದರಲ್ಲಿ ತ್ಯಾಜ್ಯ ಎಸೆತ | ಅಧಿಕಾರಿಗಳಿಂದ ಕ್ರಮ

ಬಿತ್ತು ದಂಡದ ಬಿಸಿ

ಪರಿಣಾಮ ಬೀರಿದ ಸ್ವಚ್ಛ ಶನಿವಾರ ಅಭಿಯಾನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ರಸ್ತೆ ಬದಿ ತ್ಯಾಜ್ಯ ಎಸೆಯುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ನಿಯಮ ಉಲ್ಲಂಘಿಸುವ ಮಂದಿಗೆ ಅಧಿಕಾರಿಗಳು ದಂಡದ ಮೂಲಕ ಎಚ್ಚರಿಕೆ ನೀಡುವ ಕೆಲಸ ಆರಂಭಿಸಿದ್ದಾರೆ.
ಪ್ರತಿ ತಿಂಗಳ ಮೊದಲ ಶನಿವಾರ ಜಿಲ್ಲೆಯಲ್ಲಿ ಸ್ವಚ್ಛ ಶನಿವಾರ ಅಭಿಯಾನ ನಡೆಯುತ್ತಿದ್ದು, ಈ ವೇಳೆ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದಂಡದ ಜೊತೆಗೆ ಸ್ವಚ್ಛತೆಯ ಪಾಠವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ.

ಹರೇಕಳದಲ್ಲಿ ದಂಡ

ಸ್ವಚ್ಛ ಶನಿವಾರದ ಪ್ರಯುಕ್ತ ಏ.4ರಂದು ಅಭಿಯಾನ ನಡೆಯುತ್ತಿದ್ದ ವೇಳೆ ಎಲ್ಲೆಂದರಲ್ಲಿ ಕಸ ಎಸೆದವರಿಗೆ ದಂಡ ವಿಧಿಸುವ ಕಾರ್ಯ ನಡೆದಿದೆ. ಹರೇಕಳ ಗ್ರಾಮದ ಕರಾವಳಿ ಬೇಕರಿಗೆ 1000 ರೂ. ಹಾಗೂ ಆಟೊ ಸರ್ವಿಸ್ ಸ್ಟೇಷನ್‌ಗೆ 500 ರೂ. ದಂಡ ವಿಧಿಸಲಾಗಿದೆ.

223 ಗ್ರಾ.ಪಂಗಳಲ್ಲಿ ಅಭಿಯಾನ

ಜಿಲ್ಲೆಯ ಎಲ್ಲಾ 223 ಗ್ರಾ.ಪಂ.ವ್ಯಾಪ್ತಿಯಲ್ಲಿ ಶನಿವಾರ ಸ್ವಚ್ಛತಾ ಅಭಿಯಾನ ನಡೆದಿದೆ. ಉಜಿರೆ ಗ್ರಾ.ಪಂ.ವ್ಯಾಪ್ತಿಯ ಉಜಿರೆ - ಬೆಳಾಲುಗೆ ಸಂಪರ್ಕ ಕಲ್ಪಿಸುವ ರಸ್ತೆಯ ಮೂರು ಭಾಗಗಳಲ್ಲಿ ಸ್ವಚ್ಛ ಶನಿವಾರ ಶ್ರಮದಾನ ನಡೆಯಿತು. ಶಿವಾಜಿ ನಗರ- ಕ್ರಾಸ್, ಕುವೆಂಪುನಗರ- ಕ್ರಾಸ್, ಓಡಲ ಎಂಬಲ್ಲಿ ರಸ್ತೆ ಬದಿ ಬ್ಲ್ಯಾಕ್ ಸ್ಪಾಟ್‌ಗಳಲ್ಲಿರುವ ತ್ಯಾಜ್ಯ ಸಂಪೂರ್ಣ ವಿಲೇವಾರಿ ಮಾಡಿ ಸ್ವಚ್ಛತೆ ಮಾಡಲಾಯಿತು. ಸ್ವಚ್ಛ ಶನಿವಾರ ಕಾರ್ಯಕ್ರಮದಲ್ಲಿ ಗ್ರಾ.ಪಂ.ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿ, ಪಂ. ಸಿಬ್ಬಂದಿಗಳು, ಸಿಎಚ್‌ಒ, ಆಶಾ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟ ಸದಸ್ಯರಿದ್ದರು.



ಪರಿಸರ ಜಾಗೃತಿ

ಅಭಿಯಾನ ವೇಳೆ ಜನತೆಗೆ ಸ್ವಚ್ಛತೆ ಪಾಠ ಜೊತೆಗೆ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧದ ನೋಟಿಸ್ ನೀಡಿ ಬಟ್ಟೆ ಚೀಲ ವಿತರಿಸುವ ಮೂಲಕ ಪರಿಸರ ಜಾಗೃತಿ ನಡೆಯಿತು. ಅಲ್ಲದೆ ಎಲ್ಲೆಂದರಲ್ಲಿ ತ್ಯಾಜ್ಯ ಎಸೆದವರಿಗೆ ದಂಡದೊಂದಿಗೆ ಸೂಕ್ತ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನೂ ಅಧಿಕಾರಿಗಳು ನೀಡಿದ್ದಾರೆ.

- ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯದಂತೆ ಸೂಚನೆ
- ನಿರ್ಲಕ್ಷ್ಯ ವಹಿಸುವವರ ವಿರುದ್ಧ ಅಧಿಕಾರಿಗಳಿಂದ ದಂಡದ ಎಚ್ಚರಿಕೆ
- ದಂಡವನ್ನು ಪಾವತಿಸದಿದ್ದರೆ ಕೇಸು ದಾಖಲು

ಬೆಳಾಲು ಗ್ರಾಮದ ಕಾಡಂಡ ಪರಿಸರ

ಒಂಟಿ ಸಲಗ ದಾಳಿ: ಅಪಾರ ಕೃಷಿ ನಾಶ

ಸಿಸಿ ಕ್ಯಾಮೆರಾ, ಬಾಳೆ ಗಿಡಗಳಿಗೆ ಹಾನಿ

ಬೆಳ್ತಂಗಡಿ: ಬೆಳಾಲು ಗ್ರಾಮದ ಕಾಡಂಡ ಪರಿಸರದಲ್ಲಿ ಒಂಟಿ ಸಲಗ ಕೃಷಿ ತೋಟಗಳಿಗೆ ದಾಳಿ ಮಾಡಿದ್ದು , ಅಪಾರ ಹಾನಿ ಉಂಟು ಮಾಡಿದ ಘಟನೆ ಶುಕ್ರವಾರ ತಡರಾತ್ರಿ ನಡೆದಿದೆ. ಇಲ್ಲಿನ ಕಾಡಂಡ ಪರಿಸರದ ಪ್ರಶಾಂತ್ ಹಾಗೂ ಮುತ್ತಪ್ಪ ಎಂಬವರ ತೋಟಗಳಿಗೆ ನುಗ್ಗಿದ ಸಲಗ ನೀರಾವರಿ ಪೈಪ್‌ಲೈನ್, ತೋಟದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮೆರಾ,ಐವತ್ತಕ್ಕಿಂತ ಅಧಿಕ ಬಾಳೆ ಗಿಡಗಳಿಗೆ ಹಾನಿ ಉಂಟು ಮಾಡಿದ್ದು ಅಪಾರ ಪ್ರಮಾಣದಲ್ಲಿ ನಷ್ಟ ಉಂಟು ಮಾಡಿದೆ.





ನಿಲ್ಲಿಸಿದ್ದ ಕಾರಿನ ಮೇಲೆ ಮಿನಿ ಬಸ್ ಮಗುಚಿದ ಘಟನೆ ಮಡಿಕೇರಿ ತಾಲೂಕಿನ ಹಾಕತ್ತೂರು-ಮರಗೋಡು ರಸ್ತೆಯ ಚೆಲ್ಲಂಗೋಡು ಸೇತುವೆ ಬಳಿ ತಿರುವಿನಲ್ಲಿ ನಡೆದಿದೆ. ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಬಸ್ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿದ್ದ ಕ್ರೆಟಾ ಕಾರಿನ ಮೇಲೆ ಉರುಳಿ ಬಿದ್ದಿದೆ. ಈ ಭೀಕರ ಘಟನೆಯಲ್ಲಿ ಕಾರಿನಲ್ಲಿದ್ದ ನಾಲ್ವರು ಪ್ರಯಾಣಿಕರು ಪವಾಡ ಸದೃಶ್ಯ ಪಾರಾಗಿದ್ದಾರೆ. ಪ್ರವಾಸಿ ಬಸ್ ಚಾಲಕ ಸುದೀಪ್ ಎಂಬವರ ಅತಿವೇಗ , ನಿರ್ಲಕ್ಷ್ಯದ ಚಾಲನೆ ಈ ಅಪಘಾತಕ್ಕೆ ಕಾರಣ.

ಎಲ್‌ಪಿಜಿ ಫಿಲ್ಲಿಂಗ್ ಸೆಂಟರ್‌ಗಳಿಗೆ ಅಧಿಕಾರಿಗಳ ಭೇಟಿ, ಪರಿಶೀಲನೆ

ಸಮಸ್ಯೆ ಬಾರದಂತೆ ಸೂಕ್ತ ಕ್ರಮ ಕೈಗೊಳ್ಳಿ

ಬಂಟ್ವಾಳ: ಆಟೋ ಗ್ಯಾಸ್ ಪಂಪ್‌ಗಳಲ್ಲಿ ಹೆಚ್ಚುವರಿ ದರವನ್ನು ಪಡೆಯಲಾಗುತ್ತಿದೆ ಸೇರಿದಂತೆ ವಿವಿಧ ಆರೋಪಗಳ ಹಿನ್ನಲೆಯಲ್ಲಿ ಬಂಟ್ವಾಳ ತಹಶೀಲ್ದಾರ್ ಮಂಜುನಾಥ್ ಜಿ. ಅವರ ನೇತೃತ್ವದ ಅಧಿಕಾರಿಗಳ ತಂಡವು ಶನಿವಾರ ವಿವಿಧ ಆಟೋ ಗ್ಯಾಸ್ ಸರಬರಾಜು ಮಾಡುವ ಪಂಪ್‌ಗಳಿಗೆ ಹಠಾತ್ ಭೇಟಿ ನೀಡಿ ಪರಿಶೀಲನೆ ನಡೆಸಿತು.

ತಲಪಾಡಿ, ಬಿ.ಸಿ.ರೋಡ್ ಪಂಪ್

ಬಿ.ಸಿ.ರೋಡಿಗೆ ಸಮೀಪದ ತಲಪಾಡಿ ಹಾಗೂ ಬಿ.ಸಿ.ರೋಡ್‌ನ ಪಂಪ್‌ಗೆ ತಹಶೀಲ್ದಾರ್ ಸಹಿತ ಅಧಿಕಾರಿಗಳ ತಂಡವು ಭೇಟಿ ನೀಡಿತು.
ಆಟೋ ಗ್ಯಾಸ್ ಪಂಪ್‌ಗಳಲ್ಲಿ ನಿಯಮಿತವಾಗಿ ಗ್ಯಾಸ್ ದೊರೆಯುವ ಹಾಗೆ ಪೂರ್ವಭಾವಿ ವ್ಯವಸ್ಥೆ ಮಾಡಬೇಕು. ಯಾವುದೇ ಸಮಸ್ಯೆ ಬಾರದಂತೆ ಕ್ರಮ ಕೈಗೊಳ್ಳಬೇಕು. ದರ ಏರಿಕೆ ಸೇರಿದಂತೆ ಇತರ ಅನಪೇಕ್ಷಿತ ವಿಚಾರ ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳುವ ಹಾಗೆ ತಹಶೀಲ್ದಾರ್ ಮಂಜುನಾಥ್ ಅವರು ಪಂಪ್‌ನ ಮುಖ್ಯಸ್ಥರಿಗೆ ಸೂಚನೆ ನೀಡಿದರು.

ಅಹವಾಲು ಆಲನೆ

ಈ ವೇಳೆ ರಿಕ್ಷಾ ಚಾಲಕರ ಅಹವಾಲುಗಳನ್ನು ತಹಶೀಲ್ದಾರ್ ಆಲಿಸಿದರು. ಖಾಸಗಿ ಗ್ಯಾಸ್ ಪಂಪ್‌ನಲ್ಲಿ ದರ ಏರಿಕೆ ಮಾಡಿರುವುದರಿಂದ ಸಮಸ್ಯೆ ಆಗುತ್ತಿದೆ. ಈ ದರ ಏರಿಕೆ ಮಾಡಿ ಪ್ರಯಾಣಿಕರಿಂದ ಹೆಚ್ಚುವರಿ ಹಣ ಪಡೆಯಲು ನಮಗೆ ಅವಕಾಶ ಇಲ್ಲ, ಬಹಳಷ್ಟು ನಷ್ಟ ಆಗುತ್ತಿದೆ ಎಂದು ಕೆಲವರು ತಹಶೀಲ್ದಾರ್ ಅವರ ಗಮನಸೆಳೆದರು. ಸರಿಯಾದ ಸಮಯಕ್ಕೆ ಗ್ಯಾಸ್ ಲಭ್ಯವಾಗುತ್ತಿಲ್ಲ ಎಂದು ಇತರ ರಿಕ್ಷಾ ಚಾಲಕರು ತಹಶೀಲ್ದಾರ್ ಅವರ ಗಮನ ಸೆಳೆದರು.
ಬಂಟ್ವಾಳ ನಗರ ಪೊಲೀಸ್ ಇನ್‌ಸ್ಪೆಕ್ಟರ್ ಅನಂತ ಪದ್ಮನಾಭ, ಆಹಾರ ಶಿರಸ್ತೇದಾರರಾದ ಶಿವಪ್ರಸಾದ್, ಆಹಾರ ನಿರೀಕ್ಷಕ ಪ್ರಶಾಂತ್ ಶೆಟ್ಟಿ ಮತ್ತಿತರರಿದ್ದರು.



ಸೂಚನೆ

ದರ ಏರಿಕೆ ಸೇರಿದಂತೆ ಇತರ ಅನಪೇಕ್ಷಿತ ವಿಚಾರ ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಲು ತಹಶೀಲ್ದಾರ್ ಮಂಜುನಾಥ್ ಪಂಪ್ ಮುಖ್ಯಸ್ಥರಿಗೆ ಸೂಚನೆನೀಡಿದರು.

ಪುತ್ತೂರಿಗೆ ಆಗಮಿಸಿದ ಶ್ರೀರಾಮ ಹನುಮ ಜ್ಯೋತಿ ರಥಯಾತ್ರೆ 2

ಆತ್ಮಶಕ್ತಿ ವಿ. ಸಹಕಾರ ಸಂಘ 3.50 ಕೋಟಿ ರೂ. ಅಧಿಕ ಲಾಭ 3

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಭಾನುವಾರ 05, ಏಪ್ರಿಲ್ 2026

ಸುತ್ತಮುತ್ತ

ಬಂಟರ ಸಂಘ: ಡಾ. ಜಗನ್ನಾಥ ಶೆಟ್ಟಿ ಆಯ್ಕೆ

ಮುಲ್ಕಿ: ಮೈಸೂರಿನ ಪ್ರತಿಷ್ಠಿತ ಬಂಟರ ಸಂಘದ ಚಾರಿಟೇಬಲ್ ಟ್ರಸ್ಟ್‌ನ ಡೆಪ್ಯುಟಿ ಮ್ಯಾನೇಜಿಂಗ್ ಟ್ರಸ್ಟಿಯಾಗಿ ಸರ್ವಾನುಮತದಿಂದ ನಿಡ್ಡೋಡಿ ಚಾವಡಿಮನೆ ಡಾ. ಜಗನ್ನಾಥ ಶೆಟ್ಟಿ ಆಯ್ಕೆಯಾಗಿದ್ದಾರೆ.



ನಿಡ್ಡೋಡಿ ಚಾವಡಿ ಮನೆ ಡಾ. ಜಗನ್ನಾಥ ಶೆಟ್ಟಿ ರವರು ಕಿನ್ನಿಗೋಳಿ ಸ್ವಾಮಿ ವಿವೇಕಾನಂದ ಸೇವಾ ಟ್ರಸ್ಟ್‌ನ ಅಧ್ಯಕ್ಷರಾಗಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

ಏ.7ರಿಂದ 9ತನಕ ವರ್ಷಾವಧಿ ಉತ್ಸವ

ಬಂಟ್ವಾಳ: ಬಿ.ಸಿ. ರೋಡಿನ ಶ್ರೀ ರಕ್ತೇಶ್ವರೀ ದೇವೀ ಸನ್ನಿಧಿಯಲ್ಲಿ ಏ.7ರಿಂದ 9ತನಕ ನೀಲೇಶ್ವರ ಬ್ರಹ್ಮಶ್ರೀ ಪದ್ಮನಾಭ ತಂತ್ರಿಗಳ ಮಾರ್ಗ ದರ್ಶನದಂತೆ ವೇದಮೂರ್ತಿ ಪಳನೀರು ಅನಂತ ಭಟ್ಟರ ಉಪಸ್ಥಿತಿಯಲ್ಲಿ ವರ್ಷಾವಧಿ ಉತ್ಸವ ನಡೆಯಲಿದೆ ಎಂದು ದೇವಸ್ಥಾನದ ಸೇವಾ ಸಮಿತಿಯ ಅಧ್ಯಕ್ಷ ಬಿ.ಮೋಹನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆ ಪ್ರಯುಕ್ತ ಸಂಜೆ ಗಂಟೆ 6ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ ಗಂಟೆ 8ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ನಾಳೆ ದೃಢಕಲಶ, ದೈವಗಳ ಪ್ರತಿಷ್ಠಾಪನೆ

ಬಂಟ್ವಾಳ: ಇಲ್ಲಿಗೆ ಸಮೀಪದ ಕಲಾಯಿ ಶ್ರೀ ಮಹಮ್ಮಾಯಿ ದೇವಸ್ಥಾನದಲ್ಲಿ ದೇವರಿಗೆ ದೃಢಕಲಶ, ಭೈರವ, ಕಲ್ಲುಟ್ಟಿ ಪಂಜುರ್ಲಿ ದೈವಗಳು ಹಾಗೂ ಅಕ್ಕೇರಿಪಾದೆಯಲ್ಲಿ ಬ್ರಹ್ಮಲಿಂಗೇಶ್ವರ ದೇವರ, ಶ್ರೀ ರಕ್ತೇಶ್ವರಿ, ಅಣ್ಣಪ್ಪಸ್ವಾಮಿ, ಜುಮಾದಿಬಂಟ ಹಾಗೂ ಇತರ ದೈವಗಳನ್ನು ಪ್ರತಿಷ್ಠಾಪನೆಯು ಏ.6 ರಂದು ನಡೆಯಲಿದೆ. ಇದೇವೇಳೆ ಶ್ರೀ ನಾಗದೇವರ ಸಾನಿಧ್ಯದಲ್ಲಿ ಪೂಜೆ ನೆರವೇರಲಿದೆ. ಮಧ್ಯಾಹ್ನ ಮಹಾಪೂಜೆಯ ಬಳಿಕ ಸಾರ್ವಜನಿಕ ಅನ್ನ ಸಂತರ್ಪಣೆಯು ನಡೆಯಲಿರುವುದು ಎಂದು ಕ್ಷೇತ್ರದ ಆಡಳೊತಮೊಕ್ತೇಸರರಾದ ರವಿಶಂಕರ ಶೆಟ್ಟಿ ಬಡಾಜೆಗುತ್ತು ಪ್ರಕಡಣೆಯಲ್ಲಿ ತಿಳಿಸಿದ್ದಾರೆ

ದುಗಲಾಯಿ ದೈವದ ನೇಮ

ಕಡಬ: ಕ್ವೊಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ವಾರ್ಷಿಕ ಜಾತ್ರೋತ್ಸವ ಪ್ರಯುಕ್ತ ಶುಕ್ರವಾರ ದುಗಲಾಯಿ ದೈವದ ನೇಮ ನಡೆಯಿತು.

ಬೆಳಗ್ಗೆ ದೇವಸ್ಥಾನದಲ್ಲಿ ಸಂಪ್ರೋಕ್ಷಣೆ, ಬಳಿಕ ದುಗಲಾಯಿ ದೈವದ ನೇಮ, ಬಟ್ಟಲು ಕಾಣಿಕೆ, ಹರಕೆ ಒಪ್ಪಿಸುವ ಕಾರ್ಯ ನಡೆದು ಅನ್ನ ಸಂತರ್ಪಣೆ ನಡೆಯಿತು. ಗುರುವಾರ ರಾತ್ರಿ ಕುಮಾರಾಧಾರ ನದಿಯ ಸುದೆಂಗಳದಲ್ಲಿ ದೇವರ ಅವಭೃತೋತ್ಸವ, ಧ್ವಜಾವರೋಹಣ ನಡೆದು, ಮಂತ್ರಾಕ್ಷತೆ ನಡೆಯಿತು.



ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನೀರಜ್ ಕುಮಾರ್ ರೈ ಆರುವಾರಬಾಳಿಕೆ, ಸದಸ್ಯ ವಿಷ್ಣುಮೂರ್ತಿ ಬಡಕಿಲ್ಲಾಯ, ಸುನೀತ್ ರಾಜ್ ಶೆಟ್ಟಿ ಆರುವಾರ ಬಾಳಿಕೆ, ಯತೀಶ್ ಗುಂಡಿಜೆ, ಶ್ರೀಧರ ಪೂಜಾರಿ ತುಂಬೆತಡ್ಕ, ಸಂಜೀವ ಸುದೆಂಗಳ, ಗೋಪಾಲ ನಾಯ್ಕ ಸೀಗೆತ್ತಡಿ, ಸುಜಾತ ಜೆ.ಶೆಟ್ಟಿ ಬಡಿಲ, ಮೀನಾಕ್ಷಿ ಕೆ.ಮುಂಡೈಮಾರ್, ಮಾಜಿ ಅಧ್ಯಕ್ಷ ಯದುಶ್ರೀ ಆನೆಗುಂಡಿ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಶೀನಪ್ಪ ಗೌಡ ವಳಕಡಮ, ಉತ್ಸವ ಸಮಿತಿಯ ಅಧ್ಯಕ್ಷ ಧರ್ನಪ್ಪ ಗೌಡ ಕೊರಿಕ್ಕಾರ್, ಮಾಜಿ ಅಧ್ಯಕ್ಷ ಚಂದ್ರಹಾಸ ರೈ ಪಾಂಡೇಲುಗುತ್ತು, ಉಪಾಧ್ಯಕ್ಷ ಮೋಹನ್‌ದಾಸ ಶೆಟ್ಟಿ ಬಡಿಲ, ಸಂಜೀವ ಗೌಡ ಪರಂಗಾಜೆ, ಶ್ರೀನಿವಾಸ ಗೌಡ ಪಲ್ಲಡ್ಕಪಟ್ಟೆ, ರಾಜೀವ ಗೌಡ ಪೊಸಲಕ್ಕೆ, ಗಣೇಶ್ ಎರ್ಮಡ್ಕ, ಪ್ರಧಾನ ಕಾರ್ಯದರ್ಶಿ ಕೊರಗಪ್ಪ ಗೌಡ ಮುಂಡೈಮಾರ್, ಜೊತೆ ಕಾರ್ಯದರ್ಶಿ ಶಶಿಕುಮಾರ್ ಶೆಟ್ಟಿ ಅಂಬಾಬೀಡು, ಶಾಂತಾರಾಮ ಗೌಡ ಬೇಂಗದಪಡ್ಪು, ಜೋತಿ ಕಲ್ಲಾಡಿ, ರಘುನಾಥ ಶೆಟ್ಟಿ ಕಲ್ಕಂಪಾಡಿ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಮಣ್ಣಗುಡ್ಡ, ವೇರ್‌ಹೌಸ್, ಕೊಡಿಯಾಲ್‌ಬೈಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.6ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3.306ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಹನುಮಗಿರಿ ಶ್ರೀಕ್ಷೇತ್ರದಲ್ಲಿ ಬ್ರಹ್ಮಕಲಶ | ಅಯೋಧ್ಯೆ, ಪ್ರಯಾಗರಾಜ್‌ನಿಂದ ಮೃತ್ತಿಕೆ, ಗಂಗಾಜಲ ಸಂಗ್ರಹ

ಪುತ್ತೂರಿಗೆ ಆಗಮಿಸಿದ ಶ್ರೀರಾಮ ಹನುಮ ಜ್ಯೋತಿ ರಥಯಾತ್ರೆ

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಏ.9ರಿಂದ 12ರ ತನಕ ನಡೆಯಲಿದ್ದು, ಇದರ ಅಂಗವಾಗಿ ಅಯೋಧ್ಯೆಯಿಂದ ಶ್ರೀರಾಮ ಜ್ಯೋತಿ, ಮೂಲ ಮೃತ್ತಿಕೆ, ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಿಂದ ಗಂಗಾಜಲ ಪಡೆದು, ಅಂಜನಾದ್ರಿಯಿಂದ ಹನುಮ ಜ್ಯೋತಿ, ಮೃತ್ತಿಕೆ ಹಾಗೂ ಪಂಪಾ ಸರೋವರದ ಪವಿತ್ರ ಜಲ ಸಂಗ್ರಹಿಸಿಕೊಂಡು ಹೊರಟಿರುವ ಶ್ರೀರಾಮ ಹನುಮ ಜ್ಯೋತಿ ರಥವು ಶುಕ್ರವಾರ ಸಂಜೆ ಪುತ್ತೂರು ಪುರಪ್ರವೇಶ ಮಾಡಿದ ಸಂದರ್ಭ ಭವ್ಯ ಸ್ವಾಗತ ನೀಡಲಾಯಿತು.



ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಮತ್ತು ಕೋಟಿ ಶ್ರೀರಾಮ ತಾರಕಜಪ ಯಜ್ಞದ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು ಅವರ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು.

ಪುತ್ತೂರಿನ ಬೊಳುವಾರು ಓಂ ಶ್ರೀ ಶಕ್ತಿ ಆಂಜನೇಯ ಮಂತ್ರಾಲಯದಲ್ಲಿ ಟಿ. ರಂಗನಾಥ ರಾವ್ ಅವರು ಆರತಿ ಬೆಳಗಿಸಿ ರಥದಿಂದ ಪ್ರಜ್ವಲಿಸಿದ ಜ್ಯೋತಿಯನ್ನು ಮಂತ್ರಾಲಯದಲ್ಲಿ ಬೆಳಗಿಸಿದರು. ಬಳಿಕ ಸವಣೂರು ಕೆ. ಸೀತಾರಾಮ ರೈ ಅವರು ಶ್ರೀರಾಮನ ರಥಕ್ಕೆ ಹಾರಾರ್ಪಣೆ ಮಾಡಿ ಭಗವಧ್ವಜವನ್ನು ಸೀತಾರಾಮ ರೈ ಕೆದಂಬಾಡಿಗುತ್ತು ಅವರಿಗೆ ಹಸ್ತಾಂತರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಅನಂತರ ಮುಖ್ಯ ರಸ್ತೆಯಲ್ಲಿ ಸಾಗಿದ ಮೆರವಣಿಗೆಯ ಪ್ರಾರಂಭದಲ್ಲಿ ಭಗವಾಧ್ವಜ ಹಿಡಿದ ಸುಮಂಗಲೆಯರು, ಮಕ್ಕಳು, ಜೊತೆಗೆ ಮಹಿಳೆಯರು ಪೂರ್ಣಕುಂಭ ಸ್ವಾಗತ ಮಾಡಿದರು. ಚೆಂಡೆ ಮೇಳ, ವಾದ್ಯಗೋಷ, ವಿವಿಧ ಭಜನಾ ಮಂಡಳಿಗಳಿಂದ ಕುಣಿತ ಭಜನೆ ವಿಶೇಷ ಆಕರ್ಷಣೆಯಾಗಿತ್ತು.

ವಿಶೇಷ ಸಂಭ್ರಮದಲ್ಲಿ ಪಾಲ್ಗೊಳ್ಳಿ

ಮೆರವಣಿಗೆಗೆ ಚಾಲನೆ ನೀಡಿದ ಸವಣೂರು ಸೀತಾರಾಮ ರೈ ಮಾತನಾಡಿ, ಹನುಮಗಿರಿ ಬ್ರಹ್ಮಕಲಶೋತ್ಸವದಲ್ಲಿ ಯಾವ ಭೇದಭಾವವಿಲ್ಲ, ಎಲ್ಲರೂ ಜೊತೆಯಾಗಿ ಈ ರಥಯಾತ್ರೆಯನ್ನು ಮತ್ತು ಬ್ರಹ್ಮಕಲಶೋತ್ಸವ ಯಶಸ್ವಿಗೊಳಿಸಲಿದ್ದಾರೆ. ಇದರ ಜೊತೆಗೆ ದೇಶದ ಪ್ರಮುಖ ಸ್ವಾಮೀಜಿಗಳು ಕ್ಷೇತ್ರಕ್ಕೆ ಆಗಮಿಸುವುದು ವಿಶೇಷ ಒಂದುಕಡೆಯಾದರೆ, ದೈವ ನರ್ತಕ ಡಾ. ರವೀಶ್ ಪಡುಮಲೆ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿರುವುದು ಮತ್ತೊಂದು ವಿಶೇಷ. ಈ ವಿಶೇಷತೆಗಳನ್ನು ನೆನಪಿಸಿಕೊಂಡರೆ ಹನುಮಗಿರಿಯ ಕಾರ್ಯಕ್ರಮ ಏನು, ಯಾವ ರೀತಿ ಮುಂದೆ ನಡೆಯಬಹುದು ಎಂದು ತಿಳಿದುಕೊಳ್ಳಬಹುದು. ಹಾಗಾಗಿ ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಏ.8ರಂದು ಹೊರೆಕಾಣಿಕೆ ಮೆರವಣಿಗೆ

ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಮತ್ತು ಕೋಟಿ ಶ್ರೀರಾಮ ತಾರಕ ಜಪ ಯಜ್ಞದ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು ಮಾತನಾಡಿ, ಅಯೋಧ್ಯೆ ಮತ್ತು ಅಂಜನಾದ್ರಿಯಿಂದ ಹೊರಟ ರಥ ಪುತ್ತೂರಿನ ಮಣ್ಣಿಗೆ ಕಾಲಿಟ್ಟಿದೆ. ಕೇವಲ ಎರಡು ದಿನದಲ್ಲಿ ಜೋಡಿಸಿಕೊಂಡ ಕಾರ್ಯಕ್ರಮದಲ್ಲಿ ಇಷ್ಟೊಂದು ಭಕ್ತರು ಸೇರುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿರುವುದು ಸಂತೋಷ ಆಗಿದೆ. ಮುಂದೆ ಏ.8ಕ್ಕೆ ಭವ್ಯ ಹೊರೆಕಾಣಿಕೆ ಮೆರವಣಿಗೆಯೂ ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಪುಣ್ಯ ಮಣ್ಣಿನಿಂದ ಅಪರಾಹ್ನ 3 ಗಂಟೆಗೆ ಹೊರಡಲಿದೆ ಎಂದು ಹೇಳಿದರು. ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮಾಜಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಶುಭ ಹಾರೈಸಿದರು.

ಪುತ್ತೂರು ದೇವಳದಿಂದ ಆರತಿ

ಬೊಳುವಾರಿನಿಂದ ಚಾಲನೆಗೊಂಡ ಮೆರವಣಿಗೆಯು ಮುಖ್ಯ ರಸ್ತೆಯಾಗಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಾಜಗೋಪುರದ ಬಳಿ ಸಮಾವೇಶ ಗೊಂಡಿತು. ಅಲ್ಲಿ ಅರ್ಚಕರು ರಥಕ್ಕೆ ಆರತಿ ಬೆಳಗಿಸಿದರು. ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯ ಈಶ್ವರ ಬೆಡೇಕರ್ ಮತ್ತು ಮಾಜಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಪ್ರಸಾದ್ ಮುಳಿಯ ಅವರಿಗೆ ರಥದಿಂದ ಜ್ಯೋತಿ ಹಸ್ತಾಂತರಿಸಲಾಯಿತು. ಇದೇ ವೇಳೆ ಬ್ರಹ್ಮನಗರ ಮಾರಿಯಮ್ಮ ದೇವಸ್ಥಾನ ಮತ್ತು ಶ್ರೀ ಮಹಾಲಕ್ಷ್ಮೀ ದೇವಿ ಬೆಟ್ಟಕ್ಕೆ ಜ್ಯೋತಿ ಕೊಂಡೊಯ್ಯಲಾಯಿತು.

ಮೆರವಣಿಗೆಯಲ್ಲಿ ಪ್ರಮುಖ ಉಸ್ತುವಾರಿಗಳಾದ ರಾಮ ಹನುಮ ಜ್ಯೋತಿ ರಥಯಾತ್ರೆ ಸಮಿತಿ ಸಂಚಾಲಕ ಮುರಳಿಕೃಷ್ಣ ಹಸಂತಡ್ಕ, ಬ್ರಹ್ಮಕಲಶೋತ್ಸವದ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಸಿ.ನಾರಾಯಣ, ಬ್ರಹ್ಮಕಲಶೋತ್ಸವ ಪುತ್ತೂರು ನಗರ ಸಮಿತಿ ಅಧ್ಯಕ್ಷ ಲೋಕೇಶ್ ಹೆಗ್ಡೆ, ಸತೀಶ್ ನಾಯ್ಕ್ ಪರ್ಲಡ್ಕ, ಇಂದುಶೇಖರ, ದಿನೇಶ್ ಪಂಜಿಗ, ಡಾ. ಕೃಷ್ಣಪ್ರಸನ್ನ, ಪುರುಷೋತ್ತಮ ಕೋಲ್ಪೆ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮಾಜಿ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರಾಮಚಂದ್ರ ಕಾಮತ್, ಶೇಖರ್ ನಾರಾವಿ, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಮತ್ತು ಹಸಿರು ಹೊರೆಕಾಣಿಕೆ ಸಮಿತಿ ಸಂಚಾಲಕ ಶಶಿಕುಮಾರ್ ರೈ ಬಾಲ್ಯೊಟ್ಟು, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ರವಿಕಿರಣ್ ಶೆಟ್ಟಿ ಬೆದ್ರಾಡಿ, ನಾಗಪ್ಪ ಗೌಡ ಬೊಮ್ಮೆಟ್ಟಿ, ಶಿವಕುಮಾರ್ ಪಿ.ಬಿ., ಡಾ. ಸುರೇಶ್ ಪುತ್ತೂರಾಯ, ಭಾಮಿ ಅಶೋಕ್ ಶೆಣೈ, ರಾಜೇಶ್ ಬನ್ನೂರು, ಸುಂದರ ಪೂಜಾರಿ ಬಡಾವು, ಗೋಪಾಲಕೃಷ್ಣ ಹೇರಳೆ, ಜೀವಂಧರ್ ಜೈನ್, ಚನಿಲ ತಿಮ್ಮಪ್ಪ, ವಿದ್ಯಾಧರ ಜೈನ್, ಅಶೋಕ್ ಬಲ್ನಾಡು, ಮಹಿಳಾ ಸಮಿತಿ ಪ್ರಮುಖರಾದ ವಿದ್ಯಾ ಗೌರಿ, ಜಯಂತಿ ನಾಯಕ್, ಸ್ವರ್ಣಲತಾ ಹೆಗ್ಡೆ, ಗೌರಿ ಬನ್ನೂರು, ಮತ್ತಿತರರು ಉಪಸ್ಥಿತರಿದ್ದರು.

ಸಜೀಪ: ನೂತನ ಧ್ವಜಸ್ತಂಭ ನಿರ್ಮಾಣ, ದೈವಗಳ ಪುನರ್ ಪ್ರತಿಷ್ಠೆ, ಬ್ರಹ್ಮಕಲಶ



ಬಂಟ್ವಾಳ: ಸಜೀಪ ಮಾಗಣೆ ಶ್ರೀ ನಡಿಯೇಲು ದೈವಂಗಳು, ಶ್ರೀ ಉಳ್ಳಾಲ್ತಿ ಶ್ರೀ ನಾಲ್ಕೈತ್ತಾಯ ಪರಿವಾರ ದೈವಗಳ ಕ್ಷೇತ್ರ ಅಗರಿ ಮಾಡ ಆಲಾಡಿ ಖಾನ ಜೀರ್ಣೋದ್ಧಾರದ ಪ್ರಯುಕ್ತ ನೂತನ ಶಿಲಾಮಯ ಮಾಡಕ್ಕೆ ತಾಮ್ರ ಹೊದಿಕೆ, ನೂತನ ಧ್ವಜಸ್ತಂಭ ನಿರ್ಮಾಣದೊಂದಿಗೆ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವವು ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಅವರ ನೇತೃತ್ವದಲ್ಲಿ ನೆರವೇರಿತು.

ಸಾಮೂಹಿಕ ಪ್ರಾರ್ಥನೆ, ಸ್ವಸ್ತಿ ಪುಣ್ಯ ಹವಾಚನ, ಭೂ ಶುದ್ಧಿ ಹೋಮ, ಸಪ್ತಶುದ್ಧಿ, ಗೋಪೂಜೆ, ವಾಸ್ತು, ರಕ್ಷೋಘ್ನ ಹೋಮ, ಸುದರ್ಶನ ಹೋಮ, ವಾಸ್ತು ಬಲಿ, ಅಧಿವಾಸ ಪ್ರಾಯಶ್ಚಿತ್ತ ಹೋಮ, ಆಧ್ಯ ಗಣಯಾಗ ಪಂಚಗವ್ಯ ಅಷ್ಟೋತ್ತರ ಶತ ಕಲಶ ಅಭಿಷೇಕ, ಪ್ರಧಾನ ಹೋಮ ಪ್ರತಿಷ್ಠಾ ಹೋಮ, ನೂತನ ಧ್ವಜಸ್ಥಂಭ, ನೂತನತೀರ್ಥಭಾವಿ ಶುದ್ಧೀಕರಣ. ಶಿಖರ ಪ್ರತಿಷ್ಠೆ ಶ್ರೀ ದೈವಂಗಳ ಪುನರ್ ಪ್ರತಿಷ್ಠೆ ಸಾನಿಧ್ಯ ಕಲಶಾಭಿಷೇಕ, ಬ್ರಹ್ಮ ಕಲಶಾಭಿಷೇಕ,ಪರ್ವ ಸೇವೆ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಮಾಜಿ ಸಚಿವ ಬಿ. ರಮಾನಾಥ ರೈ, ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್ ಮೊದಲಾದರು ಆಗಮಿಸಿ, ಪ್ರಸಾದ ಸ್ವೀಕರಿಸಿದರು. ಪಾಲೆ ಮಂಟಮೆ ಸಂಸಾರ,ಕಾಂತಾಡಿ ಗುತ್ತು ಗಡಿಪ್ರಧಾನರಾದ ಗಣೇಶ್ ನಾಯಕ್ ಯಾನೆ ಉಗ್ಗ ಶೆಟ್ಟಿ ಬಿಜಂದಾರು ಗುತ್ತು ಶಿವರಾಮ ಭಂಡಾರಿ, ಸಜೀಪಗುತ್ತು ಗಡಿ ಪ್ರಧಾನರಾದ ಮುತ್ತಣ್ಣ ಶೆಟ್ಟಿ ಯಾನೆ ಕಾಳಶೆಟ್ಟಿ, ಮಾಡದಾರು ಗುತ್ತು ಗಡಿಪ್ರದಾನ ರಾಧನಾರಣ ಆಳ್ವ ಯಾನೆ ಶಶಿಧರ ರೈ, ನಗ್ರೀಗುತ್ತು ಜಯರಾಮ ಶೆಟ್ಟಿ, ನಗ್ರೀಗುತ್ತು ವಿವೇಕ್ ಶೆಟ್ಟಿ, ಜೀವನ್ ಆಳ್ವ, ಹರೀಶ್ ರೈ, ಎಸ್. ಶ್ರೀಕಾಂತ್ ಶೆಟ್ಟಿ, ದೇವಿಪ್ರಸಾದ್ ಪೂಂಜಾ, ಯಶೋಧರ ರೈ, ನಿತಿನ್ ಶೆಟ್ಟಿ, ಶಿವಪ್ರಸಾದ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಕುಶೆ ಶಾಲೆಯಲ್ಲಿ ಗ್ರಾಜ್ಯುಯೇಶನ್ ಡೇ



ಮಂಗಳೂರು: ಪುಟಾಣಿಗಳ ಗ್ರಾಜ್ಯುಯೇಶನ್ ಡೇಯನ್ನು ನಗರದ ಸರೋಜಿನಿ ಮಧುಸೂದನ ಕುಶೆ ಶಾಲೆಯಲ್ಲಿ ಇತ್ತೀಚೆಗೆ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಟ್ರಸ್ಟಿ ವಸಂತಿ ಹೊಸಬೆಟ್ಟುರ್ ವಹಿಸಿದ್ದರು. ಪ್ರೆಸಿಡೆನ್ಸಿ ಸ್ಕೂಲ್ ನ ಕೋ ಆರ್ಡಿನೇಟರ್ ಸುಮನ್ ಶೆಟ್ಟಿ ಮುಖ್ಯ ಆತಿಥಿಯಾಗಿ ಭಾಹವಹಿಸಿ, ಮಕ್ಕಳಿಗೆ ತಂದೆ ತಾಯಿಯೇ ಮೊದಲ ಗುರು. ಅವರನ್ನು ನಾವು ಕೂಡಿ ಹಾಕದೆ ಅವರ ಇಷ್ಟದ ವಿಷಯಗಳನ್ನು ಕಲಿಯುವ ಹಾಗೆ ಪ್ರೋತ್ಸಾಹಿಸಿ ಮಾನಸಿಕವಾಗಿ ಹಾಗು ಬೌದ್ಧಿಕವಾಗಿ ಸದೃಢರನ್ನಾಗಿ ಮಾಡಬೇಕು ಎಂದರು.

ಸರೋಜಿನಿ ಮಧುಸೂದನ ಕುಶೆ ಶಾಲೆಯ ಪ್ರಾಂಶುಪಾಲ ಬಿಂದುಸಾರ ಶೆಟ್ಟಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಎಒ ಮುರಳೀಧರ್ ರಾವ್, ಉಪ ಪ್ರಾಂಶುಪಾಲೆ ಪವಿತ್ರ, ಸಹ ಮುಖ್ಯ ಶಿಕ್ಷಕಿ ಸೌಜನ್ಯ ಉಪಸ್ಥಿತರಿದ್ದರು. ಪ್ರೀ ಸ್ಕೂಲ್ ಕೋ ಆರ್ಡಿನೇಟರ್ ವರಲಕ್ಷ್ಮಿ ಪ್ರಮಾಣವಚನ ಭೋದಿಸಿದರು. ಕಾರ್ಯಕ್ರಮವನ್ನು ರಶ್ಮಿ ಪಿ ರಾವ್ ನಿರೂಪಿಸಿದರು, ಭವಿತಾ ಮುಖ್ಯ ಅತಿಥಿಯ ಪರಿಚಯ ಮಾಡಿದರು. ಭವ್ಯಾ ಸ್ವಾಗತಿಸಿದರು, ರೇಷ್ಮಾ ಪ್ರಕಾಶ್ ವಂದಿಸಿದರು. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಸೋಮೇಶ್ವರ ವಾರ್ಷಿಕ ಜಾತ್ರಾ ಮಹೋತ್ಸವ: ಬ್ರಹ್ಮರಥೋತ್ಸವ ಸಂಪನ್ನ

ಉಳ್ಳಾಲ: ಸೋಮೇಶ್ವರ ಶ್ರೀ ಸೋಮನಾಥ ಕ್ಷೇತ್ರದಲ್ಲಿ ಮಾ.31ರಂದು ಧ್ವಜಾರೋಹಣ ದೊಂದಿಗೆ ಆರಂಭಗೊಂಡ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಕ್ಷೇತ್ರ ತಂತ್ರಿವರ್ಯ ವೇದಮೂರ್ತಿ ಬ್ರಹ್ಮಶ್ರೀ ನೀಲೇಶ್ವರ ಉಚ್ಚಿಲತ್ತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದು ಶುಕ್ರವಾರದಂದು ಸೋಮೇಶ್ವರ ಬೆಡಿ ಮತ್ತು ಸೋಮನಾಥ ದೇವರ ಬ್ರಹ್ಮರಥೋತ್ಸವ ಸಂಪನ್ನಗೊಂಡಿತು.



ಶುಕ್ರವಾರ ಬೆಳಿಗ್ಗೆ ಕ್ಷೇತ್ರದಲ್ಲಿ ಬೆಳಗಿನ ಬಲಿ, ಶ್ರೀ ಭಗವತಿಗಳ ದರ್ಶನ, ಕಲಶಾಭಿಷೇಕ, ಮಧ್ಯಾಹ್ನ ಬಲಿ, ಬ್ರಹ್ಮರಥಾರೋಹಣ, ಸಮಾರಾಧನೆ ನಡೆದು ರಾತ್ರಿ ಅದ್ದೂರಿ ಸೋಮೇಶ್ವರ ಬೆಡಿ ಪ್ರದರ್ಶನಗೊಂಡ ಬಳಿಕ ಸೋಮನಾಥ ದೇವರ ಬ್ರಹ್ಮರಥೋತ್ಸವ ನಡೆಯಿತು. ಬ್ರಹ್ಮ ರಥೋತ್ಸವದಲ್ಲಿ ಲೋಕಸಭಾ ಸದಸ್ಯರಾದ ಕ್ಯಾ. ಬ್ರಿಜೇಶ್ ಚೌಟ ಅವರು ಭಾಗವಹಿಸಿ ಬ್ರಹ್ಮರಥವನ್ನು ಎಳೆದು ಕೃತಾರ್ಥರಾದರು. ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಉಪಾಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು, ಮಂಗಳೂರು ಮಂಡಲದ ಅಧ್ಯಕ್ಷ ಜಗದೀಶ ಆಳ್ವ ಕುವೆತ್ತಬೈಲ್, ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ನಿಶಾನ್ ಪೂಜಾರಿ, ಮೂಡ ಅಧ್ಯಕ್ಷರಾದ ಸದಾಶಿವ ಉಳ್ಳಾಲ್, ಸೋಮನಾಥ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಿ.ರವೀಂದ್ರನಾಥ ರೈ, ವ್ಯವಸ್ಥಾಪನಾ ಸಮಿತಿ ಸದಸ್ಯರು ಸೇರಿದಂತೆ ಅನೇಕ ಗಣ್ಯರು ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಶರವೂರು ಶ್ರೀಕ್ಷೇತ್ರದ ವಾರ್ಷಿಕ ಜಾತ್ರಾ ಮಹೋತ್ಸವ: ಧ್ವಜಾರೋಹಣ

ಆಲಂಕಾರು: ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಏ.3ರಂದು ಧ್ವಜಾರೋಹಣದೊಂದಿಗೆ ವಿಧ್ಯುಕ್ತವಾಗಿ ಚಾಲನೆ ನೀಡಲಾಗಿದೆ.



ವೇದಮೂರ್ತಿ ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿಗಳ ನೇತೃತ್ವದಲ್ಲಿ ಏ.3ರಂದು ಬೆಳಗ್ಗೆ ನೂತನ ಬ್ರಹ್ಮ ರಥಕ್ಕೆ ಕಲಶಪೂರಣ, ಕಲಶಾಭಿಷೇಕ, ರಥಬಲಿ ನಡೆದು ಶ್ರೀ ದೇವರಿಗೆ ಬ್ರಹ್ಮರಥ ಸಮರ್ಪಿಸಲಾಯಿತು. ಬಳಿಕ ಗೊನೆ ಮುಹೂರ್ತ ನಡೆದು ಸಂಜೆ ಧ್ವಜಾರೋಹಣ ನಡೆಯಿತು. ಏ.5ರಂದು ಮಧ್ಯಾಹ್ನ ನಿತ್ಯಬಲಿ ಮಹಾಪೂಜೆ ನಡೆದು ಸಂಜೆ ಅರಸು ಉಳ್ಳಾಯ, ಮಹಿಷಂತಾಯ ಮತ್ತು ರಕ್ತೇಶ್ವರೀ ದೈವಗಳ ನರ್ತನೋತ್ಸವ ನಡೆಯಲಿದೆ. ಏ.6ರಂದು ಉಗ್ರಾಣ ಮುಹೂರ್ತ ನಡೆದು ವಸಂತ ಕಟ್ಟೆ ಪೂಜೆಯ ಬಳಿಕ ಚಾಮುಂಡಿ, ಧೂಮಾವತಿ, ಬಂಟ, ಮತ್ತು ಕೊಡಮಣಿತ್ತಾಯ ದೈವಗಳ ನರ್ತನೋತ್ಸವ ನಡೆಯಲಿದೆ. ಏ.8ಕ್ಕೆ ಸಂಜೆ ಬಲಿ ಹೊರಟು ಕಪಿಲೇಶ್ವರ ಸಿಂಗಾರಿ ಮೇಳ ಮತ್ತು ಗೊಂಬೆ ಕುಣಿತದೊಂದಿಗೆ ಶ್ರೀ ದೇವಿಯ ಆಲಂಕಾರು ಪೇಟೆ ಸವಾರಿ ಸಾರ್ವಜನಿಕ ಕಟ್ಟೆಪೂಜೆ ನಡೆಯಲಿದೆ. ಏ.10ಕ್ಕೆ ಬೆಳಿಗ್ಗೆ ಬಲಿ ಹೊರಟು ಶ್ರೀ ದೇವಿಯ ದರ್ಶನ ಬಳಿ ಬಟ್ಟಲು ಕಾಣಿಕೆ ಮಹಾಪೂಜೆ ನಡೆಯುವುದು. ಸಂಜೆ ಸವಾರಿ ಮಂಟಪ ಕಟ್ಟೆಪೂಜೆ, ಕೆರೆ ಉತ್ಸವ ವಸಂತಕಟ್ಟೆ ಪೂಜೆ ನಡೆಯುವುದು. ಏ.11ಕ್ಕೆ ಬೆಳಗ್ಗೆ ನಾಗ ಬನದಲ್ಲಿ ಆಶ್ಲೇಷ ಬಲಿ ನಡದು ಸಂಜೆ ಮಹಾರಥೋತ್ಸವ ನಡೆಯಲಿದೆ.

ಏ.12ಕ್ಕೆ ಬೆಳಗ್ಗೆ ಕವಾಟೋದ್ಘಾಟನೆ ಪ್ರಸನ್ನ ಪೂಜೆ ಶಯನ ಪ್ರಸಾದ ವಿತರಣೆ ಯಾತ್ರಾ ಹೋಮ ನಡೆದು ಶಾಂತಿಮೊಗರು ಕುಮಾರಧಾರ ನದಿಗೆ ಸಂಜೆ ಅವಭೃತ ಮೆರವಣಿಗೆ ಕಟ್ಟೆ ಪೂಜೆ ಧ್ವಜಾವರೋಹಣ ನಡೆಯಲಿದೆ. ಏ.13ಕ್ಕೆ ಬೆಳಗ್ಗೆ ಭದ್ರಕಾಳಿ ಅಮ್ಮನವರ ಗುಡಿಯಲ್ಲಿ ವಿಶೇಷ ಪೂಜೆ ಶಿರಾಡಿ, ದೈವಗಳ ನೇಮ ನಡೆಯುವುದು. ಈ ವೇಳೆ ಶ್ರೀ ಅಯ್ಯಪ್ಪ ಭಕ್ತ ವೃಂದ ಶರವೂರು ಆಲಂಕಾರು ಮತ್ತು ರಾಮಕುಂಜ ಅವರಿಂದ ಗಂಜಿ ಊಟ ಸೇವೆ ನಡೆಯಲಿದೆ ಎಂದು ದೇಳದ ಪ್ರಕಟಣೆ ತಿಳಿಸಿದೆ.

ನಾಗಮಂಡಲೋತ್ಸವ: ಮೆರವಣಿಗೆ ಮೂಲಕ ಹೊರೆಕಾಣಿಕೆ ಸಮರ್ಪಣೆ



ಉಪ್ಪಿನಂಗಡಿ: ಪುತ್ತಿಲ ಪರಿವಾರ ಸೇವಾ ಟ್ರಸ್ಟ್ (ರಿ.) ಪುತ್ತೂರು ಹಾಗೂ ನಾಗಮಂಡಲೋತ್ಸವ ಸಮಿತಿ ಉಪ್ಪಿನಂಗಡಿ ಇದರ ಆಶ್ರಯದಲ್ಲಿ ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥಕವಾಗಿ ಎ.5ರಂದು ನಡೆಯಲಿರುವ ಚತುಃಪವಿತ್ರ ನಾಗಮಂಡಲದ ಪೂರ್ವಭಾವಿಯಾಗಿ ಶನಿವಾರದಂದು ವೈಭವದ ಹೊರೆ ಕಾಣಿಕೆ ಸಮರ್ಪಣಾ ಕಾರ್ಯವು ನಡೆಯಿತು.

ಉಪ್ಪಿನಂಗಡಿಯ ಗಾಂಧೀ ಪಾರ್ಕ್ ನಿಂದ ಹೊರಟ ಹೊರೆಕಾಣಿಕೆ ಮೆರವಣಿಗೆಯು ಪೇಟೆಯ ಪ್ರಮುಖ ಬೀದಿಗಳಲ್ಲಿ ಸಾಗಿ ಶ್ರೀ ಸಹಸ್ರಲಿಂಗೇಶ್ವರ ದೇವಾಲಯದ ಬಳಿ ಸಂಪನ್ನಗೊಂಡಿತು.

ಪ್ರಮುಖರು ಭಾಗಿ

ಹೊರೆಕಾಣಿಕೆ ಮೆರವಣಿಗೆಯಲ್ಲಿ ಪ್ರಮುಖರಾದ ಅರುಣ್ ಕುಮಾರ್ ಪುತ್ತಿಲ, ಶ್ರೀ ರಾಮಭಟ್ ಪಾತಾಳ, ಚಂದಪ್ಪ ಮೂಲ್ಯ, ನಟೇಶ್ ಪೂಜಾರಿ, ವಿದ್ಯಾಧರ ಜೈನ್, ಪ್ರಶಾಂತ್ ನೆಕ್ಕಿಲಾಡಿ, ಧರ್ಣಪ್ಪ ನಾಯ್ಕ್, ನವೀನ್ ಕುಮಾರ್ ಕಲ್ಯಾಟೆ, ಯತೀಶ್ ಶೆಟ್ಟಿ, ಉಮೇಶ್ ಕೋಡಿಬೈಲ್, ಅನಿಲ್ ತೆಂಕಿಲ, ರವಿಕುಮಾರ್ ರೈ, ರಾಜು ಶೆಟ್ಟಿ ಶ್ರೀಕಾಂತ್ ಆಚಾರ್, ಪ್ರದೀಪ್, ಮನೀಶ್ ಕುಲಾಲ್, ರವಿ ವಿಟ್ಲ, ಸಚಿನ್ ಜೈನ್ ಹಳೇಯೂರು, ಪ್ರತಾಪ್ ಪೆರಿಯಡ್ಕ, ಹರಿಪ್ರಸಾದ್ ಶೆಟ್ಟಿ ಬೊಳ್ಳಾವು, ರಾಮಚಂದ್ರ ಮಣಿಯಾಣಿ, ಕಂಗ್ವೆ ವಿಶ್ವನಾಥ ಶೆಟ್ಟಿ, ಕೈಲಾರ್ ರಾಜಗೋಪಾಲ ಭಟ್, ಜಯರಾಮ ಆಚಾರ್ಯ, ರಮೇಶ್ ಭಂಡಾರಿ, ವಿಘ್ನೇಶ್ ಪೂಜಾರಿ, ಜಯಂತ್ ಪೊರೋಳಿ, ಯು ರಾಮ, ಶಿವಾನಂದ ಕಜೆ, ಮಹೇಂದ್ರ ವರ್ಮ ಪಡ್ಪು, ಜನಾರ್ಧನ ಕುಲಾಲ್, ಪ್ರದೀಪ್ ತಾಳೆಹಿತ್ಲು, ಜನಾರ್ದನ್ ನಾಯ್ಕ್, ರೂಪೇಶ್ ರೈ, ಪ್ರೇಮ್ ರಾಜ್ ಆರ್ಲಪದವು, ಪ್ರಜ್ವಲ್ ಘಾಟೆ, ಕೃಷ್ಣಪ್ರಸಾದ್ ದೇವಾಡಿಗ ಮೊದಲಾದವರು ಭಾಗವಹಿಸಿದ್ದರು.

ಪೊಳಲಿಗೆ ನ್ಯಾಯಾಧೀಶರ ಭೇಟಿ



ಬಂಟ್ವಾಳ: ಸಾವಿರ ಸೀಮೆಯ ಒಡತಿ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಜಾತ್ರಾ ಸಂಭ್ರಮ ನಡೆಯುತ್ತಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ವೇದವ್ಯಾಸ್ ಆಚಾರ್ ಶ್ರೀಶಾನಂದ ಅವರು ಶನಿವಾರ ಶ್ರೀ ಕ್ಷೇತ್ರ ಪೊಳಲಿಗೆ ಭೇಟಿ ನೀಡಿ ದೇವರ ದರುಶನ ಪಡೆದರು.

ದೇವಳದ ಅರ್ಚಕ ಅನಂತಪದ್ಮನಾಭ ಭಟ್ ಅವರು ನ್ಯಾಯಾಧೀಶರಿಗೆ ದೇವರ ಪ್ರಸಾದವನ್ನಿತ್ತು ಕ್ಷೇತ್ರದ ಐತಿಹ್ಯ ಸಹಿತಸಂಪೂರ್ಣಮಾಹಿತಿನೀಡಿದರು. ದೇವಳದ ಅರ್ಚಕ ಆದರ್ಶ ಭಟ್, ಕಾರ್ಯನಿರ್ವಹಣಾಧಿಕಾರಿ ಕೆ.ಪಿ. ಚಂದ್ರಮೋಹನ್, ಮಾಜಿ ಧಾರ್ಮಿಕ ಪರಿಷತ್ ಸದಸ್ಯ ಪೊಳಲಿ ಗಿರಿಪ್ರಕಾಶ್ ತಂತ್ರಿ ಮೊದಲಾದವರು ಇದ್ದರು. ಪೊಳಲಿಯಲ್ಲಿ ಈ ಬಾರಿ 29 ದಿನಗಳ ಜಾತ್ರಾಮಹೋತ್ಸವ ನಡೆಯಲಿದ್ದು ಶುಕ್ರವಾರ ರಾತ್ರಿ ನವಿಲು ರಥ ನಡೆದಿತ್ತು. ಸೋಮವಾರದಿಂದ ಐತಿಹಾಸಿಕ ಹಿನ್ನಲೆಯನ್ನೊಳಗೊಂಡ ಪೊಳಲಿ ಚೆಂಡು ಆರಂಭವಾಗಲಿದೆ.

ಕಡಬದಲ್ಲಿ 65ನೇ ವರ್ಷದ ಏಕಾಹ ಭಜನೋತ್ಸವ | ಧಾರ್ಮಿಕ ಸಭಾ ಕಾರ್ಯಕ್ರಮ, ನೂತನ ದೇವಸ್ಥಾನದ ಪಾಕಶಾಲೆಯ ಲೋಕಾರ್ಪಣೆ

ದೇವರ ಮೇಲಿನ ಭಯ, ಭಕ್ತಿಯಿಂದ ಸನ್ಮಾರ್ಗದ ಬದುಕು ಸಾಧ್ಯ: ವಿದ್ಯಾಪ್ರಸನ್ನತೀರ್ಥ ಶ್ರೀ

ಕಡಬ: ಕಠಿಣ ಕಟ್ಟುಪಾಡುಗಳಿಲ್ಲದ ಹಿಂದೂ ಧರ್ಮದಲ್ಲಿನ ಸ್ವಾತಂತ್ರ್ಯ ಧರ್ಮದ ಮೇಲಿನ ಶ್ರದ್ಧೆ ಕಡಿಮೆಯಾಗಲು ಕಾರಣವಾಗಬಾರದು. ಸಂಸ್ಕಾರ ಯುತ ಧಾರ್ಮಿಕ ಪ್ರಜ್ಞೆಯಿಂದ ಮನುಷ್ಯ ಜೀವನಕ್ಕೆ ಅರ್ಥ ಬರಲು ಸಾಧ್ಯ ಎಂದು ಸುಬ್ರಹ್ಮಣ್ಯ ಮಠಾಧೀಶ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ನುಡಿದರು.

ಅವರು ಕಡಬದ ಶ್ರೀ ದುರ್ಗಾಂಬಿಕಾ ಅಮ್ಮನ ವರ ದೇವಸ್ಥಾನದಲ್ಲಿ 65ನೇ ವರ್ಷದ ಏಕಾಹ ಭಜನೋತ್ಸವದ ಪ್ರಯುಕ್ತ ಶುಕ್ರವಾರ ರಾತ್ರಿ ಆಯೋಜಿಸಲಾಗಿದ್ದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.



ಸಂಸ್ಕಾರ ಎನ್ನುವ ಬೇಲಿಯೊಳಗೆ ನಾವು ಬದುಕನ್ನು ರೂಪಿಸಿಕೊಳ್ಳಬೇಕು. ದೇವರ ಮೇಲಿನ ಭಯ ಮತ್ತು ಭಕ್ತಿ ನಮ್ಮನ್ನು ಬದುಕಿನಲ್ಲಿ ತಪ್ಪು ದಾರಿ ತುಳಿಯದಂತೆ ನಿಯಂತ್ರಿಸುತ್ತದೆ. ಧರ್ಮದ ಚೌಕಟ್ಟನ್ನು ಮೀರಿದ ಬದುಕು ಎಂದಿಗೂ ಸರಿದಾರಿಯಲ್ಲಿ ಸಾಗಲು ಸಾಧ್ಯವಿಲ್ಲ, ಆದುದರಿಂದ ನಾವು ನಮ್ಮ ಮಕ್ಕಳಿಗೆ ಧಾರ್ಮಿಕ ಚಿಂತನೆಗಳ ಅರಿವನ್ನು ಮೂಡಿಸಬೇಕು. ಎಳೆವೆಯಲ್ಲಿಯೇ ಸಂಸ್ಕಾರಯುತ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ ಕೆಲಸವನ್ನು ಮಾಡಬೇಕು. ಬೆಳಗ್ಗೆ ಮತ್ತು ಸಂಜೆ ದೇವರ ಮುಂದೆ ದೇವರನಾಮಗಳನ್ನು ಮನೆಯವರೆಲ್ಲರೂ ಜತೆಯಾಗಿ ಕುಳಿತು ಹಾಡುವುದನ್ನು ರೂಢಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಕಲಿಯುಗದಲ್ಲಿ ದೇವರ ಸಾಕ್ಷಾತ್ಕಾರಕ್ಕೆ ಭಜನೆ ಅತ್ಯುತ್ತಮ ಮಾರ್ಗವಾಗಿದೆ. ದೇವರನ್ನು ಒಲಿಸಿ ಕೊಳ್ಳಲು ಯಾಗ, ತಪಸ್ಸುಗಳನ್ನೇ ಮಾಡಬೇಕೆಂದಿಲ್ಲ, ಇಂದಿನ ಕಾಲಸ್ಥಿತಿಯಲ್ಲಿ ಅದು ಸಾಧ್ಯವೂ ಇಲ್ಲ, ಶುದ್ಧ ಮನಸ್ಸಿನಿಂದ ದೇವರನ್ನು ಸ್ತುತಿಸಿದರೆ ಅದಕ್ಕಿಂತ ದೊಡ್ಡ ಭಕ್ತಿ ಬೇರೆ ಇಲ್ಲ ಎಂದ ಶ್ರೀಗಳು ಕಡಬದಲ್ಲಿ ದೇವರ ಭಜನಾ ಸಂಕೀರ್ತನೆ ವೈಭವದ ಜಾತ್ರೆಯಂತೆ ನಡೆಯುತ್ತಿರುವುದು ಸ್ವರ್ಣಾಕ್ಷರಗಳಲ್ಲಿ ದಾಖಲಿಸಬಹುದಾದ ಸಂಗತಿ. 65 ವರ್ಷಗಳಿಂದ ಏಕಾಹ ಭಜನೆಯನ್ನು ನಿರಂತರವಾಗಿ ವಿಜೃಂಭಣೆಯಿಂದ ಆಯೋಜಿಸುತ್ತಿರುವ ಸಂಘಟಕರ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಕರ್ಕೇರ, ಏಕಾಹ ಭಜನೋತ್ಸವ ಸಮಿತಿಯ ಗೌರವಾಧ್ಯಕ್ಷ, ಕಡಬ ಎಸ್‌ಐ ಜಂಬುರಾಜ್ ಮಹಾಜನ್, ಕಾರ್ಯದರ್ಶಿ ಜಯಂತ ಕುತ್ಯಾಡಿ ಸಂಕೇಶ, ಭಜನಾ ಮಂಡಳಿಯ ಕಾರ್ಯದರ್ಶಿ ಮನೋಹರ ರೈ ಬೆದ್ರಾಜೆ, ಉಪಸ್ಥಿತರಿದ್ದರು.

ಏಕಾಹ ಭಜನೋತ್ಸವ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ ಸ್ವಾಗತಿಸಿ, ಭಜನ ಮಂಡಳಿಯ ಅಧ್ಯಕ್ಷ ಸೋಮಪ್ಪ ನ್ಯಾಕ್ ವಂದಿಸಿದರು. ಪತ್ರಕರ್ತ ನಾಗರಾಜ್ ಎನ್.ಕೆ. ನಿರೂಪಿಸಿದರು.

ಪಾಕಶಾಲೆಯ ಪುನರ್ ನಿರ್ಮಿಸಿಕೊಟ್ಟ ದಾನಿಗಳಿಗೆ ಸನ್ಮಾನ

ಹಿರಿಯ ಧಾರ್ಮಿಕ ಮುಂದಾಳು, ಭಜನಾ ಮಂಡಳಿಯ ಸಕ್ರಿಯ ಪದಾಧಿಕಾರಿಯಾಗಿದ್ದ ದಿ. ಕೆ.ನಾರಾಯಣ ಭಂಡಾರಿ ಅವರ ಸ್ಮರಣಾರ್ಥ ಸುಮಾರು 7 ಲಕ್ಷ ರೂ. ವೆಚ್ಚದಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ದೇವಸ್ಥಾನದ ಸಭಾಂಗಣದ ಪಾಕಶಾಲೆಯ ಪುನರ್ ನಿರ್ಮಾಣ ಹಾಗೂ ಸುಸಜ್ಜಿತ ಕೈತೊಳೆಯುವ ವ್ಯವಸ್ಥೆಯನ್ನು ಕೊಡುಗೆಯಾಗಿ ಮಾಡಿಕೊಟ್ಟ ದಾನಿ ಮಂಗಳೂರಿನ ಉದ್ಯಮಿ ಪ್ರಸಾದ್ ಎನ್.ಕೆ. ಕಡಬ ದಂಪತಿಯನ್ನು, ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಲ್ಲಿ ಸಹಕರಿಸಿದ ಏಕಾಹ ಭಜನೋತ್ಸವ ಸಮಿತಿ ಅಧ್ಯಕ್ಷ ಕಿಶನ್‌ಕುಮಾರ್ ರೈ ಪೆರಿಯಡ್ಕ ಅವರನ್ನು ಶ್ರೀಗಳು ಗೌರವಿಸಿದರು.

ಸುತ್ತ ಮುತ್ತ

ಮೂಡುಬಿದಿರೆ: ಇಂದು ಶ್ರವಣ ತಪಾಸಣಾ ಶಿಬಿರ

ಮೂಡುಬಿದಿರೆ: ಮೂಡುಬಿದಿರೆ ಕೋಡಂಗಲ್ಲು ಸಮೀಪದ ಕೀರ್ತಿನಗರದಲ್ಲಿರುವ ರೋಟರಿ ಟೆಂಪಲ್ ಟೌನ್ ಆಡಿಟೋರಿಯಂನಲ್ಲಿ ಉಚಿತ ಕಿವಿಯ ಶ್ರವಣ ತಪಾಸಣೆ ಹಾಗೂ ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ನಡೆಯಲಿದೆ.
ವರ್ಷ ಕ್ರಿಯೇಷನ್ಸ್ ಪ್ರಸುತಿಯ ಯಶ ಕರ್ನಾಟಕ ವಾರಪತ್ರಿಕೆ ಮತ್ತು ವಿಕಾಸ ಸಮಾನ ಮನಸ್ಕ ಮಾಧ್ಯಮ ಮಿತ್ರರ ವೇದಿಕೆ ನೇತೃತ್ವದಲ್ಲಿ, ರೋಟರಿ ಕ್ಲಬ್ ಆಫ್ ಮೂಡುಬಿದಿರೆ ಟೆಂಪಲ್ ಟೌನ್ ಹಾಗೂ ಕೀರ್ತಿನಗರ ಅಭಿವೃದ್ಧಿ ಸಮಿತಿ ಸಹಕಾರದೊಂದಿಗೆ ಟೀಂ ಈಶ್ವರ ಮಲೆ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾಮಾಜಿಕ ಕಾರ್ಯಕರ್ತ ಈಶ್ವರ ಮಲ್ಪೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶ್ರವಣ ತಜ್ಞರಾದ ಡಾ.ಅಂಕಿತಾ ಕಲ್ಮಾಡಿ ಮಾಹಿತಿ ಮಾರ್ಗದರ್ಶನ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ವಿಕಾಸ ಸಮಾನ ಮನಸ್ಕ ಮಾಧ್ಯಮ ವೇದಿಕೆಯ ರಾಜ್ಯ ಉಪಾಧ್ಯಕ್ಷ ಮಂದಾರ ರಾಜೇಶ್ ಭಟ್ ವಹಿಸಲಿದ್ದಾರೆ. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ, ರೋಟರಿ ಕ್ಲಬ್ ಆಫ್ ಟೆಂಪಲ್ ಟೌನ್ ಅಧ್ಯಕ್ಷ ಹರೀಶ್ ಎಂ.ಕೆ, ಕೀರ್ತಿನಗರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಉದಯ ಕುಮಾರ್, ಯಶಕರ್ನಾಟಕ ಪತ್ರಿಕೆಯ ಸಂಪಾದಕ ಪದ್ಮನಾಭ ಗಟ್ಟಿ ಟೀಂ ಈಶ್ವರ ಮಲ್ಪೆ ಇದರ ಸಂಚಾಲಕ ಲವ ಬಂಗೇರ ಅತಿಥಿ ಗಳಾಗಿರುವರು ಎಂದು ವರ್ಷ ಕ್ರಿಯೇಷನ್ಸ್ ಭಾರತ ಇದರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರೀಶ್ ಕೆ. ಆದೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಆಸಕ್ತರು 8951804399 ಸಂಖ್ಯೆಯ ಕರೆಮಾಡಿ ನೋಂದಣಿ ಮಾಡಿಕೊಳ್ಳಬಹುದು. ಮೊದಲು ನೋಂದಾವಣೆ ಮಾಡಿಕೊಂಡ 30 ಮಂದಿಗೆ ಅವಕಾಶ. ಇದೇ ಸಂದರ್ಭ ಜೀವ ರಕ್ಷಕ ಈಶ್ವರ ಮಲ್ಪೆ ಯಶ ಕರ್ನಾಟಕ ಗೌರವ ಪುರಸ್ಕಾರ – 2026 ನೀಡಿ ಪುರಸ್ಕರಿಸಲಾಗುವುದು.

ಏ.7:ಬಯಲುಕೋಲ

ಮುಳ್ಳೇರಿಯ: ಬೆಳ್ಳೂರು ಅಡ್ವಳಬೀಡು ಶ್ರೀ ವಿಷ್ಣುಮೂರ್ತಿ ದೈವದ ಬಯಲುಕೋಲ ಮಹೋತ್ಸವವು ಏ.6 ಮತ್ತು 7ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಶ್ರದ್ಧಾಭಕ್ತಿಯಿಂದ ಜರಗಲಿದೆ. ಈ ಕಾರ್ಯಕ್ರಮದ ಗೊನೆ ಮುಹೂರ್ತ ಇತ್ತೀಚೆಗೆ ನಡೆಯಿತು. ಏ.6ರಂದು ರಾತ್ರಿ 8 ಗಂಟೆಗೆ ಕೈವೀದ್ ಸೇವೆ, 9 ಗಂಟೆಗೆ ಭಂಡಾರ ಏರುವುದು, ಏ.7ರಂದು ಬೆಳಗ್ಗೆ 8 ಗಂಟೆಗೆ ಶ್ರೀ ವಿಷ್ಣುಮೂರ್ತಿ ದೈವದ ಬಯಲುಕೋಲ ಮಹೋತ್ಸವ ನೆರವೇರಲಿದೆ.

ಶಿರ್ವ: ಕಿಂಡರ್ ಗಾರ್ಟನ್ ವಿಭಾಗದ ಪದವಿ ಪ್ರದಾನ ಸಮಾರಂಭ

ಶಿರ್ವ: ಶಿರ್ವದ ವಿದ್ಯಾವರ್ಧಕ ಆಂಗ್ಲ ಮಾಧ್ಯಮ ಶಾಲೆಯ ಕಿಂಡರ್ ಗಾರ್ಟನ್ ವಿಭಾಗದಲ್ಲಿ 2025–26ನೇ ಶೈಕ್ಷಣಿಕ ವರ್ಷದ ಶಿಕ್ಷಣವನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಶಾಲಾ ಸಭಾಂಗಣದಲ್ಲಿ ನಡೆಯಿತು.
ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಿದ ಮುಖ್ಯ ಅತಿಥಿ ಮೂಡುಬಿದಿರೆ ಆಳ್ವಾಸ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ.ಮಂಜುನಾಥ್ ಭಟ್ ಇವರು ಮಾತನಾಡಿ ಇಂತಹ ಕಾರ್ಯಕ್ರಮಗಳು ಮಕ್ಕಳಿಗೆ ಪ್ರೇರಣೆ ಮತ್ತು ಆತ್ಮ ವಿಶ್ವಾಸ ಹೆಚ್ಚಿಸುತ್ತವೆ ಎಂದರಲ್ಲದೇ ಹೆತ್ತವರು ಇಂತಹ ಸಂದರ್ಭದಲ್ಲಿ ಮಕ್ಕಳೊಂದಿಗೆ ಇದ್ದು ಪ್ರೋತ್ಸಾಹ ನೀಡಬೇಕೆಂದು ಹೇಳಿದರು.
ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಪ್ರೊ. ವೈ. ಭಾಸ್ಕರ ಶೆಟ್ಟಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭಹಾರೈಸಿದರು. ಹೆತ್ತವರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದ ಕುರಿತು ತಮ್ಮ ಸಂತಸ ಮತ್ತು ಅನಿಸಿಕೆ ವ್ಯಕ್ತಪಡಿಸಿದರು.
ಪ್ರಾಂಶುಪಾಲೆ ನೀಶಾ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಮುಖ್ಯ ಶಿಕ್ಷಕಿ ನಿಮಿತಾ ಶೆಟ್ಟಿ ಅತಿಥಿಗಳನ್ನು ಪರಿಚಯಿಸಿದರು. ವಿಭಾಗದ ಕೋ–ಆರ್ಡಿನೇಡರ್ ಸಂಧ್ಯಾರಾಣಿ ಕಾರ್ಯಕ್ರಮ ಸಂಯೋಜಿಸಿದ್ದರು. ಶಿಕ್ಷಕಿ ನಾಗರತ್ನ ಸ್ವಾಗತಿಸಿದರು, ಕವಿತಾ ಪದವಿ ಪಡೆಯುವ ವಿದ್ಯಾರ್ಥಿಗಳ ಪಟ್ಟಿಯನ್ನು ವಾಚಿಸಿದರು, ಅನ್ನಪೂರ್ಣ ಹಿರೇಗೌಡರ ವಂದಿಸಿ, ಶ್ವೇತಾ ಪಾಲನ್ ನಿರೂಪಿಸಿದರು.


ಮಹಿಳಾ ದಿನಾಚರಣೆ

ಕೋಟ: ಕೂಟ ಮಹಾಜಗತು ಸಾಲಿಗ್ರಾಮ ಅಂಗ ಸಂಸ್ಥೆ ಸಾಲಿಗ್ರಾಮ ಇದರ ಮಹಿಳಾ ವೇದಿಕೆಯ ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ವಿವಿಧ ವಿಶೇಷ ಕಾರ್ಯಕ್ರಮಗಳು ಇತ್ತೀಚೆಗೆ ಗುರುನರಸಿಂಹ ದೇವಸ್ಥಾನದ ಕೂಟ ಬಂಧು ಭವನದಲ್ಲಿ ಇತ್ತೀಚೆಗೆ ನಡೆಯಿತು. ಹಿರಿಯ ವಯಸ್ಕ ಕ್ರಿಯಾಶೀಲ 10 ಮಹಿಳೆಯರಾದ ಜಾನಕಿ ಐತಾಳ , ವಸಂತಿ ಹೊಳ್ಳ ಗುಂಡ್ಮಿ, ಯಶೋದ ಹಂದೆ, ವಿಮಲಾ ಐತಾಳ ಹಂದೊಟ್ಟು, ಯಶೋದ ಹೆಬ್ಬಾರ ಐರೋಡಿ, ಜಯಲಕ್ಷ್ಮಿ ಐತಾಳ, ವಾಗ್ದೇವಿ ಮತ್ತಿತರರಿದ್ದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ | ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಮಾಹಿತಿ

2025-26ನೇ ಸಾಲಿನಲ್ಲಿ 3.50 ಕೋಟಿ ರೂ. ಅಧಿಕ ಲಾಭ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ 34 ಶಾಖೆಗಳೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು 2025–2026ನೇ ಸಾಲಿನಲ್ಲಿ 3.50 ಕೋಟಿ ರೂ.ಗೂ ಮಿಕ್ಕಿ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ತಿಳಿಸಿದ್ದಾರೆ.



ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ತನ್ನ ಸದಸ್ಯರಿಗೆ ಉತ್ತಮ ಸೇವೆ ನೀಡುವ ಮೂಲಕ ಉನ್ನತ ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಸಂಘವು ತನ್ನ ಸ್ವಂತ ಆಡಳಿತ ಹಾಗೂ ಪ್ರಧಾನ ಕಚೇರಿಯನ್ನು ನಗರದ ಪಡೀಲ್‌ನಲ್ಲಿ ತೆರೆದು ಹವಾನಿಯಂತ್ರಿತ ಅತ್ಯಾಧುನಿಕ ಸೇವಾ ಸೌಲಭ್ಯಗಳೊಂದಿಗೆ ಕಾರ್ಯಾಚರಿಸುತ್ತಿದೆ. ಎಂದು ತಿಳಿಸಿದರು.
ಸಂಘವು ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ 8 ಬಾರಿ ಉತ್ತಮ ವಿವಿಧೋದ್ದೇಶ ಸಹಕಾರಿ ಸಂಘ 'ರಾಜ್ಯ ಪ್ರಶಸ್ತಿ'ಯನ್ನು ತನ್ನದಾಗಿಸಿಕೊಂಡಿದೆ. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಪ್ರಾರಂಭದಿಂದಲೂ ರಾಜ್ಯದಲ್ಲೇ ಅತೀ ಹೆಚ್ಚು ಇ–ಸ್ಟಾಂಪಿಂಗ್ ವಿತರಣೆ ಮಾಡುವುದರ ಮೂಲಕ ಸತತ 10 ವರ್ಷಗಳಿಂದ 'ರಾಜ್ಯ ಮತ್ತು ಜಿಲ್ಲಾ ಪ್ರಶಸ್ತಿ' ತನ್ನದಾಗಿಸಿಕೊಂಡಿದೆ. ಸಂಘವು ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿದುದರ ಪ್ರತೀಕ ವಾಗಿ ಸತತ 10 ವರ್ಷಗಳಿಂದ 'ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಪ್ರಶಸ್ತಿ'ಯನ್ನು ತನ್ನದಾಗಿಸಿಕೊಂಡಿದೆ. ಸಂಘವು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರವಾದ ಸಂಸ್ಥೆಯಾಗಿದೆ. ರಾಜ್ಯದಲ್ಲೇ ಪ್ರಥಮ ಬಾರಿಗೆ ಎನ್ನುವಂತೆ ಸಂಘವು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ ಬೆಂಗಳೂರು ಇವರಿಂದ ನಡೆಸಲ್ಪಡುವ 26 ವಾರಗಳ ಎಚ್.ಡಿ.ಸಿ.ಎಂ ದೂರ ಶಿಕ್ಷಣ ತರಬೇತಿ ತರಗತಿಯನ್ನು ಸಂಘದ ಪ್ರಧಾನ ಕಚೇರಿಯಲ್ಲಿ ವ್ಯವಸ್ಥೆಗೊಳಿಸಿದೆ. ಸಹಕಾರ ಸಂಘ ಗಳಲ್ಲಿ ಉದ್ಯೋಗ ಸಂಪಾದಿಸಿಕೊಳ್ಳಲು, ಪದೋನ್ನತಿ ಹೊಂದಲು ಈ ಶಿಕ್ಷಣ ಬಹಳ ಪ್ರಾಮುಖ್ಯವಾಗಿದೆ. ಆತ್ಮಶಕ್ತಿಯು ಈ ಕೋರ್ಸಿನ ಮಂಗಳೂರು ವಿಭಾಗದ ಕೇಂದ್ರವಾಗಿ ಗುರುತಿಸಿಕೊಂಡಿದೆ. ಇದುವರೆಗೆ ವಿವಿಧ ಸಹಕಾರಿ ಸಂಘಗಳಲ್ಲಿ ದುಡಿಯುತ್ತಿರುವ 1000 ಕ್ಕೂ ಅಧಿಕ ಸಿಬ್ಬಂದಿ ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

ಸದಸ್ಯರಿಗೆ ವಿಶೇಷ ಕೊಡುಗೆ

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ತನ್ನ ಸದಸ್ಯರಿಗೆ ವಿಶೇಷ ಕೊಡುಗೆಯಾಗಿ 1000 ದಿನಗಳ ಠೇವಣಿಗಳಿಗೆ ಶೇ. 10.50 ವರೆಗೆ ಆಕರ್ಷಕ ಬಡ್ಡಿ ಯೋಜನೆಯನ್ನು ಜಾರಿಗೊಳಿಸಿದೆ. ಜೊತೆಗೆ ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ ಗೆ ಗರಿಷ್ಠ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲ ನೀಡಲಾಗುತ್ತಿದೆ. ಮಕ್ಕಳ ಭವಿಷ್ಯಕ್ಕೆ ಆತ್ಮಶಕ್ತಿ ಭವಿಷ್ಯ ಸುರಕ್ಷಾ ಯೋಜನೆಯಲ್ಲಿ ಸದಸ್ಯರು ರೂ. 1,00,000 ವನ್ನು 18 ವರ್ಷಗಳ ಅವಧಿಗೆ ಠೇವಣಾತಿ ಮಾಡಿದಾಗ ರೂ. 5,00,000ವನ್ನು ಪಡೆಯಬಹುದು. ಈ ಯೋಜನೆಯಲ್ಲಿ ಗ್ರಾಹಕರು ತಮ್ಮ ಮಕ್ಕಳ ಭವಿಷ್ಯದ ಸುರಕ್ಷತೆಗಾಗಿ ಕನಿಷ್ಠ ರೂ. 25,000 ಹೂಡಿಕೆ ಮಾಡಬಹುದು. ಈ ಯೋಜನೆಯು ಸೀಮಿತ ಅವಧಿಯದ್ದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಘದ ಸಮೀಪದ ಶಾಖೆಗಳನ್ನು ಸಂಪರ್ಕಿಸಬಹುದು.
ಸಂಘವು ಕೇವಲ ಆರ್ಥಿಕ ಚಟುವಟಿಕೆಗಳಿಗಷ್ಟೇ ಸೀಮಿತವಾಗಿರದೆ ತನ್ನ ಕಾರ್ಯಕ್ಷೇತ್ರವನ್ನು ಸಮಾಜ ಸೇವೆಯಲ್ಲಿ ವಿಸ್ತಾರಕವಾಗಿಸಿಕೊಂಡಿದೆ. ಮುಖ್ಯವಾಗಿ ಸಾಮುದಾಯಿಕವಾಗಿ ಉಚಿತ ಆರೋಗ್ಯ ತಪಾಸಣಾ, 106ಕ್ಕೂ ಮಿಕ್ಕಿ ಉಚಿತ ವೈದ್ಯಕೀಯ ಆರೋಗ್ಯ ಶಿಬಿರ, 950ಕ್ಕೂ ಮಿಕ್ಕಿ ಕಣ್ಣಿನ ಶಸ್ತ್ರ ಚಿಕಿತ್ಸೆ, 21,000ಕ್ಕೂ ಮಿಕ್ಕಿ ಉಚಿತ ಕನ್ನಡಕ ವಿತರಣೆ, ಉಚಿತ ಔಷಧ ವಿತರಣೆ, ಉಚಿತ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ವಿತರಣೆ, ಸಂಘದ ಪಿಗ್ಮಿ ಸಂಗ್ರಾಹಕರಿಗೆ ಉಚಿತ ಆರೋಗ್ಯ ವಿಮೆ, ಸಾರ್ವಜನಿಕರ ಉಪಯೋಗಕ್ಕಾಗಿ ಬಸ್ಸು ತಂಗುದಾಣ ನಿರ್ಮಾಣ, ಮನೆ ನಿರ್ಮಾಣ, ಮನೆ ನವೀಕರಣ, ಆರ್ಥಿಕವಾಗಿ ತೀರಾ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ, ಪ್ರತಿಭಾವಂತ ಜಿಜ್ಞಾಸುಗಳಿಗೆ ವಿದ್ಯಾರ್ಥಿ ವೇತನ, ವಿಮಾ ಸೌಲಭ್ಯ, ಶಾಖೆಗಳ ವಾರ್ಷಿಕೋತ್ಸವ ಸಂದರ್ಭ ಗ್ರಾಹಕರ ಸಭೆಗಳ ಆಯೋಜಿಸಲಾಗುತ್ತಿದೆ. ಸಂಘದ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ, ವಾರ್ಷಿಕ ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗಿದೆ



2012ರಲ್ಲಿ 1200 ಸದಸ್ಯರ ಪಾಲು ಬಂಡವಾಳದೊಂದಿಗೆ ಸ್ಥಾಪನೆಯಾದ ಸಂಸ್ಥೆಯು ಇಂದು 9079 ಸದಸ್ಯರನ್ನೊಳಗೊಂಡು, ರೂ 1.80 ಕೋಟಿಗೂ ಮಿಕ್ಕಿ ಪಾಲು ಬಂಡವಾಳ ಹೊಂದಿದೆ. ರೂ. 22 ಲಕ್ಷ ಠೇವಣಿಯೊಂದಿಗೆ ಆರಂಭಗೊಂಡ ಸಂಘವು 2025-2026 ನೇ ಸಾಲಿನಲ್ಲಿ ರೂ. 305 ಕೋಟಿಗೂ ಮಿಕ್ಕಿ ಠೇವಣಾತಿ ಹೊಂದಿದೆ. ಸಂಘವು 2025-26ನೇ ಸಾಲಿನಲ್ಲಿ ರೂ. 278 ಕೋಟಿಗೂ ಮಿಕ್ಕಿ ಹೊರಬಾಕಿ ಸಾಲ ಹೊಂದಿದೆ. ಸಂಘವು ಪ್ರತಿವರ್ಷವೂ ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ 'ಎ' ಶ್ರೇಣಿ ಕಾಯ್ದುಕೊಂಡಿದೆ. ಕೇವಲ ಮೂರು ಮಂದಿ ಸಿಬ್ಬಂದಿಗಳೊಂದಿಗೆ ಆರಂಭಗೊಂಡ ಸಂಘವು ಇಂದು ಮಹಿಳಾ ಸಬಲೀಕರಣದ ಧ್ಯೇಯದೊಂದಿಗೆ ಶೇ. 95 ರಷ್ಟು ಮಹಿಳಾ ಸಿಬ್ಬಂದಿ ಗಳಿಗೆ ಉದ್ಯೋಗಾ ವಕಾಶವನ್ನು ಕಲ್ಪಿಸಿದೆ. ದಕ್ಷ ಆಡಳಿತ ಮಂಡಳಿ, ಬದ್ಧತೆಯಿಂದ ಕೂಡಿದ ಸಿಬ್ಬಂದಿ ವರ್ಗ, ನೆಚ್ಚಿನ ಸದಸ್ಯ ಬಂಧುಗಳ ಸಹಕಾರದಿಂದ ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗಿದೆ.

● ಚಿತ್ತರಂಜನ್ ಬೋಳಾರ್, ಅಧ್ಯಕ್ಷರು

ಪಿಲಿಂಗಾಲು: ಶ್ರೀ ಗಾಯತ್ರೀ ದೇವಿ ದೇವಳದಲ್ಲಿ ಪ್ರತಿಷ್ಠಾ ವರ್ಧಂತಿ ಉತ್ಸವ

ಬಂಟ್ವಾಳ: ತಾಲೂಕಿನ ಕಾಡಬೆಟ್ಟು ಗ್ರಾಮದ ಪಿಲಿಂಗಾಲು ಶ್ರೀ ಗಾಯತ್ರೀ ದೇವಿ ದೇವಸ್ಥಾನದಲ್ಲಿ 20 ನೇ ವರ್ಷದ ಪ್ರತಿಷ್ಠಾ ವರ್ಧಂತಿ ಉತ್ಸವ ಮತ್ತು 52 ನೇ ವರ್ಷದ ಭಜನಾ ಮಂಗಲೋತ್ಸವ ಕಾರ್ಯಕ್ರಮ ಸಮಾಪನಗೊಂಡಿತು.
ಶ್ರೀ ಲಕ್ಷ್ಮೀ ಸಹಿತ ದಶಭುಜ ಮಹಾಗಣಪತಿಗೆ ಗಣಯಾಗ, ಗುರು ರಾಘವೇಂದ್ರ ಸ್ವಾಮಿಗೆ ಗುರುಪೂಜೆ, ಗಾಯತ್ರಿ ದೇವಿಗೆ ಪ್ರಧಾನ ಕಲಶಾಭಿಷೇಕ ಸಹಿತ ಗಾಯತ್ರೀ ಯಾಗ ನಡೆಯಿತು. ಇದೇ ವೇಳೆ ಆಶ್ಲೇಷಾ ಬಲಿ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಭಜನೆ, ರಂಗಪೂಜೆ, ಅಣ್ಣಪ್ಪ ಪಂಜುರ್ಲಿ ಸಹಿತ ಪರಿವಾರ ದೈವಗಳಿಗೆ ಪರ್ವ, ಕಟೀಲು ಮೇಳದಿಂದ ಯಕ್ಷಗಾನ ಬಯಲಾಟ, ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು.
ದೇವಳದ ಆಡಳಿತ ಧರ್ಮದರ್ಶಿ ಕೆ.ಎಸ್. ಪಂಡಿತ್, ಉತ್ಸವ ಸಮಿತಿ ಅಧ್ಯಕ್ಷ ಟಿ.ಹರೀಂದ್ರ ಪೈನೈನಾಡು, ಮಾಜಿ ಅಧ್ಯಕ್ಷ ಯಶೋಧರ ಶೆಟ್ಟಿ ದಂಡೆ, ಗೌರವಾಧ್ಯಕ್ಷ ಎಂ.ತುಂಗಪ್ಪ ಬಂಗೇರ, ಪ್ರಧಾನ ಕಾರ್ಯದರ್ಶಿ ಮೋಹನ್ ಕೆ. ಶ್ರೀಯಾನ್ ರಾಯಿ, ಭಜನಾ ಸಮಿತಿ ಅಧ್ಯಕ್ಷ ಕೀರ್ತನ್ ಪೂಜಾರಿ, ಮಾಜಿ ಅಧ್ಯಕ್ಷ ಜಯ ಪೂಜಾರಿ ಮತ್ತಿತರರು ಉಪಸ್ಥಿತರಿದ್ದರು.
ರಾಜ್ಯ ಧಾರ್ಮಿಕ ಪರಿಷತ್ ಸದಸ್ಯ ರವಿಶಂಕರ



ಶೆಟ್ಟಿ ಬಡಾಜೆ, ಕಾರಿಂಜ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರೇಂದ್ರ ಅಮೀನ್, ಮಾಜಿ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ಪುಳಿಮಜಲು, ಕಾವಳಪಡೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಕೆ.ಪ್ರಮೋದ್ ಕುಮಾರ್ ರೈ, ಸುಮಂಗಲಾ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ನಾಗೇಶ ಕಲ್ಲಡ್ಕ, ನಿರ್ದೇಶಕ ಭುವನೇಶ್ ಮೊಗರ್ನಾಡು, ನಿವೃತ್ತ ಪಿಡಿಒ ವೇದವ ಗಾಣಿಗ, ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಎಂ.ಬೂಬ ಸಪಲ್ಯ ಮುಂಡಬೈಲು, ಪ್ರಮುಖರಾದ ಕೆ.ಬಾಬು ಸಪಲ್ಯ ಕಾಡಬೆಟ್ಟು, ಮೋಹನದಾಸ ಗಟ್ಟಿ ಕೇಶವ ಶೆಟ್ಟಿ ಕಂದಾಡಿ, ಸೀತಾರಾಮ ಆಗೋಳಿಬೆಟ್ಟು, ಸದಾನಂದ ಗೌಡ ನಾವೂರ, ಪ್ರವೀಣ ಅಂತರ, ಜಯರಾಮ ಕುಲಾಲ್ ಉರುಡಾಯಿ, ಚಿದಾನಂದ ನಾಯ್ಕ್, ಚೇತನ್ ಕುಮಾರ್ ಪಾಲ್ಗೊಂಡರು.

3 ಸರಕಾರಿ ಶಾಲೆ, ಸೇವಾಧಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕ ಕೊಡುಗೆ



ಬೈಂದೂರು: ಸಮೃದ್ಧ ಬೈಂದೂರು ಪರಿಕಲ್ಪನೆಯ 300 ಟ್ರೀಸ್ ಯೋಜನೆಯಲ್ಲಿ ಭೂಮಿ ಟ್ರಸ್ಟ್ ಬೈಂದೂರು ಇವರ ಸಹಕಾರ ದೊಂದಿಗೆ ಭೀಮಾ ಗೋಲ್ಡ್ ಇವರ ಸಿಎಸ್ ಆರ್ ನಿಧಿಯಿಂದ ಬೈಂದೂರು ಕ್ಷೇತ್ರದ ಮೂರು ಸರ್ಕಾರಿ ಶಾಲೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದವರ ಆರೈಕೆ ಕೇಂದ್ರ ಸೇವಾಧಾಮಕ್ಕೆ ನೀಡಿದ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಗುರುರಾಜ್ ಗಂಟಿಹೊಳೆ ಉದ್ಘಾಟಿಸಿದರು.
ಈ ಸಂದರ್ಭ ಮಾತನಾಡಿದ ಶಾಸಕರು, ಬೈಂದೂರಿನ ಸರ್ಕಾರಿ ಶಾಲೆಗಳು ಸಂಸ್ಥೆಗಳ ಸಿಎಸ್‌ಆರ್ ನಿಧಿಯನ್ನು ಸದುಪಯೋಗ ಪಡಿಸುವ ಪರಿಪಾಠವನ್ನು ಮೈಗೂಡಿಸಿಕೊಂಡಾಗ, ಮಾದರಿ ಶಾಲೆಗಳನ್ನಾಗಿ ನಿರ್ಮಿಸುವ ಕನಸು ನನಸಾಗಿಸಲು ಸಾಧ್ಯ. ಜೊತೆಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ಪೂರಕ ವ್ಯವಸ್ಥೆಯನ್ನು ನಿರ್ಮಿಸುವ ಹೊಣೆ ನಮ್ಮೆಲ್ಲರದಾಗಿದೆ ಎಂದರು.
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಾಡ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಅಮ್ಮನವರತೊಪ್ಲು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಂಚಿಕಾನು, ಸೇವಾಧಾಮ ಬೈಂದೂರು ಇಲ್ಲಿಗೆ ಸುಮಾರು 3 ಲಕ್ಷ ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ ನೀಡಿದ ಭೀಮ ಗೋಲ್ಡ್ ಹಾಗೂ ಭೂಮಿ ಟ್ರಸ್ಟ್‌ಗೆ ಶಾಸಕರು ಧನ್ಯವಾದ ಅರ್ಪಿಸಿದರು.
ಆಯಾ ಶಾಲೆಗಳ ಮುಖ್ಯೋಪಾಧ್ಯಾಯರು, ಅಧ್ಯಾಪಕ ವೃಂದ, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು, ಶಾಲಾ ಹಳೆ ವಿದ್ಯಾರ್ಥಿಗಳು ಹಾಗೂ ಸದಸ್ಯರು, ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರು, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎಲ್‌ಕೆಜಿ, ಯುಕೆಜಿ ತರಗತಿ ಉದ್ಘಾಟನೆ

ಈ ಸಂದರ್ಭ ಬಾಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಯನ್ನು ಉದ್ಘಾಟಿಸಲಾಯಿತು.

ಕೋಟೆಬಾಗಿಲು ಶ್ರೀ ವೀರಮಾರುತಿ ದೇವಳದಲ್ಲಿ ಲಕ್ಷ ತುಳಸಿ ಅರ್ಚನೆ



ಮೂಡುಬಿದಿರೆ: ಕೋಟೆಬಾಗಿಲು ಶ್ರೀ ವೀರಮಾರುತಿ ದೇವಸ್ಥಾನದಲ್ಲಿ ಗುರುವಾರ ಹನುಮ ಜಯಂತಿ ಪ್ರಯುಕ್ತ ಲಕ್ಷ ತುಳಸಿ ಅರ್ಚನೆ ಪೂಜೆ ನಡೆಯಿತು. ಬೆಳಿಗ್ಗೆ ವೀರಮಾರುತಿಗೆ ಸಾರ್ವಜನಿಕ ಸೀಯಾಳಾಭಿಷೇಕ, ನಂತರ ಗಣಹೋಮ, ಪವಮಾನ ಹೋಮ ಕಲಶಾಭಿಷೇಕ ಜರಗಿತು.
ಭಜನೆ ಸಂಕೀರ್ತನೆ ಬಳಿಕ ಮಧ್ಯಾಹ್ನ ಮಹಾಪೂಜೆ ನೆರವೇರಿತು. ನಂತರ ಹವ್ಯಾಸಿ ಕಲಾವಿದರ ಕೂಡುವಿಕೆಯಿಂದ 'ಸುಗ್ರೀವ ಸಖ್ಯ' ತಾಳಮದ್ದಳೆ ಪ್ರದರ್ಶನಗೊಂಡಿತು.
ಕಾರ್ಕಳ ಅಯ್ಯಪ್ಪ ಮಂದಿರದ ಗುರುಸ್ವಾಮಿ ಬಾಲಕೃಷ್ಣ ಹೆಗ್ಡೆ ನೇತೃತ್ವದಲ್ಲಿ ಬೆಂಗಳೂರು ಹೆಗ್ಗಡೆ ಸಂಘದ ಸಹಕಾರ ದೊಂದಿಗೆ ಸಂಜೆ ಕ್ಷೇತ್ರದಲ್ಲಿ ಲೋಕ ಕಲ್ಯಾಣಾರ್ಥ ಸಾರ್ವಜನಿಕ ಲಕ್ಷ ತುಳಸಿ ಅರ್ಚನೆ ಪೂಜೆ ನಡೆಯಿತು. ಬಳಿಕ ಹನುಮಂತ ದೇವರಿಗೆ ತುಳಸಿ ಸಮರ್ಪಿಸಲಾಯಿತು.
ರಾತ್ರಿ ರಂಗಪೂಜೆ, ದೀಪಾಲಂಕಾರ ನಡೆಯಿತು. ವೀರಮಾರುತಿ ದೇವಸ್ಥಾನದ ಆಡಳಿತ ಮೊಕ್ತೇಸರ ಶ್ಯಾಮ ಹೆಗ್ಡೆ ಅನಿಲ್ ಹೆಗ್ಡೆ ದ.ಕ ಜಿಲ್ಲಾ ಹೆಗ್ಗಡೆ ಸಮಾಜ ಸಂಘದ ಅಧ್ಯಕ್ಷ ಪ್ರಭಾಕರ ಹೆಗ್ಡೆ ಕಾರ್ಯದರ್ಶಿ ಶುಭರಾಜ ಹೆಗ್ಡೆ ಬೆಂಗಳೂರು ಹೆಗ್ಗಡೆ ಸಂಘದ ಅಧ್ಯಕ್ಷ ಪ್ರಕಾಶ್ ಹೆಗ್ಡೆ ಸಂಘದ ಕಟ್ಟಡ ಸಮಿತಿ ಅಧ್ಯಕ್ಷ ಯೋಗೀಶ್ ಹೆಗ್ಡೆ ಮುಂಬೈ ಹೆಗ್ಗಡೆ ಸಂಘದ ಅಧ್ಯಕ್ಷ ಮನೋಜ್ ಹೆಗ್ಡೆ ದ.ಕ.ಜಿಲ್ಲಾ ಹೆಗ್ಗಡೆ ಮಹಿಳಾ ಘಟಕದ ಅಧ್ಯಕ್ಷೆ ಶೈಲಜಾ ಹೆಗ್ಡೆ ಲತಾ ಯು. ಹೆಗ್ಡೆ ಮತ್ತಿತರರಿದ್ದರು.

ಮೂಲ್ಕಿ ಸೀಮೆಯ ಅರಮನೆಯಲ್ಲಿ ಪವಮಾನ ಯಾಗ: ಪೂರ್ವಭಾವಿ ಸಭೆ



ಮುಲ್ಕಿ: ಮಂಗಳೂರಿನ ಪ್ರಾಣ ಪ್ರತಿಷ್ಠಾನ ಸಂಸ್ಥೆಯ ವತಿಯಿಂದ ಪಡುಪಣಂಬೂರಿನ ಮುಲ್ಕಿ ಸೀಮೆಯ ಅರಮನೆಯಲ್ಲಿ ಮೇ 2ರಂದು ನಡೆಯಲಿರುವ ಪವಮಾನ ಯಾಗದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ಪಡುಪಣಂಬೂರು ಮುಲ್ಕಿ ಅರಮನೆ ಧರ್ಮ ಚಾವಡಿಯಲ್ಲಿ ನಡೆಯಿತು

ಗ್ರಾಮಸ್ಥರ ಸಹಕಾರ ಅಗತ್ಯ

ಸಭೆಯಲ್ಲಿ ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಮಾತನಾಡಿ ಮೇ 2 ರಂದು ನಡೆಯಲಿರುವ ಪವಮಾನ ಯಾಗ ಯಶಸ್ವಿಯಾಗಲು ಭಕ್ತರು ಹಾಗೂ ಗ್ರಾಮಸ್ಥರ ಸಹಕಾರ ಮುಖ್ಯವಾಗಿದೆ ಎಂದರು.
ಸಭೆಯ ಅಧ್ಯಕ್ಷತೆಯನ್ನು ಮುಲ್ಕಿ ಸೀಮೆಯ ಅರಸರಾದ ದುಗ್ಗಣ್ಣ ಸಾವಂತ ಅರಸರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೌತಮ್ ಜೈನ್ ಮುಲ್ಕಿ ಅರಮನೆ, ತುಳು ವರ್ಲ್ಡ್ ಫೌಂಡೇಶನ್ ಪ್ರಧಾನ ಕಾರ್ಯದರ್ಶಿ ಅರವಿಂದ ಬೆಲ್ಚಡ ಮತ್ತಿತರರು ಈ ಸಂದರ್ಭ ಉಪಸ್ಥಿತರಿದ್ದರು.
ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷೆ ಕಸ್ತೂರಿ ಪಂಜ, ಪಡುಪಣಂಬೂರು ಮಾಜೀ ಅಧ್ಯಕ್ಷ ವಿನೋದ್ ಸಾಲ್ಯಾನ್ ಬೆಳ್ಳಾಯರು,ಮುಲ್ಕಿ ಲಯನ್ಸ್ ಕ್ಲಬ್ ಅಧ್ಯಕ್ಷ ಹರ್ಷರಾಜ ಶೆಟ್ಟಿ, ಧನಂಜಯ ಶೆಟ್ಟಿಗಾರ್ ಸಾಗರಿಕ ಪಕ್ಷಿಕೆರೆ ಮತ್ತಿತರರು ಮಾತನಾಡಿ, ವಿವಿಧ ಸಲಹೆ ಸೂಚನೆಗಳನ್ನು ನೀಡಿದರು
ಬಳಿಕ ಸಭೆಯಲ್ಲಿ ಪವಮಾನ ಯಾಗದ ವಿವಿಧ ಸಮಿತಿಗಳನ್ನು ರಚಿಸಲು ತೀರ್ಮಾನಿಸಲಾಯಿತು.
ಪ್ರಾಣ ಪ್ರತಿಷ್ಠಾನ ಸಂಸ್ಥೆಯ ಟ್ರಸ್ಟಿ ಗಣೇಶ್ ಸ್ವಾಗತಿಸಿದರು, ಮಾರ್ಗದರ್ಶಕರಾದ ಪೃಥ್ವಿನ್ ಕಾರ್ಯಕ್ರಮ ನಿರೂಪಿಸಿದರು.

ಅಭಿವೃದ್ಧಿ ನಡುವೆ ಪ್ರಕೃತಿ ಉಳಿಸಿ ನಾಡನ್ನು ಬೆಳೆಸುವ ಕೆಲಸವಾಗಲಿ: ಕೊಡ್ಲಿಪೇಟೆ ಶ್ರೀ



ಕುಶಾಲನಗರ: ಪ್ರಕೃತಿ ಪರಿಸರಕ್ಕೆ ವಿರೋಧ ವರ್ತಿಸಿದಲ್ಲಿ ಪ್ರಾಣಿ ಸಂಕುಲದ ಅವನತಿಗೆ ಆಹ್ವಾನ ನೀಡಿದಂತಾಗುತ್ತದೆ ಎಂದು ಕೊಡ್ಲಿಪೇಟೆ ಕಿರಿಕೊಡ್ಲಿ ಮಠಾಧೀಶರಾದ ಶ್ರೀ ಸದಾಶಿವ ಸ್ವಾಮೀಜಿ ಹೇಳಿದ್ದಾರೆ.
ಅವರು ಕುಶಾಲನಗರ ಕಾವೇರಿ ಆರತಿ ಕ್ಷೇತ್ರದಲ್ಲಿ ನಮಾಮಿ ಕಾವೇರಿ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಯೋಗದೊಂದಿಗೆ ನಡೆದ 184ನೇ ಮಹಾ ಆರತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆಶೀರ್ವಚನ ನೀಡಿದರು. ನಾಗಾಲೋಟದ ಅಭಿವೃದ್ಧಿ ನಡುವೆ ಪ್ರಕೃತಿ ಉಳಿಸಿ ನಾಡನ್ನು ಬೆಳೆಸುವ ಕೆಲಸ ಆಗಬೇಕು. ಪ್ರತಿಯೊಬ್ಬರೂ ಜಲಮೂಲಗಳ ಸಂರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುವಂತಾಗಬೇಕು ಎಂದರು.
ಶ್ರೀ ಸೋಮನಾಥನಂದ ಗಿರಿ ಸ್ವಾಮೀಜಿ , ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಡಗು ಜಿಲ್ಲಾ ನಿರ್ದೇಶಕಿ ಲೀಲಾವತಿ ಮಾತನಾಡಿದರು.
ಶರಣ ಸಾಹಿತ್ಯ ಪರಿಷತ್ತು ಕೊಡಗು ಜಿಲ್ಲಾ ಅಧ್ಯಕ್ಷ ಕೆ.ಎಸ್. ಮೂರ್ತಿ ಅವರು ಯಾವುದೇ ಸಂದರ್ಭ ಜಲಮೂಲಗಳನ್ನು ಕಲುಷಿತಗೊಳಿಸದಂತೆ ಸಲಹೆ ನೀಡಿದರು.
ಅರ್ಚಕ ಕೃಷ್ಣಮೂರ್ತಿ ಭಟ್ ನದಿಗೆ ಸಾಮೂಹಿಕವಾಗಿ ಆರತಿ ಬೆಳಗಿದರು. ಕಾವೇರಿ ನದಿ ಸ್ವಚ್ಛತಾ ಆಂದೋಲನ ಸಮಿತಿ ರಾಜ್ಯ ಸಂಚಾಲಕ ಎಂ.ಎನ್. ಚಂದ್ರಮೋಹನ್, ಉದ್ಯಮಿ ಎಸ್.ಕೆ. ಸತೀಶ್, ಕಾವೇರಿ ಮಹಾ ಆರತಿ ಬಳಗ ಸಂಚಾಲಕಿ ವನಿತಾ ಚಂದ್ರಮೋಹನ್, ಮಂಡೆಪಂಡ ಬೋಸ್ ಮೊಣ್ಣಪ್ಪ ಧರಣಿ, ಸೌಮ್ಯ ಭಟ್, ಕರುಂಬಯ್ಯ, ನಾಗರಾಜ್, ಪಾರ್ವತಿ, ಜಯಲಕ್ಷ್ಮಿ ಡಾಟಿ, ಶೌರ್ಯ ತಂಡದ ಗಿರೀಶ್, ಲಲಿತಾ ಶಿವಕುಮಾರ್ ಮತ್ತಿತರರಿದ್ದರು.

ಹೇಮಾವತಿ ವಿ. ಹೆಗ್ಗಡೆ ಜನ್ಮದಿನ: ಅಶಕ್ತರಿಗೆ ಹಣ್ಣು ಹಂಪಲು ವಿತರಣೆ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿ ವೃದ್ಧಿ ಯೋಜನೆಯ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದ ಅಧ್ಯಕ್ಷರಾದ ಹೇಮಾವತಿ ವಿ. ಹೆಗ್ಗಡೆ ಅವರ ಜನ್ಮದಿನದ ಪ್ರಯುಕ್ತ ಬಂಟ್ವಾಳ ಯೋಜನಾ ಕಚೇರಿ ವ್ಯಾಪ್ತಿಯ ತಾಲೂಕಿನ ಅಶಕ್ತರಿಗೆ ಹಣ್ಣು ಹಂಪಲು ವಿತರಿಸಲಾಯಿತು.
ತಾಲೂಕಿನಲ್ಲಿ ಅತ್ಯಂತ ಅಸಹಾಯಕ ಸ್ಥಿತಿಯ ಲ್ಲಿರುವ ಯೋಜನೆಯಿಂದ ಮಾಶಾಸನ ಪಡೆಯುವ 89 ಮಂದಿಗೆ ಹಣ್ಣು ಹಂಪಲು ವಿತರಣೆ ಮಾಡಲಾಯಿತು.
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಂಟ್ವಾಳ ತಾಲೂಕಿನ ಯೋಜನಾಧಿಕಾರಿ ಜಯಾನಂದ ಪಿ., ತಾಲೂಕಿನ ಎಲ್ಲಾ ವಲಯ ಮೇಲ್ವಿಚಾರಕರು, ಕೃಷಿ ಅಧಿಕಾರಿ, ಸೇವಾ ಪ್ರತಿನಿಧಿಗಳು, ಜ್ಞಾನ ವಿಕಾಸ ಸಮನ್ವಯಾಧಿಕಾರಿ, ಒಕ್ಕೂಟಗಳ ಪದಾಧಿಕಾರಿಗಳು, ಸಂಘದ ಸದಸ್ಯರುಗಳು ಈ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಶಕ್ತರಿಗೆ ಮಾಶಾಸನ

ಬಂಟ್ವಾಳ ತಾಲೂಕಿನಲ್ಲಿ ಒಟ್ಟು 89 ಮಂದಿ ಅಶಕ್ತರನ್ನು ಗುರುತಿಸಿ ಪ್ರತಿ ತಿಂಗಳು ತಲಾ 1000 ದಂತೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಾಶಾ ಸನ ಒದಗಿಸಲಾಗುತ್ತಿದೆ. ಪೌಷ್ಟಿಕಾಂಶದ ಕೊರತೆ ಎದುರಿಸುತ್ತಿರುವ 4 ಮಂದಿಗೆ ವಾತ್ಸಲ್ಯ ಮಿಕ್ಸ್ ಪೌಷ್ಟಿಕಾಂಶ ಆಹಾರಗಳನ್ನು, 11 ಮಂದಿ ನಿರ್ಗತಿ ಕರಿಗೆ ದಿನ ನಿತ್ಯದ ಗೃಹ ಉಪಯೋಗಿ ಪರಿಕರಗಳ ಕಿಟ್ ನೀಡಲಾಗುತಿದೆ.

ಏ.18ರಿಂದ ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶ

ಕಾಸರಗೋಡು: ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶ ಏ.18ರಿಂದ 23ರ ವರೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ಪೂರ್ಣಾನುಗ್ರಹದೊಂದಿಗೆ ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ದಿವ್ಯ ಪೌರೋಹಿತ್ಯದಲ್ಲಿ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಹಸಿರುವಾಣಿ ಹೊರೆಕಾಣಿಕೆ

ಏ.18ರಂದು ಬೆಳಗ್ಗೆ 7.30ಕ್ಕೆ ಗಣಪತಿ ಹವನ, ವಿವಿಧ ವೈದಿಕ ಕಾರ್ಯಕ್ರಮಗಳು, 8.30ಕ್ಕೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಪ್ರಾರ್ಥನೆಗೈದು ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆಗೆ ಚಾಲನೆ. 9 ಗಂಟೆಗೆ ಹಸಿರುವಾಣಿ ಹೊರೆಕಾಣಿಕೆ ಶೋಭಾಯಾತ್ರೆ ಕರಂದಕ್ಕಾಡು ಶ್ರೀ ವೀರಹನುಮಾನ್ ಮಂದಿರ ಪರಿಸರದಿಂದ ವಾದ್ಯಘೋಷಗಳೊಂದಿಗೆ ಭವ್ಯ



ಮೆರವಣಿಗೆಯಲ್ಲಿ ಶ್ರೀ ಕ್ಷೇತ್ರಕ್ಕೆ ಆಗಮನ, 11.30ಕ್ಕೆ ಉಗ್ರಾಣ ಮುಹೂರ್ತ, ಸಂಜೆ 4.30ಕ್ಕೆ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರಿಗೆ ಪೂರ್ಣಕುಂಭ ಸ್ವಾಗತ, 6.15ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಶ್ರೀ ಸನ್ನಿಧಿಯ ಗರ್ಭಗುಡಿ ಬಾಗಿಲಿಗೆ ಬೆಳ್ಳಿ ಹೊದಿಕೆ ಮತ್ತು ಗರ್ಭಗುಡಿಯ ಮುಂಭಾಗಕ್ಕೆ ಹಿತ್ತಾಳೆ ಹೊದಿಕೆ ಸಮರ್ಪಣೆ, 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, ಧಾರ್ಮಿಕ ಸಭೆ, ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಂದ ಆಶೀರ್ವಚನ ನೀಡುವರು, ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಹಾಗೂ ವಿವಿಧ ವಲಯಗಳ ಗಣ್ಯರು ಉಪಸ್ಥಿತರಿರುವರು. ರಾತ್ರಿ 7.30ಕ್ಕೆ ನಾದಮಯ ಬೋಧಿಬ್ರಹ್ಮ ಆರ್ಕೆಸ್ಟ್ರಾ ಜರಗಲಿದೆ.
ಏ.19ರಂದು ಬೆಳಿಗ್ಗೆ 7.30ಕ್ಕೆ ವಿವಿಧ ವೈದಿಕ ಕಾರ್ಯಕ್ರಮಗಳು, ವಿವಿಧ ಭಜನಾ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಅಪರಾಹ್ನ 2 ಗಂಟೆಗೆ ಯಕ್ಷಗಾನ ತಾಳಮದ್ದಳೆ, ಸಂಜೆ 5 ಗಂಟೆಗೆ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂನ ಶ್ರೀ ಗುರುದೇವಾನಂದ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಸಭಾ ಕಾರ್ಯಕ್ರಮ, ಒಡಿಯೂರು ಸ್ವಾಮೀಜಿ ಅವರಿಂದ ಆಶೀರ್ವಚನ, ರಾತ್ರಿ 7.30ಕ್ಕೆ ನಾಟ್ಯೋತ್ಸವಂ ಜರಗಲಿದೆ.
ಏ.20ರಂದು ಬೆಳಿಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ವಿವಿಧ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ಕ್ಕೆ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಸಭಾ ಕಾರ್ಯಕ್ರಮ, ಕೊಂಡೆವೂರು ಸ್ವಾಮೀಜಿ ಅವರಿಂದ ಆಶೀರ್ವಚನ, ರಾತ್ರಿ 7.30ಕ್ಕೆ ನಾಗದಿಗಂಬರಿ ಮಲೆಯಾಳ ನಾಟಕ ಪ್ರದರ್ಶನಗೊಳ್ಳಲಿದೆ.
ಏ.21ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ವಿವಿಧ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ರಾತ್ರಿ 7.30ಕ್ಕೆ ನೃತ್ಯ ವೈಭವ ಜರಗಲಿದೆ.
ಏ.22ರಂದು ವಿವಿಧ ವೈದಿಕ ಕಾರ್ಯಕ್ರಮಗಳು, ವಿವಿಧ ಭಜನಾ ತಂಡಗಳಿಂದ ಭಜನೆ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5 ಗಂಟೆಗೆ ಶ್ರೀ ಮಾತಾ ಅಮೃತಾನಂದಮಯಿ ಮಠದ ಬ್ರಹ್ಮಚಾರಿ ಶ್ರೀ ವೇದ ವೇದಾಮೃತ ಚೈತನ್ಯ ಅವರಿಗೆ ಪೂರ್ಣಕುಂಭ ಸ್ವಾಗತ, 5.30ಕ್ಕೆ ಸಭಾ ಕಾರ್ಯಕ್ರಮ, ಶ್ರೀಗಳಿಂದ ಆಶೀರ್ವಚನ, ರಾತ್ರಿ 7.30ಕ್ಕೆ ಭಜನ ನಡೆಯಲಿದೆ.
ಏ.23ರಂದು ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ, 7.30ಕ್ಕೆ ವಿವಿಧ ವೈದಿಕ ಕಾರ್ಯಕ್ರಮಗಳು, 7.34ರಿಂದ 9.37ರ ಮಧ್ಯೆ ವೃಷಭ ಲಗ್ನ ಶುಭಮುಹೂರ್ತದಲ್ಲಿ ಅಷ್ಟಬಂಧ ಲೇಪನ ಮತ್ತು ಬ್ರಹ್ಮಕಲಶಾಭಿಷೇಕ, ವಿವಿಧ ತಂಡಗಳಿಂದ ಭಜನೆ, 11.30ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ, ಸಮಾರೋಪ ಸಮಾರಂಭ, ಎಡನೀರು ಶ್ರೀಗಳಿಂದ ಆಶೀರ್ವಚನ, ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ದಿವ್ಯ ಉಪಸ್ಥಿತಿ, ವಿವಿಧ ವಲಯಗಳ ಗಣ್ಯರು ಭಾಗವಹಿಸುವರು. ಸಂಜೆ 5ಕ್ಕೆ ಭರತನಾಟ್ಯ, ರಾತ್ರಿ 7 ಗಂಟೆಗೆ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

- ಏ.18ರಿಂದ 23ರ ವರೆಗೆ ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಬ್ರಹ್ಮಕಲಶದ ಅಂಗವಾಗಿ ನಡೆಯಲಿದೆ ವಿವಿಧ ಕಾರ್ಯಕ್ರಮ
- ಏ.23ರಂದು ಬೆಳಿಗ್ಗೆ 7.34ರಿಂದ 9.37ರ ಮಧ್ಯೆ ವೃಷಭ ಲಗ್ನ ಶುಭಮುಹೂರ್ತದಲ್ಲಿ ಅಷ್ಟಬಂಧ ಲೇಪನ , ಬ್ರಹ್ಮಕಲಶಾಭಿಷೇಕ

ಏ.24: ವಾರ್ಷಿಕ ಮಹೋತ್ಸವ

ವಾರ್ಷಿಕ ಮಹೋತ್ಸವದ ಅಂಗವಾಗಿ ಏ.24ರಂದು ಬೆಳಗ್ಗೆ 7.30ಕ್ಕೆ ವಿವಿಧ ವೈದಿಕ ಕಾರ್ಯಕ್ರಮ, ವಿವಿಧ ತಂಡಗಳಿಂದ ಭಜನೆ, 10 ಕ್ಕೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಹಾಪೂಜೆ, ಪ್ರಸಾದ ವಿತರಣೆ, ಸಂಜೆ 6ಕ್ಕೆ ತಾಯಂಬಕ, ರಾತ್ರಿ 7ಕ್ಕೆ ಶ್ರೀ ದೇವರ ಉತ್ಸವ ಬಲಿ, ಕಟ್ಟೆಪೂಜೆ ಜರಗಲಿದೆ.

ಸುತ್ತಮುತ್ತ

ಕಾರ್ನಾಡು ಶಾಲೆಯಲ್ಲಿ ಸ್ಕೌಟ್ ಗೈಡ್ಸ್ ಶಿಬಿರ

ಮುಲ್ಕಿ: ವಿದ್ಯಾರ್ಥಿ ಜೀವನದಲ್ಲಿ ಪ್ರಾಪಂಚಿಕ ಜ್ಞಾನಯುಕ್ತ ನಾಯಕತ್ವದ ಗುಣಗಳ ಸಹಿತ ಸ್ವಾವಲಂಭನೆಗಾಗಿ ಸ್ಕೌಟ್ಸ್ ಆಂಡ್ ಗೈಡ್ಸ್ ತರಬೇತಿ ಬಹು ಪೂರಕ ಎಂದು ಸ್ಕೌಟ್ ಮಾಸ್ಟರ್ ಹರೀಶ್ಚಂದ್ರ ಎಂ. ಹೇಳಿದರು.

ಮುಲ್ಕಿ ಕಾರ್ನಾಡು ಸಿ.ಎಸ್.ಐ ಇಂಗ್ಲಿಷ್ ಮೀಡಿಯಂ ಸ್ಕೂಲ್ ಆಶ್ರಯದಲ್ಲಿ ಭಾರತ್ ಸ್ಕೌಟ್ಸ್ ಆಂಡ್ ಗೈಡ್ಸ್ ಸಮ್ಮರ್ ಕ್ಯಾಂಪ್, ಸ್ವಚ್ಛತಾ ಕಾರ್ಯ, ಹೈಕಿಂಗ್ ಉದ್ಘಾಟನೆಯನ್ನು ಮುಲ್ಕಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಸ್ಕೌಟ್ ಮಾಸ್ಟರ್ ಹರೀಶ್ಚಂದ್ರ ಎಂ. ಅವರು ನಡೆಸಿ ಶಿಬಿರದ ಮಹತ್ವವನ್ನು ವಿವರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಕೆ.ಎಸ್. ರಾವ್ ನಗರ ಶಾಲೆಯ ಮುಖ್ಯ ಶಿಕ್ಷಕಿ ಹಾಗೂ ಗೈಡ್ ಕ್ಯಾಪ್ಟನ್ ಕಾಮೇಶ್ವರಿ ಮಾಹಿತಿ ನೀಡಿದರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು. ಬಳಿಕ ಮುಲ್ಕಿ ಚಿತ್ರಾಪು ಮತ್ತು ಕೊಳಚಿಕಂಬಳ ಮಾರ್ಗವಾಗಿ ಹೈಕಿಂಗ್ ನಡೆಸಿ, ಬಪ್ಪನಾಡು ದೇವಸ್ಥಾನದಲ್ಲಿ ಒಂದು ದಿನದ ಶಿಬಿರವನ್ನು ಸಮಾಪ್ತಿಗೊಳಿಸಿದರು. ಈ ಸಂದರ್ಭ ಶಾಲಾ ಸಂಚಾಲಕ ರಂಜನ್ ಜತ್ತನ್ನ, ಶಾಲಾ ಮುಖ್ಯ ಶಿಕ್ಷಕಿ ಶಾಂತಿ ಸುಹಾಸಿನಿ, ಗೈಡ್ ಕ್ಯಾಪ್ಟನ್ ಜಯಶ್ರೀ, ನಾರಾಯಣ ಗುರು ಶಾಲೆಯ ಗೈಡ್ ಕ್ಯಾಪ್ಟನ್ ಸಾವಿತ್ರಿ ಮತ್ತಿತರರು ಉಪಸ್ಥಿತರಿದ್ದರು. ಈ ಶಿಬಿರದಲ್ಲಿ ಮುಲ್ಕಿ ಸ್ಥಳೀಯ ಸಂಸ್ಥೆಯ ಸುಮಾರು 55 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹಜ್ ತರಬೇತಿ ಶಿಬಿರ

ಬಂಟ್ವಾಳ: ಹಜ್ ನಿರ್ವಹಣಾ ಸಮಿತಿ ಮಂಗಳೂರು, ಸಿಟಿ ಗೋಲ್ಡ್ ಪುತ್ತೂರು, ಹೆಲ್ಪ್ ಲೈನ್ ಸರ್ವೀಸ್ ಪುತ್ತೂರು ಹಾಗೂ ಗಲ್ಫ್ ಟೂರ್ಸ್ ಆಂಡ್ ಟ್ರಾವೆಲ್ಸ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಹಜ್ ತರಬೇತಿ ಶಿಬಿರವು ನೇರಳಕಟ್ಟೆ ಜನಪ್ರಿಯ ಗಾರ್ಡನ್ ನಲ್ಲಿ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿದ ಸಯ್ಯಿದ್ ಅಶ್ರಫ್ ತಂಙಳ್ ಮಾತನಾಡಿದರು. ಉಪ್ಪಿನಂಗಡಿ ಮಾಲೀಕುದ್ದೀನಾರ್ ಕೇಂದ್ರ ಜುಮಾ ಮಸೀದಿ ಮುದರ್ರಿಸ್ ಅಬ್ದುಲ್ ಸಲಾಂ ಫೈಝಿ ಮಾತನಾಡಿದರು. ಅತಿಥಿಗಳಾಗಿ ಭಾಗವಹಿಸಿದ್ದ ಕರೀಂ ಹಾಜಿ ಸಿಟಿ ಗೋಲ್ಡ್, ವಕ್ಫ್ ಕೌನ್ಸಿಲ್ ಸದಸ್ಯ ಅನೀಸ್ ಕೌಸರಿ ಮಾತನಾಡಿದರು. ಅಬ್ದುಲ್ ಹಮೀದ್ ಬಾಖವಿ ಬೈರಿಕಟ್ಟೆ, ಸುಲೈಮಾನ್ ಹಾಜಿ ಗಲ್ಫ್ ಟೂರ್, ಫಝುಲ್ ಹಾಜಿ ಹೆಲ್ಪ್ ಲೈನ್ ಪುತ್ತೂರು, ಅಬ್ದುಲ್ ಹಮೀದ್ ಕರಾವಳಿ, ಝುಬೈರ್ ದಾರಿಮಿ ಅಕ್ಕರಂಗಡಿ, ಇಬ್ರಾಹಿಂ ಕೋಣಾಜೆ, ಫಾರೂಕ್ ಕಿನ್ಯ, ಲತೀಫ್ ಹಾಜಿ ಬೋಳಿಯಾರ್, ಸಿಟಿ ಗೋಲ್ಡ್ ಮೆನೇಜರ್ ಶೌಕತ್ ಪುತ್ತೂರು, ಕೆ.ಬಿ. ಸಲೀಂ ಹಾಜಿ ಕುಕ್ಕರಬೆಟ್ಟು, ಅಹ್ಮದ್ ಹಾಜಿ ಕುಕ್ಕರಬೆಟ್ಟು, ಕೆ.ಬಿ.ಸಿರಾಜ್ ಮೊದಲಾದವರು ಉಪಸ್ಥಿತರಿದ್ದರು. ದ.ಕ.ಜಿಲ್ಲಾ ಮದ್ರಸ ಮೆನೇಜ್ಮೆಂಟ್ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ರಫೀಕ್ ಹಾಜಿ ನೇರಳಕಟ್ಟೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕೆ.ಎಂ.ಎ.ಕೊಡುಂಗಾಯಿ ಕಾರ್ಯಕ್ರಮ ನಿರೂಪಿಸಿದರು.

ಕುಂದಾಪುರದ ಹೋಲಿ ರೋಜರಿ ಚರ್ಚಿನಲ್ಲಿ ಪಾದ ತೊಳೆಯುವ ದಿನ

ಕುಂದಾಪುರ: ಯೇಸು ಇತರರಿಗೆ ಸಹಾಯ, ದಾನ, ಧರ್ಮ, ಕರುಣೆ, ಹೀಗೆ ಒಳ್ಳೆಯ ಕೆಲಸ ಮಾಡಲಿಕ್ಕೆ ನಮಗೆ ಯೇಸು ಕ್ರಿಸ್ತರು ಸಂದೇಶ ನೀಡಿದ್ದಾರೆ ಎಂದು ಕುಂದಾಪುರದ ಹೋಲಿ ರೋಜರಿ ಚರ್ಚಿನ ಧರ್ಮಗುರು ಪೌಲ್ ರೇಗೋ ಹೇಳಿದರು.

ಉಡುಪಿ ಜಿಲ್ಲೆಯ ಅತ್ಯಂತ ಹಿರಿಯ ಚರ್ಚ್ ಆದ ಕುಂದಾಪುರದ ಹೋಲಿ ರೋಜರಿ ಚರ್ಚಿನಲ್ಲಿ ಪಾದ ತೊಳೆಯುವ ದಿನ ಕಾರ್ಯಕ್ರಮದಲ್ಲಿ ಅವರು ಸಂದೇಶ ನೀಡಿದರು.

ಕೊನೆಯ ಭೋಜನದ ಹಬ್ಬದ ಧಾರ್ಮಿಕ ಸಂಸ್ಕಾರಗಳ ಮುಖ್ಯ ಯಾಜಕರಾಗಿ, ಕುಂದಾಪುರ ಚರ್ಚ್ ಪರಿಧಿಯಲ್ಲಿನ ಆರಿಸಿದ ಪ್ರತಿನಿಧಿಗಳ, ವೇದಿ ಸೇವಕರ ಮತ್ತು ಸಾಮಾನ್ಯ ಜನರ ಪಾದ ತೊಳೆಯುವ ಆಚರಣೆ ನೆರವೇರಿಸಿ, ಪರಮ ಪ್ರಸಾದದ ಆರಾಧನೆಯನ್ನು ನಡೆಸಿಕೊಟ್ಟು ಅವರು ಆಶೀರ್ವದಿಸಿದರು.

ಯೇನೆಕಲ್ಲು: ಬಚ್ಚನಾಯಕ ದೈವದ ನೇಮ

ಸುಬ್ರಹ್ಮಣ್ಯ: ಕಡಬ ತಾಲೂಕಿನ ಏನೆಕಲ್ ಗ್ರಾಮದ ಶ್ರೀ ಉಳ್ಳಾಕುಲು, ಉಳ್ಳಾಲ್ತಿ ಬಚ್ಚನಾಯಕ ದೈವಸ್ಥಾನದಲ್ಲಿ ಮಂಗಳವಾರ ಇತಿಹಾಸ ಪ್ರಸಿದ್ಧ ಹಾಗೂ ಮಹಿಮಾತ್ಮಕ ಶ್ರೀ ಬಚ್ಚನಾಯಕ ದೈವದ ನೇಮವು ಶ್ರದ್ಧಾ ಭಕ್ತಿಯಿಂದ ಜರುಗಿತು. ಸಹಸ್ರಾರು ಭಕ್ತಾಧಿಗಳು ಕಾರಣೀಕ ದೈವದ ದರುಶನ ಪಡೆದು ಪ್ರಸಾದ ಸ್ವೀಕರಿಸಿ ಕೃತಾರ್ಥರಾದರು. ಭಕ್ತಾಧಿಗಳು ದೈವದಲ್ಲಿ ಅಭೀಷ್ಟ ಪೂರೈಕೆಗಾಗಿ ಆರಿಕೆಗಳನ್ನು ಮಾಡಿದರು. ಅಭಿಷ್ಟಗಳು ಹಾಗೂ ಇಷ್ಟಾರ್ಥಗಳು ಪೂರೈಕೆಯಾದ ಸಹಸ್ರಾರು ಭಕ್ತರು ಹರಕೆಯನ್ನು ತೀರಿಸಿದರು. ಮಾರುದ್ದದ ಸಾಲಿನಲ್ಲಿ ನಿಂತು ಶ್ರೀ ದೈವದ ಪ್ರಸಾದ ಸ್ವೀಕರಿಸಿದರು. ಕೆಲವು ಭಕ್ತಾಧಿಗಳು ದೈವಕ್ಕೆ ಭಕ್ತಿ ಹರಕೆಯ ರೂಪದಲ್ಲಿ ಚಿನ್ನದ ಮೀಸೆಯನ್ನು ಅರ್ಪಿಸಿದರು. ಕೆಲವರು ಸೀರೆ, ದೀಪಗಳನ್ನು ಸಮರ್ಪಿಸಿದರು.

ಕನ್ನಡದಲ್ಲಿ ನುಡಿ

ಬಚ್ಚನಾಯಕ ದೈವವು ಭಕ್ತರಿಗೆ ಕನ್ನಡದಲ್ಲಿ ಅಭಯ ನೀಡಿತು. ಆರಿಕೆಗಳನ್ನು ಮಾಡಿದ ಭಕ್ತರಿಗೆ ಮತ್ತು ಅಭಿಷ್ಟೆಗಳನ್ನು ಈಡೇರಿದವರಿಗೆ ಕನ್ನಡದಲ್ಲಿ ಅಭಯ ವ್ಯಾಖ್ಯೆ ನೀಡಿತು. ಭಕ್ತಾಧಿಗಳಿಗೆ ಸೋಮವಾರ ರಾತ್ರಿ ಅನ್ನ ಸಂತರ್ಪಣೆ ಮತ್ತು ಮಂಗಳವಾರ ಬೆಳಗ್ಗೆ ಉಪಹಾರ ಹಾಗೂ ಮದ್ಯಾಹ್ನ ಅನ್ನ ಸಂತರ್ಪಣೆ ನಡೆಯಿತು. ಆಗಮಿಸಿದ ಭಕ್ತಾಧಿಗಳಿಗೆ ಮಜ್ಜಿಗೆ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಭಕ್ತರು ಸೇವಾರ್ಥ ಕುಡಿಯುವ ನೀರು ವ್ಯವಸ್ಥೆ ಮಾಡಿದ್ದರು.

ಕೋಟಿ ನಾಯಕ ನೇಮ

ಬಚ್ಚನಾಯಕ ದೈವದ ಬಳಿಕ ಕೋಟಿನಾಯಕ ದೈವದ ನೇಮೋತ್ಸವ ನೆರವೇರಿತು. ಭಕ್ತರು ನೇಮ ನಡಾವಳಿ ವೀಕ್ಷಿಸಿ ಪ್ರಸಾದ ಸ್ವೀಕರಿಸಿದರು.

ಗುಜ್ಜಾಡಿ ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಸುವರ್ಣ ಸಂಭ್ರಮ | ಡಾ. ಉಮೇಶ್ ಪುತ್ರನ್ ಅಭಿಮತ

ಗುರುಗಳ ತತ್ವಾದರ್ಶಗಳು ನಮಗೆಲ್ಲರಿಗೂ ಪ್ರೇರಣದಾಯಿ



ಕುಂದಾಪುರ: ಆಧುನಿಕ ಕಾಲಘಟ್ಟದಲ್ಲಿ ಪಾಶ್ಚಿಮಾತ್ಯ ವ್ಯವಸ್ಥೆಯಿಂದ ಮೂಲ ಸಂಸ್ಕೃತಿಯನ್ನು ಮರೆಯಬಾರದು. ಉತ್ತಮ ಶ್ರೇಷ್ಠತೆಯ ಪ್ರಾಚೀನ ಸಂಸ್ಕೃತಿಯನ್ನು ಎತ್ತಿಹಿಡಿಯಬೇಕು. ಈ ನಿಟ್ಟಿನಲ್ಲಿ ಭಜನೆಯಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಧರ್ಮದ ಹೆಸರಿನಲ್ಲಿ ನಡೆಯುವ ಕ್ರೌರ್ಯವನ್ನು ಮೀರಿ ನಿಲ್ಲಬೇಕು. ಶಾಲೆ ಹಾಗೂ ದೇವಸ್ಥಾನಗಳಿಂದ ಊರಿನಲ್ಲಿ ಸಾತ್ವಿಕತೆ ನೆಲೆಸುತ್ತದೆ ಎಂದು ಕುಂದಾಪುರ ಚಿನ್ಮಯಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಉಮೇಶ್ ಪುತ್ರನ್ ಹೇಳಿದರು.

ಗುಜ್ಜಾಡಿ ಗ್ರಾಮದ ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘ ಶ್ರೀ ರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರ ಇದರ 50ರ ಸಂಭ್ರಮಾಚರಣೆ 'ಸುವರ್ಣ ಸಂಭ್ರಮ' ಹಾಗೂ ಸೀತಾರಾಮಚಂದ್ರ ಕಲ್ಯಾಣೋತ್ಸವದ ಪ್ರಯುಕ್ತ ಶುಕ್ರವಾರ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಅವರು ಮಾತನಾಡಿದರು.

ನಾರಾಯಣಗುರುಗಳು ಸಮಾಜಕ್ಕೆ ಹಾಗೂ ದೇಶಕ್ಕೆ ಸೀಮಿತರಾದವರಲ್ಲ. ಅವರ ತತ್ವ ಆದರ್ಶಗಳು ನಮಗೆಲ್ಲರಿಗೂ ಮಾದರಿ. ಬ್ರಹ್ಮಶ್ರೀ ನಾರಾಯಣ ಗುರುಗಳ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು. ಸಂಘ ಸಂಸ್ಥೆಗಳನ್ನು ಪ್ರಾರಂಭಿಸಿ ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುವುದು ಬಹಳ ಕಷ್ಟದ ಕೆಲಸ. ಗುರು ಮಂದಿರ 50 ವರ್ಷದಿಂದ ಸಮಾಜಕ್ಕೆ ಬೆಳಕಾದ ಸಂಸ್ಥೆಯಿದು. ಸಮಾಜಕ್ಕೆ ಹಿತ ಚಿಂತನೆ ನೀಡುತ್ತಾ ಬಂದಿದೆ ಎಂದರು.

ಕುಂದಾಪುರ ಬಿಲ್ಲವ ಸಂಘದ ಅಧ್ಯಕ್ಷ ಅಶೋಕ್ ಪೂಜಾರಿ ಬೀಜಾಡಿ ಮಾತನಾಡಿ, ಆಧುನಿಕ ವ್ಯವಸ್ಥೆಯ ಹೊಡೆತಕ್ಕೆ ಸಿಕ್ಕು ಪುರಾತನ ಪರಂಪರೆಗಳು ನಶಿಸುತ್ತಿರುವ ಕಾಲಘಟ್ಟದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಅಗತ್ಯವಾಗಿ ಊರಿನಲ್ಲಿ ನಡೆಯಬೇಕು. ಆದರ್ಶ ಪುರುಷ, ಮರ್ಯಾದಾ ಪುರುಷ ಶ್ರೀರಾಮನ ಸೇವೆ ನಿಜಕ್ಕೂ ಪ್ರಸ್ತುತ ಅಗತ್ಯವಾಗಿದೆ. ಭಜನೆಯು ದೇವರು ಮತ್ತು ಮನುಷ್ಯನ ನಡುವೆ ಬೆಸೆಯುವ ಕೊಂಡಿಯಾಗಿದೆ. ಭಜನೆಗೆ ಎಲ್ಲರನ್ನೂ ಒಗ್ಗೂಡಿಸುವ ಶಕ್ತಿಯಿದೆ. ಸಂಸ್ಕೃತಿ-ಸಂಸ್ಕಾರವನ್ನು ಮಕ್ಕಳಿಗೆ ಎಳೆವಿನಲ್ಲಿಯೇ ಕಲಿಸಬೇಕು. ಶ್ರೀಮಂತಿಕೆ ಮಾತ್ರ ಸಾಲದು. ತಾನು ದುಡಿದ ಒಂದು ಭಾಗವನ್ನು ಊರು, ಸಮಾಜ, ತಮ್ಮೊಂದಿಗೆ ನಿಂತವರಿಗೆ ಮೀಸಲಿಡುವ ಸಮಾಜ ಮುಖಿ ಚಿಂತನೆ ಬೆಳೆಸಿಕೊಳ್ಳಬೇಕು ಎಂದರು.

ಶ್ರೀರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಅಧ್ಯಕ್ಷ ನಾರಾಯಣ ಟಿ.ಪೂಜಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರ ತಾಲೂಕು ಭಜನಾ ಒಕ್ಕೂಟದ ಅಧ್ಯಕ್ಷ ನಿತಿನ್ ವಿಠಲವಾಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಉದ್ಯಮಿ ಶಿವ ಆರ್. ಪೂಜಾರಿ, ವೀರೇಶ್ ಪೂಜಾರಿ ಹೆಮ್ಮಾಡಿ, ಸತೀಶ್ ಪೂಜಾರಿ ಮರವಂತೆ, ಗುಜ್ಜಾಡಿ ಗ್ರಾ.ಪಂ ಮಾಜಿ ಅಧ್ಯಕ್ಷ ತಮ್ಮಯ್ಯ ದೇವಾಡಿಗ, ನಾಯಕವಾಡಿ ಶ್ರೀ ಸಂಗಮೇಶ್ವರ ದೇವಸ್ಥಾನದ ಅಧ್ಯಕ್ಷ ರಘುರಾಮ ಎಚ್., ಮರವಂತೆ ಬಿಲ್ಲವ ಸಂಘದ ಅಧ್ಯಕ್ಷ ಗಣೇಶ್ ಪೂಜಾರಿ, ಪಡುಕೋಣೆ ಶ್ರೀರಾಮ ದೇವಸ್ಥಾನದ ಅಧ್ಯಕ್ಷ ರಾಮ ಪೂಜಾರಿ, ಗಂಗೊಳ್ಳಿ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಗೋಪಾಲ ಬಿಲ್ಲವ, ಗುಜ್ಜಾಡಿ ಗ್ರಾ.ಪಂ. ಪಿಡಿಒ ಶೋಭಾ ರಮೇಶ್, ದೇವಸ್ಥಾನದ ಅರ್ಚಕ ರಾಮಚಂದ್ರ ಕಾರಂತ ಇದ್ದರು. ಸುವರ್ಣ ಮಹೋತ್ಸವ ಸಮಿತಿ ಖಜಾಂಚಿ ಪ್ರಕಾಶ್ ಪೂಜಾರಿ ಸ್ವಾಗತಿಸಿ, ಸಂಘದ ಕಾರ್ಯದರ್ಶಿ ಶೇಖರ್ ಪೂಜಾರಿ, ಪ್ರಸ್ತಾವನೆಗೈದರು. ಸುಂದರ ಜಿ. ನಿರ್ವಹಿಸಿದರು. ಗ್ರಾಪಂ. ಮಾಜಿ ಸದಸ್ಯ ರಾಜು ಎನ್. ಪೂಜಾರಿ ವಂದಿಸಿದರು.

ಸಂಸ್ಕಾರಯುತ ಶಿಕ್ಷಣದಿಂದಾಗಿ ಯುವ ಸಮೂಹದ ಅಭಿವೃದ್ಧಿ: ಪಾರ್ಥಸಾರಥಿ



ಮೂಡುಬಿದಿರೆ: ಶಸ್ತ್ರ ಮತ್ತು ಶಾಸ್ತ್ರವನ್ನು ಪೂಜಿಸುವ ನಮ್ಮ ನೆಲದಲ್ಲಿ ತಾಯಂದಿರು ಮಕ್ಕಳಿಗೆ ಸಂಸ್ಕಾರವನ್ನು ಕೊಟ್ಟರೆ ಸಾಕು. ಉಳಿದೆಲ್ಲವೂ ಅದನ್ನು ಹಿಂಬಾಲಿಸುತ್ತದೆ. ಸಹಜ ಹೆರಿಗೆಯ ಬದಲಾಗಿ ಹೊಟ್ಟೆ ಸೀಳಿಕೊಂಡು ಬರುವ ಇಂದಿನ ಮಕ್ಕಳು ಶಿಕ್ಷೆ ಇಲ್ಲದ ಶಿಕ್ಷಣದಿಂದಾಗಿ ಹಾದಿ ತಪ್ಪಿದ್ದಾರೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗ್ರಾಮಾಂತರ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಪಾರ್ಥ ಸಾರಥಿ ಹೇಳಿದರು.

ಅವರು ಶನಿವಾರ ಸಂಜೆ ವಿಶ್ವ ಹಿಂದೂ ಪರಿಷತ್ ಬಜರಂಗದಳ, ಮಾತೃಶಕ್ತಿ, ದುರ್ಗಾವಾಹಿನಿ ಮೂಡುಬಿದಿರೆ ಪ್ರಖಂಡದಿಂದ ಸ್ವರಾಜ್ಯ ಮೈದಾನದ ಶ್ರೀ ಆದಿಶಕ್ತಿ ದೇವಸ್ಥಾನದ ವಠಾರದಲ್ಲಿ ಜರಗಿದ 23ನೇ ವರ್ಷದ ಸಾರ್ವಜನಿಕ ಶ್ರೀ ಶನೈಶ್ಚರ ಪೂಜೆ ಅಂಗವಾಗಿ ನಡೆದ ಧಾರ್ಮಿಕ ಸಭೆ ಯಲ್ಲಿ ಧಾರ್ಮಿಕ ಉಪನ್ಯಾಸ ನೀಡಿದರು.

ದೇವಿ ಮಹಾತ್ಮೆಯಂತಹ ಜೀವನ ಪಾಠದ ಪೌರಾಣಿಕ ಪ್ರಸಂಗದಲ್ಲೂ ನಾವಿಂದು ದೇವಿ, ದೇವತೆಗಳ ಬದಲಾಗಿ ಮಹಿಷಾಸುರನನ್ನು ವೈಭವೀಕರಿಸಿ ಮಕ್ಕಳಿಗೆ ತೋರಿಸುವ ವಾತಾವರಣವಿದೆ. ಇತಿಹಾಸವನ್ನು ಗೌರವಿಸುವ, ಸಂಸ್ಕೃತಿ ಪ್ರೀತಿಸುವ, ನಡೆ ನುಡಿಯನ್ನು ರಾಮಕೃಷ್ಣರಂತೆ ಆದರ್ಶಮಯವಾಗಿಸುವಲ್ಲಿ ಧರ್ಮ ಸಂರಕ್ಷಣೆಯಲ್ಲಿ ನಮ್ಮ ಕೊಡುಗೆ ಮರೆಯ ಬಾರದು. ಕಿರಿಯರಿಗೆ ಮಾದರಿಯಾಗಬೇಕಿದೆ ಎಂದರು.

ಬೇರುಗಳಿಗೆ ಹಾನಿಯಾದರೂ ಗಿಡ, ಮರ ಬದುಕುತ್ತದೆ. ಆದರೆ ತಾಯಿ ಬೇರಿಗೆ ಹಾನಿಯಾದರೆ ಅದು ಸಾಯುತ್ತದೆ. ಹಾಗಾಗಿ ತಾಯಿ ಬೇರಿನ ಮಹತ್ವ ಅರಿತು ಬದುಕಬೇಕಿದೆ ಎಂದರು. ಪಂಚರತ್ನ ಇಂಟರ್‌ನ್ಯಾಷನಲ್ ಆಡಳಿತ ನಿರ್ದೇಶಕ ತಿಮ್ಮಯ್ಯ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ದುರ್ಗಾವಾಹಿನಿ ಪ್ರಖಂಡ ಸಂಯೋಜಕಿ ರಂಜಿನಿ, ಅರ್ಚಕ ಶಿವಾನಂದ ಶಾಂತಿ ಇದ್ದರು. ವಿಹಿಂಪ ಕಾರ್ಯಾಧ್ಯಕ್ಷ ಕೆ. ಶ್ಯಾಮ ಹೆಗ್ಡೆ ಸ್ವಾಗತಿಸಿದರು. ವಿಹಿಂಪ ಪ್ರಧಾನ ಕಾರ್ಯದರ್ಶಿ ಸುಚೇತನ್ ಜೈನ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಪುತ್ತೂರು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ರಾಮನವಮಿ ಆಚರಣೆ



ಪುತ್ತೂರು: ಮರ್ಯಾದಾ ಪುರುಷೋತ್ತಮ ಶ್ರೀರಾಮನು ನಮಗೆ ಆದರ್ಶ ವ್ಯಕ್ತಿ. ರಾಮನಂತೆ ನಡೆಯಲು ಅವನ ಗುಣಗಳನ್ನು ಅಳವಡಿಸಿಕೊಳ್ಳಬೇಕು. ನಿರಹಂಕಾರ, ಸಮಾಧಾನ ಹಾಗೂ ಕರ್ತವ್ಯನಿಷ್ಠೆ ರಾಮನ ಮುಖ್ಯ ಗುಣಗಳು. ಯಾವ ಕೆಲಸವನ್ನಾದರೂ ಅಡೆತಡೆಗಳನಡುವೆಯೂ ಪೂರ್ಣಗೊಳಿಸುವ ಸಂಕಲ್ಪವನ್ನು ಶ್ರೀರಾಮನ ಹಾಗೆ ನಾವು ಬೆಳೆಸಿ ಕೊಳ್ಳಬೇಕು ಎಂದು ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕ ಡಾ. ಶಿಕಾರಿಪುರ ಕೃಷ್ಣಮೂರ್ತಿ ಹೇಳಿದರು.

ಅವರು ಗುರುವಾರ ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯ ಹಾಗೂ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಗಳಲ್ಲಿ ಏರ್ಪಡಿಸಲಾಗಿದ್ದ ರಾಮ ನವಮಿ ಆಚರಣೆ ಕಾರ್ಯಕ್ರಮದಲ್ಲಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ, ಶ್ರೀರಾಮನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ. ಯಾವಾಗ ರಾಮಜನ್ಮ ಭೂಮಿಯ ವಿನಾಶವಾಯಿತೋ ಆಗಿನಿಂದಲೇ ಭಾರತೀಯರ ಅಧಃಪತನ ಪ್ರಾರಂಭವಾಯಿತು. ಇದೀಗ ರಾಮ ಮಂದಿರ ನಿರ್ಮಾಣವಾದಂದಿನಿಂದ ಸ್ವರ್ಣ ಯುಗ ಪ್ರಾರಂಭವಾದಂತಾಗಿದೆ ಎಂದರು.

ಅಂಬಿಕಾ ವಸತಿಯುತ ಪದವಿ ಪೂರ್ವ ವಿದ್ಯಾಲಯದ ಉಪಪ್ರಾಚಾರ್ಯ ಪ್ರದೀಪ್ ಕೆ.ವೈ., ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ಪ್ರಾಚಾರ್ಯೆ ಮಾಲತಿ ಡಿ. ಇದ್ದರು. 9ನೇ ತರಗತಿಯ ಅನುಶ್ರೀ ಎಂ. ಪ್ರಾರ್ಥಿಸಿದರು. 10ನೇ ತರಗತಿಯ ಅನರ್ಘ್ಯಶ್ರೀ ಸ್ವಾಗತಿಸಿ, ದೈವಿಕ್ ಶೆಟ್ಟಿ ವಂದಿಸಿದರು. ಆದಿತಿ ಎನ್. ಶೆಟ್ಟಿ ನಿರ್ವಹಿಸಿದರು. ಭೌತಶಾಸ್ತ್ರ ಉಪನ್ಯಾಸಕ ಸುಬ್ರಹ್ಮಣ್ಯ ಸಹಕರಿಸಿದರು.

1 ಕೋ.ರೂ. ವೆಚ್ಚದಲ್ಲಿ ಐಕಳ ಕಂಬಳ ರಸ್ತೆಯ ಕಾಂಕ್ರೀಟೀಕರಣಕ್ಕೆ ಶಿಲಾನ್ಯಾಸ



ಕಿನ್ನಿಗೋಳಿ: ಶಾಸಕ ಉಮಾನಾಥ ಕೋಟ್ಯಾನ್ ಅವರ ಸುಮಾರು 1 ಕೋಟಿ ವೆಚ್ಚದ ಅನುದಾನದಲ್ಲಿ ಕಾಂಕ್ರೀಟೀಕರಣಗೊಳ್ಳಲಿರುವ ಐಕಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಐಕಳ ಕಂಬಳ ರಸ್ತೆಗೆ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಲಾಯಿತು.

ಏಳಿಂಜೆ ದೇವಸ್ಥಾನದ ಅರ್ಚಕ ಗಣೇಶ್ ಭಟ್ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ಸಲ್ಲಿಸಿದರು. ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ನೂತನ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಸಂಸದ ಕ್ಯಾ. ಬ್ರಿಜೇಶ್ ಚೌಟ ಹಾಗೂ ಶಾಸಕ ಉಮಾನಾಥ ಕೋಟ್ಯಾನ್ ಕನಸು ನನಸಾಗಿದ್ದು, ಅಭಿವೃದ್ಧಿ ನಿರಂತರವಾಗಿ ನಡೆಯಲಿದೆ ಎಂದರು.

ಐಕಳ ಗ್ರಾ.ಪಂ. ಮಾಜಿ ಅಧ್ಯಕ್ಷೆ ಸುಗುಣ ಪೂಜಾರ್ತಿ, ಮಾಜೀ ಸದಸ್ಯರಾದ ಅನಿತಾ ಡಿಕೋಸ್ಟ, ದಯೇಶ್ ಕೊಟ್ಯಾನ್, ಚೇತನ್ ಶೆಟ್ಟಿ ಕಿನ್ನಿಗೋಳಿ ಪ.ಪಂ ಸದಸ್ಯ ಪ್ರಣೀಕ್, ಸ್ವರಾಜ್ ಶೆಟ್ಟಿ ಮುಂಡ್ಕೂರು ದೊಡ್ಮನೆ, ಜಯಪಾಲ ಶೆಟ್ಟಿ ಐಕಳ, ಹರೀಶ್ ಶೆಟ್ಟಿ ರಮೇಶ್ ಐಕಳ, ಶ್ರೀಶ ಸರಾಫ್, ಲಕ್ಷ್ಮಣ್ ಸಾಲ್ಯಾನ್ ಪುನರೂರು, ಫ್ರಾನ್ಸಿಸ್ ಡಿಕೋಸ್ಟ, ಐಕಳ ಕಾಂತಾ ಬಾರೆ ಬೂದಾ ಬಾರೆ ಫ್ರೆಂಡ್ಸ್‌ನ ಅಧ್ಯಕ್ಷ ತಾರಾನಾಥ ಶೆಟ್ಟಿ ಐಕಳ, ಗುತ್ತಿಗೆದಾರ ಲೋಕೇಶ್ ರಾಜು ಉಪಸ್ಥಿತರಿದ್ದರು.

ಪಡೀಲ್: ಆರಿ ಎಂಬ್ರಾಯಡರಿ ತರಬೇತಿ



ಮಂಗಳೂರು: ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮಂಗಳೂರು ಹಾಗೂ ವಿಜಯ ಗ್ರಾಮೀಣ ಅಭಿವೃದ್ಧಿ ಸಮಿತಿ ಅಡ್ಯಾರ್ ಇವರ ಆಶ್ರಯದಲ್ಲಿ, ಸರ್ವಶಕ್ತಿ ಮಹಿಳಾ ಮಂಡಳಿ ಪಡೀಲ್ ಇವರ ಸಹಯೋಗದಲ್ಲಿ ನಡೆದ 'ಆರಿ ಎಂಬ್ರಾಯಡರಿ' ತರಬೇತಿ ಶಿಬಿರದ ಸಮರೋಪ ಸಮಾರಂಭ ಶ್ರೀ ಬ್ರಾಮರಿ ಸಭಾಂಗಣ ಪಡೀಲ್ ಇಲ್ಲಿ ನಡೆಯಿತು. ವಿಆರ್‌ಡಿಎಫ್‌ನ ಮುಖ್ಯ ಕಾರ್ಯ ನಿರ್ವಾಣಧಿಕಾರಿ ಜ್ಯೋತಿರಾಜ್ ಮಂಗಳೂರು ಅಧ್ಯಕ್ಷತೆ ವಹಿಸಿ, ಈ ವರ್ಷ ಸುಮಾರು 200 ಇಂತಹ ಕಾರ್ಯಕ್ರಮ ನಡೆದಿದೆ ಎಂದರು. ಸಂಪನ್ಮೂಲ ವ್ಯಕ್ತಿ ಅಂಜನಾ ಶಿಬಿರಾರ್ಥಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸರ್ವಶಕ್ತಿ ನೃತ್ಯ ಭಜನಾ ತಂಡದ ಸಂಚಾಲಕ ಸೀತಾರಾಮ್ ಗಟ್ಟಿ, ಸರ್ವಶಕ್ತಿ ಮಹಿಳಾ ಮಂಡಳಿಯ ಅಧ್ಯಕ್ಷೆ ತೇಜಾಕ್ಷಿ ಮೋಹನ್ ಉಪಸ್ಥಿತರಿದ್ದರು. ತರಬೇತಿ ಪಡೆದ ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ಶರಣ್ಯ ಜಿ. ನಿರೂಪಿಸಿದರು. ಸ್ಮಿತಾ ವಂದಿಸಿದರು.

ಶ್ರೀಕ್ಷೇತ್ರದ ವಾತ್ಸಲ್ಯದ ಮನೆ ಯೋಜನೆ ಮಾದರಿ: ಗುರುರಾಜ್ ಗಂಟಿಹೊಳೆ



ಕುಂದಾಪುರ: ಕಟ್‌ಬೇಲ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ದೇವಲ್ಕುಂದ ಗ್ರಾಮದ ಕೊಲ್ಲೂರು ಮುಖ್ಯ ರಸ್ತೆಯ ಹತ್ತಿರದಲ್ಲೇ ಇರುವ ಪುಟ್ಟಜೋಪಡಿಯಲ್ಲಿದ್ದ ರಾಜು ಹಾಗೂ ಲಕ್ಷ್ಮೀ ದಂಪತಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ನೇತೃತ್ವದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದ ಮೂಲಕ 'ವಾತ್ಸಲ್ಯ' ಮನೆ ನಿರ್ಮಾಣ ಮಾಡಿದ್ದು, ಅದರ ಹಸ್ತಾಂತರ ಕಾರ್ಯಕ್ರಮ ಸೋಮವಾರ ನಡೆಯಿತು.

ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಉದ್ಘಾಟಿಸಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಳೆದ 24 ವರ್ಷಗಳಲ್ಲಿ ಕುಂದಾಪುರದಲ್ಲಿ ಅನೇಕ ಸಮಾಜಮುಖಿ ಕಾರ್ಯಕ್ರಮ ಆಯೋಜಿಸಿದೆ. ವಾತ್ಸಲ್ಯದ ಮನೆ ಮಾದರಿ ಕಾರ್ಯಕ್ರಮ. ಸಮಾಜಮುಖಿ ಕಾರ್ಯ ಕ್ರಮಕ್ಕೆ ಧರ್ಮಸ್ಥಳವೇ ಮಾದರಿ ಎಂದರು.

ಕುಂದಾಪುರ ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷ ಉಮೇಶ್ ಶೆಟ್ಟಿ ಶಾನ್ಕಟ್ಟು, ಮನೆ ಫಲಾನುಭವಿ ರಾಜು, ಕೃಷಿ ಉತ್ಪನ್ನ ಮಾರುಕಟ್ಟೆ ಕುಂದಾಪುರದ ಮಾಜಿ ಉಪಾಧ್ಯಕ್ಷ ಶರತ್ ಕುಮಾರ್ ಶೆಟ್ಟಿ ನೀರಾಮಯ ಸೊಸೈಟಿ ವಂಡ್ಸೆ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ, ಶಶಿಧರ ಶೆಟ್ಟಿ ಮಾತನಾಡಿದರು. ಜನಜಾಗೃತಿ ವೇದಿಕೆ ಜಿಲ್ಲಾ ಸದಸ್ಯ ಸುಬ್ರಹ್ಮಣ್ಯ ಶೆಟ್ಟಿ, ಶೋಭಾ ಜಿ. ಪುತ್ರನ್, ಬಗ್ವಾಡಿ ಮಹಿಷಮರ್ದಿನಿ ದೇವಸ್ಥಾನದ ಆಡಳಿತ ಮೊಕ್ತೇಸರ ಉದಯ ಕುಮಾರ್ ಹಟ್ಟಿಯಂಗಡಿ, ಪ್ರಮುಖರಾದ ಶ್ರೀಧರ ಶೆಟ್ಟಿ, ಸಂದೇಶ್ ನಾಯಕ್, ಡಾ. ಅತುಲ್ ಕುಮಾರ್ ಶೆಟ್ಟಿ, ನಾಗಪ್ಪ ಕೊಠಾರಿ, ವಿ.ಕೆ. ಶಿವರಾಮ ಶೆಟ್ಟಿ, ವೆಂಕಟೇಶ್ ಶೆಟ್ಟಿ, ವಲಯ ಮೇಲ್ವಿಚಾರಕ ಚಂದ್ರ ಮಧುವನ, ಜ್ಞಾನವಿಕಾಸ ಸಮನ್ವಯಾಧಿಕಾರಿ ರೇಣುಕಾ, ಪ್ರಗತಿ ಬಂಧು ಸ್ವ-ಸಹಾಯ ಸಂಘದ ಅಧ್ಯಕ್ಷರು, ಸದಸ್ಯರು, ಸೇವಾಪ್ರತಿನಿಧಿಗಳು, ಊರವರು ಉಪಸ್ಥಿತರಿದ್ದರು.

ಬಪ್ಪನಾಡು ದೇವಸ್ಥಾನದ ಅಭಿವೃದ್ಧಿಗೆ ದಾನಿಗಳು ಕೈಜೋಡಿಸಿ: ಶರತ್ ಸಾಲ್ಯಾನ್



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅಭಿವೃದ್ಧಿಯತ್ತ ಸಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಗೆ ದಾನಿಗಳು ಹಾಗೂ ಭಕ್ತರು ಕೈಜೋಡಿಸಬೇಕು ಎಂದು ಬೆಂಗಳೂರಿನ ಉದ್ಯಮಿ ಶರತ್ ಸಾಲ್ಯಾನ್ ಹೇಳಿದರು.

ಅವರು ಶ್ರೀ ಕ್ಷೇತ್ರ ಬಪ್ಪನಾಡು ದೇವಸ್ಥಾನಕ್ಕೆ ವೈಯಕ್ತಿಕ ನೆಲೆಯಲ್ಲಿ ಶೀತಲೀಕರಣ ಯಂತ್ರ, 5 ಎಕ್ಸಾಸ್ಟ್ ಫ್ಯಾನ್, ಅನ್ನ ಸಂತರ್ಪಣೆಯ ಸಾಮಗ್ರಿ ಹಸ್ತಾಂತರಿಸಿ ಮಾತನಾಡಿದರು. ಅರ್ಚಕ ಪ್ರಸಾದ್ ಭಟ್ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಮಾತನಾಡಿ ದಾನಿಗಳ ಕೊಡುಗೆಯನ್ನು ಶ್ಲಾಘಿಸಿ ಅಭಿವೃದ್ಧಿ ಪಥದತ್ತ ಮುನ್ನಡೆಯೋಣ ಎಂದು ಹೇಳಿ ದೇವಸ್ಥಾನದ ವತಿಯಿಂದ ದಾನಿಗಳ ನೆಲೆಯಲ್ಲಿ ಅವರನ್ನು ಗೌರವಿಸಿದರು.

ಮುಂಬೈ ಉದ್ಯಮಿ ರವಿರಾಜ್, ಸಿದ್ದಾಂತ್ ಸಾಲ್ಯಾನ್, ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ವಾಮನ್ ಇಡ್ಯಾ, ಬಪ್ಪನಾಡು ದೇವಸ್ಥಾನದ ಅಭಿವೃದ್ಧಿ ಸಮಿತಿಯ ಸಂಜೀವ ದೇವಾಡಿಗ, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ವರ್ಮ, ವಿನೋದ್ ಸಾಲ್ಯಾನ್ ಬೆಳ್ಳಾಯರು, ಕಾರ್ತಿಕ್ ಕೋಟ್ಯಾನ್ ಮತ್ತಿತರರು ಉಪಸ್ಥಿತರಿದ್ದರು.



ಪುತ್ತೂರು ತಾಲೂಕಿನ ಕೇಪುವಿನ ದ.ಕ. ಜಿಲ್ಲಾ ಪಂಚಾಯತ್ ಹಿ. ಪ್ರಾ. ಶಾಲೆಯಲ್ಲಿ ಯುಕೆಜಿ ಮಕ್ಕಳ ಪದವಿ ಪ್ರದಾನ ಸಮಾರಂಭ ಜರುಗಿತು. ಮುಖ್ಯ ಅತಿಥಿಗಳಾಗಿದ್ದ ನಿವೇದಿತಾ ಅವರು ಪೋಷಕರಿಗೆ ಮಕ್ಕಳಲ್ಲಿ ಬೆಳೆಸಬಹುದಾದ ಮೌಲ್ಯಗಳ ಕುರಿತು ತಿಳಿಸಿದರು. ಈ ಸಂದರ್ಭ ಮಕ್ಕಳಿಗೆ ಪದವಿ ಪ್ರಮಾಣ ಪತ್ರವನ್ನು ಹಾಗೂ ಬಹುಮಾನಗಳನ್ನು ವಿತರಿಸಲಾಯಿತು. ವೆಂಕಟ ರಾಘವೇಂದ್ರ ಸ್ವಾಮಿ, ಪ್ರಕಾಶ್ ರೈ ಕಲ್ಲಂಗಳ, ಪ್ರಭಾಕರ ಶೆಟ್ಟಿ ಪಡಿಬಾಗಿಲು, ಸುರೇಶ್ ಶೆಟ್ಟಿ, ಉಮೇಶ್ ಗೌಡ ಕೊರತಿಗದ್ದೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಡಿಕೇರಿ ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿರುವ ಪ್ರತಿಮೆಗೆ ಶಾಸಕರು, ಗಣ್ಯರಿಂದ ಮಾಲಾರ್ಪಣೆ, ಗೌರವ

ಜನರಲ್ ತಿಮ್ಮಯ್ಯ ಬದುಕು, ಸಾಧನೆ ಇಂದಿನ ಪೀಳಿಗೆಗೆ ತಿಳಿಸಿ: ಶಾಸಕ ಪೊನ್ನಣ್ಣ

ಮಡಿಕೇರಿ: ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿರುವ ಜನರಲ್ ತಿಮ್ಮಯ್ಯ ಪ್ರತಿಮೆಗೆ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ, ಮಾಜಿ ಸಚಿವ ಎಂ.ಸಿ.ನಾಣಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ತಹಶೀಲ್ದಾರ್ ಶ್ರೀಧರ್, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷರ ಎಂ.ಪಿ.ಮುತ್ತಪ್ಪ, ಉಪಾಧ್ಯಕ್ಷ ದೇವಯ್ಯ, ಮಾಜಿ ಸೈನಿಕರು, ಹಲವು ಗಣ್ಯರು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭ ಪೊಲೀಸ್ ಬ್ಯಾಂಡ್‌ನೊಂದಿಗೆ ಗೌರವ ಸಲ್ಲಿಸಲಾಯಿತು.



ಕೊಡವ ಸಮಾಜದ ನಿರ್ದೇಶಕರು, ಎನ್.ಸಿ.ಸಿ. ವಿದ್ಯಾರ್ಥಿಗಳು, ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಇತರರು ಪಾಲ್ಗೊಂಡಿದ್ದರು. ಬಳಿಕ ಕೊಡವ ಸಮಾಜದ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಬದುಕು, ಸಾಧನೆ, ಅವರು ಸೇನಾ ಕ್ಷೇತ್ರದಲ್ಲಿ ಬಿಟ್ಟು ಹೋಗಿರುವ ಇತಿಹಾಸವನ್ನು ತಿಳಿದುಕೊಳ್ಳುವಂತಾಗಬೇಕು ಎಂದರು.

> ಭಾರತೀಯ ಸೇನಾ ಕ್ಷೇತ್ರದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಅಪಾರ ಕೊಡುಗೆ ನೀಡಿದ್ದು, ರಾಷ್ಟ್ರದ ಕಣ್ಮಣಿ.
> ● ಡಾ.ಮಂಥರ್ ಗೌಡ, ಶಾಸಕ

ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ದೊಡ್ಡ ಸೇನೆಯನ್ನು ಹೊಂದಿದ್ದು, ಈ ಸೇನಾ ಕ್ಷೇತ್ರದಲ್ಲಿ ಜನರಲ್ ಕೆ.ಎಸ್. ತಿಮ್ಮಯ್ಯ ಅವರು ರಾಷ್ಟ್ರ ರಕ್ಷಣೆ ಹಾಗೂ ಭಾರತೀಯ ಸೇನೆಯನ್ನು ಬಲಪಡಿಸುವಲ್ಲಿ ಶ್ರಮಿಸಿದ್ದಾರೆ ಎಂದು ಹೇಳಿದರು.

ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿದ್ದು, ಪ್ರೇರಣೆಯಾಗಿದ್ದಾರೆ. ಇವರ ಶಿಸ್ತು ಬದ್ಧ ಬದುಕನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಅವರು ಮಾತನಾಡಿ, ಜನರಲ್ ತಿಮ್ಮಯ್ಯ ಅವರ ಸೇನಾ ಕ್ಷೇತ್ರದಲ್ಲಿನ ಸಾಧನೆ, ಕೊಡುಗೆ ಬಗ್ಗೆ ಗುಣಗಾನ ಮಾಡಿದರು. ಮಾಜಿ ಸಚಿವ ಎಂ.ಸಿ.ನಾಣಯ್ಯ, ಮಾಜಿ ಎಂಎಲ್ಸಿ ವೀಣಾ ಅಚ್ಚಯ್ಯ, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಎಂ.ಪಿ. ಮುತ್ತಪ್ಪ, ಉಪಾಧ್ಯಕ್ಷ ಕೆ.ಎ.ದೇವಯ್ಯ, ರಾಣಿ ಮಾಚಯ್ಯ, ಬೊಪ್ಪಂಡ ಸರಳಾ ಕರುಂಬಯ್ಯ, ಲೆ.ಕ. ಎಂ. ಕಾವೇರಪ್ಪ ಇತರರು ಇದ್ದರು.

ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಸಮಗ್ರ ಅವಲೋಕನಾ ಸಭೆ

268 ಮತಗಟ್ಟೆಗಳಲ್ಲಿ ಭದ್ರತೆಯನ್ನು ಬಲಪಡಿಸಲು ನಿರ್ದೇಶನ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಲು ಮತ್ತು ಅವಲೋಕಿಸಲು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಸಭೆ ನಡೆಯಿತು.

ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಅವರು ಜಿಲ್ಲೆಯ ಎಲ್ಲಾ 268 ನಿರ್ಣಾಯಕ ಮತಗಟ್ಟೆಗಳಲ್ಲಿ ಭದ್ರತೆ ಬಲಪಡಿಸಲು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ನಿಯೋಜನ ಕುರಿತು ಮಾತನಾಡಿದರು. ಅಂಚೆ ಮತಗಳು ಮತ್ತು ಮನೆ ಮತಗಳನ್ನು ಇರಿಸಲಾಗಿರುವ ಸ್ಟ್ರಾಂಗ್ ರೂಮ್‌ಗಳಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗುವುದು. ಚುನಾವಣಾ ಪ್ರಚಾರದ ದಿನದಂದು ಕಾನೂನು ಮತ್ತು ಸುವ್ಯವಸ್ಥೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥರು ನಿರ್ದೇಶನ ನೀಡಿದರು.

ಸಾಮಾನ್ಯ ವೀಕ್ಷಕರಾದ ವಿಜಯ್ ಬಾಲಕೃಷ್ಣ



ವಾಘ್ಮಾರೆ, ಜ್ಞಾನೇಶ್ವರ್ ಕೊಂಡಿಬಾಹು ಕಿಲಾರಿ, ಪೊಲೀಸ್ ವೀಕ್ಷಕ ಅಶುತೋಷ್ ಕುಮಾರ್ ಮತ್ತು ಬಿಎಸ್‌ಎಫ್, ಸಿಐಎಸ್‌ಎಫ್, ತಮಿಳುನಾಡು ವಿಶೇಷ ಪೊಲೀಸ್, ಮಹಾರಾಷ್ಟ್ರ ವಿಶೇಷ ಪೊಲೀಸ್ ಮತ್ತು ಎಸ್‌ಎಸ್‌ಬಿಯಂತಹ ವಿವಿಧ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಸಭೆ ಜರಗಿತು. ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು ಸಭೆಯಲ್ಲಿ ಭಾಗವಹಿಸಿದ್ದವು.

ಮತಗಟ್ಟೆ ಅಧಿಕಾರಿಗಳ ತರಬೇತಿ ಸಮಾಪ್ತಿ

ವಿಧಾನಸಭಾ ಚುನಾವಣೆ ಸುಗಮವಾಗಿ ಮತ್ತು ದೋಷರಹಿತ ನಡೆಸುವುದನ್ನು ಖಚಿತಪಡಿಸಿಕೊಳ್ಳಲು ಕಾಸರಗೋಡು ಜಿಲ್ಲೆಯಲ್ಲಿ ಚುನಾವಣಾ ಅಧಿಕಾರಿಗಳಿಗೆ ನಡೆಸಲಾದ ತರಬೇತಿ ಕಾರ್ಯಕ್ರಮ ಪೂರ್ಣಗೊಂಡಿವೆ.

ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳಿಗೆ ವಿಶೇಷ ತರಬೇತಿ ನೀಡಲಾಯಿತು. ಇದರಲ್ಲಿ ಪ್ರಿಸೈಡಿಂಗ್ ಆಫೀಸರ್‌ಗಳು, ಪ್ರಥಮ ಮತಗಟ್ಟೆ ಅಧಿಕಾರಿಗಳು, ಸೆಕ್ಟರ್ ಅಧಿಕಾರಿಗಳು, ಖರ್ಚು ಮೇಲ್ವಿಚಾರಣಾ ತಂಡ, ಪೊಲೀಸ್ ಅಧಿಕಾರಿಗಳು, ವಿಡಿಯೋಗ್ರಾಫರ್‌ಗಳು, ನೋಡಲ್ ಅಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು, ಬೂತ್ ಮಟ್ಟದ ಅಧಿಕಾರಿಗಳು, ಮೈಕ್ರೋ ವೀಕ್ಷಕರು, ಮತ ಎಣಿಕೆ ಅಧಿಕಾರಿಗಳು ಒಳಗೊಂಡಿದ್ದಾರೆ.

ಮತಗಟ್ಟೆ ಅಧಿಕಾರಿಗಳಿಗೆ ತರಬೇತಿಯನ್ನು ಮೂರು ಹಂತಗಳಲ್ಲಿ ಆಯೋಜಿಸಲಾಗಿತ್ತು. ಮೊದಲ ಹಂತ ದಲ್ಲಿ ಜಿಲ್ಲೆಯ ಐದು ವಿಧಾನಸಭಾ

> **ಚುನಾವಣೆಯ ಪಾರದರ್ಶಕತೆಗೆ ತರಬೇತಿ**
>
> **ಈ ತರಬೇತಿ ಕಾರ್ಯಕ್ರಮಗಳು ಪ್ರತಿಯೊಬ್ಬ ಅಧಿಕಾರಿ ಕರ್ತವ್ಯಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಮತದಾನದ ದಿನದಂದು ಕಾರ್ಯವಿಧಾನಗಳನ್ನು ಹೆಚ್ಚು ಪಾರದರ್ಶಕವಾಗಿಸಲು ಸಹಾಯಕವಾಗುತ್ತವೆ. ಈ ನಿಟ್ಟಿನಲ್ಲಿ ಸಮರ್ಪಕವಾದ ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ.**
>
> ● **ಕೆ.ಬಿ.ರಾಮು , ತರಬೇತಿ ವಿಭಾಗದ ನೋಡಲ್ ಅಧಿಕಾರಿ,**

ಕ್ಷೇತ್ರಗಳ 3,250 ಮಂದಿ ಮತ್ತು 2ನೇ ಹಂತದಲ್ಲಿ 5,550 ಮಂದಿ ತರಬೇತಿ ಪೂರ್ಣಗೊಳಿಸಿದರು. ಮಂಜೇಶ್ವರ , ಕಾಸರಗೋಡು ಕ್ಷೇತ್ರಗಳ ತರಬೇತಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಜರಗಿತು. ಉದುಮ ಕ್ಷೇತ್ರದ ತರಬೇತಿಯು ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ ಮತ್ತು ಕಾಞಂಗಾಡು ಕ್ಷೇತ್ರದ ತರಬೇತಿಯು ಕಾಞಂಗಾಡು ಎಸ್‌ಎನ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಹಾಗೂ ತೃಕ್ಕರೀಪ್ಪುರ ಕ್ಷೇತ್ರದ ತರಬೇತಿಯು ತೃಕ್ಕರೀಪ್ಪುರ ಇ.ಕೆ.ನಾಯನಾರ್ ಸ್ಮಾರಕ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆಯಿತು.

ಈ ಮಧ್ಯೆ ಎರಡನೇ ಹಂತದಲ್ಲಿ ಗೈರು ಹಾಜರಾದ ಅಧಿಕಾರಿಗಳು, ಇತರ ಮತಗಟ್ಟೆ ಅಧಿಕಾರಿಗಳು, ಏ.6ರಂದು ನಿಯೋಜಿಸಲಾದ ಹೆಚ್ಚುವರಿ ಮತದಾರರ ಸೌಲಭ್ಯ ಕೇಂದ್ರಗಳ ಅಧಿಕಾರಿಗಳಿಗೆ ಏ.8ರಂದು ಕಲೆಕ್ಟರೇಟ್‌ನಲ್ಲಿ ತರಬೇತಿ ನಡೆಯಲಿದೆ ಎಂದರು. ವಿತರಣಾ ಸ್ವಾಗತ ಕೇಂದ್ರಕ್ಕೆ ನಿಯೋಜಿಸಲಾದ ಅಧಿಕಾರಿಗಳಿಗೆ ಏ.7ರಂದು ಆಯಾ ವಿತರಣಾ ಕೇಂದ್ರದಲ್ಲಿ ತರಬೇತಿ ಏರ್ಪಡಿಸಲಾಗಿದೆ. ಆಯಾ ಕ್ಷೇತ್ರದ ಪ್ರಿಸೈಡಿಂಗ್ ಆಫೀಸರ್, ಮೊದಲ ಮತಗಟ್ಟೆ ಅಧಿಕಾರಿಯ ಸಂದೇಹ ನಿವಾರಿಸಲು ಏ.7ರಂದು ಆನ್‌ಲೈನ್ ಮೂಲಕ ವಿಶೇಷ ಸಭೆ ನಡೆಸ ಲಾಗುವುದು. ಏ.8ರಂದು ಬೆಳಗ್ಗೆ ಆಯಾ ಕ್ಷೇತ್ರಗಳಲ್ಲಿ ಕ್ಷೇತ್ರದ ಸೂಕ್ಷ್ಮ ವೀಕ್ಷಕರು, ಪ್ರಿಸೈಡಿಂಗ್ ಅಧಿಕಾರಿಗಳು, ಮತಗಟ್ಟೆ ಅಧಿಕಾರಿಗಳಿಗೆ ಅಂತಿಮ ತರಬೇತಿ ನೀಡಲಾಗುವುದೆಂದು ತರಬೇತಿ ವಿಭಾಗದ ನೋಡಲ್ ಅಧಿಕಾರಿ ಕೆ.ಬಿ.ರಾಮು ಹೇಳಿದರು.

ಸುತ್ತಮುತ್ತ

ಮನೆಯಲ್ಲೇ ಮತದಾನ: ಜಿಲ್ಲೆಯಲ್ಲಿ ಶೇಕಡಾ 96.56 ರಷ್ಟು ಮತದಾನ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಮನೆಯಲ್ಲೇ ಮತ ಚಲಾಯಿಸಿ ಎಂಬ ಸೇವೆಯಡಿ ಮತಗಟ್ಟೆ ಅಧಿಕಾರಿಗಳು ಮತದಾರರ ಮನೆಗಳಿಗೆ ಭೇಟಿ ನೀಡಿ ತಮ್ಮ ಮತಗಳನ್ನು ನೋಂದಾಯಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಅದರಂತೆ ಈ ಮೂಲಕ ಇಲ್ಲಿಯವರೆಗೆ (ಏ.4 ರಂದು ರಾತ್ರಿ 7 ಗಂಟೆಯ ತನಕ) ಶೇಕಡಾ 96.56 ರಷ್ಟು ಮತದಾರರು ಮತ ಚಲಾಯಿಸಿದ್ದಾರೆ. ಇಬ್ಬರು ಮತಗಟ್ಟೆ ಅಧಿಕಾರಿಗಳು, ಒಬ್ಬ ಮೈಕ್ರೋ ವೀಕ್ಷಕ, ಒಬ್ಬ ವಿಡಿಯೋಗ್ರಾಫರ್, ಒಬ್ಬ ಪೊಲೀಸ್ ಅಧಿಕಾರಿ ಮತ್ತು ಒಬ್ಬ ಬೂತ್ ಮಟ್ಟದ ಅಧಿಕಾರಿಯನ್ನು ಒಳಗೊಂಡ ತಂಡವು ಮನೆಯಲ್ಲಿ ಮತದಾನ ಚಟುವಟಿಕೆಗಳ ಭಾಗವಾಗಿ ಕಾಸರಗೋಡು ಜಿಲ್ಲೆಯ ಅರ್ಹ ಮನೆಗಳಿಗೆ ಭೇಟಿ ನೀಡುತ್ತಿದೆ. ರ್‍ಯಾಂಡಮೈಸೇಷನ್ ಮೂಲಕ ಮತಗಟ್ಟೆ ಅಧಿ ಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಇದಕ್ಕಾಗಿ ಕಾಞಂಗಾಡು ಮತ್ತು ತೃಕ್ಕರೀಪ್ಪುರಕ್ಕೆ ತಲಾ 30, ಉದುಮಕ್ಕೆ 28 ಹಾಗೂ ಕಾಸರಗೋಡು , ಮಂಜೇಶ್ವರ ಕ್ಷೇತ್ರಗಳಿಗೆ ತಲಾ 17 ಮತಗಟ್ಟೆ ಅಧಿಕಾರಿಗಳ ತಂಡಗಳನ್ನು ನಿಯೋಜಿಸಲಾಗಿದೆ ಎಂದು ನೋಡಲ್ ಅಧಿಕಾರಿ ಸುನೀಲ್ ಎಂ. ನಾಯರ್ ತಿಳಿಸಿದ್ದಾರೆ. ಜಿಲ್ಲೆಯಲ್ಲಿ 85 ವರ್ಷಕ್ಕಿಂತ ಮೇಲ್ಪಟ್ಟ 3281 ಮಂದಿ ಮತ್ತು 3529 ದಿವ್ಯಾಂಗ ವಲಯದವರಿಗೆ ಮನೆಯಲ್ಲಿಯೇ ಮತ ಚಲಾಯಿಸಲು ಅವಕಾಶ ನೀಡಲಾಗಿದೆ. ನಿಧನ, ಸ್ಥಳಾಂತರ ಮತ್ತು ಇತರ ಅನಾನುಕೂಲತೆಗಳಂತಹ ಕಾರಣಗಳಿಂದಾಗಿ ಕೆಲವು ಮತದಾರರು ಮನೆಯಲ್ಲೇ ಮತದಾನ ಸೇವೆಯಡಿ ಮತ ಚಲಾಯಿಸಲು ಸಾಧ್ಯವಾಗಲಿಲ್ಲ ಎಂದು ನೋಡಲ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ವಿಧಾನಸಭಾ ಚುನಾವಣೆ: ಜಿಲ್ಲಾಧಿಕಾರಿ ಪರಿಶೀಲನೆ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಕಾಸರಗೋಡು ಜಿಲ್ಲೆಯಲ್ಲಿನ ಸಿದ್ಧತೆಗಳನ್ನು ಪರಿಶೀಲಿಸಲು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ವಿವಿಧ ನೋಡಲ್ ಅಧಿಕಾರಿಗಳು ಮತ್ತು ಚುನಾವಣಾ ಅಧಿಕಾರಿಗಳ ಸಭೆಯನ್ನು ಶನಿವಾರ ಆನ್‌ಲೈನ್ ಮೂಲಕ ನಡೆಸಲಾಯಿತು. ಚುನಾವಣೆಗೆ ಸಂಬಂಧಿಸಿದ ಸಿದ್ಧತೆಗಳು ಸಕಾಲಿಕವಾಗಿ ಪ್ರಗತಿಯಲ್ಲಿವೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಇಂದು ಮಧೂರಿನಲ್ಲಿ ಬಲಿವಾಡು ಕೂಟ

ಕಾಸರಗೋಡು: ಮೊಗೇರ ಸರ್ವೀಸ್ ಸೊಸೈಟಿಯ ನೇತೃತ್ವದಲ್ಲಿ ಮೊಗೇರ ಸಮಾಜದ ವತಿಯಿಂದ ಸಾಮೂಹಿಕ ಬಲಿವಾಡು ಕೂಟವು ಏ.5ರಂದು ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಜರಗಲಿದೆ. ಈ ಸಂಬಂಧ ಸಮಾಜ ಬಾಂಧವರಿಂದ ವಿಶೇಷ ಕೂಟ ಪ್ರಾರ್ಥನೆ, ಕಾಣಿಕೆ ಸಮರ್ಪಣೆ ನಡೆಯಲಿದೆ. ಕಳೆದ ವರ್ಷ ಶ್ರೀ ಕ್ಷೇತ್ರದ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂದರ್ಭ ಸಮಸ್ತ ಮೊಗೇರ ಸಮಾಜದಿಂದ ದೇವಾಲಯಕ್ಕೆ 1,11,111ರೂ. ನಿಧಿ ಸಮರ್ಪಣೆ ಹಾಗೂ ಬೃಹತ್ ಹಸಿರುವಾಣಿ ಹೊರೆಕಾಣಿಕೆಯನ್ನು ನೀಡಿದ ಸವಿನೆನಪಿಗಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮೊಗೇರ ಸರ್ವೀಸ್ ಸೊಸೈಟಿಯ ರಾಜ್ಯಾಧ್ಯಕ್ಷ ಐ.ಲಕ್ಷ್ಮಣ ಪೆರಿಯಡ್ಕ ಹಾಗೂ ಜಿಲ್ಲಾಧ್ಯಕ್ಷ ಚಂದ್ರ ಸಿ.ಬಿ. ಅಡೂರು ತಿಳಿಸಿದ್ದಾರೆ. ಸಮಾಜ ಬಾಂಧವರು ಬೆಳಿಗ್ಗೆ 10 ಗಂಟೆಯ ಮೊದಲು ಮಧೂರು ದೇಗುಲಕ್ಕೆ ಆಗಮಿಸಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

ಇಂದು ವರ್ಕಾಡಿಯಲ್ಲಿ ಯಕ್ಷಗಾನ ಬಯಲಾಟ

ಮಂಜೇಶ್ವರ: ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯವರಿಂದ ಏ.5ರಂದು ಸಂಜೆ 6 ಗಂಟೆಗೆ ವರ್ಕಾಡಿ ಶ್ರೀ ಕಾವೀಃ ಸುಬ್ರಹ್ಮಣ್ಯ ದೇವಸ್ಥಾನದ ರಾಜಾಂಗಣದಲ್ಲಿ ಶ್ರೀ ದೇವಿ ಮಹಾತ್ಮೆ ಎಂಬ ಕಥಾಭಾಗದ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ. ಸಂಜೆ 5.45ಕ್ಕೆ ಚೌಕಿ ಪೂಜೆ, ರಾತ್ರಿ 7.30ರಿಂದ ಅನ್ನ ಸಂತರ್ಪಣೆ ನಡೆಯಲಿದೆ.

ಕಾಪ್ಯ ತರವಾಡಿನಲ್ಲಿ ಕಳಿಯಾಟ ಮಹೋತ್ಸವ

ಕಾಸರಗೋಡು: ಕೊಳತ್ತೂರು ಕಾಪ್ಯ ತರವಾಡು ಶ್ರೀ ಭಗವತೀ ಕ್ಷೇತ್ರದಲ್ಲಿ ಕಳಿಯಾಟ ಮಹೋತ್ಸವವು ಏ.4ರಂದು ಆರಂಭವಾಗಿದ್ದು, 5 ರಂದು ಜರಗಲಿದೆ. ಏ.5 ರಂದು ಬೆಳಗ್ಗೆ 9 ಗಂಟೆಗೆ ವಿವಿಧ ದೈವಗಳ ಕೋಲ ಸಹಿತ ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಧರ್ಮಪತ್ನಿ ಹೇಮಾವತಿ ಅಮ್ಮನವರ ಜನ್ಮದಿನವನ್ನು ಗುರುವಾರ ಕಾಸರಗೋಡಿನ 72 ಬಡಕುಟುಂಬಗಳ ಮನೆಗೆ ತೆರಳಿ ಹಣ್ಣು ಹಂಪಲುಗಳನ್ನು ನೀಡಿ ಆಚರಿಸಲಾಯಿತು. ಗ್ರಾಮಾಭಿವೃದ್ಧಿ ಕಾಸರಗೋಡು ಯೋಜನಾಧಿಕಾರಿ ದಿನೇಶ್, ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಭಜನಾ ಪರಿಷತ್ ಕಾಸರಗೋಡು ಮಂಡಲ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ವಲಯ ಮೇಲ್ವಿಚಾರಕ ಗೋಪಾಲಕೃಷ್ಣ ಸೇವಾ ಪ್ರತಿನಿಧಿ ಜ್ಯೋತಿ, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಸೌಮ್ಯಾ ಜೊತೆಗಿದ್ದರು.

ಜೀವನ ಮೌಲ್ಯ ರೂಪಿಸಲು ಬೇಸಿಗೆ ಶಿಬಿರ ಸಹಕಾರಿ: ನಾರಾಯಣ ಭಟ್





ಬದಿಯಡ್ಕ: ಜೀವನ ಮೌಲ್ಯಗಳನ್ನು ರೂಪಿಸಿಕೊಳ್ಳುವಲ್ಲಿ ಬೇಸಿಗೆ ಶಿಬಿರಗಳು ಸಹಕಾರಿಯಾಗಲಿವೆ. ಮಕ್ಕಳಲ್ಲಿ ಧಾರ್ಮಿಕ ಚಿಂತನೆಗಳು ಮೂಡಿಬಂದು ಅನಾದಿ ಕಾಲದಿಂದ ನಡೆದು ಬಂದ ಸಂಪ್ರದಾಯಗಳು ಮುಂದುವರಿಯಬೇಕಾಗಿವೆ. ವೇದ ಮಂತ್ರಗಳ ಪಠಣದಿಂದ ಪರಿಸರವು ಪರಿಶುದ್ಧವಾಗುತ್ತದೆ ಎಂದು ಹಿರಿಯರಾದ ಟಿ.ಕೆ.ನಾರಾಯಣ ಭಟ್ ಪಂಜಿತ್ತಡ್ಕ ಹೇಳಿದ್ದಾರೆ.

ಕಾಸರಗೋಡು ಹೊಸದುರ್ಗ ಹೈವ ಬ್ರಾಹ್ಮಣ ಸಭಾದ ವತಿಯಿಂದ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಅನೇಕ ವರ್ಷಗಳಿಂದ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ನಡೆದುಬರುತ್ತಿರುವ ವಸಂತ ವೇದ ಪಾಠ ಶಾಲೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವೇದಮೂರ್ತಿ ಶಿವರಾಮ ಭಟ್ ಪೆರಡಾಲ ಪ್ರಾಸಾವಿಕ ಮಾತನಾಡಿದರು.

ದೇವಾಲಯದ ಆಡಳಿತ ಮಂಡಳಿಯ ಪೂರ್ಣ ಸಹಕಾರದೊಂದಿಗೆ ಅನೇಕ ವರ್ಷಗಳಿಂದ ವಸಂತ ವೇದ ಶಿಬಿರವು ನಡೆದುಬರುತ್ತಿದೆ.

> **ಪುಣ್ಯ ಲಭಿಸುತ್ತದೆ**
>
> **ಹಿರಿಯರ ಕಾಲದಿಂದಲೇ ನಡೆದು ಕೊಂಡು ಬಂದ ವೇದಪಾಠ ತರಗತಿ ಗಳು ಪೋಷಕರು ಹಾಗೂ ದಾನಿಗಳ ನೆರವಿನಿಂದ ಮುಂದುವರಿಯುತ್ತಿವೆ. ವೇದಾಧ್ಯಯನ ಸುಸೂತ್ರವಾಗಿ ಮುಂದುವರಿಸುವ ನಿಟ್ಟಿನಲ್ಲಿ ವೇದ ವಿದ್ಯಾ ಸರಸ್ವತಿ ಸೇವೆ, ವಟು ಸಮಾರಾಧನೆ ಮಾಡಿಸಿಕೊಂಡಾಗ ಪುಣ್ಯ ಲಭಿಸುತ್ತದೆ.**
>
> ● **ಶಿವರಾಮ ಭಟ್ ಪೆರಡಾಲ**

ವೇದ ಗುರುಗಳಾದ ಮಹಾಗಣಪತಿ ಅಳಕ್ಕೆ, ಮುರಳೀಧರ ಶರ್ಮ ಅಳಕ್ಕೆ ಉಪಸ್ಥಿತರಿದ್ದರು. ಕಾಸರಗೋಡು ಮತ್ತು ಹೊಸದುರ್ಗ ಹೈವ ಬ್ರಾಹ್ಮಣ ಸಭಾದ ಕೋಶಾಧಿಕಾರಿ ವೈ. ಕೆ.ಗೋವಿಂದ ಭಟ್ ಅಧ್ಯಕ್ಷತೆ ವಹಿಸಿದ್ದರು. ಸಭಾದ ಕಾರ್ಯ ದರ್ಶಿ ಶ್ಯಾಮಪ್ರಸಾದ ಕಬೆಕ್ಕೋಡು, ಪದಾಧಿಕಾರಿಗಳಾದ ಉದಯ ಶಂಕರ ಭಟ್ ಪಟ್ಟಾಜೆ, ಕೃಷ್ಣ ಕುಮಾರ್ ಸಿದ್ದನಕರೆ ಉಪಸ್ಥಿತರಿದ್ದರು.

ಸಂಪತ್ತನ್ನು ದಾನ ಮಾಡಿ ಪುಣ್ಯ ಸಂಪಾದಿಸಬೇಕು: ಎಡನೀರು ಶ್ರೀ



ಬದಿಯಡ್ಕ: ದೇವರ ಮುಂದೆ ಸಮರ್ಪಣಾ ಭಾವವಿರಬೇಕು. ನಾಡಿನ ಅನೇಕ ಭಕ್ತರ ಸದುದ್ದೇಶದ ಚಿಂತನೆಯ ಫಲವಾಗಿ ಧಾರ್ಮಿಕ ಶ್ರದ್ಧಾಕೇಂದ್ರಗಳು ಬೆಳಗುತ್ತಾ ಇವೆ. ಸಂಪತ್ತು ಕೂಡಿಡುವುದಕ್ಕಿರುವುದಲ್ಲ, ಸತ್ ಚಿಂತನೆಗಳೊಂದಿಗೆ ಸಂಪತ್ತನ್ನು ದಾನ ಮಾಡಿ ಪುಣ್ಯವನ್ನು ಸಂಪಾದಿಸುವ ಮನಸ್ಸು ಎಲ್ಲರಲ್ಲೂ ಇರಬೇಕು. ದಾನಿಗಳು, ಭಕ್ತರು ಧಾರ್ಮಿಕ ಕ್ಷೇತ್ರಗಳ ಸಂರಕ್ಷಕರು ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ನುಡಿದರು.

ಪಾಡಿ ಶ್ರೀ ಕೈಲಾರು ಶಿವ ಕ್ಷೇತ್ರದ ವಾರ್ಷಿಕೋತ್ಸವದ ಸಂದರ್ಭ ಹೊಸತಾಗಿ ನಿರ್ಮಿಸಿದ ನಿರ್ಮಾಣ ಕಾರ್ಯಗಳ ಸಮರ್ಪಣೆ ನೆರವೇರಿಸಿ ಅವರು ಆಶೀರ್ವಚನ ನೀಡಿದರು.

ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೃಷ್ಣದಾಸ ತಂತ್ರಿಗಳು ಆಶೀರ್ವಚನ ನೀಡಿ ಮಾತನಾಡಿದರು. ಕೊಡುಗೈ ದಾನಿಗಳಾದ ಗೋಪಾಲಕೃಷ್ಣ ಪೈ ಬದಿಯಡ್ಕ, ಸಿ.ಆರ್. ಗಂಗಾಧರನ್ ನಾಯರ್ ಚುಕ್ಕಿನಡ್ಕ ಪಾಡಿ, ಕಾರ್ಯದರ್ಶಿ ವೇಣುಗೋಪಾಲ, ಕೋಶಾಧಿಕಾರಿ ಬಿ.ಎನ್.ರವೀಂದ್ರನ್, ಉಪಾಧ್ಯಕ್ಷ ಕುಂಞಿಕೃಷ್ಣನ್ ನಾಯರ್, ಹರಿಹರ ಸೇವಾ ಸಮಿತಿ ಸದಸ್ಯರು, ದಾನಿಗಳು ಉಪಸ್ಥಿತರಿದ್ದರು. ಹರಿಹರ ಸೇವಾ ಸಮಿತಿ ಅಧ್ಯಕ್ಷ ಎಂ. ಜೆ.ಹರಿಪ್ರಸಾದ್ ಪಾಡಿ ಪ್ರಸ್ತಾವನೆಗೈದರು.

ನೂತನ ನಿರ್ಮಾಣ ಕಾರ್ಯಗಳು

ಕಳೆದ ಒಂದು ವರ್ಷದಿಂದ ಶ್ರೀ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಲಾದ ಕ್ಷೇತ್ರ ಕಮಾನು, ಮೇಲ್ಮಾಡು, ಅಂಗಣಕ್ಕೆ ಗ್ರಾನೈಟ್ ಅಳವಡಿಕೆ, ತಾಮ್ರ ಅಳವಡಿಸುವ ಕಾರ್ಯಗಳನ್ನು ನಡೆಸಲಾಯಿತು. ಸಿ.ಆರ್. ಗಂಗಾಧರನ್ ನಾಯರ್ ಚುಕ್ಕಿನಡ್ಕ ಪಾಡಿ ಅವರ ಸಹಯೋಗದೊಂದಿಗೆ ಶ್ರೀ ಕ್ಷೇತ್ರದ ಮೇಲ್ಮಾಡು ನಿರ್ಮಿಸಲಾಯಿತು. ಚಾಲ್ಕರ ಕಯ್ಯಾರು ಎಂಬಲ್ಲಿ ಯುವ ಕೂಟಾಯ್ಮ ಕೈಲಾರ್‌ನಗರ ಅವರ ಸೇವೆರೂಪದಲ್ಲಿ ಕಮಾನು, ಪಾಡಿ ಅರಮನೆಯ ವೃಂದಾ ಪ್ರಸಾದ್ ಅವರ ಸಹಯೋಗದಲ್ಲಿ ಕ್ಷೇತ್ರಾಂಗಣಕ್ಕೆ ಗ್ರಾನೈಟ್ ಅಳವಡಿಸುವ ಕಾರ್ಯ ನಡೆಯಿತು. ಊರಿನ ಹಾಗೂ ವಿದೇಶದಲ್ಲಿರುವ ಕ್ಷೇತ್ರದ ಅನೇಕ ಮಂದಿ ಭಗವದ್ಭಕ್ತರ ಸಹಯೋಗದಲ್ಲಿ ತಾಮ್ರ ಅಳವಡಿಸುವ ಕಾರ್ಯ ನೆರವೇರಿಸಲಾಯಿತು.

ಆರಿಕ್ಕಾಡಿ ಪಾರೆಸ್ಥಾನ ಶ್ರೀ ಭಗವತಿ ಕ್ಷೇತ್ರದ ವಾರ್ಷಿಕೋತ್ಸವ: ಸಾಂಸ್ಕೃತಿಕ ಕಾರ್ಯಕ್ರಮ



ಕುಂಬಳೆ: ಆರಿಕ್ಕಾಡಿ ಪಾರೆಸ್ಥಾನ ಶ್ರೀ ಆಲಿಚಾಮುಂಡಿ ಶ್ರೀ ಭಗವತಿ ಕ್ಷೇತ್ರದಲ್ಲಿ ವಾರ್ಷಿಕೋತ್ಸವದ ಕಳಿಯಾಟ ಪ್ರಯುಕ್ತ ಶ್ರೀ ನಾರಾಯಣ ಗುರು ವನಿತಾ ಸ್ವಸಹಾಯ ಸಂಘದ ವತಿಯಿಂದ 10ನೇ ವರ್ಷದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಆಲಿಚಾಮುಂಡಿ ಭಗವತಿ ಕ್ಷೇತ್ರದ ಅಧ್ಯಕ್ಷ ಸಂತೋಷ್ ಕುಂಬಳೆ ಅಧ್ಯಕ್ಷತೆ ವಹಿಸಿದ್ದರು.

ತೀಯಾ ಮಹಾಸಭಾ ಅಧ್ಯಕ್ಷರಾದ ಗಣೇಶ್ ಉದ್ಘಾಟಿಸಿದರು. ತೀಯಾ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಗಣೇಶ್ ಪಾವೂರು, ತೀಯಾ ವೆಲ್ಫೇರ್ ಅಸೋಸಿಯೇಷನ್ ಕಾರ್ಯದರ್ಶಿ ನಾಗೇಶ್ ಬಳ್ಳಂಬಾಡಿ, ಸದಾಶಿವ ಕಳತ್ತೂರು, ನವೀನ್ ಕುಮಾರ್ ಆರಿಕ್ಕಾಡಿ, ಕರುಣಾಕರ ಮುಜುಂಗಾವು, ಪ್ರಸನ್ನ ಕಳತ್ತೂರು, ಜಯಂತ ಭಂಡಾರ ಮನೆ, ರವಿ ಶಾಂತಿಪಳ್ಳ ಸಜಿತ್ ಮಾಣಿ, ಪ್ರಕಾಶ್ ಬಟ್ಟೆಹಿತ್ತಿಲು, ಸುನಿಲ್ ಕುಂಬಳೆ, ಜಯಕುಮಾರ್ ಕೃಷ್ಣನಗರ, ಸೌಮ್ಯಾ ಆರಿಕ್ಕಾಡಿ, ಶ್ಯಾಮಲಾ ಕುಂಬಳೆ, ದೀಪಾ ಆರಿಕ್ಕಾಡಿ ಮೊದಲಾದವರು ಈ ಸಂದರ್ಭ ಭಾಗವಹಿಸಿದ್ದರು.

ಸೌಮ್ಯಾ ಸ್ವಾಗತಿಸಿ, ಶಾಮಲಾ ವಂದಿಸಿದರು.



ಬದಿಯಡ್ಕ ಸಮೀಪದ ಪಾಡಿ ಕೈಲಾರು ಶ್ರೀ ಶಿವ ಕ್ಷೇತ್ರದ ಚಾಲ್ಕರ ಕಯ್ಯಾರು ಎಂಬಲ್ಲಿ ಯುವ ಕೂಟಾಯ್ಮ ಕೈಲಾರ್‌ನಗರ ಇವರ ಸೇವೆಯ ರೂಪದಲ್ಲಿ ನಿರ್ಮಿಸಲಾದ ಕಮಾನ್‌ನ್ನು ಎಡನೀರು ಮಠಾಧೀಶರಾದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಲೋಕಾರ್ಪಣೆಗೊಳಿಸಿದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾಸರಗೋಡು ತಾಲೂಕಿನ ಚಂದ್ರಗಿರಿ ವಲಯದ ಪಳ್ಳಿಕೆರೆ ಕಾರ್ಯಕ್ಷೇತ್ರದ ಕುರುಂಬ ಸಂಘದ ಶ್ಯಾಮಲಾ ಅವರ ಮನೆಯವರಾದ ಕಮಲಾಕ್ಷನ್ ಅವರು ಪಾರ್ಶ್ವವಾಯು ಪೀಡಿತರಾಗಿ ಅನಾರೋಗ್ಯದಿಂದಿದ್ದು, ನಡೆದಾಡಲು ಕಷ್ಟಪಡುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಶ್ರೀ ಧರ್ಮಸ್ಥಳ ಯೋಜನೆಯ ಜನಮಂಗಲ ಕಾರ್ಯಕ್ರಮದಡಿ ಸಲಕರಣೆ ಒದಗಿಸಲಾಯಿತು. ತಾಲೂಕಿನ ಯೋಜನಾಧಿಕಾರಿ ದಿನೇಶ್ ಫಲಾನುಭವಿಯ ಮನೆಗೆ ಭೇಟಿ ನೀಡಿ ಸಲಕರಣೆ ಹಸ್ತಾಂತರಿಸಿದರು. ಸಮಾಜ ಕಾರ್ಯಕರ್ತ ಮೋಹನ್, ರಸೀನಾ, ಮೇಲ್ವಿಚಾರಕಿ ಚಂದ್ರಕಲಾ, ಶೋಭಾ ಮತ್ತಿತರರಿದ್ದರು.

ಸಿ-ವಿಜಿಲ್ ನಿಯಂತ್ರಣ ಕೊಠಡಿಯಲ್ಲಿ ಇದುವರೆಗೆ 1018 ದೂರು ದಾಖಲು

ಕಾಸರಗೋಡು: ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ-ವಿಜಿಲ್ ನಿಯಂತ್ರಣ ಕೊಠಡಿಗೆ 2026ರ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಇದುವರೆಗೆ 1018 ದೂರುಗಳು ಬಂದಿವೆ. ಈ ಎಲ್ಲಾ ದೂರುಗಳನ್ನು ಪರಿಹರಿಸಲಾಗಿದೆ ಎಂದು ಜಿಲ್ಲಾ ಮಟ್ಟದ ಚುನಾವಣಾ ವಿಭಾಗವು ತಿಳಿಸಿದೆ.

ಹೆಚ್ಚಿನ ದೂರುಗಳನ್ನು ಸುಲಭದಲ್ಲಿ ಬಗೆಹರಿಸಲಾಯಿತು. ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಮತ್ತು ಚುನಾವಣಾ ವೆಚ್ಚಗಳಿಗೆ ಸಂಬಂಧಿಸಿದ ದೂರುಗಳನ್ನು ಸಿ-ವಿಜಿಲ್ ನಿಯಂತ್ರಣ ಕೊಠಡಿ ನಿರ್ವಹಿಸುತ್ತಿದೆ. ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲಾದ 30 ಕ್ಯಾಮೆರಾಗಳ ದೃಶ್ಯಾವಳಿಗಳು ಸಿ-ವಿಜಿಲ್ ನಿಯಂತ್ರಣ ಕೊಠಡಿಗೆ ಲಭಿಸುತ್ತವೆ. ಸಿ-ವಿಜಿಲ್ ನಿಯಂತ್ರಣ ಕೊಠಡಿಯನ್ನು ಮಾ.16ರಂದು ಪ್ರಾರಂಭಿಸಲಾಯಿತು.

ಸಿ-ವಿಜಿಲ್ ನಿಯಂತ್ರಣ ಕೊಠಡಿಯ ಉಸ್ತುವಾರಿಯನ್ನು ಎಡಿಎಂ (ಜಿಲ್ಲಾ ಹೆಚ್ಚುವರಿ ಮೆಜಿಸ್ಟ್ರೇಟ್) ಕೆ.ವಿ.ಶ್ರುತಿ ನಿರ್ವಹಿಸುತ್ತಿದ್ದಾರೆ. ತಾಂತ್ರಿಕ ಮೇಲ್ವಿಚಾರಣೆಗೆ ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಜವಾಬ್ದಾರರಾಗಿದ್ದಾರೆ. ಸಿ-ವಿಜಿಲ್ ನಿಯಂತ್ರಣ ಕೊಠಡಿ ಮತ್ತು ಕಲೆಕ್ಟರೇಟ್ ಸೂಟ್ ವಿಭಾಗದಲ್ಲಿ ಸ್ವೀಕರಿಸಿದ ದೂರುಗಳ ವೆಚ್ಚ ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯನ್ನು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ವಿಶೇಷ ಅಧಿಕಾರಿ ವಿ.ಚಂದ್ರನ್ ವಹಿಸಿಕೊಂಡಿದ್ದಾರೆ. ಹಿರಿಯ ಸೂಪರಿಂಟೆಂಡೆಂಟ್ ವಿ.ಶ್ರೀಕುಮಾರ್ ನಿಯಂತ್ರಣ ಕೊಠಡಿಯಲ್ಲಿ ಸ್ವೀಕರಿಸಿದ ದೂರುಗಳ ಪರಿಹಾರಕ್ಕಾಗಿ ನೋಡಲ್ ಅಧಿಕಾರಿಯಾಗಿದ್ದಾರೆ.



> **ದೂರು ನೀಡಬಹುದು**
>
> **ಸಾರ್ವಜನಿಕರು ಸಿ-ವಿಜಿಲ್ ಅಪ್ಲಿಕೇಶನ್ ಮೂಲಕ ಮತ್ತು ಫೋನ್ ಮೂಲಕ ದೂರುಗಳನ್ನು ವರದಿ ಮಾಡಬಹುದು. ಚುನಾವಣೆಗೆ ಸಂಬಂಧಿಸಿದ ಯಾವುದೇ ದೂರುಗಳನ್ನು 04994292650, 04994292651, 04994292652 ದೂ. ನಂ. ಮೂಲಕ ತಿಳಿಸಬಹುದು.**

ಮೂಡಂಬೈಲು ಕಂಗುಮೆಯಲ್ಲಿ ಹನುಮಾನ್ ಜಯಂತಿ ಆಚರಣೆ, ಭಜನಾ ಕಾರ್ಯಕ್ರಮ



ಮಂಜೇಶ್ವರ: ಮೂಡಂಬೈಲು ಕಂಗುಮೆಯಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಶ್ರೀ ವೀರಾಂಜನೇಯ ಮಂದಿರದ ಪರಿಸರದಲ್ಲಿ ಹನುಮಾನ್ ಜಯಂತಿ ಕಾರ್ಯಕ್ರಮ ನಡೆಯಿತು.

ಕೊಂಡವೂರು ಶ್ರೀ ನಿತ್ಯಾನಂದ ಯೋಗಾಶ್ರಮದ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಬಳಿಕ ದೀಪ ಪ್ರಜ್ವಲನೆ ಗೊಳಿಸಿ ಅವರು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಗುಡ್ಡಕ್ಕೇರಿ ಶ್ರೀ ಕಲ್ಪವೃಕ್ಷ ಮಹಾಮಾಯ ಭಜನಾ ಮಂಡಳಿ ವತಿಯಿಂದ ಹನುಮಾನ್ ಚಾಲೀಸ್ ಪಾರಾಯಣ, ಊರ ಭಕ್ತ ವೃಂದದವರಿಂದ ಭಜನಾ ಕಾರ್ಯಕ್ರಮ ನಡೆಯಿತು

ಸಮಾರಂಭದಲ್ಲಿ ಸ್ಥಳದಾನಿ ಹಾಗೂ ಸಮಿತಿಯ ಗೌರವಾಧ್ಯಕ್ಷ ಪಿ.ಆರ್.ಶೆಟ್ಟಿ ಕುಳೂರು ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಆಚಾರ್ಯ, ಡಾ. ಜಯಪ್ರಕಾಶ್ ತೊಟ್ಟೆತ್ತೋಡಿ, ಮೋಹನ್ ಮಜ್ಜಾರ್, ತಾರನಾಥ ಗುರಿಕ್ಕಾರರು, ದಾಮೋದರ್ ಶೆಟ್ಟಿ, ರಾಮ್‌ಪ್ರಕಾಶ ಆಳ್ವ, ನಾಗರಾಜ ಪದಕಣ್ಣಾಯ, ಮಹಿಳಾ ಸಂಘದ ಗೌರವಾಧ್ಯಕ್ಷ ಬಿ.ಎಂ.ಆಶಾಲತಾ ಉಪಸ್ಥಿತರಿದ್ದರು.

ಅರವಿಂದಾಕ್ಷ ಭಂಡಾರಿ ಸ್ವಾಗತಿಸಿ, ಸಮಿತಿಯ ಕಾರ್ಯದರ್ಶಿ ಬಾಬು ಶೆಟ್ಟಿಗಾರ್ ವಂದಿಸಿದರು.

ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ | ಧಾರ್ಮಿಕ ಸಭೆ

ಮನಸ್ಸು ಶುದ್ಧವಾಗಲು ಮನಸ್ಸಿನ ಬ್ರಹ್ಮಕಲಶ ನಡೆಯಬೇಕು: ಎಡನೀರು ಶ್ರೀ

ಪೆರ್ಲ: ದೇವಸ್ಥಾನಗಳು ಶಿಥಿಲಗೊಂಡಾಗ ಭಕ್ತರು ಒಂದಾಗಿ ಜೀರ್ಣೋದ್ಧಾರ ಕಾರ್ಯ ಹಾಗೂ ಬ್ರಹ್ಮಕಲಶ ನೆರವೇರಿಸುತ್ತೇವೆ. ದೇವರ ಪ್ರತಿಷ್ಠಾಪನೆಯೊಂದಿಗೆ ಸ್ವ ಪ್ರತಿಷ್ಠೆ ನಾಶವಾಗಬೇಕು. ಮನಸ್ಸು ಶುದ್ಧವಾಗಲು ಮನಸ್ಸಿನ ಬ್ರಹ್ಮಕಲಶೋತ್ಸವ ನಡೆಯಬೇಕು. ಪರಾಭವ ಸಂವತ್ಸರದಲ್ಲಿ ನಮ್ಮೊಳಗಿನ ಷಡ್ವೈರಿಗಳು ನಾಶವಾಗಬೇಕು. ಸಮಾಜದೊಂದಿಗೆ ಒಗ್ಗಟ್ಟಾಗಿ ಧರ್ಮ ಹಾಗೂ ಧಾರ್ಮಿಕತೆ ಬೆಳೆಸಬೇಕು ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಶುಕ್ರವಾರ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.



ಕಾರ್ಯಕರ್ತರ ಸೇವೆ ಮಿಗಿಲಾದುದು

ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಗಣೇಶ ತಂತ್ರಿ ದೇಲಂಪಾಡಿ ಅನುಗ್ರಹಿಸಿ ಮಾತನಾಡಿ, ದೇವಾಲಯಗಳ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶ ಯಶಸ್ವಿಯಾಗಿ ನಡೆಯುವಲ್ಲಿ ಹತ್ತು ಹಲವು ದಿನಗಳಿಂದ ಸೇವೆ ಸಲ್ಲಿಸುವ ಕಾರ್ಯಕರ್ತರ ಸೇವೆ ಮಿಗಿಲಾದುದು. ದೇವಳದ ಬ್ರಹ್ಮಕಲಶದೊಂದಿಗೆ ಮಹಾವಿಷ್ಣುವಿನ ತೀರ್ಥ ಪ್ರಸಾದ ಅಮೃತವಾಗಲಿ ಎಂದು ಹಾರೈಸಿದರು.

ಆರ್‌ಎಸ್‌ಎಸ್ ಹಿರಿಯ ನೇತಾರ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಧಾರ್ಮಿಕ ಭಾಷಣ ಮಾಡಿದರು. ಶೃಂಗೇರಿ ಶ್ರೀ ಶಾರದಾಪೀಠಂ ಕೋಟೆಕಾರು ಮಠದ ಧರ್ಮಾಧಿಕಾರಿ ಸತ್ಯಶಂಕರ ಬೊಳ್ಳಾವ ಮಾತನಾಡಿ, ಆಂಗ್ಲರು ಭಾರತಕ್ಕೆ ಬರುವ ಮುನ್ನ ವಿದ್ಯಾಲಯ, ಕಂದಾಯ ಇಲಾಖೆ, ನ್ಯಾಯಾಲಯ ದೇವಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಪ್ರಸ್ತುತ ದೇವಾಲಯದಲ್ಲಿ ದೇವರ ಆರಾಧನೆ ಮಾತ್ರ ನಡೆಯುತ್ತದೆ. ದೇವಾಲಯಗಳು ನಮ್ಮ ಧರ್ಮ ಸಂಸ್ಕೃತಿ ಪ್ರಚುರಪಡಿಸುವ ಕೇಂದ್ರವಾಗಬೇಕೆಂದರು.

> **ಆತ್ಮಜ್ಞಾನ ಬಲಗೊಳ್ಳುವುದು**
>
> **ಜಗತ್ತಿಗೆ ಓಜಸ್ಸು, ತೇಜಸ್ಸಿನೊಂದಿಗೆ ಮಾರ್ಗದರ್ಶನ ನೀಡಿದ ದೇಶ ನಮ್ಮದು. ಮನೆ, ವಿದ್ಯಾಲಯ ದೇವಾಲಯ ಮತ್ತು ಸಮಾಜ ಜೀವನಕ್ಕೆ ಮೌಲ್ಯ ನೀಡುವ ಪ್ರಧಾನ ಕೇಂದ್ರಗಳು, ದೇವಾಲಯಗಳು ಸುಸಂಸ್ಕೃತ ಸಮಾಜ ನಿರ್ಮಿಸುವ ಕೇಂದ್ರಗಳು. ಮನ ಚಕ್ಷು ಅರಳಬೇಕು. ಆಳವಾದ ಜ್ಞಾನ ಮತ್ತು ವಿವೇಚನೆಯಿಂದ ಆತ್ಮಜ್ಞಾನ ಬಲಗೊಳ್ಳುವುದು.**
>
> ● **ಕಜಂಪಾಡಿ ಸುಬ್ರಹ್ಮಣ್ಯ ಭಟ್**

ದೇಗುಲದ ಸೇವಾ ಸಮಿತಿ ಅಧ್ಯಕ್ಷ ಡಾ.ಮೇಘಶ್ಯಾಮ ರಾವ್ ಅಧ್ಯಕ್ಷತೆ ವಹಿಸಿದ್ದರು. ನಾರಂಪಾಡಿ ಶ್ರೀ ಉಮಾಮಹೇಶ್ವರ ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಹರಿನಾರಾಯಣ ಶಿರಂತಡ್ಕ ಮಾತನಾಡಿದರು. ಕಾಟುಕುಕ್ಕೆ ಶ್ರೀ ಸುಬ್ರಾಯ ದೇವಳದ ಅಧ್ಯಕ್ಷ ಪದ್ಮನಾಭ ಶೆಟ್ಟಿ ಚಕ್ಕಿತ್ತಡ್ಕ ಮಾತನಾಡಿದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ರಮಾನಾಥ ರೈ ಮೇಗಿನಕಡಾರು ಮೊದಲಾದವರು ಉಪಸ್ಥಿತರಿದ್ದರು.

ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಬಾಲಸುಬ್ರಹ್ಮಣ್ಯ ಭಟ್ ಸರ್ಪಮಲೆ ಸ್ವಾಗತಿಸಿ, ರಾಧಾಕೃಷ್ಣ ಭಟ್ ಗದ್ದೆಮನೆ ವಂದಿಸಿದರು. ಧೀರಜ್ ಸೈಪಂಗಲ್ಲು ಕಾರ್ಯಕ್ರಮ ನಿರೂಪಿಸಿದರು.

ಸುತ್ತಮುತ್ತ

ಏ.6: ಬಿಜೆಪಿಯ ಸ್ಥಾಪನಾ ದಿನಾಚರಣೆ, ಹಿರಿಯ ಕಾರ್ಯಕರ್ತರಿಗೆ ಗೌರವ

ಉಡುಪಿ: ಸಂಘಟನೆಯ ಮೂಲಕ ವ್ಯಕ್ತಿ ನಿರ್ಮಾಣ, ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡಿರುವ ವಿಶ್ವದ ಅತೀ ದೊಡ್ಡ ರಾಜಕೀಯ ಪಕ್ಷ ಭಾರತೀಯ ಜನತಾ ಪಾರ್ಟಿಯ 'ಸ್ಥಾಪನಾ ದಿನಾಚರಣೆ'ಯು ಏ.6ರಂದು ಬೆಳಿಗ್ಗೆ 11ಕ್ಕೆ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಪಕ್ಷದ ಹಿರಿಯ ಕಾರ್ಯಕರ್ತರಿಗೆ ಗೌರವಾರ್ಪಣೆ ನಡೆಯಲಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಹೆರ್ಗ ತಿಳಿಸಿದ್ದಾರೆ. ಬಿಜೆಪಿ ಸ್ಥಾಪನಾ ದಿನಾಚರಣೆಯ ಅಂಗವಾಗಿ ಜಿಲ್ಲೆಯಾದ್ಯಂತ ಪಕ್ಷದ ಕಾರ್ಯಕರ್ತರು ತಮ್ಮ ಮನೆಯ ಮೇಲೆ ಪಕ್ಷದ ಧ್ವಜವನ್ನು ಹಾರಿಸಲಿದ್ದಾರೆ. ಜಿಲ್ಲೆಯ ಎಲ್ಲಾ 1,112 ಬೂತ್‌ಗಳ ಅಧ್ಯಕ್ಷರ ಮನೆಗಳಲ್ಲಿ ಪಕ್ಷದ ಧ್ವಜಾರೋಹಣ ಹಾಗೂ ಬೂತ್ ಸಮಿತಿ ಸಭೆ ನಡೆಯಲಿದೆ ಎಂದು ದಿನಕರ ಶೆಟ್ಟಿ ಹೆರ್ಗ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.7ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಉಡುಪಿ: ಕೊಡವೂರು ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮಲ್ಪೆ ಪೇಟೆ, ಜೇಮ್ಸ್ ಕಂಪೌಂಡ್, ಸಿಟಿಜನ್ ಸರ್ಕಲ್, ಫಿಶ್ ಕ್ಯೂರಿಂಗ್ ಯಾರ್ಡ್ ಪರಿಸರ, ಕೊಡವೂರು, ಕಾನಂಗಿ, ಮೂಡಬೆಟ್ಟು, ಸಾಲ್ಮರ, ಮಲ್ಪೆ ಮಧ್ವರಾಜ ರಸ್ತೆ, ಸಿಟಿಜನ್ ಸರ್ಕಲ್, ಹೆಬ್ಬಾರ್ ರಸ್ತೆ, ಆದಿ ಉಡುಪಿ ಮಾರ್ಕೆಟ್ ಹಿಂದೆ, ಕಂಗನಬೆಟ್ಟು, ಕುದ್ಮಲ್ ರಂಗರಾವ್ ನಗರ, ಆದಿ ಉಡುಪಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.7ರಂದು ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನಗರ ಪ್ರದೇಶ

ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಡಿ.ಸಿ ಕಚೇರಿ, ಆರ್.ಟಿ ಓ ಆಫೀಸ್, ಪೆರಂಪಳ್ಳಿ, ಸಗ್ರಿ ನೋಳೆ, ಸಿಂಡಿಕೇಟ್ ಸರ್ಕಲ್, ಎಂ.ಜಿ.ಸಿ ಸ್ಕೂಲ್, ಬಿ.ಎಸ್.ಎನ್.ಎಲ್, ಟೆಲಿಫೋನ್ ಎಕ್ಸ್‌ಚೇಂಜ್, ವಿದ್ಯಾರತ್ನನಗರ, ಮಣಿಪಾಲ ಟೌನ್, ವೇಣುಗೋಪಾಲ ಟೆಂಪಲ್, ಮೀಡಿಯಾ ನೆಟ್‌ವರ್ಕ್, ಈಶ್ವರನಗರ, ಸರಳೇಬೆಟ್ಟು, ಗಣೇಶ್ ಭಾಗ್, ಪ್ರಗತಿನಗರ, ಶಾಂತಿನಗರ, ರಾಜೀವ ನಗರ, 80 ಬಡಗುಬೆಟ್ಟು, ಶಿವಳ್ಳಿ ಇಂಡಸ್ಟ್ರಿಯಲ್ ಏರಿಯಾ, ಇಂಡಸ್ಟ್ರಿಯಲ್ ಏರಿಯಾ, ಹುಡ್ಕೋ, ಅನಂತನಗರ, ಕಲ್ಯಾಣನಗರ, ಸೋನಿಯಾ ಕ್ಲಿನಿಕ್, ರಾಯಲ್ ಎಂಬೆಸಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.7ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮಳೆ ನೀರು ಹರಿಯುವ ಚರಂಡಿಗೆ ಕಲುಷಿತ ನೀರು ಬಿಡದಂತೆ ಸೂಚನೆ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಮನೆ, ಅಪಾರ್ಟ್‌ಮೆಂಟ್, ವಾಣಿಜ್ಯ ಕಟ್ಟಡಗಳ ಕಲುಷಿತ ನೀರನ್ನು ಮಳೆ ನೀರು ಹರಿಯಲು ನಿರ್ಮಿಸಿರುವ ಚರಂಡಿಗೆ ಬಿಡದಂತೆ ನಗರಸಭೆಯಿಂದ ಸೂಚಿಸಲಾಗಿದೆ. ಸಾರ್ವಜನಿಕರು ತಮ್ಮಲ್ಲಿ ಉತ್ಪತ್ತಿಯಾದ ಕಲುಷಿತ ನೀರನ್ನು ತಮ್ಮ ಸ್ವಂತ ಜಾಗದಲ್ಲೇ ಇಂಗುಗುಂಡಿ ನಿರ್ಮಿಸಿ ನಿಯಮಾನುಸಾರ ವಿಲೇವಾರಿ ಮಾಡಬೇಕು. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ನಿಯಮವನ್ನು ನಿರ್ಲಕ್ಷಿಸಿ ಚರಂಡಿಗೆ ಕಲುಷಿತ ನೀರು ಬಿಟ್ಟರೆ ಪುರಸಭೆ ಕಾಯಿದೆ ಅನ್ವಯ ಕ್ರಮ ಜರುಗಿಸಲಾಗುವುದು. ದಿನನಿತ್ಯ ಮನೆ, ಅಪಾರ್ಟ್‌ಮೆಂಟ್, ವಾಣಿಜ್ಯ ಕಟ್ಟಡಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು, ಗಿಡಗಂಟಿಗಳ ಗೆಲ್ಲುಗಳನ್ನು ಕಡಿದು ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ರಸ್ತೆ ಬದಿ ಎಸೆಯುತ್ತಿರುವುದು ಕಂಡು ಬಂದಿದ್ದು ಇದರಿಂದ ನೈರ್ಮಲ್ಯ ಹಾಗೂ ನಗರ ಸ್ವಚ್ಛತೆಗೆ ತೊಡಕಾಗುತ್ತಿದೆ. ಆದ್ದರಿಂದ ಸಾರ್ವಜನಿಕರು ಮನೆ, ಅಪಾರ್ಟ್ ಮೆಂಟ್, ವಾಣಿಜ್ಯ ಕಟ್ಟಡಗಳಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯವನ್ನು ತಮ್ಮ ಮನೆಯ ವಠಾರದಲ್ಲಿ ಕಾಂಪೋಸ್ಟ್ ಮಾಡಿಕೊಳ್ಳಲು ಸೂಕ್ತವಾಗಿರುತ್ತದೆ. ಈ ಬಗ್ಗೆ ಸಮಸ್ಯೆಗಳಿದ್ದಲ್ಲಿ ತ್ಯಾಜ್ಯವನ್ನು ನಗರಸಭೆಯ ತ್ಯಾಜ್ಯ ಸಂಗ್ರಹಣೆಯ ವಾಹನಕ್ಕೆ ನೀಡಬೇಕು. ಹೊರತಾಗಿ ಯಾವುದೇ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಎಸೆಯುತ್ತಿರುವುದು ಕಂಡುಬಂದರೆ ಅಂತಹವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಸುಜ್ಞಾನ ಮಂದಿರ ಉದ್ಘಾಟಿಸಿ ವಿಶ್ವಪ್ರಿಯತೀರ್ಥ ಶ್ರೀ ಸಂದೇಶ

ಶಿಕ್ಷಣ ಸಂಸ್ಥೆಗಳ ಮೂಲಕ ಜ್ಞಾನಿ, ವಿಜ್ಞಾನಿಗಳ ನಿರ್ಮಾಣ

ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯು ಭಾರತದ ಅಭ್ಯುದಯಕ್ಕೆ ಕೊಡುಗೆಯಾಗಿದೆ. ಸಂಸ್ಕಾರಯುತ ಪವಿತ್ರ ಜ್ಞಾನಕ್ಕಿಂತ ಸದೃಶವಾದುದು ಇನ್ನೊಂದಿಲ್ಲ, ಆ ನಿಟ್ಟಿನಲ್ಲಿ ಗುರುಗಳಾದ ವಿಬುಧೇಶತೀರ್ಥರು 75 ವರ್ಷಗಳ ಮೊದಲು ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿ ಸಂಸ್ಕಾರಯುತ ಜ್ಞಾನಿ– ವಿಜ್ಞಾನಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಬಳಿಕ 51 ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಅನುಕೂಲಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಭಾರತ ದೇಶವನ್ನು ಕಟ್ಟುವ ಕೆಲಸ ಮಾಡಿದ್ದಾರೆ ಎಂದು ಶ್ರೀ ಅದಮಾರು ಮಠದ ಹಿರಿಯ ಶ್ರೀ ಪರಮಪೂಜ್ಯ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ಹೇಳಿದರು.

ಶ್ರೀಗಳವರು ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ 75ರ ಅಮೃತಮಹೋತ್ಸವದ ಸಂದರ್ಭ 'ಸುಜ್ಞಾನ ಮಂದಿರ' ಎಂಬ ನೂತನ ಕಟ್ಟಡ ಲೋಕಾರ್ಪಣೆಗೊಳಿಸಿ, ಸಮಾರಂಭವನ್ನು ಉದ್ಘಾಟಿಸಿ ಆಶೀರ್ವಚನ ಸಂದೇಶ ನೀಡಿದರು.

ಶಿಕ್ಷಣ ಕ್ರಾಂತಿ

ಪ್ರಜ್ಞಾಮೃತ ಪ್ರದರ್ಶನಿಯನ್ನು ಉದ್ಘಾಟಿಸಿದ ಉಡುಪಿ ಶ್ರೀ ಅದಮಾರು ಮಠ ಶಿಕ್ಷಣ ಮಂಡಳಿ ಬೆಂಗಳೂರು ಅಧ್ಯಕ್ಷ ಪರಮಪೂಜ್ಯ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು, ಗುರುಗಳಾದ ಕೀರ್ತಿಶೇಷ ಶ್ರೀ ವಿಬುಧೇಶತೀರ್ಥ ಶ್ರೀಪಾದರು ಅದಮಾರಿಂದ ಪ್ರಾರಂಭವಾದ ಶಿಕ್ಷಣ ಕ್ರಾಂತಿಯ ದೂರದೃಷ್ಟಿತ್ವದ ಫಲವಾಗಿ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಸುಜ್ಞಾನ ಬಿತ್ತುವ ಜ್ಞಾನ ಕಾಶಿಯಾಗಿ ಮಾರ್ಪಡುವ ಜೊತೆಗೆ ಭಾರತದ ಏಳಿಗೆಯ ಚಿಂತನೆಯು ಒಳಗೊಂಡಿತ್ತು. ಪರಮಾತ್ಮನ ಸೇವೆಯ ಮೂಲಕ ಗುರುಗಳಾದ ಶ್ರೀ ವಿಶ್ವಪ್ರಿಯತೀರ್ಥರೂ ಅದೇ ಸಾಧನೆಯ ಹಾದಿಯಲ್ಲಿ ಮುಂದುವರೆದಿದ್ದು ಅವರೆಲ್ಲರ ಅನುಗ್ರಹದಿಂದ ಅದನ್ನು ಮುನ್ನಡೆಸುವ ಸ್ಥಾನದಲ್ಲಿದ್ದು, ಅಧ್ಯಾಪಕ ವೃಂದ, ವಿದ್ಯಾರ್ಥಿಗಳ ಶ್ರಮಭರಿತ ಸುಸಂಸ್ಕೃತ ಸೇವೆಯ ಮೂಲಕ ಪೂರ್ಣಪ್ರಜ್ಞ ಸಂಸ್ಥೆಗಳನ್ನು ಶಿಕ್ಷಣದ ಹೆಮ್ಮರವಾಗಿ ಬೆಳೆಸೋಣ ಎಂದು ಕರೆ ನೀಡಿದರು.

ದೇಶಕ್ಕೆ ದೊಡ್ಡ ಕೊಡುಗೆ: ಗುರ್ಮೆ

ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ನೆಮ್ಮದಿಯ ಬದುಕೇ ಶ್ರೀಮಂತಿಕೆಯಾಗಿದೆ. ಅಂತಹ ನೆಮ್ಮದಿಯನ್ನು ನಮ್ಮ ಬದುಕಿನಲ್ಲಿ ನೀಡಬಲ್ಲ ದೇವಾಲಯ ವಿದ್ಯಾಲಯಗಳು ನಮ್ಮ ಅರಿವಿನ ಅರಮನೆಯ ಹೆಬ್ಬಾಗಿಲುಗಳಾಗಿದೆ. ಸುಜ್ಞಾನ– ಸುಸಂಸ್ಕಾರದ ಸ್ಪರ್ಶದಿಂದ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳು ಭಾರತ ದೇಶಕ್ಕೆ ಬಲು ದೊಡ್ಡ ಕೊಡುಗೆಯಾಗಿದೆ ಎಂದರು.

ಖ್ಯಾತ ಆಕಾಶ ಕ್ಷಿಪಣಿಯ ಪ್ರವರ್ತಕ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ. ಪ್ರಹ್ಲಾದ ರಾಮರಾವ್ ಅವರು ದಿಕ್ಸೂಚಿ ಭಾಷಣ ಮಾಡಿದರು. ಮುಖ್ಯ ಅಭ್ಯಾಗತರಾದ ಬೆಂಗಳೂರು ಜೆಎನ್ ತಾರಾಲಯದ ನಿರ್ದೇಶಕ ಡಾ. ಬಿ.ಆರ್. ಗುರುಪ್ರಸಾದ್, ಸಂಶೋಧಕ ಡಾ. ವಿನಾಯಕ ಪತ್ತಾರ್ ಮಾತನಾಡಿದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎರ್ಮಾಳು ಉದಯ ಕೆ. ಶೆಟ್ಟಿ ಇದ್ದರು. ಉಡುಪಿ ಶ್ರೀ ಅದಮಾರು ಮಠ ಶಿಕ್ಷಣ ಮಂಡಳಿ ಬೆಂಗಳೂರು ಇದರ ಗೌರವ ಕಾರ್ಯದರ್ಶಿ, ಖಗೋಳ ಶಾಸ್ತ್ರಜ್ಞ ಡಾ. ಎ.ಪಿ. ಭಟ್ ಸ್ವಾಗತಿಸಿದರು. ಉಡುಪಿ ಶ್ರೀ ಅದಮಾರು ಮಠ ಶಿಕ್ಷಣ ಮಂಡಳಿ ಅದಮಾರು ಇದರ ಗೌರವ ಕಾರ್ಯದರ್ಶಿ ಶ್ರೀಧರ್ ಕೆ. ರಾವ್ ವಂದಿಸಿದರು. ಉಪನ್ಯಾಸಕ ಜಯಶಂಕರ ಕಂಗಣ್ಣಾರು ನಿರೂಪಿಸಿದರು.



ಗುರುವಂದನಾ ಕಾರ್ಯಕ್ರಮ

ಕಾರ್ಯಕ್ರಮದಲ್ಲಿ ಶತಾವಧಾನಿ ರಾಮನಾಥ ಆಚಾರ್ಯ ಉಡುಪಿ, ಡಾ.ವೈ.ಎನ್. ಶೆಟ್ಟಿ, ಸದಾಶಿವ ಪಡುಬಿದ್ರಿ, ಡಾ.ಕೆ.ಜಿ. ಸುರೇಶ್ ರಾವ್, ಡಾ.ಸೋಮಶೇಖರ್ ಭಟ್, ಡಾ.ಗುರುಮೂರ್ತಿ ಮತ್ತಿತರರ ಉಪಸ್ಥಿತಿಯಲ್ಲಿ ನಿವೃತ್ತ ಪ್ರಾಂಶುಪಾಲರಿಗೆ ಗುರುವಂದನಾ ಕಾರ್ಯಕ್ರಮ ನಡೆಯಿತು.

ವಸ್ತು ಪ್ರದರ್ಶನ

ಅದಮಾರು ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ರೂಪಿಸಲ್ಪಟ್ಟ ಪ್ರಜ್ಞಾಮೃತ ಪ್ರದರ್ಶನಿ ವಸ್ತು ಪ್ರದರ್ಶನ ಜರಗಿತು. ಭಾರತದ ಖ್ಯಾತ ಬಾಹ್ಯಾಕಾಶ ಸಂಸ್ಥೆ ಇಸ್ರೋ ದಿಂದ ವಿಶೇಷ ಬಸ್, ಬೆಂಗಳೂರಿನ ಜವಾಹರ್‌ಲಾಲ್ ನೆಹರು ತಾರಾಲಯದ ಅನೇಕ ಖಗೋಳ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಜ್ಞಾನ ವಸ್ತು ಪ್ರದರ್ಶನ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಸಾಭಿವ್ಯಂಜನ, ಕೃಷ್ಣಂ ವಂದೇ ಜಗದ್ಗುರುಂ ನೃತ್ಯ ರೂಪಕ, ರಾಜ್ಯ ಪ್ರಶಸ್ತಿ ವಿಜೇತ ತುಳು ನಾಟಕ ಪರಮಾತ್ಮೆ ಪಂಜುರ್ಲಿ ಪ್ರದರ್ಶನಗೊಂಡಿತು. 1950ರಿಂದ ತೊಡಗಿ ಇಲ್ಲಿಯ ತನಕದ ಸಂಸ್ಥೆಯ ಹಳೆವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ತಾಯಿ ಮಕ್ಕಳ ಆಸ್ಪತ್ರೆಗೆ ಎಕ್ಸ್‌ರೇ, ರೇಡಿಯೋಗ್ರಫಿ ಉಪಕರಣ ಹಸ್ತಾಂತರ



ಉಡುಪಿ: ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ, ದ ಮಣಿಪಾಲ್ ಗ್ರೂಪ್ ಮಣಿಪಾಲ ಇದರ ಸಂಯುಕ್ತ ಆಶ್ರಯದಲ್ಲಿ ಟಿಎಂಜಿ ಸುನಿಧಿ ಫೌಂಡೇಷನ್ ಟ್ರಸ್ಟ್ ನ ಸಿಎಸ್‌ಆರ್ ನಿಧಿಯಿಂದ ಕೂಸಮ್ಮ ಶಂಭು ಶೆಟ್ಟಿ ಹಾಜಿ ಅಬ್ದುಲ್ಲಾ ತಾಯಿ ಮಕ್ಕಳ ಆಸ್ಪತ್ರೆಗೆ ಕೊಡುಗೆಯಾಗಿ ನೀಡಲಾದ ಪೋರ್ಟಬಲ್ ಎಕ್ಸ್ ರೇ ಮತ್ತು ಡಿಜಿಟಲ್ ರೇಡಿಯೋಗ್ರಫಿ ವ್ಯವಸ್ಥೆಗಳನ್ನು ಅಜ್ಜರಕಾಡಿನ ಜಿಲ್ಲಾ ಸರ್ವೇಕ್ಷಣ ಘಟಕದಲ್ಲಿ ಹಸ್ತಾಂತರಿಸಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಬಸವರಾಜ್ ಹುಬ್ಬಳ್ಳಿ ಇಲಾಖೆಯ ಪರವಾಗಿ ಉಪಕರಣಗಳನ್ನು ಸ್ವೀಕರಿಸಿ ಮಾತನಾಡಿ, ಜಿಲ್ಲೆಯ ಆರೋಗ್ಯ ಕ್ಷೇತ್ರದ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಮಣಿಪಾಲ್ ಗ್ರೂಪ್ ಸಂಸ್ಥೆಯು ಕಳೆದ ಒಂದು ದಶಕದಿಂದ ತಮ್ಮ ಸಿಎಸ್‌ಆರ್ ನಿಧಿಯಿಂದ ಹಲವಾರು ಉಪಕರಣಗಳನ್ನು ಕೊಡುಗೆಯಾಗಿ ನೀಡಿದೆ ಎಂದರು. ಜಿಲ್ಲಾ ಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ. ಪ್ರಶಾಂತ್ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿದರು, ಕಾರ್ಯಕ್ರಮದಲ್ಲಿ ಮಣಿಪಾಲ್ ಟೆಕ್ನಾಲಜೀಸ್‌ನ ಜಿಎಂ–ಹೆಚ್‌ಆರ್ ರೊನಾಲ್ಡ್ ಡಿಸೋಜಾ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಅಶೋಕ್ ಎಚ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಚಿದಾನಂದ ಸಂಜು ಸ್ವಾಗತಿಸಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸತೀಶ್ ರಾವ್ ನಿರೂಪಿಸಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಶಿಧರ್ ವಂದಿಸಿದರು.

ಪಡುಬಿದ್ರಿ ದೇವಳದ ಪುನರ್ ಪ್ರತಿಷ್ಠೆ, ಬ್ರಹ್ಮಕಲಶ: ಆಮಂತ್ರಣ ಪತ್ರಿಕೆ ಬಿಡುಗಡೆ



ಪಡುಬಿದ್ರಿ: ಇತಿಹಾಸ ಪ್ರಸಿದ್ಧ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಏ. 23ರಿಂದ ಮೇ 4ರವರೆಗೆ ನಡೆಯುವ ಶ್ರೀ ದೇವರ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವದ ಆಮಂತ್ರಣವನ್ನು ಸಮಿತಿ ಅಧ್ಯಕ್ಷ, ಉದ್ಯಮಿ ಡಾ. ಕೆ. ಪ್ರಕಾಶ್ ಶೆಟ್ಟಿ ಅವರು ಏ.4ರಂದು ಶ್ರೀ ದೇವರ ಬಾಲಾಲಯದಲ್ಲಿ ಬಿಡುಗಡೆಗೊಳಿಸಿದರು.

ಈ ಸಂದರ್ಭ ಮಾತನಾಡಿದ ಡಾ. ಕೆ. ಪ್ರಕಾಶ್ ಶೆಟ್ಟಿ ಅವರು, ಭಕ್ತರೆಲ್ಲರ ಸಹಾಯ, ಸಹಕಾರಗಳೊಂದಿಗೆ ದೇಗುಲವು ಸಿದ್ಧವಾಗುತ್ತಿದೆ. ದೇಶ, ವಿದೇಶಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ದೇವರ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಗಳನ್ನು ಕಣ್ತುಂಬಿಕೊಳ್ಳಲಿದ್ದಾರೆ. ಲಕ್ಷೋಪಲಕ್ಷ ಭಕ್ತರು ಶ್ರೀ ಕ್ಷೇತ್ರವನ್ನು ಸಂದರ್ಶಿಸಲಿದ್ದು ಎಲ್ಲಾ ಕಾರ್ಯಕ್ರಮ ನಾವೆಲ್ಲರೂ ಜತೆಯಾಗಿದ್ದು ಯಶಸ್ವಿಗೊಳಿಸೋಣವೆಂದರು.

ಶ್ರೀ ದೇವಸ್ಥಾನದ ಅರ್ಚಕ ಎಚ್. ಪದ್ಮನಾಭ ಭಟ್ ಬಾಲಾಲಯದಲ್ಲಿ ದೇವತಾ ಪ್ರಾರ್ಥನೆಗೈದರು. ವೈ. ಗಣಪತಿ ಭಟ್, ಶ್ರೀ ದೇಗುಲದ ಅನುವಂಶಿಕ ಮೊಕ್ತೇಸರ ಪಡುಬಿದ್ರಿ ಪೇಟೆಮನೆ ಭವಾನಿ ಶಂಕರ ಹೆಗ್ಡೆ, ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಗಳ ಪದಾಧಿಕಾರಿ ಪಿ. ರವೀಂದ್ರನಾಥ ಜಿ. ಹೆಗ್ಡೆ, ಪಿ. ರಾಘವೇಂದ್ರ ನಾವಡ, ಸುರೇಶ್ ರಾವ್, ಶ್ರೀನಾಥ್ ಹೆಗ್ಡೆ, ವೈ. ಸುಕುಮಾರ್, ಮುರಳೀನಾಥ ಶೆಟ್ಟಿ, ವೈ. ಎನ್. ರಾಮಚಂದ್ರ ರಾವ್, ನವೀನ್ ಚಂದ್ರ ಜೆ. ಶೆಟ್ಟಿ, ನವೀನ್ ಎನ್. ಶೆಟ್ಟಿ, ಪ್ರೇಮನಾಥ್ ಶೆಟ್ಟಿ, ಪಿ. ಸದಾಶಿವ ಆಚಾರ್, ಹರಿಕೃಷ್ಣ ರಾವ್ ಮುರುಡಿ, ವಿಶುಕುಮಾರ್ ಶೆಟ್ಟಿವಾಲ್, ಮಾಧವ ಶೆಟ್ಟಿ, ರವಿ ಶೆಟ್ಟಿ, ಅನಿಲ್ ಕುಮಾರ್ ಶೆಟ್ಟಿ, ಪ್ರಶಾಂತ್ ಶೆಣೈ, ನಾರಾಯಣ ರಾವ್ ಕಿನ್ನಿಶಂಕರ, ಗಣೇಶ್ ಗುಜರಾನ್, ಸದಾಶಿವ ಪಡುಬಿದ್ರಿ, ಶಶಿಕಾಂತ್ ಪಡುಬಿದ್ರಿ, ಸುರೇಶ್ ಪಡುಬಿದ್ರಿ, ಸುರೇಶ್, ರಮಾಕಾಂತ ರಾವ್, ಪಿ.ಕೆ. ರಾಮಚಂದ್ರ ರಾವ್ ಮತ್ತಿತರರಿದ್ದರು. ಶ್ರೀಧರ ಆಚಾರ್ ವಂದಿಸಿದರು.

ಸಮಾಜಸೇವಕ ನರಸಿಂಹ ಆರ್ಕಾಟಿ ಜೀವನ ಚರಿತ್ರೆ ಪುಸ್ತಕ ಲೋಕಾರ್ಪಣೆ



ಕೋಟ: ಕೋಡಿ ಕನ್ಯಾಣದಲ್ಲಿ ಕೊಂಕಣಿ ಖಾರ್ವಿ ಲೋಕವೇದ್ ಕಲಾ ಮಾಂಡ್ ಬ್ರಹ್ಮಾವರ ಇದರ ಪ್ರಸ್ತುತಿಯಲ್ಲಿ ಸಮಾಜಸೇವಕ ನರಸಿಂಹ ಆರ್ಕಾಟಿ ಜೀವನ ಚರಿತ್ರೆ, ಪುಸ್ತಕ ಬಿಡುಗಡೆ ಕಾರ್ಯಕ್ರಮ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ರಂಗಮಂಟಪದಲ್ಲಿ ನೆರವೇರಿತು.

ಸಭಾಧ್ಯಕ್ಷತೆಯನ್ನು ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಹಾಗೂ ಗುರುವಂದನಾ ಸಮಿತಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇದರ ಅಧ್ಯಕ್ಷ ಬಿ. ಮಾಧವ ಖಾರ್ವಿ ವಹಿಸಿದರು.

ಕ.ಸಾ.ಪ. ಉಡುಪಿ ಜಿಲ್ಲಾಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಉದ್ಘಾಟಿಸಿದರು. ಅಖಿಲ ಭಾರತ ಕೊಂಕಣಿ ಖಾರ್ವಿ ಮಹಾಜನ ಸಂಘ ಇದರ ಅಧ್ಯಕ್ಷ ರವಿ ಟಿ. ನಾಯಕ್ ಪುಸ್ತಕ ಬಿಡುಗಡೆ ಮಾಡಿದರು.

ಪುಸ್ತಕದ ಸಂಕಲನಕಾರ ಆಲ್ಫೋನ್ಸ್ ಡಿಸೋಜಾ ಅವರನ್ನು ಗೌರವಿಸಲಾಯಿತು. ಖಜಾಂಚಿ ಸದಾನಂದ ಖಾರ್ವಿ ಮಾತನಾಡಿದರು. ಮುಖ್ಯ ಅತಿಥಿ ಶಾರದಾ ರೆಸಿಡೆನ್ಸಿ ಸ್ಕೂಲ್ ಉಡುಪಿ ಪ್ರಾಂಶುಪಾಲ ಯು. ವಿದ್ಯಾವಂತ ಆಚಾರ್ಯ, ಕೋಡಿ ಗ್ರಾ.ಪಂ. ಅಧ್ಯಕ್ಷೆ ಗೀತಾ ಗೋಪಾಲ ಖಾರ್ವಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವೀಂದ್ರರಾವ್, ವಿಶ್ರಾಂತ ಶಿಕ್ಷಣಾಧಿಕಾರಿ ಕೆ. ಕೃಷ್ಣ ಮಾಸ್ಟರ್, ಆತ್ಮರಾಮ್ ಆರ್ಕಾಟ್ ದೈಹಿಕ ಶಿಕ್ಷಕ ವಿಜಯ ಕೆ ನಾಯರಿ, ಕೊಂಕಣಿ ಖಾರ್ವಿ ಲೋಕವೇದ್ ಕಲಾ ಮಾಂಡ್‌ನ ಅಧ್ಯಕ್ಷ ಕೆ. ರಾಮಚಂದ್ರ ಖಾರ್ವಿ , ನರಸಿಂಹ ಆರ್ಕಾಟಿ ಅಭಿಮಾನಿಗಳು ಇದ್ದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಧೀರೇಂದ್ರ ನಾಯಕ್ ಸ್ವಾಗತಿಸಿದರಿ. ದಿ.ಮಣೂರು ನಾರಾಯಣ ಖಾರ್ವಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ವಿಶ್ವನಾಥ ಖಾರ್ವಿ ವಂದಿಸಿದರು. ಪ್ರಗತಿ ಕಾರ್ಯಕ್ರಮ ನಿರೂಪಿಸಿದರು.

ಪ್ರಕಾಶ್ ಕುಲಾಲ್ ಸಾಂತ್ವನ ನಿಧಿಗೆ 1 ಲಕ್ಷ ರೂ. ಸಹಾಯಧನ ಹಸ್ತಾಂತರ



ಬ್ರಹ್ಮಾವರ: ಭಜನಾ ಕ್ಷೇತ್ರಕ್ಕೆ ದೊಡ್ಡ ಸೇವೆ ಸಲ್ಲಿಸಿದ ಉಡುಪಿ ಜಿಲ್ಲಾ ಭಜನಾ ಪರಿಷತ್ ಮಾಜಿ ಅಧ್ಯಕ್ಷ ಪ್ರಕಾಶ್ ಕುಲಾಲ್ ಇತ್ತೀಚೆಗೆ ನಿಧನರಾಗಿದ್ದು, ಅವರ ಸಾಂತ್ವನ ನಿಧಿಗೆ ಜನಸೇವಾ ಟ್ರಸ್ಟ್ ಹಾಗೂ ಟೀಂ ಅಭಿಮತ ತಂಡ ಒಂದು ಲಕ್ಷ ರೂ ಸಹಾಯಧನ ಹಸ್ತಾಂತರಿಸಿತು.

ಮಾಜಿ ಶಾಸಕ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಮಾಜಿ ಆಡಳಿತ ಧರ್ಮದರ್ಶಿ ಬಿ.ಎಂ.ಸುಕುಮಾರ ಶೆಟ್ಟಿ ಸಹಾಯಧನ ಹಸ್ತಾಂತರಿಸಿ, ಮಾತನಾಡಿ, ಯುವ ಜನಾಂಗ ಭಜನೆಯಲ್ಲಿ ತೊಡಗಿಸಿಕೊಳ್ಳುವುದು ತೀರ ಅಪರೂಪವಾಗಿರುವಾಗ ಚಿಕ್ಕ ವಯಸ್ಸಿನಲ್ಲಿ ಐವತ್ತಕ್ಕೂ ಹೆಚ್ಚು ತಂಡ ಕಟ್ಟಿ ಸಾವಿರಾರು ಮಂದಿಗೆ ಭಜನೆ ತರಬೇತಿ ನೀಡಿದ ಪ್ರಕಾಶ್ ಅವರ ಕಾರ್ಯ ಶ್ಲಾಘನೀಯ. ಟೀಂ ಅಭಿಮತ ಮತ್ತು ಮೂಡುಗಿಳಿಯಾರು ಜನಸೇವಾ ಟ್ರಸ್ಟ್ ವತಿಯಿಂದ ನೀಡಲಾದ ದೊಡ್ಡ ಮೊತ್ತದ ಜತೆಗೆ, ವೈಯಕ್ತಿಕ ಸಹಕಾರವನ್ನು ನೀಡುತ್ತಿರುವುದು ಇತರರಿಗೆ ಮಾದರಿಯಾಗಿದೆ ಎಂದರು.

ಮಂದಾರ್ತಿಯ ನಮಸ್ತೆ ಭಾರತ್ ಟ್ರಸ್ಟ್ ಅಧ್ಯಕ್ಷ ಪ್ರಮೋದ್ ಮಂದಾರ್ತಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಸಹಾಯ ಅಭಿಯಾನದ ನಿಧಿಗೆ ಜನಸೇವಾ ಸಯಾಯಧನ ನೀಡಲಾಯಿತು.

ನಮಸ್ತೆ ಭಾರತ್ ಟ್ರಸ್ಟ್‌ನ ಪ್ರಮೋದ್ ಮಂದಾರ್ತಿ, ಗಿಳಿಯಾರು ಜನಸೇವಾ ಟ್ರಸ್ಟ್ ಅಧ್ಯಕ್ಷ ವಸಂತ ಗಿಳಿಯಾರ್, ಉದ್ಯಮಿ ರವಿಚಂದ್ರ ಶೇರುಗಾರ್, ಟೀಂ ಅಭಿಮತದ ಅರುಣ್ ಶೆಟ್ಟಿ ಗಿಳಿಯಾರ್, ಪ್ರವೀಣ್ ಯಕ್ಷೀಮಠ, ಶರತ್ ಕುಮಾರ್ ಶೆಟ್ಟಿ ಕೊತ್ತಾಡಿ, ದೇಲಟ್ಟು ಉಮೇಶ್ ಶೆಟ್ಟಿ, ದಿನೇಶ್ ಶೆಟ್ಟಿ ಬೇಳೂರು, ನಿಖಿಲ್ ನಾಯಕ್ ತೆಕ್ಕಟ್ಟೆ, ಸುದೇಶ್ ಶೆಟ್ಟಿ ಬ್ರಹ್ಮಾವರ, ದರ್ಶನ್ ಶೆಟ್ಟಿ, ಕಾರ್ತೀಶ್ ಪುತ್ರನ್, ಜಗದೀಶ್ ಆಚಾರ್ಯ, ಮನೋಜ್ ಮತ್ತಿತರರಿದ್ದರು.

ಏ.7: ವಿದ್ಯುತ್ ವ್ಯತ್ಯಯ

ಕುಂದಾಪುರ: ಬೈಂದೂರು, ಶಿರೂರು, ಪಡುವರಿ, ಉಪ್ಪುಂದ, ಯಡ್ತರೆ, ಬಿಜೂರು, ತಗ್ಗರ್ಸೆ, ಗಂಗನಾಡು, ಯಳಜಿತ್, ಮುದೂರು, ಕೊಲ್ಲೂರು, ನಾಯ್ಕನಕಟ್ಟೆ, ಕೆರ್ಗಾಲ್, ಅರೆಶಿರೂರು, ಗೋಳಿಹೊಳೆ, ಇಡೂರು, ಕಂಬದಕೋಣೆ, ಕಿರಿಮಂಜೇಶ್ವರ, ಮರವಂತೆ, ಆಲೂರು, ಬಡಾಕೆರೆ ಮತ್ತು ಹೇರೂರು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.7ಕ್ಕೆ ಬೆಳಿಗ್ಗೆ 9.30ರಿಂದ ಸಂಜೆ 05.30ರವರೆಗೆ ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಏ.8ರಂದು ಸಭೆ

ಉಡುಪಿ: ಕುಂದಾಪುರ ತಾಲೂಕಿನ ಶಂಕರನಾರಾಯಣ ಮೆಸ್ಕಾಂ ಉಪವಿಭಾಗ ಕಚೇರಿಯಲ್ಲಿ ಏ.8ರಂದು ಬೆಳಿಗ್ಗೆ 10.30ರಿಂದ 12ರವರೆಗೆ ಜನಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂ.ಸಂ. 08259–280300 ಸಂಪರ್ಕಿಸಿ ದೂರು ದಾಖಲಿಸಬಹುದು ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಅತ್ತೂರು ಸಂತ ಲಾರೆನ್ಸ್ ಬಸಿಲಿಕಾದಲ್ಲಿ ಈಸ್ಟರ್ ವಿಜಿಲ್



ಕಾರ್ಕಳ: ಪವಿತ್ರ ಶನಿವಾರದ ರಾತ್ರಿ ಅತ್ತೂರು ಸಂತ ಲಾರೆನ್ಸ್ ಬಸಿಲಿಕಾ ಚರ್ಚಿನಲ್ಲಿ ಈಸ್ಟರ್ ವಿಜಿಲ್ ಆಚರಿಸಲಾಯಿತು. ಆಚರಣೆಯ ಅಂಗವಾಗಿ ಹೊಸ ಅಗ್ನಿಗೆ ಆಶೀರ್ವಾದ ನೀಡಲಾಗಿದ್ದು ಪಾಸ್ಕಲ್ ದೀಪವನ್ನು ಬೆಳಗಿಸಲಾಯಿತು.

ಇದು ಕ್ರಿಸ್ತನು ಲೋಕದ ಬೆಳಕು ಎಂಬ ಸಂದೇಶವನ್ನು ಪ್ರತಿಬಿಂಬಿಸುತ್ತದೆ. ನಂತರ ಭಕ್ತರು ವಚನ ವಾಚನದಲ್ಲಿ ಪಾಲ್ಗೊಂಡು, ತಮ್ಮ ದೀಕ್ಷಾ ವಾಗ್ದಾನಗಳನ್ನು ನವೀಕರಿಸಿದರು. ಪವಿತ್ರ ಯೂಕರಿಸ್ಟ್ ಆಚರಣೆಯಲ್ಲಿ ಭಾಗವಹಿಸುವ ಮೂಲಕ ಯೇಸುವಿನ ಪುನರುತ್ಥಾನದ ಸಂತೋಷವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅನೇಕ ಭಕ್ತರು ಹಾಜರಿದ್ದು ಭಕ್ತಿಪೂರ್ಣ ವಾತಾವರಣ ನಿರ್ಮಾಣವಾಗಿತ್ತು.

ಕಟಪಾಡಿಯಲ್ಲಿ ಮಿಷನ್ ಆಸ್ಪತ್ರೆಯಿಂದ ನೂತನ ಆರೋಗ್ಯ ಕೇಂದ್ರದ ಲೋಕಾರ್ಪಣೆ

ಗ್ರಾಮೀಣ ಜನತೆಗೆ ಗುಣಮಟ್ಟದ ಚಿಕಿತ್ಸೆ ನಮ್ಮ ಗುರಿ: ಡಾ. ಸುಶಿಲ್



ಉಡುಪಿ: ನಗರದ ಪ್ರತಿಷ್ಠಿತ ಸಿಎಸ್‌ಐ ಲೊಂಬಾರ್ಡ್ ಮೆಮೋರಿಯಲ್ (ಮಿಷನ್) ಆಸ್ಪತ್ರೆಯಿಂದ ಕಟಪಾಡಿ ಬಸ್ ನಿಲ್ದಾಣದ ಬಳಿ ನೂತನವಾಗಿ ನಿರ್ಮಿಸಲಾದ ಪೂರ್ಣ ಪ್ರಮಾಣದ ಮೊದಲ ಆರೋಗ್ಯ ಕೇಂದ್ರವು (ಪಾಲಿ ಕ್ಲಿನಿಕ್) ಶನಿವಾರ ಉದ್ಘಾಟನೆಗೊಂಡಿತು.

ಆರೋಗ್ಯ ಕೇಂದ್ರವನ್ನು ಉದ್ಘಾಟಿಸಿದ ಸಿ.ಎಸ್.ಐ–ಕರ್ನಾಟಕ ದಕ್ಷಿಣ ಧರ್ಮಪ್ರಾಂತ್ಯದ (ಕೆಎಸ್‌ಡಿ) ಬಿಷಪ್ ರೈಟ್ ರೆ. ಹೇಮಚಂದ್ರ ಕುಮಾರ್, ವೈದ್ಯಕೀಯ ಸೇವೆಗಳು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಬಾರದು. ಗ್ರಾಮೀಣ ಭಾಗದ ಅಸಹಾಯಕರು ಮತ್ತು ಆರ್ಥಿಕವಾಗಿ ಹಿಂದುಳಿದವರಿಗೂ ಉನ್ನತ ದರ್ಜೆಯ ಆರೋಗ್ಯ ಸೇವೆ ಸಿಗಬೇಕು ಎಂಬ ಉದ್ದೇಶದಿಂದ ಕಟಪಾಡಿಯಲ್ಲಿ ಈ ಕೇಂದ್ರ ಆರಂಭಿಸಲಾಗಿದೆ ಎಂದು ಹಾರೈಸಿದರು.

ತಜ್ಞ ವೈದ್ಯರ ಸೇವೆ ಲಭ್ಯ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಿಷನ್ ಆಸ್ಪತ್ರೆಯ ನಿರ್ದೇಶಕ ಡಾ. ಸುಶಿಲ್ ಜತ್ತನ್ನ ಅವರು ಮಾತನಾಡಿ, ಈ ಕೇಂದ್ರದಲ್ಲಿ ಸುಸಜ್ಜಿತ ಪ್ರಯೋಗಾಲಯ, ಎಕ್ಸ್–ರೇ ಯುನಿಟ್ ಸೇರಿದಂತೆ ಎಲ್ಲಾ ಆಧುನಿಕ ಸೌಲಭ್ಯಗಳಿವೆ. ವಾರಕ್ಕೆ ಆರು ದಿನ (ಬೆಳಿಗ್ಗೆ 8 ರಿಂದ ಸಂಜೆ 6ರವರೆಗೆ) ಈ ಕೇಂದ್ರ ಕಾರ್ಯನಿರ್ವಹಿಸಲಿದ್ದು ಖಾಯಂ ವೈದ್ಯರ ಜೊತೆಗೆ ಮಿಷನ್ ಆಸ್ಪತ್ರೆಯ ಎಲ್ಲಾ ವಿಭಾಗಗಳ ತಜ್ಞ ವೈದ್ಯರು ಇಲ್ಲಿ ಲಭ್ಯವಿರುತ್ತಾರೆ. ನಮ್ಮ ಉದ್ದೇಶ ಕೇವಲ ಲಾಭವಲ್ಲ, ಬದಲಾಗಿ ಹಳ್ಳಿಹಳ್ಳಿಗಳಿಗೂ ಉತ್ತಮ ಆರೋಗ್ಯ ಸೇವೆ ತಲುಪಿಸುವುದಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ, ಮಂಗಳೂರು ಫಾದರ್ ಮುಲ್ಲರ್ಸ್ ಆಸ್ಪತ್ರೆಯ ನಿರ್ದೇಶಕ ಫೌಸ್ಟಿನ್ ಲೂಕಸ್ ಲೋಬೋ, ಹಿರಿಯ ವೈದ್ಯ ಡಾ. ಎ. ರವೀಂದ್ರನಾಥ ಶೆಟ್ಟಿ, ಪ್ರಭಾ ಬಿ. ಶೆಟ್ಟಿ, ಉದ್ಯಮಿ ಇಕ್ಬಾಲ್ ಶಂಸುದ್ದೀನ್, ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪ್ರಶಾಂತ್ ಜತ್ತನ್ನ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು. ರೆ. ಖಜಾಂಚಿ ಐವಾನ್ ಡಿಸೋನ್ಸ್ ಹಾಗೂ ರೆ. ಕಿಶೋರ್ ಕುಮಾರ್ ಪ್ರಾರ್ಥಿಸಿದರು. ಎಲ್‌ಎಂಸಿಓಎನ್ ಪ್ರಾಂಶುಪಾಲೆ ಡಾ. ಸುಜ ಕರ್ಕಡ ಸ್ವಾಗತಿಸಿ, ವೀಣಾ ಮೆನೇಜಸ್ ವಂದಿಸಿದರು. ಹೇಮಲತಾ ಬಂಗೇರ ನಿರೂಪಿಸಿದರು.